
ರಂಜನೆ ಬೋಧನೆ ಪ್ರಚೋದನೆ

ಲಂಕೇಶ್

ಫೆಬ್ರವರಿ 25, 2009 ರೂ. 12/-



ಶೋಭಾ ಡೀಲ್



ಟಾಟಾಗೆ ಕಾವೇರಿ ಹರಾಜ್!



ಮಂಗಳೂರು ಅಶ್ವಿನಿಯನ್ನು ಕೊಂದಿದ್ಯಾರು?


ದ್ರಾ ಮೇಲ್ದಂಡೆ ಮತ್ತೊಂದು ಬಾಗೂರು-ನವಿಲೆ!

ಕಲಿ ನಕ್ಸಲೈಟರ
ದರಗೋಡು ದರೋಡೆ !

ಅವಿವೇಕಿ ಆಚಾರ್ಯ

ಬಿಜೆಪಿ ಗುಹೆಗೆ ಸಿಂಹ?






ಕೊಡಗು: ನಾಚಪ್ಪನ ಹೊಸ ಅವತಾರ

ಸರ್ವಾಧಿಕಾರಿ ಸರ್ಕಾರ ಮಾಧ್ಯಮಕ್ಕೊಂದು ಧರ್ಮಾಧಿಕಾರಿ (ombudsman) ಬೇಕೆಂದಿತು!

ಒಂದು ಪ್ರಜಾತಂತ್ರದಲ್ಲಿ ಮಾಧ್ಯಮದ ಕರ್ತವ್ಯವೇ "speaking truth to the power". ಅಧಿಕಾರಸ್ಥರಿಗೆ ಅಪ್ರಿಯವಾದರೂ ಲೆಕ್ಕಿಸದೇ ಸತ್ಯವನ್ನು ಪ್ರತಿಪಾದಿಸುವುದು. ಏಕೆಂದರೆ ಪ್ರಜಾತಂತ್ರ ಜೀವಾಳ ಪ್ರಜೆಗಳ ಅಂಕೆಯಲ್ಲಿ ಸರ್ಕಾರವಿರುವಂತೆ ನೋಡಿಕೊಳ್ಳುವುದೇ ವಿನಃ ಸರ್ಕಾರದ ಅಂಕೆಯಲ್ಲಿ ಜನರಿರುವಂತೆ ನೋಡಿಕೊಳ್ಳುವುದಲ್ಲ. ಹೀಗಾಗಿ ಒಂದು ಪ್ರಜಾತಂತ್ರದ ಯಶಸ್ಸಿಗೆ ಮುಕ್ತ ಮಾಧ್ಯಮ ಅತ್ಯಗತ್ಯ. ಮತ್ತು ಆ ಮುಕ್ತ ಮಾಧ್ಯಮ ಜವಾಬ್ದಾರಿಯುತವಾಗಿ ನಿರ್ಭಿಡೆಯಿಂದ speaking truth to the power ಮಾಡಬೇಕು. ಅದಕ್ಕೆ ಶಾಸಕಾಂಗ, ಕಾರ್ಯಾಂಗ ಮತ್ತು ಸ್ವತಂತ್ರ ನ್ಯಾಯಾಂಗದಂತೆ ಮುಕ್ತ ಮಾಧ್ಯಮವನ್ನು ಪ್ರಜಾತಂತ್ರದ ನಾಲ್ಕನೆ ಪಿಲ್ಲರ್ ಎಂದು ಹೇಳಲಾಗುತ್ತದೆ.

ಮೇಲ್ವರ್ಗ ಮತ್ತು ಮೇಲ್ಜಾತಿಗಳೇ ತುಂಬಿಕೊಂಡಿರುವ ನ್ಯಾಯಾಂಗ ಮತ್ತು ದೊಡ್ಡ ದೊಡ್ಡ ಕಾರ್ಪೊರೇಟ್ ಧಣಿಗಳ ಹಿಡಿತದಲ್ಲಿರುವ ಮಾಧ್ಯಮಗಳು ಸಮಾಜದ ಇತರ ವರ್ಗಗಳ ಬಗೆಗಿನ ಪೂರ್ವಾಗ್ರಹಗಳಿಂದ ಎಷ್ಟರಮಟ್ಟಿಗೆ "ಸ್ವತಂತ್ರ" ಮತ್ತು "ಮುಕ್ತ"ವಾಗಿರುತ್ತದೆ ಎಂಬುದು ಚರ್ಚಾರ್ಹವಾದ ವಿಷಯವೇ. ಅದೇನೇ ಇರಲಿ, ಈವರೆಗೆ ಕನಿಷ್ಠ ಪಕ್ಷ ಮಾಧ್ಯಮಗಳಿಗೆ ತಮ್ಮ ಓದುಗ (ಮಧ್ಯಮ ವರ್ಗ ಎಂದು ಓದಿಕೊಳ್ಳಿ)ರ ಹಿತಾಸಕ್ತಿಯ ದೃಷ್ಟಿಯಿಂದ ಪ್ರಭುತ್ವದ ನೀತಿಗಳನ್ನು ಮುಕ್ತವಾಗಿ ವಿಮರ್ಶಿಸುವ ಟೀಕಿಸುವ ಸ್ವಾತಂತ್ರ್ಯವಿತ್ತು. ಆದರೆ ಬಿಜೆಪಿ ಸರ್ಕಾರ ಮಾಧ್ಯಮಗಳ ಈ ಸ್ವಾತಂತ್ರ್ಯಕ್ಕೂ ಅಂದರೆ ಮಧ್ಯಮ ಮತ್ತು ಮೇಲ್‌ಮಧ್ಯಮ ವರ್ಗದ ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೂ ಅಂಕುಶ ಹೇರುವ ಯೋಚನೆಯನ್ನು ಮಾಡುತ್ತಿದೆ.



ಮೊನ್ನೆ ಮಂಗಳೂರಿನಲ್ಲಿ ಪಬ್ ಮೇಲೆ ನಡೆದ ದಾಳಿ ಪ್ರಕರಣವನ್ನು ಮಾಧ್ಯಮಗಳು ಸತತವಾಗಿ ಬಿತ್ತರಿಸಿ ಬಿಜೆಪಿ ಸರ್ಕಾರವನ್ನು ಇಕ್ಕಟ್ಟಿಗೆ ಸಿಲುಕಿಸಿದವಷ್ಟೆ. ಇದಾದನಂತರ ಹೋದವಾರ ಮಾನ್ಯ ಗೃಹ ಮಂತ್ರಿಗಳು ಮಂಗಳೂರಿನ "ನಾಗರಿಕ ಸಮಾಜದ" ಜೊತೆ ಚರ್ಚೆ ನಡೆಸಿದರಂತೆ. ಅದರಲ್ಲಿ ಭಾಗವಹಿಸಿದ ಬಹುಪಾಲು ನಾಗರಿಕರು ಮಾಧ್ಯಮಗಳು ಇತ್ತೀಚೆಗೆ ನಡೆದುಕೊಳ್ಳುತ್ತಿರುವ ರೀತಿಯಿಂದ ಸಮಾಜದ ಸ್ವಾಸ್ಥ್ಯ ಕೆಡುತ್ತಿದೆ, ಕುಟುಂಬಗಳು ಹಾಳಾಗುತ್ತಿದೆಯಾದ್ದರಿಂದ ಅವುಗಳನ್ನು ನಿಯಂತ್ರಿಸಿ ಎಂದು ಮೊರೆಯಿಟ್ಟರಂತೆ! ಒಂದು ಸಂವೇದನಾಶೀಲ ಸರ್ಕಾರವು ನಾಗರಿಕರ ಅಹವಾಲಿಗೆ ಸ್ಪಂದಿಸಲೇಬೇಕಾದ್ದರಿಂದ ಮಾನ್ಯ ಗೃಹ ಮಂತ್ರಿಗಳು ಕೂಡಲೇ ಮಾಧ್ಯಮಗಳ ನಡಾವಳಿಯ ಮೇಲೆ ಅಂಕುಶ ಹೇರಲು ಮಾಧ್ಯಮ ಧರ್ಮಾಧಿಕಾರಿ (ombuds man) ಯನ್ನು ನೇಮಕ ಮಾಡಲು ಪರಿಶೀಲಿಸಲಾಗುವುದು ಎಂದು ಘೋಷಿಸಿಬಿಟ್ಟರು!

ಬೇಜವಾಬ್ದಾರಿ ಪತ್ರಿಕೋದ್ಯಮದಿಂದ ಕಂಗೆಟ್ಟಿರುವ ಹಲವರಿಗೆ ಇದರಲ್ಲಿ ತಪ್ಪೇನು ಎಂದು ಕೂಡಾ ಅನಿಸಬಹುದು. ಇದರ ಬಗ್ಗೆ ಚರ್ಚೆ ನಡೆಯುತ್ತಿರುವ ಹಲವು ಬ್ಲಾಗ್‌ಗಳಲ್ಲಿ ಹಲವು ಸುಶಿಕ್ಷಿತರು ಮಾಧ್ಯಮಕ್ಕೆ ಒಂದು ನೀತಿ ಸಂಹಿತೆ ಇರಬೇಕಲ್ಲವೆ ಎಂದು ಕೇಳುತ್ತಿದ್ದಾರೆ. ಹೀಗಾಗಿ ಗೃಹಮಂತ್ರಿ ಅದರ ನಿಯಂತ್ರಣಕ್ಕೆ ಒಂದು ವ್ಯವಸ್ಥೆ ಮಾಡಿದರೆ ತಪ್ಪೇನು ಎಂದು ಕೂಡಾ ಅಭಿಪ್ರಾಯ ಪಡುತ್ತಿದ್ದಾರೆ. ಇವನ್ನು ಓದಿದರೆ ಮುಕ್ತ ಮಾಧ್ಯಮವನ್ನು ಸರ್ಕಾರ ನಿಯಂತ್ರಿಸಲಿ ಎಂದು ಕೇಳುತ್ತಿರುವ ಈ ಸುಶಿಕ್ಷಿತರು ಪಡೆದ ಶಿಕ್ಷಣವೆಂತಹುದು ಎಂಬ ಪ್ರಶ್ನೆ ಸಹಜವಾಗಿ ಉದ್ಭವಿಸುತ್ತದೆ. ಅದನ್ನು ಸದ್ಯಕ್ಕೆ ಬದಿಗಿಟ್ಟರೂ ಗೃಹಮಂತ್ರಿಯವರು ಯಾವ ಸಂದರ್ಭದಲ್ಲಿ ಕ್ರಮಗಳಿಗೆ ಮುಂದಾಗಿದ್ದಾರೆ ಎಂಬುದನ್ನು ಗಮನಿಸಿದರೆ ಸಾಕು. ಅದು ಈ ಸುಶಿಕ್ಷಿತರು ಬಯಸುವ ಜವಾಬ್ದಾರಿಯುತ ಮಾಧ್ಯಮವನ್ನು ಸಾಧ್ಯಗೊಳಿಸಬೇಕೆಂಬ ಉದ್ದೇಶವನ್ನು ಹೊಂದಿಲ್ಲವೆಂಬುದನ್ನು ಸ್ಪಷ್ಟಗೊಳಿಸುತ್ತದೆ.

ಮಾನ್ಯ ಗೃಹ ಮಂತ್ರಿಗಳಾದ ವಿ.ಎಸ್. ಆಚಾರ್ಯರವರು ಮಂಗಳೂರಿನಲ್ಲಿ ಮಾತಾಡಿದ್ದು ಯಾವ ನಾಗರಿಕ ಸಮಾಜದೊಡನೆ? ಸಮಾಜದ ಸ್ವಾಸ್ಥ್ಯ ಹಾಳಾಗುವುದು ಎಂದರೆ ಏನು? ಮತ್ತು ಯಾರ ಕುಟುಂಬಗಳ ಬಗ್ಗೆ ಇವರ ಕಾಳಜಿ ಇತ್ತು? ಎಂಬುದನ್ನು ನೋಡಿದರೆ ಸರ್ಕಾರದ ಹುನ್ನಾರವೇನು ಎಂಬುದು ಸ್ಪಷ್ಟವಾಗುತ್ತದೆ.

ಚಾರ್ವಾಕ

ಶಿವಸುಂದರ್

ಆಚಾರ್ಯರು ಮಾತಾಡಿದ ನಾಗರಿಕ ಸಮಾಜ ಮಂಗಳೂರಿನ ಪಬ್ ಆಟ್ಯಾಕ್ ಬಗ್ಗೆ ಮಾಧ್ಯಮಗಳು ಅತಿರಂಜಿತವಾಗಿ ಬಣ್ಣಿಸಿ ಸುದ್ದಿಯನ್ನು ಗುಡ್ಡ ಮಾಡಿದರು ಎಂದರಂತೆ. ಹಾಗೂ ಈ ಮಾಧ್ಯಮಗಳು ಇಡಿ ಮಂಗಳೂರಿಗೆ ಕೆಟ್ಟ ಹೆಸರು ತರುತ್ತಿವೆ ಎಂದು ಅಭಿಪ್ರಾಯಪಟ್ಟರಂತೆ. ಆದರೆ ಒಂದಿಬ್ಬರು ಮುಸ್ಲಿಮರನ್ನು ಸಂಶಯದ ಕಾರಣಕ್ಕಾಗಿ ಪೊಲೀಸರು ಬಂಧಿಸಿದರೆ ಇಡೀ ಮುಸ್ಲಿಂ ಸಮುದಾಯವೇ ಐಎಸ್‌ಐ ಏಜೆಂಟರೆಂಬಂತೆ ತಿಂಗಳುಗಟ್ಟಲೆ ಮುಖಪುಟದಲ್ಲಿ ವಾರ್ತೆಗಳನ್ನು ಸೃಷ್ಟಿಸಿದ ಪತ್ರಿಕೆಗಳ ಬಗ್ಗೆ ಆ ನಾಗರಿಕ ಸಮಾಜ ಮಾತಾಡಲಿಲ್ಲವೇಕೆ? ಕ್ರಿಶ್ಚಿಯನ್ನರ ಮೇಲೆ ಹಲ್ಲೆ ನಡೆಸಿ ಅಲ್ಲಿನ ಸೌಹಾರ್ದ ಸಂಸ್ಕೃತಿಯನ್ನು ಈ ಕಪಿಸೇನೆಗಳು ಹಾಳುಗೆಡವುತ್ತಿದ್ದಾಗ ಮಂಗಳೂರಿನ ಹೆಮ್ಮೆಗೆ ಮಸಿ ಬಳಿದರು ಎಂದೇಕೆ ಅನಿಸಲಿಲ್ಲ? ಸುದ್ದಿಯನ್ನು ಸಿದ್ಧಾಂತವನ್ನು ಒಟ್ಟೊಟ್ಟಿಗೆ ಬೆರೆಸಿ ಮಾಧ್ಯಮದ ಮೂಲಭೂತ ನೀತಿಸಂಹಿತೆಯನ್ನೇ ಉಲ್ಲಂಘಿಸುತ್ತಿರುವ ಮತ್ತು ಆ ಮೂಲಕ ಇಡೀ ಕರಾವಳಿಯಲ್ಲಿ ಮತದ್ವೇಷವನ್ನು ಬಿತ್ತುತ್ತಿರುವ ವಿಜಯ ಕರ್ನಾಟಕ, ಉದಯವಾಣಿ ಇವುಗಳ ಬಗ್ಗೆ ಆ ನಾಗರಿಕ ಸಮಾಜ ಆತಂಕ ವ್ಯಕ್ತಪಡಿಸಲಿಲ್ಲವೇ? ಹಾಗಿದ್ದರೆ ಆಚಾರ್ಯರವರು ಹಾಜರಾಗಿದ್ದು ನಾಗರಿಕ ಸಮಾಜದ ಸಭೆಗೋ? ಆರೆಸ್ಸೆಸ್ಸಿನ ಬೈಠಕ್ಕಿಗೋ?

ಬೇಜವಾಬ್ದಾರಿ ಮಾಧ್ಯಮಗಳಿಂದಾಗಿ ಹಲವು ಕುಟುಂಬಗಳ ಸ್ವಾಸ್ಥ್ಯ ಹಾಳಾಗುತ್ತಿರುವುದೂ ಮಾಧ್ಯಮಗಳಿಗೆ ನಿಯಂತ್ರಣ ಹೇರುವ ಆಲೋಚನೆ ಬರಲು ಕಾರಣ ಎಂದು ಆಚಾರ್ಯರು ಹೇಳಿದ್ದಾರೆ. ನಿಜ. ಮಾಧ್ಯಮಗಳು ಅದರಲ್ಲೂ ಟಿವಿ ಮಾಧ್ಯಮಗಳು ಕ್ರೈಂ ಸ್ಟೋರಿ ಇತ್ಯಾದಿಗಳಲ್ಲಿ ಇನ್ನೂ ವಿಚಾರಣೆ ನಡೆಯುತ್ತಿರುವ ಪ್ರಕರಣಗಳಲ್ಲಿ ಸಹ ಆರೋಪಿಯನ್ನೇ ಅಪರಾಧಿಯನ್ನಾಗಿ ತೋರಿಸಿ ಹಲವು ನಿರಪರಾಧಿಗಳ ಕುಟುಂಬಗಳು ಹಾಳಾಗುವಂತೆ ಮಾಡಿವೆ. ನಮ್ಮ ನ್ಯಾಯಾಂಗದಲ್ಲಿ ಅಪರಾಧ ಸಾಬೀತಾಗುವತನಕ ನಿರಪರಾಧಿ ಎನ್ನುವುದು ಮೌಲ್ಯವಾಗಿದ್ದರೆ ಮಾಧ್ಯಮಗಳು ನಿರಪರಾಧಿ ಎಂದು ಸಾಬೀತಾಗುವ ತನಕ ಅಪರಾಧಿ ಎಂದೇ ತೋರಿಸುತ್ತವೆ. ಅದರಲ್ಲೂ ಅವರು ಅಲ್ಪಸಂಖ್ಯಾತ ಮತ್ತು ದಲಿತ ಹಿನ್ನೆಲೆಯವರಾಗಿದ್ದರೆ ಮಾಧ್ಯಮಗಳು ಮತ್ತಷ್ಟು ಪೂರ್ವಗ್ರಹದಿಂದ ಮತ್ತು ದ್ವೇಷದಿಂದ ಸುದ್ದಿಯನ್ನು ಬಿತ್ತರಿಸುತ್ತವೆ. ಮತ್ತು ಅವರು ನಿರಪರಾಧಿ ಎಂದು ಸಾಬೀತಾದನಂತರ ಅದರ ಸುದ್ದಿಯನ್ನು ಪ್ರಕಟಿಸದೆ ಅವರ ಬಗ್ಗೆ ಮಾತ್ರವಲ್ಲದೆ ಆ ಸಮುದಾಯಗಳ ಬಗ್ಗೆಯೇ ಸಮಾಜದಲ್ಲಿ ಶಾಶ್ವತ ಪೂರ್ವಗ್ರಹ ಉಳಿಯುವಂತೆ ಮಾಡುತ್ತವೆ.

ಉದಾಹರಣೆಗೆ ಹುಬ್ಬಳ್ಳಿ ಬಾಂಬ್ ಸ್ಫೋಟದಲ್ಲಿ ಮುಸ್ಲಿಮ್ ಉಗ್ರಗಾಮಿಗಳ ಕೈವಾಡ ಇದೆಯೆಂದು ಮುಖಪುಟದಲ್ಲಿ ದಿನಗಟ್ಟಲೆ ಬರೆದ ವಾಯ್ಸ್ ಆಫ್ ಬಿಜೆಪಿ ಆಗಿರುವ ಪತ್ರಿಕೆಗಳು ಅದರ ಹಿಂದೆ ಇರುವುದು ಶ್ರೀರಾಮ ಸೇನೆ ಎಂದು ತಿಳಿದ ನಂತರವೂ ಪ್ರಚಾರ ನಿಲ್ಲಿಸಿಲ್ಲ. ವಾಸ್ತವವಾಗಿ ಆಚಾರ್ಯರು ಬೇಜವಾಬ್ದಾರಿ ಮಾಧ್ಯಮಗಳಿಂದ ಕುಟುಂಬಗಳು ಹಾಳಾಗಿವೆ ಎಂದು ಹೇಳಿದಾಗ ಅವರ ಕಣ್ಣ ಮುಂದೆ ಈ ಕುಟುಂಬಗಳಿರಲಿಲ್ಲ. ಶಾಸಕ ರಘುಪತಿ ಭಟ್ಟರ ಪತ್ನಿ ಪದ್ಮಪ್ರಿಯಾರ ಹತ್ಯೆ ಪ್ರಕರಣದ ವರದಿ ನೋಡಿದಾಗಲೇ ಮಾಧ್ಯಮಗಳ ನಿಯಂತ್ರಣ ಹೇಗೆ ಎಂಬ ಯೋಚನೆ ಮೊಳೆತಿತ್ತು ಎಂದು ಸ್ಪಷ್ಟವಾಗಿ ಹೇಳುವ ಮೂಲಕ ಅವರ ಕಾಳಜಿ ಏನಿದ್ದರೂ ಬಿಜೆಪಿ ಪರಿವಾರದ ಕುಟುಂಬಗಳ ಬಗ್ಗೆ ಮಾತ್ರ ಎಂದು ಸಾಬೀತುಪಡಿಸಿದ್ದಾರೆ.

ಹೀಗಾಗಿ ಬಿಜೆಪಿ ಸರ್ಕಾರ ಮಾಧ್ಯಮಗಳ ಮೇಲೆ ನಿಯಂತ್ರಣ ಹೇರಬೇಕೆಂದು ಬಯಸುತ್ತಿರುವುದು ಅವುಗಳನ್ನು ಜನಹಿತದ ಬಗ್ಗೆ ಮತ್ತಷ್ಟು ಜವಾಬ್ದಾರಿಯುತಗೊಳಿಸುವುದಲ್ಲ. ಬದಲಿಗೆ ತಮ್ಮ ಸಿದ್ಧಾಂತವನ್ನು ಪ್ರಚಾರ ಮಾಡದ ಮತ್ತು ಬೆಂಬಲಿಸದ ಮಾಧ್ಯಮಗಳನ್ನು ಅಂಕೆಯಲ್ಲಿ ತಂದುಕೊಳ್ಳುವುದಕ್ಕೆ.

ಇದು ಬಿಜೆಪಿಯಂತ ಫ್ಯಾಸಿಸ್ಟ್ ಸರ್ಕಾರ ಅಧಿಕಾರಕ್ಕೆ ಬಂದರೆ ದುಡಿಯುವ ವರ್ಗ ಮಾತ್ರವಲ್ಲದೆ ಮಧ್ಯಮ ವರ್ಗ, ಮಾಧ್ಯಮ, ಸಾಂಸ್ಕೃತಿಕ ರಂಗ ಎಲ್ಲವೂ ಹೇಗೆ ದಾಳಿಗೊಳಗಾಗುತ್ತವೆ ಎಂಬುದಕ್ಕೆ ಮತ್ತೊಂದು ಉದಾಹರಣೆಯಾಗಿದೆ. ಹಾಗೆ ನೋಡಿದರೆ ಇಡೀ ಪ್ರಪಂಚದಲ್ಲಿ ಎಲ್ಲಿಯೂ ಮಾಧ್ಯಮಗಳ ನಿಯಂತ್ರಣಕ್ಕೆ ಸರ್ಕಾರವೇ ಧರ್ಮಾಧಿಕಾರಿಯನ್ನು ನೇಮಕ ಮಾಡಿದ ಉದಾಹರಣೆಯಿಲ್ಲ. ಭಾರತದ 'ದಿ ಹಿಂದೂ' ಪತ್ರಿಕೆಯನ್ನೂ ಒಳಗೊಂಡಂತೆ ಹಲವು ಪತ್ರಿಕೆಗಳು ತಾವೇ ಜವಾಬ್ದಾರಿಯುತವಾಗಿ ನಡೆದುಕೊಳ್ಳಲು ಅಂಥ ವ್ಯವಸ್ಥೆಯನ್ನು ಆಂತರಿಕವಾಗಿ ಮಾಡಿಕೊಂಡಿವೆ.

ಇಂದಿನ ಜಾಗತೀಕರಣದ ಯುಗದಲ್ಲಿ ತಾವು ಇಷ್ಟಪಡದ ಸುದ್ದಿ ಬರದಂತೆ ಮಾಡಲು ಬೇರೆ ಮಾರ್ಗಗಳನ್ನು ಅನುಸರಿಸುತ್ತವೆ. ಉದಾಹರಣೆಗೆ 'ಅನಿಮಲ್ ಫಾರ್ಮ್' ಕಾದಂಬರಿಯ ಮುನ್ನುಡಿಯಲ್ಲಿ ಜಾರ್ಜ್ ಆರ್ವೆಲ್ ಹೇಳುವಂತೆ "ಸರ್ಕಾರವು ತನಗೊಪ್ಪದ ಚಿಂತನೆಗಳನ್ನು ಬಲಪ್ರಯೋಗ ಮಾಡದೆ ಎರಡು ರೀತಿಗಳಲ್ಲಿ ದಮನಿಸಬಹುದು. ಮೊದಲನೆಯದಾಗಿ ಮಾಧ್ಯಮಗಳ ಒಡೆತನ ಶ್ರೀಮಂತರ ಕೈಗಳಲ್ಲೇ ಇರುವುದರಿಂದ ತಾವೊಪ್ಪದ ಚಿಂತನೆಗಳು ಅಭಿವ್ಯಕ್ತಗೊಳ್ಳದಂತೆ ನಿಯಂತ್ರಿಸಬಹುದು. ಎರಡನೆಯದಾಗಿ "ಒಳ್ಳೆಯ ಶಿಕ್ಷಣ". ಪ್ರತಿಷ್ಠಿತ ಸಂಸ್ಥೆಗಳಲ್ಲಿ ನೀವು ಶಿಕ್ಷಣ ಪಡೆದಿದ್ದರೆ ಕೆಲವು ಬಗೆಯ ಚಿಂತನೆಗಳನ್ನು ವ್ಯಕ್ತಪಡಿಸುವುದಾಗಲೀ ಅಥವಾ ಆ ರೀತಿಯಲ್ಲಿ ಚಿಂತಿಸುವುದಾಗಲೀ ಸರಿಯಲ್ಲವೆಂಬುದನ್ನು ಆ "ಒಳ್ಳೆಯ ಶಿಕ್ಷಣ"ದ ಕ್ರಮದಲ್ಲೇ ಕಲಿಸಿಬಿಡಲಾಗುತ್ತದೆ."

ಆದರೆ ಒಂದು ಸರ್ವಾಧಿಕಾರಿ ಫ್ಯಾಸಿಸ್ಟ್ ಸರ್ಕಾರ ಮಾತ್ರ ನೇರವಾಗಿ ಮಾಧ್ಯಮವನ್ನು ನಿಯಂತ್ರಿಸಲು ಯತ್ನಿಸುತ್ತದೆ. ಗೃಹಮಂತ್ರಿಗಳು ಆ ರೀತಿ ಘೋಷಿಸಿದ ದಿನ ಒಪ್ಪತ್ತಾಗುವ ಮುಂಚೆಯೇ ಮುಖ್ಯಮಂತ್ರಿಗಳು ಆ ರೀತಿಯ ಯಾವುದೇ ಯೋಚನೆ ಸರ್ಕಾರದ ಮುಂದಿಲ್ಲ ಎಂದು ಹೇಳಿಕೆ ನೀಡಿದರು. ಇದರರ್ಥ ಈ ಸದ್ಯಕ್ಕೆ ಅಂದರೆ ಕನಿಷ್ಠ ಸಂಸತ್ ಚುನಾವಣೆ ಮುಗಿಯುವ ತನಕ ಬಿಜೆಪಿ ಸರ್ಕಾರ ಮಾಧ್ಯಮಗಳನ್ನು ಎದುರು ಹಾಕಿಕೊಳ್ಳಲು ಬಯಸುವುದಿಲ್ಲ. ಚುನಾವಣಾ ಅನಿವಾರ್ಯತೆಗಳು ಸರ್ಕಾರಕ್ಕೆ ಸಂಕೋಲೆಗಳನ್ನು ಹಾಕಿವೆ. ಆದರೆ ಎನ್‌ಡಿಎ ಸರ್ಕಾರ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದಾಗ ಪಾರ್ಲಿಮೆಂಟರಿ ಪದ್ಧತಿಯನ್ನೇ ಬದಲಾಯಿಸಿ ರಾಷ್ಟ್ರಪತಿ ಮಾದರಿ ಆಡಳಿತ ಹೇರಲು ಮತ್ತು ಸಂವಿಧಾನಕ್ಕೆ ಕರಸೇವೆ ಮಾಡಲು ಹೊರಟಿದ್ದನ್ನು ನೆನಪಿಸಿಕೊಂಡರೆ ಬಿಜೆಪಿ ಪರವಲ್ಲದ ಮಾಧ್ಯಮಗಳಿಗಿರುವ ಆತಂಕ ತಪ್ಪಿದೆ ಎಂದು ಭಾವಿಸಲು ಕಾರಣವಿಲ್ಲ.

ಏಕೆಂದರೆ ಎಲ್ಲಾ ಫ್ಯಾಸಿಸ್ಟ್ ಸರ್ಕಾರಗಳು ಅತ್ಯಂತ ಹೆದರಿಕೊಳ್ಳುವುದು ಸತ್ಯಕ್ಕೆ. ಆ ಸತ್ಯವನ್ನು ಮರೆಮಾಚಲು ಅವರು ಏನು ಬೇಕಾದರೂ ಮಾಡುತ್ತಾರೆ.

"ನನ್ನ ಕಣ್ಣ ಮುಂದೆ ಕೊಳೆಯರಾಶಿ ಇದೆ ಎಂದರೆ
ನನ್ನ ಕಣ್ಣನ್ನೇ ಕೀಳಬಯಸಿದರು"

ಎಂದು ಚರಬಂಡರಾಜು ಹೇಳಿದ್ದು ಇದಕ್ಕೆ. ■

No Comments



"ಮಂಗಳೂರು ಪ್ರಕರಣವನ್ನು ವರದಿ ಮಾಡುವಲ್ಲಿ ಮಾಧ್ಯಮಗಳು ತಮ್ಮ ಮಿತಿಯನ್ನು ಮೀರಿಲ್ಲವೆಂದೇ ನನ್ನ ಅಭಿಪ್ರಾಯ. ಆ ದೌರ್ಜನ್ಯವನ್ನು ಹೊರಗೆಳೆಯುವಲ್ಲಿ ಮಾಧ್ಯಮಗಳು ಪ್ರಧಾನ ಪಾತ್ರ ವಹಿಸಿದವು. ಒಂದು ಪ್ರಜಾತಂತ್ರದ ನಿರ್ವಹಣೆಗೆ ಮುಕ್ತ ಮಾಧ್ಯಮ ಅತ್ಯಂತ ಅಗತ್ಯ."

-ಅಮ್ಮು ಜೋಸೆಫ್, ಹಿರಿಯ ಪತ್ರಕರ್ತೆ



"ಸ್ವಾತಂತ್ರ್ಯಾನಂತರದ ಪೀಳಿಗೆಗೆ ಸೈನ್ಯದಲ್ಲಿ ಕೆಲಸ ಮಾಡುವುದು ಒಂದು ಆಕರ್ಷಕ ವೃತ್ತಿಜೀವನವಾಗಿ ಕಾಣಿಸುತ್ತಿಲ್ಲ, ಹೀಗಾಗಿ ಅದನ್ನು ಆಕರ್ಷಕಗೊಳಿಸುವ ಪ್ರಯತ್ನದಲ್ಲಿ ತೊಡಗಿದ್ದೇವೆ."

- ಜನರಲ್ ದೀಪಕ್ ಕಪೂರ್

"ವಾಸ್ತವವಾಗಿ ಆಂಧ್ರದ ಸಿ.ಐ.ಡಿ ಸತ್ಯಂ ಪ್ರಕರಣದ ವಿಚಾರಣೆ ಕೈಗೊಂಡಿದ್ದು ಆ ಹಗರಣದಲ್ಲಿ ಒಳಗೊಂಡಿರಬಹುದಾದ ರಾಜಕೀಯ ನಾಯಕರ ಸಂಬಂಧದ ಕುರಿತಾದ ಸಾಕ್ಷ್ಯಗಳನ್ನು ನಾಶಪಡಿಸಲು ಮಾತ್ರ. ಆ ಪ್ರಕರಣ ಬೆಳಕಿಗೆ ಬಂದು ಒಂದು ತಿಂಗಳಾದ ನಂತರ ಈಗ ಆ ಸಾಕ್ಷ್ಯಗಳನ್ನೆಲ್ಲಾ ನಾಶಪಡಿಸಿದ ನಂತರ ಆಂಧ್ರ ಸರ್ಕಾರವೇ ಪ್ರಕರಣವು ಸ್ವಯಂ ಇಚ್ಛೆಯಿಂದ ಸಿಬಿಐಗೆ ವಹಿಸುತ್ತಿರುವ ನಾಟಕ ನಡೆಯುತ್ತಿದೆ."

-ಪತ್ರಿಕಾ ವರದಿ

ನಂಬಿದ್ರೆನಂಬಿ ಬಿಟ್ರೆಬಿಡಿ

"ಬಯಲುಸೀಮೆಯ ಜನರ ಬಹುದಿನದ ಬೇಡಿಕೆ ಯಾದ ಭದ್ರಾ ಮೇಲ್ದಂಡೆ ಯೋಜನೆಯನ್ನು ನನ್ನ ಅಧಿಕಾರಾವಧಿಯಲ್ಲೇ ಪೂರ್ಣಗೊಳಿಸುತ್ತೇನೆ."

- ಯಡಿಯೂರಪ್ಪ

"ಶ್ರೀರಾಮ ಸೇನೆಗೂ ಆರೆಸ್ಸೆಸ್ಸಿಗೂ ಯಾವುದೇ ಸಂಬಂಧವಿಲ್ಲ, ಕಾನೂನು ಕೈಗೆತ್ತಿಕೊಳ್ಳುವ ಯಾವುದೇ ಕಾರ್ಯಾಚರಣೆಯಲ್ಲಿ ಆರೆಸ್ಸೆಸ್ಸಿಗೆ ನಂಬಿಕೆ ಇಲ್ಲ."

- ಕೃನರಹರಿ, ಆರೆಸ್ಸೆಸ್ ಮುಖಂಡ

"ಪ್ರಮೋದ್ ಮುತಾಲಿಕ್‌ಗೆ ಹಣ ನೀಡುತ್ತಿರುವುದು ಕಾಂಗ್ರೆಸ್ ಪಕ್ಷ."

-ಆರೆಸ್ಸೆಸ್

"ಮುಸ್ಲಿಂ ಲೀಗ್ ನಂತರ ಈ ದೇಶದಲ್ಲಿ ಅತ್ಯಂತ ಕೋಮುವಾದಿ ಪಕ್ಷ ಒಂದಿದೆ ಎಂದರೆ ಅದು ಕಾಂಗ್ರೆಸ್ ಪಕ್ಷ."

- ವೆಂಕಯ್ಯ ನಾಯ್ಡು

"ಈ ಬೇಸಿಗೆಯಲ್ಲಿ ವಿದ್ಯುತ್ತನ್ನು ಕಡಿತ ಮಾಡುವುದಿಲ್ಲ, ವಿದ್ಯುತ್ ದರವನ್ನೂ ಏರಿಸುವುದಿಲ್ಲ."


-ಈಶ್ವರಪ್ಪ

ತಾವು ಕತ್ತೆ ಕಾಯುವವರ ಮುಖ್ಯಸ್ಥರು ಎಂಬುದನ್ನು ಮರೆತಿರಾ?

"ಅಧಿಕಾರಿಗಳಾಗಿ ಸಂಬಳ ತೊಗೊಳ್ತೀರಾ? ಕೆಲಸ ಮಾತ್ರ ಮಾಡದೆ ಕತ್ತೆ ಕಾಯ್ತೀರಾ? ಅಭಿವೃದ್ಧಿ ಮತ್ತು ಜನಹಿತದ ಬಗ್ಗೆ ನಿಮಗೆ ಒಂದಿಷ್ಟು ಕಾಳಜಿ ಇಲ್ಲವೇ?"

- ಯಡಿಯೂರಪ್ಪ

ಓಟಿನ ಋಣಕ್ಕಿಂತ ನೋಟಿನ ಋಣ ದೊಡ್ಡದು ಕಣಾ!



"ದಯವಿಟ್ಟು ಸಿಂಗೂರಿಗೆ ವಾಪಸ್ ಬಂದು ನಿಮಗೆ ತೋಚಿದ ಕೈಗಾರಿಕೆ ಪ್ರಾರಂಭಿಸಿ ಎಂದು ಟಾಟಾದವರಿಗೆ ನಾನು ಕಳಕಳಿಯ ಮನವಿ ಮಾಡುತ್ತೇನೆ."

- ಬುದ್ಧದೇವ ಭಟ್ಟಾಚಾರ್ಯ

ಚಿಂತಕರ ಚಾವಡಿ

ಮೇಲ್‌ಮಧ್ಯಮ ವರ್ಗದ ಇಂಡಿಯನ್ನರು ಮತ್ತವರ ಸೋಡಾಬಾಟಲ್ ಸ್ಫೂರ್ತಿ:



"ನವ ಉದಾರವಾದಿ ರಾಜಕಾರಣ, ಆಸೆ-ಆಕಾಂಕ್ಷೆಗಳ ಜಾಗತೀಕರಣ ಮತ್ತು ಭಾರತವು ಸೂಪರ್ ಪವರ್ ಆಗುತ್ತಿದೆ ಎಂಬ ಉನ್ಮಾದಗಳು ಭಾರತದ ಮಧ್ಯಮ ಮತ್ತು ಮೇಲ್‌ಮಧ್ಯಮ ವರ್ಗಕ್ಕೆ ತಾವೇ ಈ ಹೆಮ್ಮೆಯ ಬೆನ್ನೆಲುಬು ಎಂಬ ಅಹಂಕಾರವನ್ನು ತಂದುಕೊಟ್ಟಿದೆ. ಅವರೀಗ ರಾಜಕಾರಣವು ತಮ್ಮ ಆಕಾಂಕ್ಷೆಗಳನ್ನು ಈಡೇರಿಸಬೇಕೆಂದೂ ಮತ್ತು ತಮ್ಮ ಆತಂಕಗಳನ್ನು ನಿವಾರಿಸಬೇಕೆಂದೂ ನಿರೀಕ್ಷಿಸುತ್ತಾರೆ. ಈ ಕೊಂಡಿಯಿಲ್ಲದ ಅಸಂಗತವು ರಾಜಕಾರಣಿಗಳ ಬಗ್ಗೆ ಶಾಶ್ವತವಾದ ಸಂಶಯ ಮತ್ತು ಸಿನಿಕತನಕ್ಕೆ ದಾರಿ ಮಾಡಿಕೊಡುತ್ತದೆ. ಮುಂಬೈ ದುರ್ಘಟನೆಯ ನಂತರ ಈ ವರ್ಗವು ರಾಜಕಾರಣಿಗಳ ಬಗ್ಗೆ ಹರಿಹಾಯ್ದದ್ದಕ್ಕೆ ಇದೇ ಕಾರಣ. ಇವರ ಈ ಹೊಸ ಆಕ್ಟಿವಿಸಂ ಅಲ್ಪಕಾಲೀನವಾದದ್ದೇ ಆಗಿರಬಹುದು. ಆದರೆ ಅತ್ಯಂತ ಅಪಾಯಕಾರಿ ಸಂಗತಿಯೆಂದರೆ ಈ 'ರಾಜಕೀಯ ವಿರೋಧಿ' ಭಾವನೆಯು ಎಲ್ಲಾ ವರ್ಗಗಳಲ್ಲೂ ಹರಡಿ ಹೋಗಿ ಪ್ರಜಾತಂತ್ರವು ಆತಂಕಪಡಬಹುದಾದ ಶಬ್ದಕೋಶವನ್ನು ಸಮಾಜದಲ್ಲಿ ಸೃಷ್ಟಿಸುತ್ತದೆ ಮತ್ತು ಮಧ್ಯಮ ವರ್ಗದ ಭದ್ರತೆಯನ್ನು ಕೆಳವರ್ಗದ ಜೀವನ ಸ್ವಾತಂತ್ರ್ಯಕ್ಕಿಂತ ಪ್ರಮುಖವಾದ ವಿಷಯವನ್ನಾಗಿ ಮಾಡಿಬಿಡುತ್ತದೆ."

- ಸುಹಾಸ್ ಪಾಲ್ಶೀಕರ್, ಸಮಾಜ ಶಾಸ್ತ್ರಜ್ಞ

ರಂಜನೆ | ಬೋಧನೆ | ಪ್ರತಿಭಟನೆ
ಲಂಕೇಶ್

ಎಳೆಯ ಹುಡುಗಿಯ ತುಂಟ ಕೂದಲು ಮತ್ತು ಅಪ್ಪ



ಕಂಡಹಾಗೆ


■ ಗೌರಿ ಲಂಕೇಶ್

ಇನ್ನು ಮೂರೇ ವಾರ. ಮತ್ತೆ ಮಾರ್ಚ್ 8 ಬಂದೇ ಬರುತ್ತದೆ. ಅದು ಅಪ್ಪನ 74 ನೇ ಹುಟ್ಟುಹಬ್ಬ. ಕಳೆದ ಹಲವು ವರ್ಷಗಳಿಂದ ಆ ದಿನ 'ಲಂಕೇಶ್ ನೆನಪು' ಎಂಬ ಕಾರ್ಯಕ್ರಮವನ್ನು ಹಮ್ಮಿಕೊಂಡು ಬರುತ್ತಿದ್ದೇವೆ. ಮತ್ತು ಒಂದು ವಿಚಾರಗೋಷ್ಠಿ, ಹಲವು ಪುಸ್ತಕಗಳ ಬಿಡುಗಡೆ ಮತ್ತು ಅಪ್ಪನ ಹೆಸರಲ್ಲಿ ನನ್ನ ತಂಗಿ ಬೇಬ (ಕವಿತಾ ಲಂಕೇಶ್) ಭಾರತದ ಅತ್ಯುತ್ತಮ ಚೊಚ್ಚಲ ಸಿನಿಮಾ ನಿರ್ದೇಶಕರಿಗೆ ಪ್ರಶಸ್ತಿ ನೀಡುವುದು, ಆಮೇಲೆ ಚಿತ್ರದ ಪ್ರದರ್ಶನ... ಹೀಗೆ ಹಲವಾರು ಕಾರ್ಯಕ್ರಮಗಳ ಸಂಭ್ರಮ ಅದು.

ಈ ವರ್ಷವೂ ಅದೆಲ್ಲ ನಡೆಯಲಿದೆ.

ಪ್ರತಿ ವರ್ಷ ಈ ಕಾರ್ಯಕ್ರಮದಲ್ಲಿ ಎಲ್ಲಾ ಸಮುದಾಯಗಳು ಪ್ರಾತಿನಿಧ್ಯ ಪಡೆಯಬೇಕೆಂದೂ, ಬಿಡುಗಡೆಗೊಳ್ಳುವ ಪುಸ್ತಗಳು ನಮ್ಮ ಹಲವು ಕಾಳಜಿಗಳನ್ನು ಕುರಿತದ್ದಾಗಿರಬೇಕೆಂದೂ ಎಚ್ಚರ ವಹಿಸುತ್ತೇವೆ. ಅದರಂತೆ ಈ ವರ್ಷವೂ ಸಿದ್ಧತೆಗಳು ನಡೆದಿವೆ.

ನಮ್ಮ 'ಲಂಕೇಶ್' ತಂಡವಂತೂ ಕಿಂಚಿತ್ತೂ ಬಿಡುವಿಲ್ಲದಂತೆ ಕೆಲಸ ಮಾಡುತ್ತಿದೆ. ನಮ್ಮ ಟೆಕ್ನಿಕಲ್ ತಂಡವಾದ ಸತೀಶ್, ಅರುಣ್ ಮತ್ತು ಕಿಶೋರ್ ಏಕಕಾಲದಲ್ಲಿ ಪತ್ರಿಕೆಗಳ ಕೆಲಸವಲ್ಲದೆ ನಮ್ಮ ಎರಡು ಪ್ರಕಾಶನಗಳ ಕೆಲಸ ಮತ್ತು ಮಾರ್ಚ್ 8 ರಂದು ಬಿಡುಗಡೆಗೊಳ್ಳಬೇಕಿರುವ ಪುಸ್ತಕಗಳ ಸಿದ್ಧತೆಯಲ್ಲಿ ಬ್ಯುಸಿಯಾಗಿದ್ದಾರೆ. ನನ್ನ ಟೇಬಲ್ ಅಂತೂ ಬರಲಿರುವ ಪುಸ್ತಕಗಳ ಸಾವಿರಾರು ಪುಟಗಳ ಪ್ರಿಂಟ್ ಔಟ್‌ಗಳು, ಮುಖಪುಟಗಳ ವಿನ್ಯಾಸಗಳು, 'ಲಂಕೇಶ್'ಗೆಂದು ಬಂದಿರುವ ವರದಿಗಳು, ಲೇಖನಗಳು, ಪತ್ರಗಳು; 'ಗೈಡ್'ಗಾಗಿ ನಾನು ಅರ್ಧಂಬರ್ಧ ಮುಗಿಸಿರುವ ಬರಹಗಳು; ಎಲ್ಲವೂ ರಾಶಿಗಟ್ಟಲೆ ಸಂಗ್ರಹವಾಗಿದೆ. ಈಗಾಗಲೇ 'ಲಂಕೇಶ್' ವಾರ ಪತ್ರಿಕೆ ಮತ್ತು ಲಂಕೇಶ್ ಪ್ರಕಾಶನ, 'ಗೈಡ್' ಮಾಸ ಪತ್ರಿಕೆ ಮತ್ತು ಗೈಡ್ ಪ್ರಕಾಶನ ಎಂಬ ನಾಲ್ಕು ಬಂದಿಗಳನ್ನು ನಮ್ಮ ಪುಟ್ಟದಾದ ಆದರೆ ಅಷ್ಟೇ ಕ್ರಿಯಾತ್ಮಕತೆ ಹಾಗೂ ಬದ್ಧತೆಯನ್ನು ಹೊಂದಿರುವ ತಂಡ ಯಶಸ್ವಿಯಾಗಿ ನಿಭಾಯಿಸಿದೆಯಲ್ಲದೆ, ಈಗ ಮಾರ್ಚ್ 8 ರ ಜವಾಬ್ದಾರಿಗಳನ್ನು ಹೊತ್ತು ಮುಂದೆ ಸಾಗುತ್ತಿದೆ.



ಕಳೆದ ವರ್ಷದಂತೆ ಈ ಬಾರಿಯೂ ಆರು ಪುಸ್ತಕಗಳನ್ನು ಬಿಡುಗಡೆ ಮಾಡುವ ಉದ್ದೇಶ ನಮ್ಮದು. ಅವುಗಳಲ್ಲಿ ಪ್ರಮುಖವಾದವುಗಳ ಬಗ್ಗೆ ಒಂದಿಷ್ಟು ಹೇಳಬೇಕೆನಿಸುತ್ತಿದೆ.

ನಿಮಗೆಲ್ಲ ಗೊತ್ತಿರುವಂತೆ 'ನೀಲು' ಎಂಬ ಕಾವ್ಯನಾಮದಡಿ ಲಂಕೇಶ್ ಬರೆಯುತ್ತಿದ್ದ ಕಾವ್ಯಗಳ ಮೊದಲ ಸಂಗ್ರಹವನ್ನು ಎರಡು ವರ್ಷಗಳ ಹಿಂದೆ ಬಿಡುಗಡೆ ಮಾಡಿದ್ದೆವು. ಆ ಪುಸ್ತಕ ಈಗ ಮೂರನೇ ಮುದ್ರಣಕ್ಕೆ ಹೋಗಿದ್ದು ಅದರ ಮುಂದುವರೆದ ಭಾಗವಾಗಿ ಎರಡನೆ ಸಂಗ್ರಹವನ್ನು ಈ ವರ್ಷ ಲಂಕೇಶ್ ಮತ್ತು ನೀಲು ಅಭಿಮಾನಿಗಳಿಗೆ ನೀಡುತ್ತಿದ್ದೇವೆ.

ಈ ಎಲ್ಲ ಕೆಲಸ, ಬೆನ್ನು ನೋವು ಮತ್ತು ಕೋರ್ಟ್ ಜಂಜಾಟಗಳ ನಡುವೆಯೂ ಅದರ ಮೊದಲ ಪ್ರೂಫ್ ನೋಡುತ್ತಿರುವ ನಾನು ಅದರಲ್ಲಿ ನನಗೆ ಇಷ್ಟವಾದ ಹಲವನ್ನು ಇಲ್ಲಿ ಆಯ್ದು ನೀಡುತ್ತಿದ್ದೇನೆ.

ಸೊಟ್ಟ ಮೋರೆಯ ಹುಡುಗಿ
ಕನ್ನಡಿಗೆ
ತಾನು ಜೇನತಳೆಂದು
ಮನವೊಲಿಸುವುದು
ಬದುಕಿನ ಮೋಜು

ಎಳೆಯ ಹುಡುಗಿಯ
ತುಂಟ ಕೂದಲು
ಮೊನ್ನೆ ಮದುವೆಯ ಮೂಲಕ
ತುರುಬಿನಲ್ಲಿ
ಗಂಭೀರವಾದದ್ದು
ನನ್ನನ್ನು ಬೇಸರಗೊಳಿಸಿದೆ.

ಇಷ್ಟವಿಲ್ಲದವನ
ತುದಿಬೆರಳ
ಸ್ಪರ್ಶದಲ್ಲಿ ಕೂಡ
ನರಕವಿದೆ

ಸಸ್ಯಗಳ ಜೊತೆ ಮಾತಾಡಬಲ್ಲ
ವಿಚಿತ್ರನಿಗೆ
ಮನುಷ್ಯರ ಸಂಭಾಷಣೆ
ಅರ್ಥಹೀನ ಬೊಬ್ಬೆ

ಹುಟ್ಟು ಮತ್ತು ಸಾವಿನ
ನಡುವೆ
ಪ್ರೇಮ ಎಂಬುದು
ದೀರ್ಘ ನಿಟ್ಟುಸಿರು

ಎಷ್ಟು ಚಂದವಾಗಿದೆಯಲ್ಲವೆ?! ಇದು ಸ್ಯಾಂಪಲ್ ಮಾತ್ರ..... ನೀಲು ಕಾವ್ಯ ಸಂಗ್ರಹ 2 ಕೂಡ ಮೊದಲನೆ ಸಂಗ್ರಹದಂತೆ ನಿಮ್ಮೆಲ್ಲರಿಗೆ ಇಷ್ಟವಾಗುತ್ತದೆ ಎಂಬುದರ ಬಗ್ಗೆ ಯಾವ ಸಂಶಯವೂ ನಮಗಿಲ್ಲ!

ಎರಡನೆಯ ಪುಸ್ತಕ ಮಹಾರಾಷ್ಟ್ರದ ಖೈರ್ಲಾಂಜಿ ಎಂಬ ಗ್ರಾಮದಲ್ಲಿ ದಲಿತ ಕುಟುಂಬವೊಂದರ ಮೇಲೆ ನಡೆದ ಮಾರಣಹೋಮ ಕುರಿತದ್ದು. ಆ ದಾರುಣ ಪ್ರಕರಣ ಮತ್ತು ಪ್ರಸ್ತುತ ಭಾರತದಲ್ಲಿ ದಲಿತರ ಸ್ಥಿತಿಗತಿಗಳ ಬಗ್ಗೆ ಖ್ಯಾತ ಬರಹಗಾರ ಆನಂದ್ ತೇಲ್‌ತುಂಬ್ಡೆ ಅವರು ಬರೆದಿರುವ 'ಖೈರ್ಲಾಂಜಿ' ಪುಸ್ತಕದ ಕನ್ನಡ ಅನುವಾದವೂ ಬಿಡುಗಡೆಗೊಳ್ಳಲಿದೆ. ಈ ಪುಸ್ತಕದ ಅನುವಾದದಲ್ಲಿ 'ಲಂಕೇಶ್' ಮಿತ್ರರ ತಂಡವೊಂದು ಮುಳುಗ್ಗಿದೆ. ಆ ಪುಸ್ತಕದ ಒಂದು ಪುಟ್ಟ ಭಾಗವನ್ನು ಇಲ್ಲಿ ನೀಡುತ್ತಿದ್ದೇನೆ:

ಈ ಹತ್ಯಾಕಾಂಡದಲ್ಲಿ ಬದುಕುಳಿದ ಭಯ್ಯಾಲಾಲ್ ಭೂತಮಾಂಗೆಯ ಮಾತುಗಳಿವು: "ನನ್ನ ಮಗಳು ಪ್ರಿಯಾಂಕ ಹಾಗೂ ಸುರೇಖಾ (ಪತ್ನಿ) ಮೇಲೆ ಮಾಡಿದ ದಾಳಿಯನ್ನು ನಾನು ದೂರದಿಂದಲೇ ನೋಡಿದೆ. ನನ್ನ ಹೆಂಡತಿ, ಮಗಳು ಮತ್ತು ಇಬ್ಬರು ಗಂಡು ಮಕ್ಕಳಿಗೆ ಅವರು ಹೊಡೆಯುತ್ತಾ 'ಲೇಯ್ ಮಹರ್'ಗಳಾ, ದೇಡ್‌ಗಳಾ (ಅವಹೇಳನಕಾರಿ ಬೈಗುಳ) ನಿಮಗಿಷ್ಟು ಕೊಬ್ಬು ಬಂತಾ' ಎಂದು ಬೈಯುತ್ತಾ ಬಟ್ಟೆ ಕಿತ್ತು ಬೆತ್ತಲುಗೊಳಿಸಿ ಹಳ್ಳಿಯ ನಡುಮಧ್ಯಕ್ಕೆ ಎಳೆದೊಯ್ದರು.

ಮೊಹಾಡಿ ಆಸ್ಪತ್ರೆಗೆ ಶವ ತರಲಾಯಿತು. ನಾನದನ್ನು ನೋಡಿದೆ....ಅದು ನನ್ನ ಮಗಳದಾಗಿತ್ತು. ....ಅವಳ ಮೈಮೇಲೆ ಬಟ್ಟೆಯ ಒಂದು ತುಂಡೂ ಇರಲಿಲ್ಲ. ಮೈತುಂಬಾ ಗಾಯಗಳಾಗಿದ್ದವು. ಅದೊಂದು ಘನಘೋರ ದೌರ್ಜನ್ಯ. ನನಗದನ್ನು ನೋಡಲಾಗಲಿಲ್ಲ. ಅದೇ ತರ ಸುಧೀರ್, ರೋಶನ್ ಮತ್ತು ಸುರೇಖಾಳ ದೇಹಗಳ ಮೇಲೂ ಭಯಾನಕ ಏಟಿನ ಗುರುತುಗಳಿದ್ದವು. ರೋಶನ್ ದೇಹ ಪೂರ್ಣ ಬೆತ್ತಲೆಯಾಗಿತ್ತು. ಅವನನ್ನು ಭೀಕರವಾಗಿ ಥಳಿಸಲಾಗಿತ್ತು. ಸುರೇಖಾಳ ಬ್ಲೌಸ್ ಚಿಂದಿಯಾಗಿ ಪೆಟ್ಟಿಕೋಟ್ ಹರಿದಿತ್ತು. ವಿಪರೀತ ಹೊಡೆದಿದ್ದು ಕಾಣುತ್ತಿತ್ತು. ಅವಳ ತಲೆಬುರುಡೆ ಸೀಳಿ ಹೋಗಿ ಮೆದುಳು ಹೊರ ಚೆಲ್ಲಿತ್ತು. ಸುರೇಖಾಳ ಒಂದು ಕಣ್ಣೂ ಇರಲಿಲ್ಲ..

....ಇಂಥ ಘೋರ ದೌರ್ಜನ್ಯ ನಡೆದರೂ ಅವರು (ಪೊಲೀಸರು) ಮಾಮೂಲಿನಂತೆ ನಿಧಾನವಾಗಿ ಮುಂದುವರೆಯುತ್ತಿದ್ದರು. ಇಲ್ಲಿಗೆ ಎರಡು ತಿಂಗಳಾಯಿತು. ಅವರು ಅರ್ಧದಷ್ಟು ಕ್ರಿಮಿನಲ್‌ಗಳನ್ನು ಮಾತ್ರ ಅರೆಸ್ಟ್ ಮಾಡಿ ಉಳಿದವರನ್ನು ಹಾಗೇ ಬಿಟ್ಟರು. ಅವರು ಈಗಲೂ ಹಳ್ಳಿಯಲ್ಲಿ ನಿರಾತಂಕವಾಗಿ ಓಡಾಡುತ್ತಿದ್ದಾರೆ. ಭತ್ತ ಕುಯಿಲು ಮಾಡಲು ಹೋಗುತ್ತಾರೆ. ಆದರೂ ಪೊಲೀಸರು ನಮಗೆ ಯಾರೂ ಸಿಕ್ಕಿಲ್ಲ ಅನ್ನುತ್ತಾರೆ. ಹತ್ಯೆಯಲ್ಲಿ ಇಡೀ ಹಳ್ಳಿ ಭಾಗಿಯಾಗಿತ್ತು ಸಾರ್.. ಇಡೀ ಹಳ್ಳಿ.. ನಾನು ಕೇವಲ 60-70 ಜನರ ಹೆಸರು ಹೇಳಿದ್ದೀನಿ. ಆದರೆ ಪೂರ್ತಿ ಹಳ್ಳಿಯೇ ಇದರಲ್ಲಿ ಭಾಗಿಯಾಗಿತ್ತು."

ಈ ಘಟನೆಯ ವಿವರಗಳು ಹೃದಯವಿದ್ರಾವಕವಾಗಿವೆ.

ಆನಂದ್ ತೇಲ್‌ಕುಂಬ್ಡೆ ಅವರ ಈ ಪುಸ್ತಕವನ್ನು ಅನುವಾದಿಸಿ ಪ್ರಕಟಿಸುವುದರಲ್ಲಿ ದಲಿತರ ಬಗೆಗಿನ ನಮ್ಮ ಕಾಳಜಿ ಮತ್ತು ದಲಿತರ ಪರವಾದ ನಮ್ಮ ನಿಲುವು ಇನ್ನಷ್ಟು ಸ್ಪಷ್ಟವಾಗುತ್ತದೆ ಎಂದೂ, ಪ್ರಸ್ತುತ ಸಾಮಾಜಿಕ ಮತ್ತು ರಾಜಕೀಯ ಸಂದರ್ಭದಲ್ಲಿ ದಲಿತ ಹೋರಾಟಗಾರರ ಪ್ರಗತಿಪರರ ಮತ್ತು ಜಾತ್ಯತೀತರ ಮುಂದಿರುವ ಸವಾಲುಗಳು ಎಂಥದ್ದೆಂದು ಅರ್ಥಮಾಡಿಕೊಳ್ಳುವಲ್ಲಿ ನೆರವಾಗುತ್ತದೆಂದೂ ನಮ್ಮ ತಂಡ ನಂಬಿದೆ.

ಪತ್ರಿಕೆ ಓದುಗರಿಗೆ ಲಂಕೇಶರ ಟೀಕೆ-ಟಿಪ್ಪಣಿ ಮಾತ್ರವಲ್ಲ, ಸಾಹಿತ್ಯ ಮತ್ತು ಸಾಹಿತಿ ಕುರಿತಂತೆ ಅವರ ವಿಮರ್ಶೆಗಳೂ ಮುಖ್ಯವಾಗಿದ್ದವು. ಅವುಗಳೊಂದಿಗೆ ಅವರು ಪ್ರತಿವಾರ ಬರೆಯುತ್ತಿದ್ದ 'ಮರೆಯುವ ಮುನ್ನ' ಎಂಬ ಪುಟ್ಟ ಟಿಪ್ಪಣಿಗಳ ಅಂಕಣವೂ ಇಷ್ಟವಾಗಿತ್ತು. ಲಂಕೇಶರ ಆಶೆ, ಕನಸು, ಆಸಕ್ತಿ, ನಿತ್ಯ ಜೀವನದ ತುಣುಕುಗಳು, ಗ್ರಹಿಕೆಗಳು ಈ ಅಂಕಣದಲ್ಲೂ ವ್ಯಕ್ತವಾಗುತ್ತಿದ್ದು 'ಟೀಕೆ-ಟಿಪ್ಪಣಿ' ಹಾಗೂ 'ನೀಲು' ಕವನಗಳಷ್ಟೇ ಜನಪ್ರಿಯವಾಗಿದ್ದವು.

ಅಪಾರ ಒಳನೋಟಗಳಿರುವ ಈ ಪುಟ್ಟ ಬರವಣಿಗೆಗಳು ಬಹುಶಃ ಕನ್ನಡ ಸಾಹಿತ್ಯಕ್ಕೆ ದಕ್ಕಿದ ಹೊಸ ಪ್ರಾಕಾರ. ವಿಷಯ ಸಂಕ್ಷಿಪ್ತತೆಯಲ್ಲಿ ಮತ್ತು ವಸ್ತು ವೈವಿಧ್ಯತೆಯಲ್ಲಿ ಎತ್ತೆತ್ತಲೂ ಚಾಚಿಕೊಂಡಿರುವ ಈ ಬರವಣಿಗೆಗಳನ್ನು ಹಲವರು ಜಗತ್ತಿನ ಸಂಕೀರ್ಣತೆಗೂ, ಮಾನವನ ಮಿತಿಗಳಿಗೂ, ಮನುಷ್ಯನ ಅಪಾರ ಸಾಧ್ಯತೆಗಳಿಗೂ, ಬದುಕಿನ ಚಿಕ್ಕಪುಟ್ಟ ಆಶಯಗಳಿಗೂ ಹೋಲಿಸಿ ನೋಡಿರುವುದುಂಟು.

ನಾಲ್ಕು ವರ್ಷಗಳ ಹಿಂದೆಯೇ 'ಮರೆಯುವ ಮುನ್ನ' ಪುಸ್ತಕಗಳನ್ನು ಮುಂದೊಂದು ದಿನ ಪ್ರಕಟಿಸಬೇಕೆಂಬ ಯೋಜನೆ ಹೊಳೆದು ಅದನ್ನು ಯಾವ ರೀತಿ present ಮಾಡಬಹುದೆಂದು ಚಿಂತಿಸಿದೆ. ಅದನ್ನು ಓದುತ್ತಾ ಹೋದಂತೆ ಅದರ ವಿಸ್ತಾರ ಎಷ್ಟು ದೊಡ್ಡ ಪ್ರಮಾಣದ್ದು ಎಂದು ಅರಿವಾಗಿ ಅದನ್ನು ಯಾವ ಚೌಕಟ್ಟಿನಲ್ಲೂ ಬಂಧಿಸುವುದು ಬೇಡ ಎಂದು ನಿರ್ಧರಿಸಿದೆ. ಮಾತ್ರವಲ್ಲ; ಅದನ್ನು ಎಲ್ಲ ವೈವಿಧ್ಯತೆಗಳೊಂದಿಗೆ ನೀಡಿದಾಗಲೇ ಅವರ ಮೂಲ ದ್ರವ್ಯ ಜನರಿಗೆ ಸಿಕ್ಕಿಂತಾಗುತ್ತದೆ ಎಂದೆನಿಸಿತು. ಆದ್ದರಿಂದ ಅಂದಿನ ರಾಜಕೀಯ ಮತ್ತು ಸಾಮಾಜಿಕ ಸಂದರ್ಭಕ್ಕೆ ಮಾತ್ರ ಸೀಮಿತವಾಗಿದ್ದ ಕೆಲವೇ ಕೆಲವು 'ಟಿಪ್ಪಣಿ'ಗಳನ್ನು ಕೈಬಿಟ್ಟು 1987 ರಿಂದ 1990 ರ ತನಕ ಲಂಕೇಶರು ಬರೆದಿದ್ದ 'ಮರೆಯುವ ಮುನ್ನ' ಅಂಕಣದ ಸಂಗ್ರಹ 1 ಈಗ ನಿಮ್ಮ ಕೈ ಸೇರಲಿದೆ. ಈ ಪುಸ್ತಕದ ತಯಾರಿಯಲ್ಲಿ ನೆರವು ನೀಡಿರುವ ಅಧ್ಯಾಪಕ ಎಚ್.ಎಸ್.ಸತ್ಯನಾರಾಯಣ ಅವರು ಅದನ್ನ ಎಷ್ಟು ಮೆಚ್ಚಿದ್ದಾರೆಂದರೆ "ಇದೊಂದು ಅದ್ಭುತ ಪುಸ್ತಕ" ಎಂದು ಆಗಲೇ ತೀರ್ಪು ನೀಡಿದ್ದಾರೆ!

ಕಳೆದ ವಾರ ನಮ್ಮ ನಾಲ್ಕು ವರ್ಷದ ಇಶಾ ಟೆನ್ನಿಸ್ ಆಟದಲ್ಲಿ ತರಬೇತಿ ಪಡೆಯಲಾರಂಭಿಸಿದಳು. ಆ ಕ್ರೀಡೆ ಬಗ್ಗೆ ಆಕೆ ಆಸಕ್ತಿ ತೋರಿಸುತ್ತಿದ್ದಂತೆ ನಮ್ಮೆಲ್ಲರಿಗೆ ಅಪ್ಪನ ಪ್ರೀತಿಯ ಸ್ಟೆಫಿ ಗ್ರಾಫ್ ನಮ್ಮ ಮನೆಯಲ್ಲೇ ಹುಟ್ಟಿದ್ದಾಳೆಂಬಷ್ಟು ಸಂತೋಷ! ಇದೆಲ್ಲ ಅಮ್ಮ, ಅವ್ವಗಳ ಉತ್ಸಾಹ, ಬಿಡಿ! ಆದರೆ ಬೇಬ ಮತ್ತು ನಾನು ಇಶಾಳಿಗೆ ಸ್ಟೆಫಿ ಗ್ರಾಫ್ ಬಗ್ಗೆ ಮತ್ತು ಆಕೆಯ ಬಗ್ಗೆ ತಾತ ಲಂಕೇಶ್‌ಗೆ ಇದ್ದ ಪ್ರೀತಿಯ ಬಗ್ಗೆ ಹೇಳಿದೆವು. "ಸ್ಟೆಫಿ ಗ್ರಾಫ್‌ಳನ್ನು ತಾತ ಎಷ್ಟು ಇಷ್ಟಪಡುತ್ತಿತ್ತೆಂದರೆ ಅವಳ ಫೋಟೋಗಳನ್ನು ತನ್ನ ಆಫೀಸಿನ ಗೋಡೆಗಳ ಮೇಲೆ ಅಂಟಿಸಿಕೊಂಡಿತ್ತು" ಎಂದು ನಾನು ಇಶಾಳಿಗೆ ಹೇಳಿದಾಗ ಆಕೆ ಕಿಸಕ್ಕನೆ ನಕ್ಕಳು!

ಇದನ್ನೆಲ್ಲ ಯಾಕೆ ಹೇಳಿದನೆಂದರೆ ಕೇವಲ ಮನರಂಜನೆ ಎಂದೇ ಭಾವಿಸಲ್ಪಟ್ಟಿರುವ ಕ್ರೀಡೆ ಮತ್ತು ಸಿನಿಮಾಗಳ ಬಗ್ಗೆ ಕನ್ನಡದ 'ಗಂಭೀರ ಸಾಹಿತಿ'ಗಳು ಬರೆದಿರುವ ಉದಾಹರಣೆಗಳು ಕಡಿಮೆ. ಆದರೆ ಅಪ್ಪ ಅದನ್ನೆಲ್ಲ ತನ್ನ ಬದುಕು ಮತ್ತು ಸಾಹಿತ್ಯದಿಂದ ಹೊರತಾದದ್ದು ಎಂದು ಯಾವತ್ತೂ ಭಾವಿಸಿರಲಿಲ್ಲ, ಬದಲಾಗಿ ಅವೆಲ್ಲವೂ ಬದುಕಿನ ಅಗತ್ಯಗಳು ಎಂದೇ ಭಾವಿಸಿದ್ದ ಅಪ್ಪ ಆ ಕ್ಷೇತ್ರಗಳಲ್ಲಿನ ಜನರ ಕೊಡುಗೆಗಳನ್ನು ಬದುಕಿನ ಹಲವಾರು ವಿಚಿತ್ರಗಳೊಂದಿಗೆ ಹೋಲಿಸಿ ಬರೆಯುತ್ತಿದ್ದರು. ಈ ಕಾಳಜಿಯಿಂದಾಗಿಯೇ ನಟ 'ಮರ್ಲಿನ್ ಬ್ರಾಂಡೋ ಮತ್ತು ದೈಹಿಕ ನೋವು' ಹಾಗೂ 'ಚಂಡಮಾರುತದ ತಂಟೆಗೆ ಹೋದರೆ' ಎಂದು ಬಾಕ್ಸರ್ ಟೈಸನ್ ಬಗ್ಗೆ ಅದ್ಭುತ ಲೇಖನಗಳನ್ನು ಅವರು ಬರೆಯಲು ಸಾಧ್ಯವಾಗಿತ್ತು.

ಈಗ ಕ್ರೀಡೆ ಮತ್ತು ಸಿನಿಮಾ ಕುರಿತು ಲಂಕೇಶರು ಬರೆದಿದ್ದ ಲೇಖನಗಳು ಒಂದು ಪ್ರತ್ಯೇಕ ಪುಸ್ತಕವಾಗಿ ಹೊರಬರುತ್ತಿದೆ. ನನ್ನ ತಂಗಿ ಮತ್ತು ಆಕೆಯ ಮಿತ್ರರು ಈ ಬಾರಿಯ 'ಲಂಕೇಶ್ ಚಿತ್ರ ಪ್ರಶಸ್ತಿ'ಗೆ ಚಿತ್ರವನ್ನು ಆಯ್ಕೆ ಮಾಡುವ ಕಾರ್ಯದಲ್ಲಿ ತೊಡಗಿದ್ದಾರೆ.

ಈ ವರ್ಷದ ಮಾರ್ಚ್ 8 ಭಾನುವಾರ ಬೀಳುತ್ತಿದೆ. ನೀವೆಲ್ಲರೂ ಈಗಲೇ ಅದನ್ನು ಮಾರ್ಕ್ ಮಾಡಿಕೊಂಡು ಅಂದಿನ 'ಲಂಕೇಶ್ 74' ಕಾರ್ಯಕ್ರಮಕ್ಕೆ ಬರಬೇಕೆಂದು ಕೇಳಿಕೊಳ್ಳುತ್ತಿದ್ದೇನೆ. ಅಂದು ರವೀಂದ್ರ ಕಲಾಕ್ಷೇತ್ರದಲ್ಲಿ ಮತ್ತೆ ಭೇಟಿಯಾಗೋಣ. ಪ್ರೀತಿಯಿಂದ....

■


ಪ್ರಗತಿಪರ ಸಂಘಟನೆಗಳ ಒಕ್ಕೂಟ


'ಸಂಸ್ಕೃತಿ ರಕ್ಷಣೆ' ಎಂಬ ಗೂಂಡಾಗಿರಿ ವಿರುದ್ಧ ಯುವ ಜನತೆ

ಸಾರ್ವತ್ರಿಕ ಪ್ರತಿಭಟನಾ ಕಾರ್ಯಕ್ರಮ
ಫೆಬ್ರವರಿ 20, ಮಧ್ಯಾಹ್ನ 3.30ಕ್ಕೆ
ಮಂಗಳೂರು ಜಿಲ್ಲಾಧಿಕಾರಿ ಕಚೇರಿ ಎದುರು

ಸಹಸ್ರ ಸಹಸ್ರ ಸಂಖ್ಯೆಯಲ್ಲಿ ಭಾಗವಹಿಸಿ, ಗೂಂಡಾಗಿರಿಯನ್ನು ವಿರೋಧಿಸಿ

ಕೇರಳ ಸಿಪಿಎಂ: ಮದಗಜಗಳ ತಿಕ್ಕಾಟ






ಭಾರತದಲ್ಲಿ ಬೇರಾವ ರಾಜಕೀಯ ಪಕ್ಷಗಳಿಗಿಂತಲೂ ಅತಿಹೆಚ್ಚು ತುಂಡುತುಂಡಾಗಿ ಒಡೆದು ಹೋಗಿರುವ ಏಕೈಕ ಪಕ್ಷ ಎಂದರೆ ಕಮ್ಯೂನಿಸ್ಟ್ ಪಕ್ಷ. 1917ರ ರಷಿಯಾ ಕ್ರಾಂತಿಯ ಪ್ರಭಾವದೊಂದಿಗೆ 1920ರ ದಶಕದ ಆರಂಭದಲ್ಲಿಯೇ ಹುಟ್ಟಿಕೊಂಡ ಈ ಪಕ್ಷ ಈ ಹೊತ್ತು ಅದೆಷ್ಟು ತುಣುಕುಗಳಾಗಿ ಒಡೆದಿದೆಯೆಂದರೆ ಖಂಡಿತವಾಗಿಯೂ ಅವುಗಳನ್ನು ಎಣಿಸಲು ಸಾಧ್ಯವಾಗುವುದಿಲ್ಲ. ಈ ಎಲ್ಲಾ ಒಡಕುಗಳ ಹಿಂದೆಯೂ ಸೈದ್ಧಾಂತಿಕ ಭಿನ್ನಾಭಿಪ್ರಾಯಗಳ ಸಮರ್ಥನೆಗಳಿದ್ದವು. ಆದರೆ, ಅದಕ್ಕೆ ಅಪವಾದವೆಂಬಂತೆ ಈಗ ನಾಯಕರಿಬ್ಬರ ವೈಯಕ್ತಿಕ ದ್ವೇಷದಿಂದಾಗಿ ಕೇರಳದ ಸಿಪಿಎಂ ಪಕ್ಷ ಇಬ್ಭಾಗದತ್ತ ಹೊರಟಿದೆ.

ಕೇರಳದ ಮುಖ್ಯಮಂತ್ರಿ ಸಿಪಿಎಂನ ವಿ.ಎಸ್.ಅಚ್ಯುತಾನಂದನ್ ಮತ್ತು ಸಿಪಿಎಂನ ರಾಜ್ಯ ಘಟಕದ ಕಾರ್ಯದರ್ಶಿ ಪಿಣರಾಯಿ ವಿಜಯನ್ ನಡುವಿನ ತಿಕ್ಕಾಟವೀಗ ತಾರಕಕ್ಕೇರಿದೆ. 1990ರ ದಶಕದ ಆರಂಭದಲ್ಲಿ ವಿಜಯನ್ ಕೇರಳದ ಇಂಧನ ಸಚಿವರಾಗಿದ್ದಾಗ ಕೆನಡಾದ ಕಂಪನಿಯೊಂದಕ್ಕೆ 374 ಕೋಟಿ ರೂ.ಗಳ ಗುತ್ತಿಗೆ ನೀಡಿ ದೊಡ್ಡ ಪ್ರಮಾಣದಲ್ಲಿ ಭ್ರಷ್ಟಾಚಾರವೆಸಗಿದ್ದರು ಎಂಬ ಆರೋಪದ ಮೇಲೆ ಸಿಬಿಐ ಈಗ ಅವರ ಮೇಲೆ ಕೇಸು ದಾಖಲಿಸಿದೆಯಲ್ಲದೇ ಅವರನ್ನು ಶಿಕ್ಷೆಗೆ ಗುರಿಪಡಿಸಲು ಕೆಲವು ನಿರ್ಣಾಯಕ ಹೆಜ್ಜೆಗಳನ್ನಿಟ್ಟಿದೆ.

ವಿಜಯನ್ ಅವರ ಬಹುದಿನದ ರಾಜಕೀಯ ವೈರಿಯಾಗಿರುವ ಮುಖ್ಯಮಂತ್ರಿ ವಿ.ಎಸ್.ಅಚ್ಯುತಾನಂದನ್ ಇದನ್ನು ಚೆನ್ನಾಗಿ ಬಳಸಿಕೊಂಡು ವಿಜಯನ್ ಅವರನ್ನು ಶಾಶ್ವತವಾಗಿ ಮಟ್ಟ ಹಾಕುವುದಕ್ಕೆ ವೇದಿಕೆ ಸಿದ್ಧಗೊಳಿಸಿದ್ದಾರೆ. ಈ ಇಬ್ಬರು ಮದಗಜಗಳ ನಡುವಿನ ಘರ್ಷಣೆಯೀಗ ಕೇವಲ ಕೇರಳ ಸಿಪಿಎಂ ನಾಯಕರಿಗೆ ಮಾತ್ರವಲ್ಲ ಅದರ ಕೇಂದ್ರ ಸಮಿತಿ ಮತ್ತು ಪಾಲಿಟ್‌ಬ್ಯೂರೋ ಸದಸ್ಯರಿಗೂ ತಲೆನೋವಾಗಿ ಪರಿಣಮಿಸಿದೆ. ಪಕ್ಷದಲ್ಲಿ ಇಬ್ಬರೂ ಪ್ರಭಾವಿ ನಾಯಕರಾಗಿರುವುದರಿಂದ ಹಾಗೂ ರಾಜ್ಯ ಮಟ್ಟದಲ್ಲಿ ಅತ್ಯುನ್ನತ ಹುದ್ದೆಗಳಲ್ಲಿರುವುದರಿಂದ ಒಬ್ಬರ ಪರವಾಗಿ ಮಾತನಾಡುವುದಕ್ಕೆ ಪ್ರಕಾಶ್ ಕಾರಟ್ ಆದಿಯಾಗಿ ಸಿಪಿಎಂನ ರಾಷ್ಟ್ರ ನಾಯಕರ್‍ಯಾರಿಗೂ ಮನಸ್ಸಿಲ್ಲ. ಹಾಗಾಗಿ, ವಿಜಯನ್ ಮೇಲಿರುವ ಆರೋಪದಲ್ಲಿ ಸತ್ಯವೆಷ್ಟು-ಮಿಥ್ಯವೆಷ್ಟು ಎಂಬುದರ ಬಗ್ಗೆ ಪ್ರಾಮಾಣಿಕ ತನಿಖೆ ನಡೆಸುವುದರ ಬದಲಿಗೆ ಇಬ್ಬರನ್ನೂ ಒಲೈಸುವ ಕೆಲಸದಲ್ಲಿ ರಾಷ್ಟ್ರ ನಾಯಕರು ನಿರತರಾಗಿದ್ದಾರೆ. ಅದೂ ಲೋಕಸಭೆ ಚುನಾವಣೆಗಳು ಹತ್ತಿರವಾಗುತ್ತಿರುವ ಈ ಸಂದರ್ಭದಲ್ಲಿ ಒಬ್ಬ ನಾಯಕನ ಪರ ವಹಿಸಿದರೆ ಅದು ಚುನಾವಣೆಯ ಮೇಲೆ ಪ್ರಭಾವ ಬೀರುತ್ತದೆಯೆಂಬ ಆತಂಕ ಅವರದ್ದು.



ಹಾಗೇ ನೋಡಿದರೆ ವಿ.ಎಸ್.ಅಚ್ಯುತಾನಂದನ್ ಇದ್ದುದರಲ್ಲಿ ಕ್ಲೀನ್ ಹ್ಯಾಂಡ್ ಎಂದು ಹೇಳಬಹುದು. ಅವರ ಸುದೀರ್ಘ ರಾಜಕೀಯ ಜೀವನದಲ್ಲಿ ಬೆರಳು ಮಾಡಿ ತೋರಿಸಬಹುದಾದ ಅಂಥ ಭ್ರಷ್ಟಾಚಾರಗಳೇನೂ ನಡೆದಿಲ್ಲ. ಈ ಕಾರಣಕ್ಕಾಗಿಯೇ ಅವರಿಗೆ ಕೇವಲ ಸಿಪಿಎಂ ಪಕ್ಷದಲ್ಲಿ ಮಾತ್ರವಲ್ಲ ಅದರಾಚೆಗೂ ಜನರ ಬೆಂಬಲವಿದೆ. ಅದೂ ಅಲ್ಲದೇ, 1964ರಲ್ಲಿ ಸಿಪಿಐನಲ್ಲಿ ಬಂಡಾಯವೆದ್ದು ಅದರ ನ್ಯಾಷನಲ್ ಕೌನ್ಸಿಲ್ ತೊರೆದು ಸಿಪಿಎಂ ರಚಿಸಿಕೊಂಡ ಕೇರಳದ 32 ಸದಸ್ಯರಲ್ಲಿ ಬದುಕಿರುವ ಏಕೈಕ ವ್ಯಕ್ತಿ ಎಂದರೆ ಅಚ್ಯುತಾನಂದನ್. ಹೀಗಾಗಿ, ಅವರನ್ನು ಅಷ್ಟು ಸುಲಭವಾಗಿ ಕಡೆಗಣಿಸುವುದು ರಾಷ್ಟ್ರ ನಾಯಕತ್ವಕ್ಕೆ ಸಾಧ್ಯವಿಲ್ಲ. ಇನ್ನೊಂದೆಡೆ, ವಿಜಯನ್ ಕೂಡ ಹತ್ತಾರು ವರ್ಷಗಳಿಂದ ಪಕ್ಷದಲ್ಲಿ ದುಡಿದವರು. ಆದರೆ, ಜನರಲ್ಲಿಯಾಗಲೀ ಪಕ್ಷದೊಳಗಾಗಲೀ ಅವರ ಮೇಲೆ ಅಷ್ಟೊಂದು ಭರವಸೆಯಿಲ್ಲ. ಸಿಬಿಐ ವಿಜಯನ್ ಮೇಲೆ ಇಂತಹದ್ದೊಂದು ಭ್ರಷ್ಟಾಚಾರದ ಕೇಸು ದಾಖಲಿಸಿದೆಯೆಂದರೆ ಅದನ್ನು ನಂಬುವುದಕ್ಕೆ ಕಾರ್ಯಕರ್ತರಿಗೆ, ಜನರಿಗೆ ಕಾರಣಗಳಿವೆ.

ಒಟ್ಟಾರೆಯಾಗಿ ಈ ಜಗಳದ ಪ್ರಭಾವ ರಾಜ್ಯದ ಅಭಿವೃದ್ಧಿಯ ಮೇಲೆ ನಕಾರಾತ್ಮಕ ಪ್ರಭಾವ ಬೀರುತ್ತಿದೆ. ಈಗ ಕೇರಳದ ವಿಧಾನಸಭೆಯಲ್ಲಿ ಬಜೆಟ್ ಅಧಿವೇಶನ ಪ್ರಾರಂಭವಾಗಿದೆ. ಸಾಮಾನ್ಯವಾಗಿ ಅಭಿವೃದ್ಧಿಯ ಬಗ್ಗೆ ನಡೆಯಬೇಕಿದ್ದ ಚರ್ಚೆ ಅಚ್ಯುತಾನಂದನ್-ವಿಜಯನ್ ತಿಕ್ಕಾಟದ ಸುತ್ತ ಗಿರಕಿ ಹೊಡೆಯುತ್ತಿದೆ.

ಒಂದಂತೂ ಸ್ಪಷ್ಟ. ಕಳೆದ 2004ರ ಲೋಕಸಭಾ ಚುನಾವಣೆಯಲ್ಲಿ ಕೇರಳದ ಒಟ್ಟು 20 ಸ್ಥಾನಗಳ ಪೈಕಿ 19 ಸ್ಥಾನಗಳು ಎಡಪಕ್ಷಗಳ ಪಾಲಾಗಿದ್ದವು. ಆದರೆ, ಈ ಬಾರಿ ಅದು ಪುನರಾವರ್ತನೆಯಾಗುವುದಿಲ್ಲ.

ಫುಲ್ ಟೈಂ ನಟರು - ಪಾರ್ಟ್ ಟೈಂ ಎಂಪಿಗಳು



ಬಣ್ಣ ಹಚ್ಚಿಕೊಂಡು ಕುಣಿಯುವ ನಟರನ್ನು ಜನಪ್ರತಿನಿಧಿಗಳನ್ನಾಗಿಸಿದರೆ ಅವರೆಷ್ಟು ಚೆನ್ನಾಗಿ ತಮ್ಮ ಜವಾಬ್ದಾರಿಯನ್ನು ನಿರ್ವಹಿಸಬಲ್ಲರು ಎಂಬುದನ್ನು ನಮ್ಮ ನಟ ಕಮ್ ಎಂಪಿಗಳು ತೋರಿಸಿಕೊಟ್ಟಿದ್ದಾರೆ.

ದೇಶ ಏನೆಲ್ಲಾ ಏಳುಬೀಳುಗಳನ್ನು ಕಾಣುತ್ತಿದೆ, ಎಷ್ಟೆಲ್ಲಾ ಸಮಸ್ಯೆಗಳು ತುಂಬಿ ತುಳುಕುತ್ತಿವೆ. ಆದರೆ ನಮ್ಮ ನಟಶಿಖಾಮಣಿ ಎಂಪಿಗಳು ಅದಕ್ಕೂ ತಮಗೂ ಏನೇನೂ ಸಂಬಂಧವಿಲ್ಲವೆಂಬಂತೆ ತಮ್ಮ ಪಾಡಿಗೆ ನಟನಾ ಕಾರ್ಯದಲ್ಲಿ ಮುಂದುವರೆದಿದ್ದಾರೆ. ಕೆಲವು ಉದಾಹರಣೆಗಳನ್ನು ನೋಡಿ.

ಕಳೆದ ಐದು ವರ್ಷಗಳ ಅವಧಿಯಲ್ಲಿ ಪಾರ್ಲಿಮೆಂಟಿನಲ್ಲಿ ಅಮೆರಿಕದೊಂದಿಗಿನ 'ಅಣುಬಂಧ'ವನ್ನೂ ಒಳಗೊಂಡಂತೆ ದೇಶದ ಮಹತ್ವಪೂರ್ಣ ವಿಚಾರಗಳ ಬಗ್ಗೆ ಬಹಳಷ್ಟು ಗಮನಾರ್ಹ ಚರ್ಚೆಗಳಾಗಿವೆ. ಆ ಯಾವ ಚರ್ಚೆಗಳಲ್ಲೂ ನಮ್ಮ ನಟಭಯಂಕರರು ಗಂಭೀರವಾಗಿ ಪಾಲ್ಗೊಂಡಿಲ್ಲ. ಮುಂಬೈ ಉತ್ತರ ಕ್ಷೇತ್ರದಿಂದ ಆಯ್ಕೆಯಾಗಿರುವ ಕಾಂಗ್ರೆಸ್‌ನ ಬಾಲಿವುಡ್ ನಟ ಗೋವಿಂದ ತನ್ನ ಐದು ವರ್ಷದ ಅವಧಿಯಲ್ಲಿ ಕೇವಲ ಎರಡು ಪಾರ್ಲಿಮೆಂಟ್ ಚರ್ಚೆಗಳಿಗೆ ಹಾಜರಾದರು! ಇನ್ನೂ ದುರಂತ ಎಂದರೆ ಈ ಚರ್ಚಾವೇಳೆಯಲ್ಲಿ ಆತ ಕುಳಿತು ನಿದ್ರೆ ಮಾಡಿದರೆ ಹೊರತು ಒಂದೇ ಒಂದು ಸಾಲನ್ನೂ ಕುತೂಹಲದಿಂದ ಕೇಳಿಸಿಕೊಳ್ಳಲಿಲ್ಲ ಎಂದ ಮೇಲೆ ಪ್ರಶ್ನೆ ಕೇಳುವುದೆಲ್ಲಿಂದ ಬಂತು?!

ಸುತ್ತ ಮುತ್ತ

ಕುಮಾರ್ ಬುರಡಿಕಟ್ಟಿ



ಬಾಲಿವುಡ್‌ನ ಸ್ಟಾರ್ ನಟ ಬಜೆಪಿಯ ಧರ್ಮೇಂದ್ರನ ಕತೆ ಕೇಳಿ. ಇವರು ರಾಜಸ್ಥಾನದ ಬಿಕಾನೆರ್ ಕ್ಷೇತ್ರದಿಂದ ಗೆದ್ದಿದ್ದಾರೆ. ಕಳೆದ ಐದು ವರ್ಷಗಳಲ್ಲಿ ಪಾರ್ಲಿಮೆಂಟ್‌ನಲ್ಲಿ ನಡೆದ ನೂರಾರು ಚರ್ಚೆಗಳ ಪೈಕಿ ಒಂದೇ ಒಂದು ಚರ್ಚೆಯಲ್ಲಿ ಇವರು ಭಾಗವಹಿಸಿಲ್ಲ!




ಇನ್ನು ಪಂಜಾಬ್‌ನ ಗುರುದಾಸ್‌ಪುರ ಕ್ಷೇತ್ರದಿಂದ ಆಯ್ಕೆಯಾಗಿರುವ ಬಿಜೆಪಿಯ ಬಾಲಿವುಡ್ ನಟ ವಿನೋದ್ ಖನ್ನಾರಿಗೂ ಆ ಕ್ಷೇತ್ರಕ್ಕೂ ಯಾವುದೇ ಸಂಬಂಧವಿಲ್ಲ. ಮೂಲತಃ ಮುಂಬೈ ನಿವಾಸಿಯಾಗಿರುವ ಅವರಿಗೆ ಬಿಜೆಪಿ ಗುರುದಾಸ್‌ಪುರದ ಟಿಕೆಟ್ ಕೊಟ್ಟಾಗ ಆ ಕ್ಷೇತ್ರ ಎಲ್ಲಿದೆ ಎಂಬುದೇ ಅವರಿಗೆ ಗೊತ್ತಿರಲಿಲ್ಲ ಎಂದು ಖುದ್ದಾಗಿ ಅವರೇ ಒಪ್ಪಿಕೊಂಡಿದ್ದಾರೆ. ಕಣಕ್ಕಿಳಿದದ್ದೂ ಆಯಿತು, ತನ್ನ ಸ್ಟಾರ್ ಲಕ್ಕಿನಿಂದ ಗೆದ್ದಿದ್ದೂ ಆಯಿತು. ಆಮೇಲೆ ಅವರು ತಮ್ಮ ಕ್ಷೇತ್ರದ ಬಗ್ಗೆ, ದೇಶದ ಬಗ್ಗೆ ಒಂದಿಷ್ಟೂ ತಲೆಕೆಡಿಸಿಕೊಳ್ಳಲಿಲ್ಲ. ಅವರೂ ಕೂಡ ಗೋವಿಂದನಂತೆ ಹೆಚ್ಚೂಕಡಿಮೆ ಪಾರ್ಲಿಮೆಂಟನಲ್ಲಿ ನಡೆಯುವ ಚರ್ಚೆಗಳಿಗೂ ತಮಗೂ ಏನೇನೂ ಸಂಬಂಧವಿಲ್ಲವೆಂಬಂತೆಯೇ ವರ್ತಿಸಿದ್ದಾರೆ. ಒಟ್ಟಾರೆ ಐದು ವರ್ಷದ ಅಧಿಕಾರಾವಧಿಯಲ್ಲಿ ಅವರು ಪಾರ್ಲಿಮೆಂಟ್ ಚರ್ಚೆಗಳಲ್ಲಿ ಭಾಗವಹಿಸಿದ್ದು ಕೇವಲ ಐದು ಬಾರಿ ಮಾತ್ರ. ಕೇಳಿದ್ದು ಕೇವಲ ನಾಲ್ಕು ಪ್ರಶ್ನೆಗಳನ್ನು!

ಆಗ್ರಾ ಕ್ಷೇತ್ರದಿಂದ ಸಮಾಜವಾದಿ ಪಕ್ಷದ ಟಿಕೆಟ್ ಪಡೆದು ಗೆದ್ದು ಬಂದಿರುವ ರಾಜ್ ಬಬ್ಬರ್ ಒಟ್ಟು ಏಳು ಚರ್ಚೆಗಳಲ್ಲಿ ಭಾಗವಹಿಸಿ ಐದು ಪ್ರಶ್ನೆಗಳನ್ನು ಕೇಳಿದ್ದಾರೆ.

ನಮ್ಮ ಕರ್ನಾಟಕದ ಮಂಡ್ಯದಿಂದ ಆಯ್ಕೆಯಾಗಿ ಹೋಗಿರುವ ಅಂಬರೀಷ್‌ರಂಥ ಇನ್ನೂ ಅನೇಕ ನಟರು ಆಗಾಗ ಕುಡಿದ ಗುಂಗಿನಲ್ಲಿ ಕೆಲವೊಂದು ಅಧಿವೇಶನಗಳಲ್ಲಿ ನಿದ್ರೆ ಮಾಡಿ ಬಂದಿದ್ದಾರಾದರೂ ಅವರೂ ಚರ್ಚೆಗಳಲ್ಲಿ ಗಂಭೀರವಾಗಿ ಭಾಗವಹಿಸಿದ್ದು ತೀರಾ ಕಡಿಮೆ.

▶▶▶


ಜಲಿಯನ್‌ವಾಲಾಬಾಗ್‌ನಲ್ಲಿ ಬಾದಲ್ ದೌರ್ಜನ್ಯ



ಭಾರತದ ಸ್ವಾತಂತ್ರ್ಯ ಚಳವಳಿಯ ಸಂದರ್ಭದಲ್ಲಿ ಪಂಜಾಬ್‌ನ ಜಲಿಯನ್‌ವಾಲಾಬಾಗ್‌ನಲ್ಲಿ ಬ್ರಿಟಿಷರು ನಡೆಸಿದ ಹತ್ಯಾಕಾಂಡ ಜನರ ಮನಸ್ಸಿನಲ್ಲಿ ಇನ್ನೂ ಹಸಿಹಸಿಯಾಗಿಯೇ ಉಳಿದಿದೆ. ಆದರೆ, ಸ್ವಾತಂತ್ರ್ಯ ದೊರೆತು ಆರು ದಶಕಗಳು ಕಳೆದ ಮೇಲೆ ಮೊನ್ನೆ ಮತ್ತೆ ಅದೇ ಜಾಗದಲ್ಲಿ ನಮ್ಮದೇ ಸರ್ಕಾರ ವಿದ್ಯಾರ್ಥಿಗಳ ಮೇಲೆ ಕ್ರೂರವಾಗಿ ದಾಳಿ ನಡೆಸಿ ಬ್ರಿಟಿಷರ ದೌರ್ಜನ್ಯವನ್ನು ನೆನಪಿಸಿದೆ.

ಪ್ರಕಾಶ್ ಸಿಂಗ್ ಬಾದಲ್ ನೇತೃತ್ವದ ಪಂಜಾಬ್ ಸರ್ಕಾರ ಚಾರಿತ್ರಿಕ ಜಲಿಯನ್‌ವಾಲಾಬಾಗ್‌ನ ನವೀಕರಣದ ಹೆಸರಿನಲ್ಲಿ ಹೊಸ ಹೊಸ ಕಟ್ಟಡಗಳನ್ನು ಕಟ್ಟುತ್ತಿರುವುದನ್ನು, ಇಡೀ ಪ್ರದೇಶದ ಚಹರೆಯನ್ನೇ ಬದಲಿಸುತ್ತಿರುವುದನ್ನು ವಿರೋಧಿಸಿ ಪಂಜಾಬ್ ಸ್ಟೂಡೆಂಟ್ಸ್ ಯೂನಿಯನ್ ಮತ್ತು ಪಂಜಾಬ್ ನೌಜವಾನ್ ಸಭಾದ ನೇತೃತ್ವದಲ್ಲಿ ಪ್ರತಿಭಟನೆಗಿಳಿದ ವಿದ್ಯಾರ್ಥಿಗಳ ಮೇಲೆ ಪೊಲೀಸರು ಯಾವ ಮುನ್ಸೂಚನೆಯನ್ನೂ ಕೊಡದೇ ಲಾಠಿ ಚಾರ್ಜ್ ಮಾಡಿ ಇಪ್ಪತ್ತೈದಕ್ಕೂ ಹೆಚ್ಚು ವಿದ್ಯಾರ್ಥಿಗಳನ್ನು ಬಂಧಿಸಿದ್ದಾರೆ.

1919ರ ಏಪ್ರಿಲ್ 13ರಂದೂ ಬ್ರಿಟಿಷರು ಜಾರಿಗೆ ತಂದಿದ್ದ ರೌಲಟ್ ಕಾಯಿದೆಯನ್ನು ವಿರೋಧಿಸುವುದಕ್ಕಾಗಿ ಸಾವಿರಾರು ಜನರು ಅಮೃತಸರದ ಜಲಿಯನ್‌ವಾಲಾಬಾಗ್‌ನಲ್ಲಿ ಶಾಂತಿಯುತವಾಗಿ ಸಭೆ ಸೇರಿದ್ದರು. ಬ್ರಿಟಿಷ್ ಅಧಿಕಾರಿ ಜನರಲ್ ಡಯರ್ ಶಸ್ತ್ರಸಜ್ಜಿತ ಪೊಲೀಸರನ್ನು ಕಟ್ಟಿಕೊಂಡು ಬಂದು ಪ್ರತಿಭಟನಾ ನಿರತರ ಮೇಲೆ ಯಾವ ಮುನ್ಸೂಚನೆಯನ್ನೂ ಕೊಡದೇ ಏಕಾಏಕಿ 'ಗುಂಡು ಹಾರಿಸಲು' ಆದೇಶ ಕೊಟ್ಟಿದ್ದ. ಎತ್ತರವಾದ ಗೋಡೆಗಳಿಂದ ಸುತ್ತುವರೆದ ಈ ಜಾಗಕ್ಕೆ ಇರುವ ಒಂದೇ ಒಂದು ಕಿರಿದಾದ ಪ್ರವೇಶ ದ್ವಾರದಲ್ಲಿಯೇ ಕುಳಿತು ಪೊಲೀಸರು ಗುಂಡಿನ ಮಳೆಗರೆದರು. ತಪ್ಪಿಸಿಕೊಳ್ಳಲು ಜಾಗವೇ ಇಲ್ಲದ್ದರಿಂದ ನೋಡು' ನೋಡುತ್ತಿದ್ದಂತೆಯೇ ಒಂದು ಸಾವಿರಕ್ಕೂ ಹೆಚ್ಚು ಪುರುಷರು, ಮಹಿಳೆಯರು, ವೃದ್ಧರು ರಕ್ತದ ಮಡುವಿನಲ್ಲಿ ಬಿದ್ದು ಸತ್ತುಹೋದರು. ಜಲಿಯನ್‌ವಾಲಾಬಾಗ್‌ನಲ್ಲಿ ಬ್ರಿಟಿಷರು ನಡೆಸಿದ ದೌರ್ಜನ್ಯದ ವಿರುದ್ಧ ದೇಶದಾದ್ಯಂತ ಭಾರತೀಯ ಜನಸಮುದಾಯಗಳ ಹೋರಾಟ ಭುಗಿಲೆದ್ದು ಬ್ರಿಟಿಷರಿಗೇ ಮುಳುವಾಯಿತು.




ಆಗಿನ್ನೂ ಬಾಲಕನಾಗಿದ್ದ ಭಗತ್‌ಸಿಂಗ್ ಜಲಿಯನ್‌ವಾಲಾಬಾಗ್‌ಗೆ ಹೋಗಿ ಕೊನೆಯುಸಿರಿರುವ ತನಕ ಬ್ರಿಟಿಷರ ವಿರುದ್ಧ ಹೋರಾಡುವ ಶಪಥ ಮಾಡಿಬಂದಿದ್ದ.

ಇಂತಹ ಐತಿಹಾಸಿಕ ಜಾಗವನ್ನು ಇಲ್ಲಿಯತನಕ ರಕ್ಷಿಸಿಕೊಂಡು ಬರಲಾಗಿತ್ತು. ಡಯರ್‌ನ ಪಡೆಗಳು ಹಾರಿಸಿದ ಗುಂಡುಗಳು ಗೋಡೆಗಳಲ್ಲಿ ಮಾಡಿದ ಗುರುತುಗಳನ್ನು ನಾವು ಈಗಲೂ ನೋಡಬಹುದು.

ಆದರೆ, ಮೊನ್ನೆ ಅಧಿಕಾರಕ್ಕೇರಿದ ಪ್ರಕಾಶ್


ಈಗ ಬಿಟಿ ಬದನೆಕಾಯಿ ಕಾಟ!




ಜನರಿಗೆ ವಿಷವುಣಿಸಿಯಾದರೂ ಸರಿ ಅಮೋಘ ಲಾಭ ಗಳಿಸುವುದೇ ಬಹುರಾಷ್ಟ್ರೀಯ ಕಂಪೆನಿಗಳ ಜಾಯಮಾನ. ಈಗ ಬಿಟಿ ಬದನೆಕಾಯಿ ಬೆಳೆಯುವ ಪ್ರಯೋಗದ ಮೂಲಕ ಅಂತಹದ್ದೊಂದು ದುಸ್ಸಾಹಸಕ್ಕೆ ಈ ಕಂಪೆನಿಗಳು ಸಜ್ಜಾಗುತ್ತಿವೆ. ದುರಂತ ಎಂದರೆ ಅದಕ್ಕೂ ನಮಗೂ ಯಾವುದೇ ಸಂಬಂಧವಿಲ್ಲವೆಂಬಂತೆ ನಮ್ಮ ಬೇಜವಾಬ್ದಾರಿ ಸರ್ಕಾರಗಳು ಈ ವಿಷಕಾರಿ ಬೆಳೆಯನ್ನು ಬೆಳೆಯುವುದಕ್ಕೆ ಅನುಮತಿ ನೀಡಲು ಹವಣಿಸುತ್ತಿವೆ.

ಬಿಟಿ ಬದನೆಕಾಯಿ ಎಂಬ ಕುಲಾಂತರಿ ಬೆಳೆ (**Genetically Modified Crop**) ಮಾನವ ದೇಹಕ್ಕೆ ಬಹು ಅಪಾಯಕಾರಿಯಾದುದು. **Bacillus thuringiensis** ಎಂಬ ಬ್ಯಾಕ್ಟೀರಿಯಾದ ಜೀನುಗಳನ್ನು ಬದನೆಕಾಯಿಯಲ್ಲಿ ಹಾಕುವ ಮೂಲಕ ಈ ಹೊಸ ಬಿಟಿ ಬದನೆಕಾಯಿ ತಳಿಯನ್ನು ಸೃಷ್ಟಿಸಲಾಗುತ್ತದೆ. ಈ ಬದನೆಯಕಾಯಿಯನ್ನು ಹೆಗ್ಗಣಗಳ ಮೇಲೆ ಪ್ರಯೋಗಿಸಿದಾಗ ತೀರಾ ಅಪಾಯಕಾರಿಯಾಗಿರುವ ಅಂಶಗಳು ಕಂಡುಬಂದಿವೆ. ಇನ್ನು ಮನುಷ್ಯರು ಇದನ್ನು ತಿಂದರೆ ದೇಹದಲ್ಲಿರುವ ರೋಗನಿರೋಧಿ ವ್ಯವಸ್ಥೆಯನ್ನೇ ಹಾಳುಮಾಡುವ, ಕ್ಯಾನ್ಸರ್‌ನಂಥ ಭೀಕರ ರೋಗ ಸೃಷ್ಟಿಗೆ ಕಾರಣವಾಗುವ, ದೇಹದ ಅಂಗಾಂಗಗಳನ್ನು ದುರ್ಬಲಗೊಳಿಸುವ ಅಪಾಯವಿದೆ ಎಂದು ಹತ್ತಾರು ಪ್ರಯೋಗಗಳು, ಅಧ್ಯಯನಗಳು ಸಾಬೀತುಪಡಿಸಿವೆ. ಮಾತ್ರವಲ್ಲ ಮನುಷ್ಯನ ಸಂತಾನಗ್ರಹಣ ಶಕ್ತಿಯೇ ಇದರಿಂದ ನಾಶವಾಗುತ್ತದೆಂದು ವಿಜ್ಞಾನಿಗಳು ಎಚ್ಚರಿಸಿದ್ದಾರೆ. ಇಷ್ಟೆಲ್ಲಾ ಅಪಾಯಗಳನ್ನು ಹೊಂದಿರುವ ಈ ಬಿಟಿ ಬದನೆಕಾಯಿಯನ್ನೂ ಒಳಗೊಂಡಂತೆ ಇನ್ನಿತರ ಬಿಟಿ ಬೆಳೆಗಳ ಮೇಲೆ ಅಮೆರಿಕ ಮತ್ತು ಯೂರೋಪ್‌ನ ಹತ್ತಾರು ದೇಶಗಳು ನಿಷೇಧ ಮಾಡಿವೆ. ಆದರೂ ಭಾರತದಲ್ಲಿ ಈ ಬೆಳೆಗಳನ್ನು ಪ್ರಾಯೋಗಿಕವಾಗಿ ಬೆಳೆಯುವುದಕ್ಕೆ ಅನುಮತಿ ನೀಡಲಾಗುತ್ತಿದೆ.

ಚುನಾವಣೆಯ ಸಮಯದಲ್ಲಿ ಈ ನಟಭಯಂಕರರು ಕೊಟ್ಟ ಭರವಸೆಗಳಲ್ಲಿ ವನ್ನೂ ಈಡೇರಿಸಿಲ್ಲ. ಆದರೆ, ಅದೇ ಸಮಯದಲ್ಲಿ ಕರಾರಿನಂತೆ ಎಲ್ಲಾ ನಚಿತ್ರಗಳಲ್ಲಿ ಚಾಚೂತಪ್ಪದೇ ನಟಿಸುವ ಮೂಲಕ ಚಿತ್ರ ನಿರ್ಮಾಪಕರಿಗೆ ಟ್ಟ ಭರವಸೆಗಳನ್ನು ತಪ್ಪದೇ ಈಡೇರಿಸಿದ್ದಾರೆ. ಅಂದರೆ, ದುಡ್ಡು ಕೊಡುವ ನಿರ್ಮಾಪಕರ ಸೇವೆಯನ್ನು ಚೆನ್ನಾಗಿ ಮಾಡಿದ್ದಾರೆಯೇ ಹೊರತು ಓಟು ನೀಡಿದ ಜನರತ್ತ ತಿರುಗಿಯೂ ನೋಡಿಲ್ಲ.





ಇದು ಲೋಕಸಭೆಗೆ ನಾವು ಆಯ್ಕೆ ಮಾಡಿಕಳಿಸಿರುವ ನಟಭಯಂಕರ ಶಿಖಾಮಣಿಗಳ ಅಮೋಘ ಆಡಳಿತದ ಕತೆ. ಕನಿಷ್ಠ ಪಾರ್ಲಿಮೆಂಟಿನ ಚರ್ಚೆಗಳಲ್ಲಿ ಭಾಗವಹಿಸುವಷ್ಟು ವ್ಯವಧಾನವಿರದವರು, ಕೇವಲ ತಮ್ಮದೇ ನಟನೆ, ಕೆರಿಯರ್ ಅಂತ ವೈಯಕ್ತಿಕ ಜೀವನದಲ್ಲಿ ಮುಳುಗಿರುವವರು ಇನ್ನೇನು ದೇಶ ಉದ್ಧಾರ ಮಾಡುತ್ತಾರೆ? ಇಡೀ ದೇಶದ ಬಗ್ಗೆ ತಲೆಕೆಡಿಸಿಕೊಳ್ಳುವುದು ಒತ್ತಟ್ಟಿಗಿರಲಿ, ಕನಿಷ್ಠ ತಾವು ಗೆದ್ದ ಕ್ಷೇತ್ರದ ಅಭಿವೃದ್ಧಿಯನ್ನಾದರೂ ಇಂಥವರಿಂದ ಹೇಗೆ ನಿರೀಕ್ಷಿಸಲು ಸಾಧ್ಯ?


ಈಗ ಮತ್ತೆ ಲೋಕಸಭಾ ಚುನಾವಣೆ ಸಮೀಪಿಸುತ್ತಿದೆ. ಈ ನಟರು ಮಾತ್ರವಲ್ಲದೇ ಇನ್ನೂ ಅನೇಕರು ಮತ್ತೆ ಮೇಕಪ್ ಮಾಡಿಕೊಂಡು ಮತ ಕೇಳಲು ಬರಲಿದ್ದಾರೆ. ಈಗಾಗಲೇ ಬಾಲಿವುಡ್‌ನ ಐಶ್ವರ್ಯ ರೈ ಬಚ್ಚನ್ ಬಿಹಾರದಿಂದಲೂ, ಸಂಜಯ್ ದತ್ ತ್ತರ ಪ್ರದೇಶದಿಂದಲೂ ಸ್ಪರ್ಧಿಸುವುದು ಗ್ಯಾರಂಟಿಯಾಗಿದೆ. ಕರ್ನಾಟಕದಲ್ಲೂ ವು ಹಾಲಿ, ಮಾಜಿ ನಟರು ಬೇರೆ ಬೇರೆ ಪಕ್ಷಗಳ ಟಿಕೆಟ್‌ಗಾಗಿ ಕ್ಯೂ ಡಿದ್ದಾರೆ. ತಮ್ಮ ಅಮೂಲ್ಯ ಮತಗಳನ್ನು ಇಂಥವರಿಗೆ ಹಾಕಬೇಕೆ, ಹಾಕಿ ತ್ತೆ ಐದು ವರ್ಷಗಳ ಕಾಲ ಪಶ್ಚಾತ್ತಾಪ ಪಡಬೇಕೆ ಎಂಬುದನ್ನು ಪ್ರಜ್ಞಾವಂತ ಗರಿಕರು ಯೋಚಿಸುವುದೊಳಿತು. ■



ರ್ ಬಾದಲ್ ಜಲಿಯನ್‌ವಾಲಾಬಾಗ್‌ನ ನವೀಕರಣದ ಹೆಸರಿನಲ್ಲಿ ಅದರ ದಾದ ಗೋಡೆಯನ್ನು ಒಡೆದು ವಿಸ್ತರಿಸುವ, ಹೊಸ ಹೊಸ ಕಟ್ಟಡಗಳನ್ನು ಟ್ಟುವ ಕೆಲಸಕ್ಕೆ ಕೈಹಾಕಿದ್ದರು. ವಾಸ್ತವದಲ್ಲಿ ಇದು ಭಾರತೀಯರು ಬ್ರಿಟಿಷರ ರುದ್ಧ ವಿರೋಚಿತವಾಗಿ ಹೋರಾಡಿದ ಚರಿತ್ರೆಯನ್ನು ತಿರುಚುವ ಕೆಲಸವಾಗಿತ್ತು, ನರ ವಿರುದ್ಧ ವಿದ್ಯಾರ್ಥಿಗಳು, ಚರಿತ್ರಕಾರರು, ಹೋರಾಟಗಾರರು ದನಿ ತ್ತಿದ್ದರು. ಮೊನ್ನೆ ಫೆಬ್ರವರಿ 13ರಂದು ವಿದ್ಯಾರ್ಥಿ-ವಿದ್ಯಾರ್ಥಿನಿಯರು ಲಿಯನ್‌ವಾಲಾಬಾಗ್‌ನಲ್ಲಿ ಬಾದಲ್ ವಿರುದ್ಧ ಪ್ರತಿಭಟನೆ ನಡೆಸುತ್ತಿದ್ದಾಗ ಾಪಿಕ ಪೊಲೀಸರು ದಾಳಿ ಮಾಡಿ ದೌರ್ಜನ್ಯವೆಸಗಿದ್ದಾರೆ. ತೀವ್ರತೆ ಮತ್ತು ನಹಾನಿಗಳ ಪ್ರಮಾಣಗಳನ್ನು ಹೊರತುಪಡಿಸಿದರೆ ಬಾದಲ್ ಮತ್ತು ಜನರಲ್ ಯರ್ ನಡೆಸಿದ ದೌರ್ಜನ್ಯಗಳ ಸ್ವರೂಪ ಒಂದೇ ಆಗಿದೆ.

ಹತ್ತು ಹಲವಾರು ಸಮಸ್ಯೆಗಳಿಂದ ಆ ರಾಜ್ಯ ಜರ್ಜರಿತವಾಗಿದೆ. ಆ ಕಡೆ ಮನ ಕೊಡುವುದನ್ನು ಬಿಟ್ಟು ಜಲಿಯನ್‌ವಾಲಾಬಾಗ್ ನವೀಕರಣದಂಥ ಾಸಕ್ಕೆ ಬಾರದ ಕೆಲಸಗಳಿಗೆ ಬಾದಲ್ ಕೈಹಾಕುತ್ತಿದ್ದಾರೆ. ಇದನ್ನು ಸ್ವತಂತ್ರನಾದು ದು ಕರೆಯಲಾದೀತೆ? ■

ಲಾಲೂ ರೈಲು
ಮುಖ್ಯಮಂತ್ರಿ ಐಲು!



"ರಾಜ್ಯ ಸರ್ಕಾರ ಕೋರಿದ ಯಾವುದೇ ಯೋಜನೆಗಳಿಗೆ ರೈಲ್ವೆ ಸಚಿವರು ಸಕಾರಾತ್ಮಕವಾಗಿ ಸ್ಪಂದಿಸಿಲ್ಲ. ರೈಲ್ವೆ ಯೋಜನೆಗಳ ಒಟ್ಟು ವೆಚ್ಚದಲ್ಲಿ ಶೇ.50ನ್ನು ಭರಿಸಲು ನಾವು ಸಿದ್ಧರಿದ್ದೇವೆ ಎಂದು ಹೇಳಿದ್ದರೂ ಉದ್ದೇಶಿತ ಯೋಜನೆಗಳನ್ನು ಕೇಂದ್ರ ಪರಿಗಣಿಸಿಲ್ಲ. ಇದು ಅನ್ಯಾಯ ಪರಂಪರೆಯ ಮುಂದುವರೆದ ಅಧ್ಯಾಯ" ಹೀಗೆ ಮೊನ್ನೆ ಕೇಂದ್ರ ಸಚಿವ ಲಾಲೂ ಮಂಡಿಸಿದ ರೈಲ್ವೆ ಬಜೆಟ್‌ಗೆ ಮುಖ್ಯಮಂತ್ರಿ ಯಡ್ಡಿ ಪ್ರತಿಕ್ರಿಯಿಸಿದ್ದಾರೆ.

ರಾಜ್ಯದ ಜನತೆ ತಾನು ಹೇಳಿದ್ದನ್ನೆಲ್ಲಾ ನಂಬುವ ಮೂರ್ಖರು ಎಂದು ಯಡ್ಡಿ ಭಾವಿಸಿದಂತಿದೆ. ಬರೀ ಮಾತಿನಲ್ಲಿಯೇ ರಾಜ್ಯದ 'ಅಭಿವೃದ್ಧಿ' ಮಾಡುತ್ತಿರುವ ಯಡ್ಡಿ, ರಾಜ್ಯದ ಬೇಡಿಕೆಗಳನ್ನು ರೈಲ್ವೆ ಸಚಿವರ ಮುಂದೆ ಮಂಡಿಸಿದ್ದು ಯಾವಾಗ ಗೊತ್ತೇ? ರೈಲ್ವೆ ಬಜೆಟ್ ಮಂಡನೆಗೆ ಇನ್ನೊಂದು ವಾರವಿದ್ದಾಗ.




ವಿತ್ತ ಸಚಿವರಾಗಿ ಈಗಾಗಲೇ ಮೂರು ಬಜೆಟ್ ಮಂಡಿಸಿರುವ ಯಡ್ಡಿಗೆ ಬಜೆಟ್‌ಗೆ ಎಷ್ಟು ದಿನದ ಸಿದ್ಧತೆ ನಡೆದಿರುತ್ತದೆ, ಯಾವಾಗ ನಿರ್ಧಾರಗಳಾಗಿರುತ್ತವೆ ಎಂಬ ಸಾಮಾನ್ಯ ಜ್ಞಾನ ಇರಬೇಕಲ್ಲ. ಹಾಗಿದ್ದಲ್ಲಿ ರೈಲ್ವೆ ಬಜೆಟ್ ಮಂಡನೆಗೆ ಇನ್ನು ಕೇವಲ ಒಂದು ವಾರವಿರುವಾಗ ಪತ್ರ ಬರೆದು ರಾಜ್ಯದ ಬೇಡಿಕೆಯ ಉದ್ದ ಪಟ್ಟಿಯನ್ನು ಸಲ್ಲಿಸಿದರೆ ಲಾಲೂವಾದರೂ ಏನು ಮಾಡಲು ಸಾಧ್ಯ. ಸರಿಯಾದ ಸಂದರ್ಭದಲ್ಲಿ ಹೋಗಿ ರಾಜ್ಯದ ಬೇಡಿಕೆಗಳ ಬಗ್ಗೆ ಸಚಿವರಿಗೆ ಮನವರಿಕೆ ಮಾಡಿಕೊಡುವುದು ಮುಖ್ಯಮಂತ್ರಿಯಾಗಿದ್ದ ಯಡ್ಡಿಯ ಕರ್ತವ್ಯವಾಗಿರಲಿಲ್ಲವೇ? ಎಲ್ಲ ಮುಗಿದ ಮೇಲೆ ಪತ್ರವೊಂದನ್ನು ಬಿಸಾಕಿ 'ಅಯ್ಯಯ್ಯೋ ಅನ್ಯಾಯ' ಎಂದು ಕೂಗಿದರೆ ಯಾರಾದರೂ ಯಡ್ಡಿಯನ್ನು ಜವಾಬ್ದಾರಿಯುತ ಮುಖ್ಯಮಂತ್ರಿಯೆನ್ನುತ್ತಾರೆಯೇ?

ರಾಜ್ಯದಿಂದ ಪ್ರತಿವರ್ಷ ರೈಲ್ವೆಗೆ 80,000 ಕೋಟಿ ಸಂದಾಯವಾಗುತ್ತಿದೆ. ಇಷ್ಟೊಂದು ಹಣ ಬಾಚಿಕೊಳ್ಳುತ್ತಿರುವ ರೈಲ್ವೆ ರಾಜ್ಯದ ಪ್ರಯಾಣಿಕರಿಗೆ ಮೂಲಭೂತ ಸೌಕರ್ಯವನ್ನು ಒದಗಿಸುವ ಕಡೆಗಾಗಲೀ, ಹೊಸ ಮಾರ್ಗಗಳನ್ನು ಸೃಷ್ಟಿಸಿ, ಹೊಸ ರೈಲುಗಳನ್ನು ಬಿಟ್ಟು ಪ್ರಯಾಣಿಕರಿಗೆ ಅನುಕೂಲ ಮಾಡಿಕೊಡುವ ಕಡೆಗಾಗಲೀ ಒಂದಿಷ್ಟೂ ಗಮನ ನೀಡುತ್ತಿಲ್ಲ. ಇದು ಅನ್ಯಾಯವೆಂಬುದರಲ್ಲಿ ಅನುಮಾನವೇ ಇಲ್ಲ.

ಆದರೆ, ಈ ರೀತಿಯ ಅನ್ಯಾಯ ಪ್ರತಿ ಬಜೆಟ್‌ನಲ್ಲಿಯೂ ನಡೆದಿರುವಾಗ ಮುನ್ನೆಚ್ಚರಿಕೆ ವಹಿಸಿ, ಒತ್ತಡ ತಂತ್ರ ಅನುಸರಿಸಿ, ಕೆಲಸ ಮಾಡಿಸಿಕೊಳ್ಳಬೇಕಾಗಿದ್ದ ಮುಖ್ಯಮಂತ್ರಿ ಯಡ್ಡಿ, ತಮ್ಮ ಕರ್ತವ್ಯವನ್ನು ಮಾಡದೆ ಹೇಗೆ ರಾಜ್ಯಕ್ಕೆ ಅನ್ಯಾಯ ಮಾಡುತ್ತಿದ್ದಾರೆ ಎಂಬುದಕ್ಕೆ ಈ ಪತ್ರ ಬರೆದ ನಾಟಕವೇ ಸಾಕ್ಷಿ. ರೈಲ್ವೆ ಬಜೆಟ್‌ನಲ್ಲಿ ರಾಜ್ಯಕ್ಕೆ ಅನ್ಯಾಯವಾಗುತ್ತಿದ್ದರೆ, ಅದಕ್ಕೆ ರೈಲ್ವೆ ಸಚಿವ ಲಾಲೂಗಿಂತಲೂ ಹೆಚ್ಚಾಗಿ ನಮ್ಮ ಮುಖ್ಯಮಂತ್ರಿ ಮತ್ತು ನಿರ್ಲಜ್ಜ ಸಂಸದರು ಮುಖ್ಯ ಹೊಣೆಗಾರರು. ಆದರೆ ಅವರು ಬಜೆಟ್ ಮಂಡನೆಯಾದಾಗ 'ಅಯ್ಯಯ್ಯೋ ಅನ್ಯಾಯ' ಎಂದು ಕೂಗುವ 'ಕನ್ನಡ ಓರಾಟ'ಗಾರರೊಂದಿಗೆ ಸೇರಿಕೊಂಡು, ತಾವೂ ಒಂದಿಷ್ಟು ಕಿರುಚಾಡಿ ಜನರ ಕೋಪದಿಂದ ಪಾರಾಗುತ್ತಿದ್ದಾರೆ, ಮುಖ್ಯಮಂತ್ರಿ ಯಡ್ಡಿಯಂತೆ!

■ ಪೋಕರಿ

ಸದಾನಂದನ ಹಲ್ಲು ಕಿತ್ತು ಹಲ್ಲು ಕಟ್ಟಿಸುತ್ತೇವೆ



ಸದಾ ಹಲ್ಲಿನಲ್ಲೇ ನಗುವ ಸದಾನಂದಗೌಡನೆಂಬ ಚಡ್ಡಿ ಅಮಾಯಕ ಚಿಕ್ಕಮಗಳೂರಿಗೆ ಅಮರಿಕೊಳ್ಳುವ ತಯಾರಿ ನಡೆಸಿದ್ದಾನಂತಲ್ಲಾ. ಆದರೆ ಚಿಕ್ಕಮಗಳೂರು ಕ್ಷೇತ್ರದ ಹಣೆಬರಹ, ಗ್ರಹಗತಿ ಕೇಳಲಾಗಿ ಸದಾನಂದನು ಎಷ್ಟೇ ಹಲ್ಲು ಕಿರಿದರೂ ಅದು ಒಲಿಯುವುದು ಅಷ್ಟು ಸುಲಭವಲ್ಲ, ಯಾವುದಕ್ಕೂ ಬಲಿಶಾಂತಿಯ ಅಗತ್ಯವಿದೆ ಎಂದು ಹಕ್ಕಿ ಶಾಸ್ತ್ರದ ಹಲ್ಲಂಡೆಗಳು ಹೇಳಿದರಂತಲ್ಲಾ. ಸದಾನಂದ ಪುರದಮ್ಮನಿಗೆ ನೂರುಕುರಿ ನೂರುಕೋಳಿ ಕೊಡಲು ಹರಕೆ ಹೊತ್ತು ಅದನ್ನ ನೆರವೇರಿಸಲಿದ್ದಾನಂತಲ್ಲಾ. ಈ ತಿಕ್ಕಲು ಆಸಾಮಿಯ ಮೂರ್ಖ ತೀರ್ಮಾನಕ್ಕೆ ಬೆಚ್ಚಿಬಿದ್ದ ಚಿಕ್ಕಮಗಳೂರ ಮಾನವಂತರು "ಸದಾನಂದ ಬರಲಿ, ಅವನ ಹಲ್ಲುಕಿತ್ತು, ಹೊಸ ಹಲ್‌ಸೆಟ್ ಕೊಡಿಸೋಣ" ಎಂದು ಕಾಯುತ್ತಿದ್ದರಂತಲ್ಲಾ. ಅದೂಅಲ್ಲದೆ, ಬಜೆಪಿಯ ಬಂಡಾಯಗಾರ ಜನಗಳೇ "ಸದಾನಂದನಿಗೆ ಜಾಪಳ ಮಾತ್ರ ಕೊಟ್ಟು ಮತ್ತೆ ಈ ಕಡೆ ತಿರುಗಿ ನೋಡದಂತೆ ಮಾಡುತ್ತೇವೆ" ಎಂದು ಚಡ್ಡಿ ಎತ್ತಿ ತೊಡೆ ತಟ್ಟಿ ಶೆಡ್ಡು ಹೊಡೆದಿದ್ದಾರಂತಲ್ಲಾ ಥೂತ್ತೇರಿ!

* * * * * *

ಥೂತ್ತೇರಿ
ಯಾಹೂ

ಎಡೂರಪ್ಪ ತುಂಬಾ ತಲೆಯೋಡಿಸಿ ತನ್ನ ಅಂತರಂಗದ ವೈರಿ ಈಶ್ವರಪ್ಪನಿಗೆ ಕೊಟ್ಟ ಇಂಧನ ಖಾತೆ ಫಲನೀಡತೊಡಗಿದೆಯಂತಲ್ಲಾ. ಕರ್ನಾಟಕದ ಜನತೆಯೊಂದಿಗೆ ಕಣ್ಣಾಮುಚ್ಚಾಲೆಯಾಡುತ್ತಿರುವ ಕರೆಂಟನ್ನು ಶಪಿಸುವ ಬದಲು ಜನರೆಲ್ಲಾ ಈಶ್ವರಪ್ಪನನ್ನು ಬಾಯಿಗೆ ಬಂದಂತೆ ಬಯ್ಯತೊಡಗಿದ್ದಾರಂತಲ್ಲಾ. ಈ ಬೈಗುಳಕ್ಕೆ ತಲೆರೋಸಿದ ಈಶ್ವರಪ್ಪ "ನಾನು ಈ ಖಾತೆ ತೆಗೆದುಕೊಳ್ಳುವಾಗ ಹಿಂದೆಮುಂದೆ ನೋಡಲಿಲ್ಲ, ಈಗ ಸಂಪೂರ್ಣ ಹಿಂದೆ ಸರಿಯುವಂತಾಗಿದೆ" ಎಂದು ಅಳುತ್ತಿದ್ದಾರಂತಲ್ಲಾ. ಈಶ್ವರಪ್ಪನನ್ನು ಹತ್ತಿಕ್ಕುವ ಸಲುವಾಗಿ ಎಡೂರಪ್ಪ ಸಿದ್ಧರಾಮಯ್ಯನನ್ನ ಹಿಡಿದು ಹೆಲಿಕಾಪ್ಟರ್‌ನಲ್ಲಿ ಕೂರಿಸಿಕೊಂಡು ಸುತ್ತೂರನ್ನ ಸುತ್ತಿಸಿ ಕೆಳಗಿಳಿಸಿದಾಗಿನಿಂದ, ಈಶ್ವರಿ ನಿದ್ದೆ ಕಳೆದುಕೊಂಡು ಬರೀ ಗೊರಕೆ ಹೊಡೆಯುತ್ತಿದ್ದಾರಂತಲ್ಲಾ. ಇದಕ್ಕೆ ಪುಷ್ಟಿ ನೀಡುವಂತೆ ಈಶ್ವರಿ ಹಿಂಬಾಲಕರು "ಯಾವುದಕ್ಕೂ ಇನ್ನು ಮುಂದೆ ಮಾತನಾಡಬೇಡಿ ಸಾರ್. ತಲೆಕೆಟ್ಟ ಎಡೂರಪ್ಪ ಏನು ಮಾಡಲು ಹೇಸದವರು" ಎಂದಾಗಿನಿಂದ ಈಶ್ವರಿ ಪೇಜಾವರನ ಜಪಮಾಡುತ್ತಾ ಪೇಚಾಡುತ್ತಿದ್ದಾರಂತಲ್ಲಾ, ಥೂತ್ತೇರಿ!!

* * * * * *

ತನ್ನ ಕಾಲಿಗೆ ಬೀಳದವರನ್ನು ದುರುಗುಟ್ಟಿ ನೋಡುವ ಸುತ್ತೂರು ಶ್ರೀಗಳು ಎಲ್.ಬಸವರಾಜು ಮಾತಿನಿಂದ ಕೆಂಡಮಂಡಲವಾಗಿ ಅದನ್ನ ಯಾರಲ್ಲೂ ಹೇಳಿಕೊಳ್ಳದೇ ಸಿರಿಗರದ ಸ್ವಾಮಿಯ ಸನ್ನಿಧಿಯಲ್ಲಿ ಹೇಳಿಕೊಳ್ಳಲಾಗಿ ಸಿರಿಗರದ ಸ್ವಾಮಿ ಸರಕಾರವನ್ನೇ ನಿಯಂತ್ರಿಸುವ ರಿಮೋಟ್ ಕಂಟ್ರೋಲ್ ತರಹ ಸರಕಾರಕ್ಕೆ ಧಮಕಿ ಹಾಕಿದರಂತಲ್ಲಾ. ಬಿಡುವಾದಾಗಲೆಲ್ಲಾ ಅಪಸ್ವರ ಪಿಟೀಲು ಕುಯ್ಯುವ ಸಿರಿಗರದ ಸ್ವಾಮೀಜಿಯವರು, ದಾವಣಗೆರೆಯ ರಣಬಿಸಿಲಲ್ಲಿ ಅಡ್ಡಪಲ್ಲಕ್ಕಿಯಲ್ಲಿ ಕುಳಿತು ಮೆರೆಯುವುದನ್ನು ನೋಡಿದ ಕೆಲವು ಅಡ್ನಕಸುಬಿಗಳು "ಊರೆಲ್ಲಾ ಉಗಾದಿ ಮಾಡಿದರೆ ಅಡ್ನಾಡಿ ಅಮಾಸೆ ಮಾಡಿತ್ತು" ಎನ್ನುವಂತೆ "ವಿಜ್ಞಾನ ವಿಚಾರದ ಪಿಟೀಲು ಕುಯ್ಯುವ ಈ ಸ್ವಾಮೀಜಿಯವರು ಇಂತಹ ರಣಬಿಸಿಲಲ್ಲಿ ಜನಗಳ ಮೇಲೆ ಪಲ್ಲಕ್ಕಿ ಹೇರುವುದು ಎಷ್ಟು ಸರಿ" ಎಂದು ಗೊಣಗಿದರಂತಲ್ಲಾ, ಥೂತ್ತೇರಿ!!

* * * * * *

ಮಾಲು ಸಮೇತ ಸಿಕ್ಕಿಬಿದ್ದ ಸಂಪಂಗಿ ಪರಿಸ್ಥಿತಿಯನ್ನು ನೋಡಿದ ಕರ್ನಾಟಕ ಮಾನವಂತ ಜನರು "ಇನ್ನು ಸಂಪಂಗಿ ಕತೆ ಮುಗಿಯಿತು. ಆತ ಸಾರ್ವಜನಿಕರಿಗೆ ಮುಖ ತೋರಿಸುವುದು ಕಷ್ಟ. ಆಕಸ್ಮಾತ್ ಆತ್ಮಹತ್ಯೆ ಮಾಡಿಕೊಂಡರೂ ಅಚ್ಚರಿಪಡಬೇಕಿಲ್ಲ" ಎಂದು ಚರ್ಚಿಸುತ್ತಿರುವಾಗಲೇ ಕೋಲಾರದಲ್ಲಿ ಅವನ ಕ್ಷೇತ್ರದ ಜನ ಹಿಮಾಲಯವೇರಿ ಬಂದ ತೇನ್‌ಸಿಂಗ್‌ನನ್ನ ಬರಮಾಡಿಕೊಂಡಂತೆ ಅದ್ದೂರಿಯಾಗಿ ಆಹ್ವಾನಿಸಿ, ಘೋಷಣೆ ಕೂಗಿದರಂತಲ್ಲಾ. 'ಸಂಪಂಗಿಗೆ ಜಯವಾಗಲಿ', 'ಐದು ಲಕ್ಷಕ್ಕೆ ಧಿಕ್ಕಾರ', 'ಸಂತೋಷ್ ಹೆಗ್ಡೆಗೆ ಧಿಕ್ಕಾರ', 'ಲೋಕಾಯುಕ್ತರಿಗೆ ಧಿಕ್ಕಾರ', 'ಲೋಕಾಯುಕ್ತರು ಬಳಸುವ ಬಣ್ಣಕ್ಕೆ ಧಿಕ್ಕಾರ' ಎಂಬ ಘೋಷಣೆ ಮುಗಿಲುಮುಟ್ಟಿ ಮಾರ್ಧನಿಗೊಂಡವಂತಲ್ಲಾ ಥೂತ್ತೇರಿ!!! ■



'ಒಮ್ಮೆ ವಾಣಿಜ್ಯ ಬೆಳೆಯಾಗಿ ಬೆಳೆದು ೋಡೋಣ, ಆಮೇಲೆ ಅದು ಅಪಾಯ ರಿ ಎಂದೆನಿಸಿದರೆ ನಿಲ್ಲಿಸೋಣ' ಎಂಬ ನಿಗಳೂ ಅಲ್ಲಲ್ಲಿ ಕೇಳಿ ಬರುತ್ತವೆ. ಆದರೆ, ದಕ್ಕಿಂತ ಅಪಾಯ ಇನ್ನೊಂದಿಲ್ಲ. ಈ ಳೆಗಳು ಒಮ್ಮೆ ಮಾಡುವ ಅಪಾಯವನ್ನು ಪಡಿಸುವುದಕ್ಕೆ ಸಾಧ್ಯವೇ ಇಲ್ಲ ಎಂಬು ನ್ನು ಪ್ರಾಯಶಃ ಎಲ್ಲಾ ಜೈವಿಕ ವಿಜ್ಞಾನಿಗಳೂ ಟ್ಟಿಕೊಂಡಿದ್ದಾರೆ.

ಭಾರತದಲ್ಲಿ ಬಿಟಿ ತಳಿಗಳನ್ನು ವಾಣಿಜ್ಯೀಕರಣಗೊಳಿಸುವುದರ ವಿರುದ್ಧ ಮೊದಲಿದಲೂ ಪ್ರತಿಭಟನೆ ವ್ಯಕ್ತವಾಗುತ್ತಲೇ ಇದೆ. ಪ್ರೊ.ಎಂ.ಡಿ.ನಂಜುಂಡಸ್ವಾಮಿಯವರು ದುಕಿದ್ದಾಗ ಬಿಟಿ ಹತ್ತಿಯ ವಿರುದ್ಧ ದೊಡ್ಡ ಮಟ್ಟದಲ್ಲಿ ಜನಾಂದೋಲನ ಾಪಿಸಿದ್ದನ್ನಿಲ್ಲಿ ಸ್ಮರಿಸಬಹುದು.



ಈಗ ಸರ್ಕಾರ ಬಿಟಿ ಬದನೆಕಾಯಿಯನ್ನು ಪರಿಚಯಿಸು ುವುದರ ವಿರುದ್ಧವೂ ಈಗ್ಗೆ ಮೂರು ತಿಂಗಳ ಹಿಂದೆ ಕೆಲವು ಾಗೃತ ಪ್ರಜ್ಞಾವಂತ ನಾಗರಿಕರು ಜನಾಂದೋಲನ ಆರಂಭಿಸಿದ್ದಾರೆ. ದರ ಭಾಗವಾಗಿ ಸುಮಾರು 70,000 ಜನ ಬಿಟಿ ಬದನೆಕಾಯಿ ರುದ್ಧ ಕೇಂದ್ರ ಆರೋಗ್ಯ ಮಂತ್ರಿ ಡಾ. ಅನ್ಬುಮಣಿ ರಾಮದಾಸ್‌ಗೆ ತ್ರ ಬರೆದಿದ್ದಾರೆ. ಇದರ ಪರಿಣಾಮವಾಗಿ ರಾಮದಾಸ್ ಕೂಡ ಟಿ ಬದನೆಕಾಯಿ ವಿರುದ್ಧ ಬಹಿರಂಗವಾಗಿ ಮಾತನಾಡತೊಡಗಿದ್ದಾರೆ. ಕ್ಕದ ಕೇರಳ ಸರ್ಕಾರ ಕೂಡ ಬಿಟಿ ಬೆಳೆಯ ವಿರುದ್ಧ ನಿಲುವು ತಾಳಿದೆ.

ಆದರೆ ಕರ್ನಾಟಕದಲ್ಲಿ ಮಾತ್ರ ಅದರ ಬಗ್ಗೆ ನಮ್ಮ ಆರೋಗ್ಯ ಸಚಿವ ಶ್ರೀರಾಮುಲು ಏನೂ ಮಾತನಾಡುತ್ತಿಲ್ಲ. ಮಚ್ಚು, ಲಾಂಗು ಹಿಡಿದು ಬೀದಿಗಳಲ್ಲಿ ರೌಡಿಸಂ ಮಾಡಿ ಗೊತ್ತಿರುವ ಶ್ರೀರಾಮುಲುಗೆ ಬಿಟಿ ತಳಿಗಳ ಅಪಾಯದ ಬಗ್ಗೆ ತಲೆಬುಡ ಗೊತ್ತಿಲ್ಲ. ಆದರೆ, ಗೊತ್ತಿದ್ದವರು ಹೇಳಿದ್ದನ್ನು ಕೇಳುವ ಸೌಜನ್ಯವಾದರೂ ಬೇಡವೆ?

ಬಿಟಿ ಬೀಜಗಳನ್ನು ರೈತರಿಗೆ ಮಾರುವ ಮೂಲಕ ದೊಡ್ಡ ಲಾಭ ಮಾಡಲು ಹೊರಟಿರುವ ಬೀಜ ಕಂಪೆನಿಗಳು ಬಿಟಿ ತಳಿಗಳ ಅನುಕೂಲತೆಗಳನ್ನು ಮಾತ್ರವೇ ಪಟ್ಟಿ ಮಾಡಿ ತೋರಿಸುತ್ತಿದ್ದಾರೆಯೇ ವಿನಃ ಅದರಿಂದುಂಟಾಗುವ ಅಪಾಯಗಳ ಬಗ್ಗೆ ಮಾತನಾಡುತ್ತಿಲ್ಲ. ತಮಗೆ ಬೆಂಬಲವಾಗಿ ನಿಲ್ಲಲು ಶ್ರೀರಾಮುಲು ನಂಥ ಮಂತ್ರಿಗಳನ್ನೂ ಜೊತೆಗಿಟ್ಟುಕೊಂಡಿರುತ್ತಾರೆ.


ನೆನಪಿರಲಿ, ಈ ವರ್ಷದಲ್ಲಿ ಅಥವ ಮುಂದಿನ ವರ್ಷದಿಂದ ಭಾರತದಲ್ಲೂ ಬಿಟಿ ಬೆಳೆಗಳನ್ನು ಸಾರ್ವಜನಿಕವಾಗಿ ಪರಿಚಯಿಸುವ ಹುನ್ನಾರ ನಡೆಯುತ್ತಿದೆ. ಹಾಗೇನಾದರೂ ಆದರೆ, ನಮ್ಮ ಪಾರಂಪರಿಕ ಬೀಜಗಳು ನಾಶವಾಗಿ ಹೋಗುತ್ತವೆ; ರೈತರಿಂದ ಬೀಜಸ್ವಾತಂತ್ರ್ಯವನ್ನು ಈ ಕಂಪೆನಿಗಳು ಕಿತ್ತುಕೊಳ್ಳುತ್ತವೆ. ಜನ ಈಗಲೇ ಎಚ್ಚೆತ್ತುಕೊಳ್ಳಬೇಕಿದೆ. ■


ಅವಿವೇಕಿ ಆಚಾರ್ಯ!

■ ಪಾರ್ವತೀಶ್

ಕರ್ನಾಟಕದ ಬಿಜೆಪಿ ಸರ್ಕಾರದ ಮರ್ಯಾದೆ ಕಳೆಯಲು ಈಗ ಹೊರಗಿನವರು ಬೇಕಾಗೇ ಇಲ್ಲ. ಯಾವ ಶತ್ರುವೂ ಮಾಡಲಾಗದಷ್ಟು ಡ್ಯಾಮೇಜ್ ಅನ್ನು ಸ್ವತಃ ಬಿಜೆಪಿ ಪರಿವಾರದವರೇ ಮಾಡುತ್ತಿದ್ದಾರೆ. ಅದರಲ್ಲಿ ಚಾಂಪಿಯನ್ ನಾಯಕನೆಂದರೆ ಗೃಹಮಂತ್ರಿ ವಿ.ಎಸ್. ಆಚಾರ್ಯ!

ನೋಡಲು ಹಸು ಥರ ಇದ್ದರೂ ನರಭಕ್ಷಕ ಗುಣ ಇರುವಾತ. 2008 ರಲ್ಲಿ ಬಿಜೆಪಿಯ ಚುನಾವಣಾ ಪ್ರಣಾಳಿಕೆಯ ಮ್ಯಾನೇಜರ್ ಆಗಿದ್ದಾತ. ಈಗ ಗೆದ್ದು ಅಧಿಕಾರಕ್ಕೆ ಬಂದ ಮೇಲೆ ಬಿಜೆಪಿಗಳ ಪಾಲಿಗೇ ಡ್ಯಾಮೇಜರ್ ಆಗಿ ಬದಲಾಗಿದ್ದಾರೆ. ರಾಜ್ಯಪಾಲ ಠಾಕೂರ್ ಸ್ವತಃ ಕರೆಸಿ ಛೀಮಾರಿ ಹಾಕಿ ಕಳಿಸಿದ್ದಾರೆ. ಸಿಎಂ ಯಡ್ಡಿಯೇ ಈಗ ಆಚಾರ್ಯಗೆ ಬೆಂಬಲ ನೀಡುತ್ತಿಲ್ಲ.





ಕರ್ನಾಟಕದ ಗೃಹಮಂತ್ರಿಯಾಗಿ ಗಾಂಭೀರ್ಯ ಹಾಗೂ ವಿವೇಚನೆಯಿಂದ ಅನೇಕರು ಕೆಲಸ ಮಾಡಿ ಹೋಗಿದ್ದಾರೆ. ಎಂ.ಪಿ. ಪ್ರಕಾಶ್, ಖರ್ಗೆ ಮುಂತಾದವರು ಎಂದೂ ಜೋಕರ್‌ಗಳಂತೆ ವರ್ತಿಸಿರಲಿಲ್ಲ. ಅವರಲ್ಲಿ ಅಸಂಬದ್ಧ ಮಾತು, ಚಿಲ್ಲರೆ ಚಿಂತನೆ ಕಾಣಿಸಿರಲಿಲ್ಲ. ಆದರೆ ಡಾ. ವಿ.ಎಸ್. ಆಚಾರ್ಯ ಮಾತ್ರ ಹಾಲಿ ಬಿಜೆಪಿ ಸರ್ಕಾರದ ನಂಬರ್ ಒನ್ ಅವಿವೇಕಿ ಸಚಿವ ಎಂಬುದಕ್ಕೆ ಪ್ರತಿನಿತ್ಯ ಸಾಕ್ಷ್ಯ ಸಿಗುತ್ತಿದೆ.

ಮೀಡಿಯಾಗಳನ್ನು ಕಂಟ್ರೋಲಿನಲ್ಲಿಡಲು ಓಂಬುಡ್ಸ್‌ಮೆನ್ (ಸೂಪರ್‌ವೈಸರ್ ತರ ಅಂದುಕೊಳ್ಳಿ) ನೇಮಿಸುವುದಾಗಿ ಹೇಳಿಕೆ ಕೊಟ್ಟು ಮುಖಭಂಗಕ್ಕೆ ಈಡಾಗಿದ್ದಾರೆ ಆಚಾರ್ಯ. ಇದು RSS ನಾಯಕರ ಅಪೇಕ್ಷೆಯಾಗಿತ್ತೆಂದು ಕಾಣುತ್ತದೆ. ಆದರೆ ಮೀಡಿಯಾಗಳು ಯಾವಾಗ ತಿರುಗಿಬಿದ್ದವೋ ಗಾಬರಿಯಾದ ಯಡಿಯೂರಪ್ಪ "ಓಂಬುಡ್ಸ್‌ಮೆನ್ ಪ್ರಸ್ತಾಪ ಇಲ್ಲ, ಇಲ್ಲವೇ ಇಲ್ಲ" ಎಂದು ಸ್ಪಷ್ಟನೆ ಕೊಟ್ಟಿದ್ದಾರೆ.

ಏನಿದರ ಅರ್ಥ?

ಒಂದೇ ಪಕ್ಷದವರಾಗಿ, ಒಂದೇ ಸರ್ಕಾರದಲ್ಲಿದ್ದರೂ ಯಡ್ಡಿ-ಆಚಾರ್ಯರ ನಡುವೆ ಕಿಂಚಿತ್ತೂ ಹೊಂದಾಣಿಕೆ ಇಲ್ಲ ಅಂತಲಾ?

ಗೃಹಮಂತ್ರಿ ಅಂದರೆ ಯಾವುದೇ ಸರ್ಕಾರದಲ್ಲಿ ಒಂದು ಜವಾಬ್ದಾರಿಯುತ, ಮಹತ್ವದ ಹುದ್ದೆ. ಅಂಥ ಹುದ್ದೆ ನಿಭಾಯಿಸುವ ಯೋಗ್ಯತೆ ಆಚಾರ್ಯರಿಗಿಲ್ಲಾ ಎಂಬುದು ಈಗಾಗಲೇ ಸಾಬೀತಾಗಿಹೋಗಿದೆ.

ದಿನಕ್ಕೊಂದು ಅಸಂಬದ್ಧ ಹೇಳಿಕೆ, ತಲೆ ನಿಲ್ಲದ ಆರ್‌ಎಸ್‌ಎಸ್ ಪುಂಡನ ತರದ ವರ್ತನೆ, ಇಲಾಖೆಯ ಮೇಲೆ ಹತೋಟಿಯೇ ಇರದ ಅದಕ್ಷತೆ, ತನ್ನ blogspot ನಲ್ಲಿ ಚಿಲ್ಲರೆ ಹರಟೆ....ಇವಿಷ್ಟೇ ಆಚಾರ್ಯರ ವ್ಯಕ್ತಿತ್ವ.

ಡಾ. ವಿ.ಎಸ್. ಆಚಾರ್ಯ ಅಂದರೆ ಒಂದು ದೀರ್ಘ ಆಕಳಿಕೆ ನೆನಪಾಗುತ್ತದಷ್ಟೇ.

ಮೀಡಿಯಾಗೇಕೆ ಕೈಕೊಳ

ಈ ಓಂಬುಡ್ಸ್‌ಮೆನ್ ನೇಮಕದ ವಿಚಾರ ಶುರುವಾಗಿದ್ದೇ ಮೊನ್ನಿನ ಮಂಗಳೂರು ಪಬ್ ದಾಳಿ ಹಾಗೂ ಕೇರಳ ಶಾಸಕನ ಪುತ್ರಿಯ ಕಿಡ್‌ನ್ಯಾಪ್ ಪ್ರಕರಣಗಳಾದ ನಂತರ.


ಆಚಾರ್ಯರ ಸಹಚರರೇ ಆಗಿರುವ ಶ್ರೀರಾಮ ಸೇನೆಯ ದುಷ್ಟರು ನಡೆಸಿದ ಈ ದೌರ್ಜನ್ಯ ದೇಶಾದ್ಯಂತ ಪ್ರಚಾರ ಪಡೆಯಿತು. ಜನಸಾಮಾನ್ಯರಿಂದ, ಮೀಡಿಯಾಗಳಿಂದ ವ್ಯಾಪಕ ಖಂಡನೆಗೂ ಒಳಗಾಯಿತು. ಆದರೆ ನಮ್ಮ ಗೃಹಮಂತ್ರಿಗೆ ಇದರಲ್ಲಿ ಪ್ರಮೋದ್ ಮುತಾಲಿಕನ ತಪ್ಪು ಕಾಣಲಿಲ್ಲ. ಅದರ ಬದಲಾಗಿ ಈ ಸುದ್ದಿ ಪ್ರಸಾರ ಮಾಡಿದ ಮೀಡಿಯಾಗಳದ್ದೇ ತಪ್ಪೆಂದು ಅನ್ನಿಸಿಬಿಟ್ಟಿದೆ.

ಈ ಅವಿವೇಕಿಗೆ ಭಗವಂತ ಅದೇನು ಬುದ್ಧಿ ಕೊಟ್ಟಿದ್ದಾನೋ ಏನೋ ಮುತಾಲಿಕನಿಗೆ ಬರೆ ಹಾಕುವುದು ಬಿಟ್ಟು "ಅಪ್ಪ-ಅಮ್ಮ ತಮ್ಮ ಮಕ್ಕಳನ್ನು ಸರಿಯಾಗಿ ನೋಡಿಕೊಳ್ಳಬೇಕು" ಎಂದಷ್ಟೇ ಕೊಡಿಸಿಬಿಟ್ಟರು. ಆದರೆ ರಾಜ್ಯಪಾಲ ರಾಮೇಶ್ವರ ಠಾಕೂರ್ ಯಡ್ಡಿಯನ್ನು ಕರೆಸಿಕೊಂಡು ಎಚ್ಚರಿಕೆ ಕೊಟ್ಟ ನಂತರ ಈಗ ಜ್ಞಾನೋದಯವಾದಂತೆ ಓಂಬುಡ್ಸ್‌ಮೆನ್ ವಿಚಾರ ಬದಿಗೆ ಸರಿಸಿದ್ದಾರೆ.


ಇದರರ್ಥ ಈ ಆಚಾರ್ಯ ಏನು ಸಾಚಾ ಎಂದಲ್ಲ.

ಈತ ಗೃಹಸಚಿವನಾದ ನಂತರ ಅಂದರೆ 2008 ಮೇ 30 ರಿಂದ ಇತ್ತೀಚಿನವರೆಗೂ ನಡೆದಿರುವ ಘಟನೆಗಳನ್ನು ಒಮ್ಮೆ ನೆನಪಿಸಿಕೊಂಡರೂ ಸಾಕು ಈತನ ಅದಕ್ಷತೆ, ಅವಿವೇಕತನ ಹಾಗೂ ಪುಂಡಾಟಿಕೆ ಗೊತ್ತಾಗುತ್ತದೆ.

ಆಚಾರ್ಯ ಗೃಹಸಚಿವರಾದ ಕೇವಲ ಹತ್ತೇ ದಿನದಲ್ಲಿ ಅಂದರೆ ಜೂನ್ 10 ರಂದು ಹಾವೇರಿ ಗೋಲಿಬಾರ್ ನಡೆಯಿತು. ಗೊಬ್ಬರ ಕೇಳಿಬಂದ ರೈತರಿಗೆ ಯಡ್ಡಿ ಸರ್ಕಾರ ಗುಂಡಿನಿಂದ ಉತ್ತರ ಕೊಡಿಸಿತು. ಅವತ್ತೂ ಈ ಆಚಾರ್ಯ ಹೇಳಿದ್ದು 'ಗೋಲಿಬಾರ್‌ನಲ್ಲಿ ಸತ್ತವ ರೈತನಲ್ಲ' ಎಂದು. ಗೃಹಸಚಿವನಾಗಿದ್ದಾಗಲೂ ಹಾವೇರಿಯಲ್ಲಿ ಗೋಲಿಬಾರ್ ಮಾಡಬೇಕಾದ ಅನಿವಾರ್ಯವಿತ್ತೇ ಎಂಬುದು ಸ್ವತಃ ಆಚಾರ್ಯಗೆ ಅವತ್ತು ತಿಳಿದಿರಲಿಲ್ಲ.



ಇದರ ಬೆನ್ನ ಹಿಂದೆಯೇ ಜೂನ್ 15 ರಂದು ಪದ್ಮಪ್ರಿಯ ನಾಪತ್ತೆ ಹಾಗೂ ಆತ್ಮಹತ್ಯೆ ದುರ್ಘಟನೆ ಸಂಭವಿಸಿತ್ತು. ಆಚಾರ್ಯರ ಹೋಂಟೌನಿನಲ್ಲಿ ನಡೆದ ಘಟನೆ ಅದು. ಬಿಜೆಪಿ ಶಾಸಕ ರಘುಪತಿ ಭಟ್ಟನ ಕಚ್ಚೇಹರುಕತನದಿಂದ ರೋಸಿಹೋಗಿದ್ದ ಪದ್ಮಪ್ರಿಯಾ ಮನೆ ತ್ಯಜಿಸಿ ದೆಹಲಿಗೆ ಹೋದಳು. ಆಕೆಯ ಇರುವಿಕೆ ಬಗ್ಗೆ ಖಚಿತ ಮಾಹಿತಿ ಇದ್ದಾಗಲೂ ಇಡೀ ರಾಜ್ಯದ ಜನ ಕಾತರದಿಂದ ಕಾಯುತ್ತಿದ್ದಾಗಲೂ ಆಚಾರ್ಯರಲ್ಲಿ ಆ ಹೊಣೆಗಾರಿಕೆ ಕಾಣಲೇ ಇಲ್ಲ. 'ಪದ್ಮಪ್ರಿಯ ಎಲ್ಲಿದ್ದಾಳೆಂದು ಗೊತ್ತಾಗಿದೆ, ಇನ್ನೇನು ಒಳ್ಳೆ ಸುದ್ದಿ ಬರಲಿದೆ' ಅಂದಿದ್ದರು. ಆದರೆ ಕೊನೆಗೂ ಬಂದಿದ್ದು ಪದ್ಮಪ್ರಿಯಾಗಳ ಸಾವಿನ ಸುದ್ದಿ. ಇದರಲ್ಲಿ ರಘುಪತಿ ಭಟ್ಟ ಹಾಗೂ ಕಾರ್ಕಳದ ಬಿಜೆಪಿ ಮಾಜಿ ಶಾಸಕ ಸುನೀಲ್ ಕುಮಾರನ ನೇರ ಕೈವಾಡವಿದ್ದರೂ ಆಚಾರ್ಯ ಅವರನ್ನು ರಕ್ಷಿಸಿಬಿಟ್ಟರು.



'ಪ್ರಜಾವಾಣಿ'ಯಲ್ಲಿ ಪ್ರಕಟಗೊಂಡ ಆಚಾರ್ಯರ ವ್ಯಂಗ್ಯಚಿತ್ರ

ಕೊಲೆಗೆ ಸಮನಾದ ಹೀನಕೃತ್ಯ ಇದು. ಆಗಲೂ ಆಚಾರ್ಯರ ಮುಖದಲ್ಲಿ ಹಸುವಿನಂಥ ಭಾವ ಮಾತ್ರವಿತ್ತು.

ಇದೆಲ್ಲಾ ಮುಗಿದ ನಂತರ ಆದದ್ದಾದರೂ ಏನು.



2008 ಆಗಸ್ಟ್-ಸೆಪ್ಟೆಂಬರ್ ತಿಂಗಳಿಡೀ ಕ್ರಿಶ್ಚಿಯನ್ನರ ಮೇಲೆ ಸಂಘ ಪರಿವಾರದಿಂದ ಸರಣಿ ದಾಳಿಗಳಾದವು. ಮಂಗಳೂರು, ಉಡುಪಿ, ದಾವಣಗೆರೆ, ಚಿಕ್ಕಮಗಳೂರು, ಚಿಕ್ಕಬಳ್ಳಾಪುರ ಮುಂತಾದೆಡೆ ಇಂಥ 25 ದೌರ್ಜನ್ಯದ ಪ್ರಕರಣಗಳು ನಡೆದರೆ ಈ ಗೋಮುಖ ವ್ಯಾಘ್ರ 'ಮತಾಂತರವೇ ಇದಕ್ಕೆ ಕಾರಣ' ಅಂದುಬಿಟ್ಟಿತು. ಒಬ್ಬ ಗೃಹಸಚಿವನಾಗಿ ಕಾನೂನು-ಸುವ್ಯವಸ್ಥೆ ಕಾಪಾಡಬೇಕಾದ ಜವಾಬ್ದಾರಿ ಇದೆ ಎಂಬುದನ್ನು ಆಚಾರ್ಯ ನಿರ್ಲಕ್ಷಿಸಿದ್ದರು. ಆರ್‌ಎಸ್‌ಎಸ್‌ನ ಮನೋರೋಗಪೀಡಿತನಂತೆ ನಿಷ್ಕ್ರಿಯನಾಗಿರುತ್ತಾ ಆ ಮೂಲಕ ಕರ್ನಾಟಕ ಪೊಲೀಸರ ನೈತಿಕತೆ ಹಾಗೂ ಮನೋಸ್ಥೈರ್ಯವನ್ನೇ ಕುಗ್ಗಿಸಿಬಿಟ್ಟರು.

ಇನ್ನು ಹುಬ್ಬಳ್ಳಿ ಕೋರ್ಟ್ ಬಾಂಬ್ ಪ್ರಕರಣಕ್ಕೆ ಬನ್ನಿ. ಅದು ಬಿಜೆಪಿಗಳ ಅಂಗಸಂಸ್ಥೆಯಾದ ಶ್ರೀರಾಮ ಸೇನೆಯ ಕೃತ್ಯ ಎಂಬುದು ಈಗ ಸಾಬೀತಾಗಿದೆಯಷ್ಟೇ. ಆದರೆ ಅದರ ತನಿಖೆ ಎಲ್ಲಿಯವರೆಗೆ ಬಂದಿದೆ, ಮಾಲೇಗಾಂವ್ ಸ್ಫೋಟ, ಬೆಂಗಳೂರು ಸ್ಫೋಟಗಳಿಗೂ ಇವರಿಗೂ ಲಿಂಕ್ ಇದೆಯಾ ಎಂಬ ಬಗ್ಗೆ ತನಿಖೆಗಳಾಗದಂತೆ ಆಚಾರ್ಯ ನೋಡಿ ಕೊಂಡಿದ್ದಾರೆ.

ಅಂದರೆ ತನ್ನ ಸಂಘ ಪರಿವಾರದ ಪುಂಡರ ಮಾನ ಉಳಿಸಲು ಈ ಆಚಾರ್ಯ ದೇಶದ್ರೋಹವೆಸಗಲೂ ಸೈ ಎಂದಾಯಿತು. ರಾಜ್ಯದಲ್ಲಿ ಮೀಡಿಯಾಗಳಿಗೆ ಯಥೇಚ್ಛವಾಗಿ ಜಾಹೀರಾತಿನ ಆಮಿಷ ಒಡ್ಡಿ ಬಿಜೆಪಿಗಳ ಪರ ಮೃದು ಧೋರಣೆ ತಳೆಯುವಂತೆ ನೋಡಿಕೊಳ್ಳಲಾಗುತ್ತಿದೆ. ಇವರಿಗೆ ಅಷ್ಟು ಸಾಕಾಗಲಿಲ್ಲವೆಂದು ಕಾಣುತ್ತಿದೆ. ತಮ್ಮ ಹತೋಟಿ ಮೀರಿ ಮಂಗಳೂರಿನ ದೌರ್ಜನ್ಯಗಳ ಬಗ್ಗೆ ಯಾವಾಗ ಮೀಡಿಯಾ ಮಂದಿ ನಿಷ್ಪಕ್ಷಪಾತದಿಂದ ವರದಿಗಳನ್ನು ಮಾಡಿದರೋ ಈ ಆಚಾರ್ಯನ ಹಸುವಿನ ಮುಖವಾಡ ಕಿತ್ತುಹೋಗಿದೆ.

ಓಂಬುಡ್ಸ್‌ಮೆನ್ ಭೂತ ತೋರಿಸುವ ಮೂಲಕ ಈತ ತನ್ನ ಒರಿಜಿನಲ್ ಮುಖ, ಕೋರೆಹಲ್ಲು ಕ್ರೂರ ನಖಗಳನ್ನು ಪ್ರದರ್ಶಿಸುತ್ತಿದ್ದಾರೆ.

ಹೇಳಿಕೇಳಿ ಈತ ಹಾರ್ಡ್‌ಕೋರ್ ಆರೆಸ್ಸಿಗ. 20 ವರ್ಷ ಕಾಲ ಬಿಜೆಪಿಯ ರಾಷ್ಟ್ರೀಯ ಕಾರ್ಯಕಾರಿಣಿ ಮಂಡಳಿ ಸದಸ್ಯನಾಗಿದ್ದಾತ. ಯಡ್ಡಿ ಸರ್ಕಾರ ಬಂದಾಗ ಸಂಘ ಪರಿವಾರಕ್ಕೆ ತಮ್ಮವನೇ ಆದ, ಬ್ರೈನ್‌ವಾಶ್ ಆಗಿರುವ ವ್ಯಕ್ತಿ ಗೃಹಸಚಿವನಾಗಬೇಕಿತ್ತು. ಮತ್ತೊಂದೆಡೆ ಯಡ್ಡಿಗೆ 'ಹೌದಪ್ಪ'ನೊಬ್ಬ ಬೇಕಿತ್ತು. ಬಹಳ ಮುಖ್ಯವಾಗಿ ಅನಂತ್‌ಕುಮಾರ್ ವಿರೋಧಿ ಬಣದವ ಗೃಹಸಚಿವನಾಗಲಿ ಎಂದಿತ್ತು.

ಹಿಟ್ಟು ಹಳಸಿತ್ತು ನಾಯಿ ಹಸಿದಿತ್ತು ಎನ್ನುವಂತೆ ಆಚಾರ್ಯಗೆ ಗೃಹ ಖಾತೆ ಸಿಕ್ಕಿತು. ಈತನ ಆಡಳಿತದ ವೈಖರಿ ನೋಡುತ್ತಿದ್ದರೆ ಈ ಬಿಜೆಪಿಗಳ ಮಾನ-ಮರ್ಯಾದೆ ಹರಾಜಾಗಲು ಬೇರೆ ಶತ್ರುಗಳೇ ಬೇಡ ಎಂದಿದ್ದು ಈ ಕಾರಣಗಳಿಗೇನೆ. ■

ಮೀಡಿಯಾ ಪ್ರತಿರೋಧ

ಬಹುಶಃ ಬಿಜೆಪಿಗಳು ಈ ಪ್ರಮಾಣದ ಪ್ರತಿಭಟನೆ ನಿರೀಕ್ಷಿಸಿರಲಿಲ್ಲವೆಂದು ಕಾಣುತ್ತದೆ.

ಮೀಡಿಯಾಗಳಿಗೆ ಕಡಿವಾಣ ಹಾಕಲು ಓಂಬುಡ್ಸ್‌ಮೆನ್ ನೇಮಿಸುವ ವಿಚಾರ ಆಚಾರ್ಯ ಬಾಯಿಂದ ಆಕಸ್ಮಿಕವಾಗಿ ಬಂದದ್ದಲ್ಲ. ಆರ್‌ಎಸ್‌ಎಸ್‌ನವರ ಫ್ಯಾಸಿಸ್ಟ್ ಮನೋಭಾವದ ಸಹಜ ಗುಣ ಅದು. ತಮ್ಮ ಮೂಗಿನ ನೇರಕ್ಕೆ, ಹಿತಾಸಕ್ತಿಗಳಿಗೆ ತಕ್ಕ ಹಾಗಿದ್ದರೆ ಮೀಡಿಯಾ ಸ್ವಾತಂತ್ರ್ಯವಿರಬೇಕು. ಅದರ ಬದಲಾಗಿ ಟೀಕೆ-ವಿಮರ್ಶೆಗಳು ಬಂದವೊ... ಈ ಜನ ಮೀಡಿಯಾಗೆ ಲಗಾಮು ಹಾಕಲು ಹೊರಟುಬಿಡುತ್ತಾರೆ. ಡೆಕ್ಕನ್ ಹೆರಾಲ್ಡ್, ಪ್ರಜಾವಾಣಿ, ವಿಜಯ ಕರ್ನಾಟಕ, ವಾರ್ತಾ ಭಾರತಿ, ತೆಹಲ್ಕಾ ಹಾಗೂ ನ್ಯಾಷನಲ್ ಟಿವಿ ಚಾನಲ್‌ಗಳು ಒಟ್ಟಾಗಿ ಆಚಾರ್ಯಗೆ ಛೀಮಾರಿ ಹಾಕಲು ಶುರು ಮಾಡಿದ ಮೇಲೆ ಈ ಚೆಡ್ಡಿಗಳಿಗೆ ತಮ್ಮ ತಪ್ಪಿನ ಅರಿವಾಗಿದೆ.

ಇನ್ನೇನು ಸಂಸತ್ ಚುನಾವಣೆಗಳು ಬೇರೆ ಹತ್ತಿರದಲ್ಲಿರುವಾಗ ವಿನಾಕಾರಣ ಮೀಡಿಯಾದವರನ್ನು ಎದುರು ಹಾಕಿಕೊಳ್ಳುವುದು ಬೇಡ ಅಂದುಕೊಂಡು ಈಗ ಓಂಬುಡ್ಸ್‌ಮೆನ್ ವಿಚಾರ ಕೈಬಿಟ್ಟಿದ್ದಾರೆ ಅಷ್ಟೆ.

ಆಟಕ್ಕುಂಟು ಲೆಕ್ಕಕ್ಕಿಲ್ಲ


ಗೃಹಮಂತ್ರಿ ಅನಿಸಿಕೊಂಡವರಿಗೆ ಇಲಾಖೆಯ ಆಗುಹೋಗುಗಳ ಬಗ್ಗೆ, ಇಡೀ ರಾಜ್ಯದ ಕಾನೂನು-ಸುವ್ಯವಸ್ಥೆಯ ಬಗ್ಗೆ ಸದಾ ಒಂದು ನಿಗಾ ಇರಬೇಕಾಗುತ್ತದೆ.

ಆಚಾರ್ಯಗೆ ಇದರ ಪ್ರಾಥಮಿಕ ಪರಿಜ್ಞಾನವೂ ಇದ್ದಂತಿಲ್ಲ. ಇಲಾಖೆಯನ್ನು ನಿಭಾಯಿಸುವುದಿರಲಿ, ಒಂದು ಸಾಧಾರಣ ಪೊಲೀಸರ ವರ್ಗಾವರ್ಗಿಯೂ ಆಚಾರ್ಯರ ಕೈಲಿಲ್ಲ.

ಅದನ್ನೆಲ್ಲಾ ನಿಭಾಯಿಸುತ್ತಿರುವ ವ್ಯಕ್ತಿ ನಂದಕುಮಾರ್ ಎಂಬಾತ. ಯಡಿಯೂರಪ್ಪನ ಹತ್ತಿರ ಜಾಯಿಂಟ್ ಸೆಕ್ರೆಟರಿಯಾಗಿರುವ ಐಎಎಸ್ ಅಧಿಕಾರಿ ನಂದಕುಮಾರ್ ಪರವಾಗಿಲ್ಲ ಎಂಬ ಅಧಿಕಾರಿ. ಆದರೆ ಇವರ ಮೂಲಕ ಯಡ್ಡಿ ಮಗ ವಿಜಯೇಂದ್ರ ಇಡೀ ಇಲಾಖೆಯ ಮೇಲೆ ಕಂಟ್ರೋಲ್ ಇಟ್ಟುಕೊಂಡಿದ್ದಾರೆ. ಯಡ್ಡಿಯ ಅರೇಂಜ್‌ಮೆಂಟ್ ಇದು. ಈ ಗುಂಪು ಆರ್‌ಎಸ್‌ಎಸ್ ಹೈದ ಆಚಾರ್ಯರನ್ನು ಆಟಕ್ಕುಂಟು ಲೆಕ್ಕಕ್ಕಿಲ್ಲದಂತೆ ಮಾಡಿ ಮೂಲೆಗೆ ಕೂರಿಸಿದೆ. ■

ಮಂಗಳೂರು ಅಶ್ವಿನಿಯನ್ನು ಕೊಂದಿದ್ದ್ಯಾರು?

■ ಕುಮಾರ್ ಬುರಡಿಕಟ್ಟಿ



ಅಶ್ವಿನಿ

ಮತ್ತೊಂದು ಕುಡಿ ಅರಳುವ ಮೊದಲೇ ಕಮರಿ ಗಿದೆ. ಕಣ್ಣ ತುಂಬ ಕನಸುಗಳನ್ನು ಕಟ್ಟಿಕೊಂಡಿದ್ದ ನಾರರ ಹರೆಯದ ಅಶ್ವಿನಿ ಕುಲಾಲ್ ಇದೇ ಫೆಬ್ರವರಿ ನ್ನೊಂದರಂದು ನೇಣಿಗೆ ಕೊರಳೊಡ್ಡಿದ್ದಾಳೆ; ಕಟ್ಟಿಕೊಂಡ ಗಳೊಂದಿಗೆ ಪರ್ಮನೆಂಟಾಗಿ ಇಹಲೋಕ ತ್ಯಜಿಸಿಬಿಟ್ಟ . ಅವಳ ಸ್ನೇಹಿತ ಸಲೀಮ್ ಎಲ್ಲ ರೀತಿಯಿಂದಲೂ ಪರಾಧಿಯಾಗಿದ್ದರೂ ಆಕೆಯನ್ನು ರೇಪ್ ಮಾಡಿದ, ಹತ್ಯೆಗೆ ಪ್ರಚೋದಿಸಿದ ಆರೋಪ ಹೊತ್ತು ಈಗ ಯ ಹಿಂದೆ ಬಂಧಿಯಾಗಿದ್ದಾನೆ.

ಈಗ ಮಗಳನ್ನು ಕಳೆದುಕೊಂಡ ತಂದೆತಾಯಿ ಗಿಲು ಮುಟ್ಟುವಂತೆ ರೋದಿಸುತ್ತಿದ್ದಾರೆ. ಆಕೆ ಓದುತ್ತಿದ್ದ ಳೋಳಿ ಸಮೀಪದ ಐಕಳ ಪಾಂಪೆ ಕಾಲೇಜಿನಲ್ಲಿ ಯ ಸ್ನೇಹಿತರು ಅವಳ ಸಾವಿಗೆ ಕಾರಣಾದವರಿಗೆ ಶಾಪ ಹಾಕುತ್ತಿದ್ದಾರೆ. ಯಾವ ಅಪರಾಧವನ್ನೂ ದೆ, ಹಿಂದೂ ಹುಡುಗಿಯೊಬ್ಬಳ ಸ್ನೇಹ ಮಾಡಿದ್ದಕ್ಕಾಗಿ ಂತಳನ್ನೂ ಕಳೆದುಕೊಂಡು, ಅವಳ ಮೇಲೆ ಅತ್ಯಾಚಾರ ಗಿ ಆತ್ಮಹತ್ಯೆಗೆ ದೂಡಿದ ಗುರುತರ ಆರೋಪಕ್ಕೂ ಯಾಗಿ ಸಲೀಮ್ ಕಂಬಿಯ ಹಿಂದೆ ಅಳುತ್ತಿದ್ದಾನೆ. ಮಗ ನಿರಪರಾಧಿ ಎಂದು ಚೆನ್ನಾಗಿ ತಿಳಿದಿರುವ ೀಮ್‌ನ ಅಪ್ಪ-ಅಮ್ಮ ಅನ್ಯಾಯವಾಗಿ ಮಗ ಜೈಲು ಾಗಿರುವುದನ್ನು ನೋಡಿ ಕೊರಗುತ್ತಿದ್ದಾರೆ. ಅಶ್ವಿನಿಯ ನ ಹಿಂದಿನ ಸತ್ಯ ಗೊತ್ತಿರುವ ಏಕೈಕ ಹುಡುಗಿ ತ್ತು ಅಶ್ವಿನಿಯ ಸ್ನೇಹಿತೆ ಮಹಾದೇವಿಗೆ ಅಜ್ಞಾತವಾಸದ ಕೊಟ್ಟು ಸತ್ಯ ಹೊರಬರದಂತೆ ತಡೆದಿದ್ದಾರೆ. ಆದರೆ, ರಂಗಿಗಳು ಮಾತ್ರ ಒಬ್ಬ ದೂ ಹುಡುಗಿ ಬಲಿಯಾದರೂ ವಾಗಿಲ್ಲ, ಒಬ್ಬ ನಿರಪರಾಧಿ ುಸ್ಲಿಮ್ ಯುವಕನೊಬ್ಬನನ್ನು ಳಿಗೆ ತಳ್ಳಿದ ಆನಂದದಲ್ಲಿ ತೇಲು ್ದಾರೆ. ಇದಿಷ್ಟು ಮೊನ್ನೆ ಆತ್ಮಹತ್ಯೆಗೆ ಾದ ಅಶ್ವಿನಿ ಕುಲಾಲ್ ಪ್ರಕ ದ ಸಾರಾಂಶ.



ರಫೀಕ್

ಆ ಹೊತ್ತು ನಡೆದಿದ್ದೇನು?

ಅಶ್ವಿನಿ ಕುಲಾಲ್ ಎಳಿಂಜೆ ಗ್ರಾಮದ ಜಯಮೂಲ್ಯ ಬುವವರ ಮಗಳು. ವಯಸ್ಸು ಈಗೀಗ ಹದಿನಾರು ಟಿರಬಹುದು. ತನ್ನ ಸ್ನೇಹಿತೆ ಮಹಾದೇವಿಯೊಂದಿಗೆ ಭಿಮಾನ್' ಎಂಬ ಬಸ್ಸನ್ನೇರಿ ಕಿನ್ನಿಗೋಳಿ ಸಮೀಪದ ಳ ಪಾಂಪೆ ಕಾಲೇಜಿಗೆ ಹೋಗುವುದು, ಕಾಲೇಜು ಗಿಸಿಕೊಂಡು ಮತ್ತೆ ಅದೇ ಬಸ್ಸಿನಲ್ಲಿ ಮನೆಗೆ ರಳುವುದು ಆಕೆಯ ದಿನಚರಿ. ಸಲೀಮ್ ಎಂಬ ುಸ್ಲಿಮ್ ಯುವಕ 'ಅಭಿಮಾನ್' ಬಸ್ಸಿನ ಕಂಡಕ್ಟರ್. ನಾಲು ಬರುವ ಈ ಹುಡುಗಿಯರಿಗೂ ಆತನಿಗೂ ಹಜವಾಗಿಯೇ ಪರಿಚಯವಾಗಿದೆ. ಪರಿಚಯ ಸ್ನೇಹಕ್ಕೆ ುಗಿದೆ. ಸ್ನೇಹ ಅಶ್ವಿನಿಯೊಂದಿಗಿನ ಪ್ರೇಮಕ್ಕೂ ುಗಿರಬಹುದು. ಇದು ಮುಕ್ತ ಜಾತ್ಯತೀತ ಮನಸ್ಸುಗಳಿಗೆ, ೇಮ-ಪ್ರೀತಿಯ ಅಂತರಾಳವನ್ನು ಅರಿತವರಿಗೆ ಪ್ರೇಮ ಿವಿಗಳಿಗೆ ತೀರ ಸಹಜವೆನಿಸುತ್ತದೆ. ಆದರೆ, ಪರಧರ್ಮ ೇಷ ಎಂಬ ವಿಷ ಉಂಡ ಭಜರಂಗಿಗಳಿಗೆ ಸಲೀಮ್‌ನಂಥ ುಸ್ಲಿಮ್ ಹುಡುಗ ಅಶ್ವಿನಿಯಂಥ ಹಿಂದೂ ಹುಡುಗಿ ನ್ನು ಮಾತನಾಡಿಸುವುದನ್ನೇ ಅರಗಿಸಿಕೊಳ್ಳಲಾಗುವುದಿಲ್ಲ, ನ್ನು ಅವರಿಬ್ಬರ ನಡುವೆ ಪ್ರೇಮವಿದ್ದರೆ ಅದನ್ನು ಹೇಗೆ ಂಸಿಯಾರು?

ಅಶ್ವಿನಿ ಮತ್ತು ಸಲೀಮ್ ನಡುವಿನ ಸಲುಗೆಯನ್ನು ಮನಿಸುತ್ತಿದ್ದ ಭಜರಂಗಿಗಳು, ಶ್ರೀರಾಮಸೇನೆಯ ುಂಡರು ಅದಕ್ಕೊಂದು ದುರಂತ ಅಂತ್ಯ ಹಾಡಲು ವಣಿಸಿಯೇ ಇದ್ದರು. ಅವರಿಬ್ಬರ ಚಲನವಲನಗಳ ಗ್ಗೆ ಒಂದು ನಿಗಾ ಇಟ್ಟಿದ್ದರು. ಅದನ್ನೀಗ ಯಶಸ್ವಿಯಾಗಿ ಾರೈಸಿದ್ದಾರೆ.

ಫೆಬ್ರವರಿ ಹತ್ತನೇ ತಾರೀಖು. ಎಂದಿನಂತೆ ಅಶ್ವಿನಿ ಮತ್ತು ಮಹಾದೇವಿ ತಮ್ಮ ಎಳಿಂಜೆ ಗ್ರಾಮದಲ್ಲಿ 'ಅಭಿಮಾನ್' ಬಸ್ಸನ್ನೇರಿದರು. ಎಂದಿನಂತೆ ಕಂಡಕ್ಟರ್ ಸಲೀಮ್ ಕೂಡ ಬಸ್ಸಿನಲ್ಲೇ ಇದ್ದ. ಬಸ್ಸು ಮಧ್ಯಾಹ್ನ ಹನ್ನೆರಡಕ್ಕೆ ಮೂಡುಬಿದ್ರೆಗೆ ಬಂದಿದೆ. ಅಲ್ಲಿ ಸಲೀಮ್ ಬೇರೆ ಯಾವುದೋ ವೈಯಕ್ತಿಕ ಕಾರಣಕ್ಕೆ ತನ್ನ ಸ್ನೇಹಿತ ರಫೀಕ್‌ಗೆ ಬಸ್ಸಿನ ಕಂಡಕ್ಟರ್ ಉಸ್ತುವಾರಿ ವಹಿಸಿ ತಾನು ಮೂಡುಬಿದ್ರೆಯಲ್ಲಿ ಬಸ್ಸಿನಿಂದಿಳಿದುಕೊಂಡಿದ್ದಾನೆ. ಬಸ್ಸು ಬೆಳ್ತಂಗಡಿ ಕಡೆ ಹೊರಟಿದೆ. ಅಶ್ವಿನಿ-ಮಹಾದೇವಿಯಿಬ್ಬರೂ ಬಸ್ಸಿನಲ್ಲೇ ಪ್ರಯಾಣ ಮುಂದುವರೆಸಿದ್ದಾರೆ.

ಬಸ್ಸು ಮಧ್ಯಾಹ್ನ ಒಂದು ಗಂಟೆಯ ಸಮಯಕ್ಕೆ ವೇಣೂರು ಬಳಿಯ ನಂದಿಬೆಟ್ಟದ ಹತ್ತಿರ ಬಂದಾಗ ಭಜರಂಗದಳದ ಪುಂಡರು ಕೆಎ-12,ಎಂ2383 ಸಂಖ್ಯೆಯ ಜೀಪಿನಲ್ಲಿ ಬಂದು ಬಸ್ಸನ್ನು ಅಡ್ಡಗಟ್ಟಿ, ಅಶ್ವಿನಿ-ಮಹಾದೇವಿಯವರನ್ನು ಬಸ್ಸಿನಿಂದ ಹೊರಗೆಳೆದು ಇಲ್ಲಿ ಬರೆಯಲಾಗದಷ್ಟು ಕೆಟ್ಟದಾಗಿ ಬಯ್ಯುತ್ತಾ ಸಾರ್ವಜನಿಕರೆದುರೇ ಹಿಗ್ಗಾಮುಗ್ಗಾ ಥಳಿಸಿದ್ದಾರೆ. ಕೊನೆಗೆ ಅವರಿಬ್ಬರನ್ನೂ ಜೀಪಿನಲ್ಲಿ ಹಾಕಿಕೊಂಡು ಪರಾರಿಯಾಗಿದ್ದಾರೆ. ಇದು ಅಶ್ವಿನಿಯ ಮನಸ್ಸಿನ, ದೇಹದ ಮೇಲೆ ಬಿದ್ದ ಮೊದಲ ಬರೆ.

ಈ ನಡುವೆ ಬಸ್ಸು ಬೆಳ್ತಂಗಡಿಗೆ ಹೋಗಿ ಮತ್ತದೇ ಮಾರ್ಗದಲ್ಲಿ ವಾಪಸ್ಸು ಬರುವುದನ್ನೇ ಸಲೀಮ್ ಕಾಯುತ್ತಿದ್ದ. ಅಷ್ಟರಲ್ಲಿ ರಫೀಕ್ ಸಲೀಮ್‌ಗೆ ಫೋನ್ ಮಾಡಿ ಭಜರಂಗದಳದವರು ಅಶ್ವಿನಿ-ಮಹಾದೇವಿಯವರನ್ನು ಬಯ್ದು ಎಳೆದೊಯ್ದದ್ದನ್ನೂ, ಸಲೀಮ್‌ಗಾಗಿ ಅವರೆಲ್ಲಾ ಹುಡುಕಾಡುತ್ತಿರುವುದನ್ನೂ ಹೇಳಿ ಅವರಿಂದ ತಪ್ಪಿಸಿಕೊಳ್ಳುವಂತೆ ಹೇಳಿದ. ತಮ್ಮದೇ 'ಅಭಿಮಾನ್' ಬಸ್ಸಿಗೆ ಹೋದರೆ ಭಜರಂಗದಳದವರು ತನ್ನನ್ನೂ ಥಳಿಸಬಹುದೆಂದು ಹೆದರಿದ ಸಲೀಮ್ 'ಪಾರ್ಶ್ವನಾಥ' ಎಂಬ ಬಸ್ಸಿನಲ್ಲಿ ವೇಣೂರಿಗೆ ಬಂದು, ಅಲ್ಲಿಂದ ರಿಕ್ಷಾ ತೆಗೆದುಕೊಂಡು ತನ್ನ ಮನೆಯಿರುವ ಹೊಸಂಗಡಿಗೆ ಹೊರಟ. ಅಷ್ಟು ಹೊತ್ತಿಗಾಗಲೇ ಸಲೀಮ್‌ನ ತಲಾಶ್‌ನಲ್ಲಿದ್ದ ಭಜರಂಗಿಗಳು ಅದೇ ಜೀಪಿನಲ್ಲಿ ಬಂದು ಕುಲ್ಲೊಟ್ಟು ಎಂಬಲ್ಲಿ ಸಲೀಮ್‌ನ ರಿಕ್ಷಾ ತಡೆದು ಅವನನ್ನೂ ಹಿಗ್ಗಾಮುಗ್ಗಾ ಥಳಿಸಿದ್ದಾರೆ. ಆದರೆ, ಜೀಪಿನಲ್ಲಿ ಆ ಇಬ್ಬರು ಹುಡುಗಿಯರಿರಲಿಲ್ಲ, ಸಲೀಮನನ್ನು ಭಜರಂಗಿಗಳು ನೇರವಾಗಿ ಮಾರೂರು ಬಸ್ ನಿಲ್ದಾಣದ ಹತ್ತಿರ ಕರೆದುಕೊಂಡು ಬಂದಿದ್ದಾರೆ. ಅಲ್ಲಿ ಇವರಿಗಾಗಿ ಅಶ್ವಿನಿ-ಮಹಾದೇವಿಯವರನ್ನು ಹಿಡಿದಿಟ್ಟುಕೊಂಡಿದ್ದ ಗುಂಪು ಕಾಯುತ್ತಿತ್ತು.

ನಂದಿಬೆಟ್ಟದ ಹತ್ತಿರ ಹುಡುಗಿಯನ್ನು ಎಳೆದೊಯ್ದ ಮೇಲೆ ಸಲೀಮ್‌ನನ್ನು ಹಿಡಿಯುವ ಹೊತ್ತಿಗೆ ಕನಿಷ್ಠ ಒಂದೂವರೆ ತಾಸು ಕಳೆದಿದೆ. ಇಷ್ಟು ಹೊತ್ತು ಆ ಹುಡುಗಿಯರನ್ನು ಭಜರಂಗಿಗಳು ಎಲ್ಲಿಟ್ಟಿದ್ದರು, ಅವರಿಗೆ ಏನೆಲ್ಲಾ ಕಿರುಕುಳ ಕೊಟ್ಟರು ಎಂಬುದನ್ನು ಈಗ ಜೀವಂತವಾಗಿರುವ ಮಹಾದೇವಿ ಮಾತ್ರ ಬಲ್ಲಳು. ಆದರೆ ಆಕೆಯನ್ನೇ ಈಗ ನಾಪತ್ತೆ ಮಾಡಲಾಗಿದೆ. ಈ ನಡುವೆ ಭಜರಂಗದಳದ ಇನ್ನೊಂದು ಗುಂಪು 'ಅಭಿಮಾನ್' ಬಸ್ಸನ್ನು ಮತ್ತೆ ಅಡ್ಡಹಾಕಿ ರಫೀಕನಿಗೆ ಮನಬಂದಂತೆ ಹೊಡೆದಿದ್ದಾರಲ್ಲದೇ ಆತನಲ್ಲಿದ್ದ ಒಂದು ಮೊಬೈಲ್ ಮತ್ತು ಮೂರು ಸಾವಿರ ರೂಪಾಯಿ ದುಡ್ಡನ್ನು ದೋಚಿದ್ದಾರೆ. ಗಾಯಗೊಂಡ ರಫೀಕ್ ಆಸ್ಪತ್ರೆಗೆ ಪ್ರಾಣಾಪಾಯದಿಂದ ಬದುಕಿದ್ದೇ ದೊಡ್ಡದು ಎಂದು ಎಸ್ಕೇಪ್ ಆಗಿದ್ದಾನೆ.



ಭಜರಂಗಿಗಳು ಅಂತಿಮವಾಗಿ ಮೂಡುಬಿದ್ರೆ ಪೊಲೀಸ್ ಠಾಣೆಯ ಸಬ್‌ಇನ್ಸ್‌ಪೆಕ್ಟರ್ ಭಾರತಿಯವರಿಗೆ ಫೋನ್ ಮಾಡಿ ಕರೆಸಿಕೊಂಡು ಅಶ್ವಿನಿ, ಮಹಾದೇವಿ ಮತ್ತು ಸಲಿಮ್‌ರನ್ನು ಅವರಿಗೆ ಒಪ್ಪಿಸಿದ್ದಾರೆ. ಹುಡುಗಿಯರ ತಂದೆ ತಾಯಿಗಳಿಂದ ಕಂಪ್ಲೇಂಟ್ ಬರೆಸಿಕೊಂಡು ಸಲೀಮ್ ಮೇಲೆ ರೇಪ್ ಕೇಸ್ ಹಾಕಬೇಕೆಂದು ಸಬ್‌ಇನ್ಸ್‌ಪೆಕ್ಟರ್ ಭಾರತಿ ಮೇಲೆ ಒತ್ತಡವನ್ನೂ ಹೇರಿದ್ದಾರೆ. ಮೂವರನ್ನೂ ಸ್ಟೇಶನ್‌ಗೆ ಕರೆತಂದ ಭಾರತಿ ಮೂವರನ್ನೂ ಪ್ರತ್ಯೇಕವಾಗಿ ವಿಚಾರಿಸಿದ್ದಾರೆ. "ನಮಗೆ ಸಲೀಮ್ ಏನೂ ದೈಹಿಕ ಹಿಂಸೆ ಕೊಟ್ಟಿಲ್ಲ, ಸಾರ್ವಜನಿಕರೆದುರೇ ತೀರಾ ಕೆಟ್ಟದಾಗಿ ಬಯ್ದು, ಮನಬಂದಂತೆ ಹೊಡೆದು ಮಾನಸಿಕ, ದೈಹಿಕ ಹಿಂಸೆ ಕೊಟ್ಟವರು ಭಜರಂಗದಳದವರು" ಎಂದು ಆ ಹುಡುಗಿಯರಿಬ್ಬರೂ ಬಹಳ ಸ್ಪಷ್ಟವಾಗಿ ಅವಲತ್ತುಕೊಂಡಿದ್ದಾರೆ. ಕೊನೆಗೆ ಅಶ್ವಿನಿಯ ಅಪ್ಪ ಜಯಮೂಲ್ಯ, ಅಮ್ಮ ಮತ್ತು ಮಹಾದೇವಿಯ ಅಮ್ಮನನ್ನು ಸ್ಟೇಶನ್‌ಗೆ ಕರೆಸಿಕೊಂಡ ಸಬ್ ಇನ್ಸ್‌ಪೆಕ್ಟರ್ ಭಾರತಿ "ಭಜರಂಗದಳದವರಿಂದ ನನಗೆ ಭಾರೀ ಒತ್ತಡವಿದೆ. ರಾಜ್ಯದಲ್ಲಿ ಬಜೆಪಿ ಸರ್ಕಾರ ಬೇರೆ ಇದೆ. ನೀವು ಸಲೀಮ್ ವಿರುದ್ಧ ಒಂದು ಲಿಖಿತ ಕಂಪ್ಲೇಂಟ್ ಮಾತ್ರ ಕೊಡಿ. ಉಳಿದದ್ದನ್ನು ನಾನು ಸಂಭಾಳಿಸುತ್ತೇನೆ" ಎಂದು ಒತ್ತಾಯಿಸಿದ್ದಾರೆ. ಆದರೆ, ಜಯಮೂಲ್ಯರಿಗೆ ಕೂಡ ಸಲೀಮ್ ವಿರುದ್ಧ ಕಂಪ್ಲೇಂಟ್ ಕೊಡುವುದಕ್ಕೆ ಏನೂ ಇರಲಿಲ್ಲ, ಅದೂ ಅಲ್ಲದೇ ಮಗಳು ಸುರಕ್ಷಿತವಾಗಿರುವಾಗ, ತನಗೆ ಸಲೀಮ್ ಏನೂ ತೊಂದರೆ ಕೊಟ್ಟಿಲ್ಲ ಎಂದು ಸ್ಪಷ್ಟವಾಗಿ ಹೇಳುತ್ತಿರುವಾಗ ಅನವಶ್ಯಕವಾಗಿ ವಿಷಯವನ್ನು ದೊಡ್ಡದು ಮಾಡುವುದು ಅವರಿಗೂ ಬೇಕಿರಲಿಲ್ಲ, ಹಾಗಾಗಿ ಭಾರತಿ ಎಷ್ಟೇ ಒತ್ತಾಯಿಸಿದರೂ ಆ ದಿನ ಜಯಮೂಲ್ಯ ಸಲೀಮ್ ವಿರುದ್ಧ ಕಂಪ್ಲೇಂಟ್ ಕೊಡಲಿಲ್ಲ, ಬೇರೆ ದಾರಿಯಿಲ್ಲದೇ ಒಂದು ಮುಚ್ಚಳಿಕೆ ಬರೆಸಿಕೊಂಡು ಆ ಹುಡುಗಿಯರಿಬ್ಬರನ್ನೂ ಬಿಟ್ಟುಬಿಟ್ಟರು.



ಸಲೀಂ

ಅದೇ ಸಮಯದಲ್ಲಿ ನಿರಪರಾಧಿ ಸಲೀಮ್‌ನನ್ನು ಬಿಡುಗಡೆ ಮಾಡುವಂತೆ ಅವನ ಮನೆಯವರೂ ಭಾರತಿಯನ್ನು ಬೇಡಿಕೊಂಡಿದ್ದಾರೆ. ಆಕೆ ಸ್ಪಷ್ಟವಾಗಿ ಹೇಳಿದ್ದೇನೆಂದರೆ, "ಈಗ ಸಲೀಮ್ ಎದುರು ಯಾವುದೇ ಲಿಖಿತ ಕಂಪ್ಲೇಂಟ್ ಇಲ್ಲ, ಸುಮ್ಮನೇ ಒಂದು 110 ಕೇಸ್ ಬುಕ್ ಮಾಡುತ್ತೇನೆ. ನಾಳೆ ಬೆಳಗ್ಗೆ ತಹಶೀಲ್ದಾರ್ ಹತ್ತಿರ ಹಾಜರುಪಡಿಸುತ್ತೇನೆ. ಆಮೇಲೆ ಮನೆಗೆ ಕರೆದುಕೊಂಡು ಹೋಗಿ". ಇದನ್ನು ನಂಬಿದ ಸಲೀಮ್ ಸಂಬಂಧಿಕರು ಭಾರತಿಯ ಮೇಲೆ ವಿಶ್ವಾಸವಿಟ್ಟು ಮನೆಗೆ ತೆರಳಿದ್ದಾರೆ.



ಗೋಪಾಲ್ ಹೊಸೂರು

ಜಯಮೂಲ್ಯ ಒಬ್ಬ ಸೂಕ್ಷ್ಮ ಮನಸ್ಸಿನ ವ್ಯಕ್ತಿಯಾಗಿದ್ದಿದ್ದರೆ ಈಗಾಗಲೇ ಭಜರಂಗಿಗಳ ದಾಳಿಯಿಂದ ಘಾಸಿಯಾಗಿ ಹೋಗಿರುವ ಅಶ್ವಿನಿಗೆ ಸಮಾಧಾನ ಹೇಳುತ್ತಿದ್ದ, ನಾನು ನಿನ್ನೊಂದಿಗಿದ್ದೇನೆ ಭಯಪಡಬೇಡ ಎಂದು ಧೈರ್ಯ ತುಂಬುತ್ತಿದ್ದ. ಆದರೆ, ಆತ ಹಾಗೆ ಮಾಡಲಿಲ್ಲ. ಪೊಲೀಸ್ ಸ್ಟೇಶನ್ ಮೆಟ್ಟಿಲು ಹತ್ತಿದ್ದು ಭಜರಂಗಿಗಳ ಕಾರಣದಿಂದಾದರೂ ಮಗಳ ಕಾರಣದಿಂದಲೇ ಇಷ್ಟೆಲ್ಲಾ ರಾದ್ಧಾಂತವಾಯಿತು ಎಂದು ಅಶ್ವಿನಿಯನ್ನೇ ದೂಷಿಸಿದ. ಪೊಲೀಸ್ ಸ್ಟೇಶನ್‌ನಿಂದ ಹೊರಬರುತ್ತಿದ್ದಂತೆಯೇ ಸಾರ್ವಜನಿಕರೆದುರು, ಪೊಲೀಸರೆದುರು ಅಶ್ವಿನಿಯ ಕಪಾಳ ಕೆಂಪಾಗುವಂತೆ ಹಿಗ್ಗಾಮುಗ್ಗ ಬಾರಿಸಿದ. ಆ ಮೂಲಕ ಭಜರಂಗದಳದವರಿಗೂ ತನಗೂ ಏನೂ ವ್ಯತ್ಯಾಸವಿಲ್ಲ ಎಂಬುದನ್ನು ತೋರಿಸಿಕೊಟ್ಟ. ಕೊನೆಗೆ ಸಬ್‌ಇನ್ಸ್‌ಪೆಕ್ಟರ್ ಭಾರತೀಯೇ ಬಂದು "ಸ್ಟೇಶನ್ ಆವರಣದಲ್ಲೇ ಹೀಗೆಲ್ಲಾ ಹೊಡೆಯಬೇಡಿ, ಅದೇನಿದ್ದರೂ ಮನೆಗೆ ಹೋಗಿ ಮಾಡಿಕೊಳ್ಳಿ" ಎಂದು ಹೇಳಬೇಕಾಯಿತು.

ಭಜರಂಗದಳದವರು ಸಾರ್ವಜನಿಕರೆದುರು ಕೆಟ್ಟ-ಕೊಳಕು ಭಾಷೆ ಬಳಸಿ ಬಯ್ದಿದ್ದರೂ, ಆಕೆಯನ್ನು ಎಲ್ಲರೆದುರು ಹೊಡೆದಿದ್ದರೂ ಪ್ರಾಯಶಃ ಅಶ್ವಿನಿ ಸಹಿಸಿಕೊಂಡಿರುತ್ತಿದ್ದಳೋ ಏನೋ? ಆದರೆ, ಸ್ವಂತ ಅಪ್ಪನೂ ಮಗಳ ಮೇಲೆ ವಿಶ್ವಾಸವಿಡದೇ ಭಜರಂಗಿಗಳಂತೆಯೇ ಬೀದಿಯಲ್ಲಿ ಹೊಡೆದು ಅವಮಾನಿಸುತ್ತಾನೆಂದರೆ? ಪ್ರಾಯಶಃ ಇದು ಭಜರಂಗಿಗಳು ಆಕೆಗೆ ಮಾಡಿದ ಮಾನಸಿಕ ಆಘಾತಕ್ಕಿಂತ ದೊಡ್ಡದಾಗಿತ್ತು, ಅದನ್ನು ಅರಗಿಸಿಕೊಳ್ಳುವುದಕ್ಕೆ ಆಕೆಗೆ ಸಾಧ್ಯವಾಗಲಿಲ್ಲ.

ಪೊಲೀಸ್ ಸ್ಟೇಶನ್ ಆವರಣದಲ್ಲಿಯೇ ಈ ರೀತಿ ಮಗಳ ಮೇಲೆ ಪೈಶಾಚಿಕತೆ ಮೆರೆದವನು ಆಕೆಯನ್ನು ಮನೆಗೆ ಕರೆದುಕೊಂಡು ಹೋದ ಮೇಲೆ ಸುಮ್ಮನಿರುತ್ತಾನೆಯೆ? ಮನೆಯಲ್ಲಿ ಏನೇನು ನಡೆಯಿತು, ಆಕೆಗೆ ಏನೆಲ್ಲಾ ಹಿಂಸೆ ಕೊಡಲಾಯಿತು ಎಂಬುದು ಆಕೆಯ ಅಪ್ಪ-ಅಮ್ಮರನ್ನು ಹೊರತುಪಡಿಸಿ ಬೇರೆ ಯಾರಿಗೂ ಗೊತ್ತಿಲ್ಲ.

ಪರಿಣಾಮ ಇಷ್ಟೇ. ಬೆಳಗಾಗುವುದರೊಳಗೆ ಅಶ್ವಿನಿ ಹೆಣವಾಗಿದ್ದಳು.


ಅಲ್ಲಿಯವರೆಗೆ ಪೈಶಾಚಿಕತೆ ನಡೆದಿದ್ದು ಅಶ್ವಿನಿಯ ಮೇಲೆ. ಆನಂತರ ನಡೆದದ್ದು ಸಲೀಮ್ ಮೇಲೆ. ಸಲೀಮ್‌ನನ್ನು ತಹಶೀಲ್ದಾರ್ ಕೋರ್ಟಿಗೆ ಹಾಜರುಪಡಿಸಲೇ ಇಲ್ಲ, ಅಶ್ವಿನಿ ಆತ್ಮಹತ್ಯೆ ಮಾಡಿಕೊಂಡ ಎಳಿಂಜೆ ಗ್ರಾಮ ಮೂಲ್ಕಿ ಪೊಲೀಸ್ ಸ್ಟೇಶನ್ ವ್ಯಾಪ್ತಿಗೆ ಬರುತ್ತದಾದ್ದರಿಂದ ಸಲೀಮ್‌ನನ್ನು ಅಲ್ಲಿಗೆ ವರ್ಗಾಯಿಸಲಾಯಿತು. ಅಶ್ವಿನಿಯ ತಂದೆ ಜಯಮೂಲ್ಯನನ್ನು ಸ್ಟೇಶನ್‌ಗೆ ಕರೆಸಿಕೊಂಡ ಮೂಲ್ಕಿ ಪೊಲೀಸರು ಅವರಿಂದ ಅಶ್ವಿನಿಯ ಮೇಲೆ ರೇಪ್ ಮಾಡಿದ್ದಾಗಿ, ಆಕೆಯನ್ನು ಆತ್ಮಹತ್ಯೆಗೆ ಪ್ರಚೋದಿಸಿದ್ದಾಗಿ ಸಲೀಮ್ ವಿರುದ್ಧ ಕಂಪ್ಲೇಂಟ್ ಬರೆಸಿಕೊಂಡರು. ಸಲೀಮ್ ಮೇಲೆ ರೇಪ್ ಮತ್ತು ಆತ್ಮಹತ್ಯೆಗೆ ಪ್ರಚೋದನೆಯ ಕೇಸು ದಾಖಲಿಸಿ ಜೈಲು ಕಂಬಿಗಳ ಹಿಂದೆ ತಳ್ಳಿಬಿಟ್ಟರು.

ಇಲ್ಲೊಂದು ವಿಚಾರ ಗಮನಿಸಿ. ಮೂಡುಬಿದ್ರೆ ಪೊಲೀಸ್ ಸ್ಟೇಶನ್‌ನಲ್ಲಿ ಸಲೀಮ್ ವಿರುದ್ಧ ಕಂಪ್ಲೇಂಟ್ ಕೊಡುವಂತೆ ಸಬ್‌ಇನ್ಸ್‌ಪೆಕ್ಟರ್ ಭಾರತಿ ಎಷ್ಟೇ ಒತ್ತಾಯಿಸಿದರೂ ಜಯಮೂಲ್ಯ ಕಂಪ್ಲೇಂಟ್ ಕೊಟ್ಟಿರಲಿಲ್ಲ. ಆದರೆ, ಒಂದು ದಿನ ಕಳೆಯುವುದರೊಳಗಾಗಿ ಸಂಪೂರ್ಣವಾಗಿ ಬದಲಾದ ಆತ ಪೊಲೀಸರು ಹೇಳಿದ ವಾಕ್ಯಗಳನ್ನೇ ಬರೆದು ಕಂಪ್ಲೇಂಟ್ ಕೊಟ್ಟ ಯಾಕೆ? ಯಾಕೆಂದರೆ, ಅಶ್ವಿನಿ ಆತ್ಮಹತ್ಯೆ ಮಾಡಿಕೊಂಡಿರುವುದು ನಿಜ. ಆಕೆಯ ಆತ್ಮಹತ್ಯೆಗೆ ಅರ್ಧ ಭಜರಂಗಿಗಳು ಮಾಡಿದ ಅವಮಾನ, ದೈಹಿಕ ಹಿಂಸೆ ಕಾರಣವಾದರೆ, ಇನ್ನರ್ಧ ಆಕೆಯ ತಂದೆ ಜಯಮೂಲ್ಯ ಆಕೆಗೆ ಕೊಟ್ಟ ದೈಹಿಕ, ಮಾನಸಿಕ ಹಿಂಸೆ ಕಾರಣ. ಈ ಹಿಂಸೆಗಳನ್ನು ಭಜರಂಗಿಗಳು ಮತ್ತು ಜಯಮೂಲ್ಯ ಇಬ್ಬರೂ ಸಾರ್ವಜನಿಕವಾಗಿಯೇ ಮಾಡಿದ್ದಾರೆ. ಅಂದರೆ, ಅಶ್ವಿನಿಯ ಆತ್ಮಹತ್ಯೆಯ ಕೇಸು ತನ್ನ ಕೊರಳಿಗೇ ಸುತ್ತಿಕೊಳ್ಳುತ್ತದೆ ಎಂಬುದನ್ನು ಪೊಲೀಸರು ಆತನಿಗೆ ಚೆನ್ನಾಗಿಯೇ ವಿವರಿಸಿದ್ದಾರೆ. ಅದರಿಂದ ತಪ್ಪಿಸಿಕೊಳ್ಳಲು ಈಗಾಗಲೇ ಪೊಲೀಸ್ ಕಸ್ಟಡಿಯಲ್ಲಿರುವ ಸಲೀಮ್‌ನನ್ನು ಸಿಕ್ಕಿಸಹಾಕುವುದು ಇರುವ ಏಕೈಕ ಮಾರ್ಗ ಎಂದೂ 'ಬುದ್ಧಿ' ಹೇಳಿದ್ದಾರೆ.

ಅವರ ಪ್ಲಾನ್ ಸಕ್ಸಸ್ ಆಯಿತು. ಅಶ್ವಿನಿಯ ಸಾವಿಗೆ ಕಾರಣರಾದ ಭಜರಂಗಿಗಳು ಮತ್ತು ಖುದ್ದು ಅಪ್ಪ ಜಯಮೂಲ್ಯ ತೆರೆಯ ಹಿಂದೆ ಸರಿದರು. ನಿರಪರಾಧಿ ಸಲೀಮ್‌ನನ್ನು ಕಂಬಿಗಳ ಹಿಂದೆ ದೂಡಿದರು.

ಇಂಥ ಒಂದು ಅನ್ಯಾಯದ ವಿರುದ್ಧ ಅಲ್ಲಲ್ಲಿ ಪ್ರತಿಭಟನೆಯ ದನಿ ಕೇಳುತ್ತಿದ್ದಂತೆಯೇ ಅಶ್ವಿನಿಯ ಆತ್ಮಹತ್ಯೆಯ ಪ್ರಕರಣವನ್ನು ಸಿಓಡಿಗೆ ವಹಿಸಲಾಗಿದೆ. ಅಶ್ವಿನಿಯ ಮರಣೋತ್ತರ ಪರೀಕ್ಷೆಯ ವರದಿಗಾಗಿ ಮತ್ತು ಬದುಕುಳಿದು ನಾಪತ್ತೆಯಾಗಿರುವ ಮಹಾದೇವಿಯ ಪತ್ತೆಗಾಗಿ ಕಾಯಲಾಗುತ್ತಿದೆ.

ಮೂಡುಬಿದ್ರೆ ಪೊಲೀಸ್ ಸಬ್‌ಇನ್ಸ್‌ಪೆಕ್ಟರ್ ಭಾರತಿ ಹೇಳಿದಂತೆ ರಾಜ್ಯದಲ್ಲಿ ಬಜೆಪಿ ಸರ್ಕಾರವಿದೆ. ಇಡೀ ಕರಾವಳಿಯಾದ್ಯಂತ ಭಜರಂಗಿ-ಶ್ರೀರಾಮಸೇನೆಯಂಥ ಹಿಂದೂತ್ವವಾದಿ ಪುಂಡರು ಪ್ರಬಲವಾಗಿದ್ದಾರೆ. ಪೊಲೀಸ್ ಇಲಾಖೆಯೊಳಗೇ ಅನೇಕ ಅಧಿಕಾರಿಗಳು ಸಂಘಪರಿವಾರದ ಕೇಡರ್‌ಗಳಾಗಿದ್ದಾರೆ. ಅಂಥದ್ದರಲ್ಲಿ ನಿಷ್ಪಕ್ಷಪಾತಿ ತನಿಖೆ ನಡೆಯುತ್ತದೆಯಾ ಎಂಬುದು ಸಹಜವಾಗಿ ಏಳುವ ಪ್ರಶ್ನೆ. ಆದರೆ, ನಿಷ್ಪಕ್ಷಪಾತಿ, ದಕ್ಷ ಮತ್ತು ಕರ್ತವ್ಯನಿಷ್ಠೆಗೆ ಹೆಸರಾದ ಗೋಪಾಲ್ ಹೊಸೂರ್ ಈಗ ಪಶ್ಚಿಮ ವಲಯದ ಐಜಿಯಾಗಿ ಮಂಗಳೂರಿಗೆ ಬಂದಿರುವುದೊಂದೇ ಭರವಸೆಯ ಬೆಳಕು. ಅವರು ಈ ಹಿಂದಿನಂತೆಯೇ ಕರ್ತವ್ಯನಿಷ್ಠೆಯನ್ನು ಮೆರೆಯುತ್ತಾರೆ, ನೈಜ ಅಪರಾಧಿಗಳಿಗೆ ಶಿಕ್ಷೆ ಕೊಡಿಸುತ್ತಾರೆ ಎಂದು ಕರಾವಳಿಯ ಶಾಂತಿಪ್ರಿಯ ಜನತೆ ನಿರೀಕ್ಷಿಸುತ್ತಿದ್ದಾರೆ. ■



ರಾಧಕ್ಕ

ಹುಬ್ಬಳ್ಳಿ-ಧಾರವಾಡ ರಾಧಕ್ಕನಿಗೆ ಪುತ್ರ ವ್ಯಾಮೋಹ ತಂದ ಕುತ್ತು!

ಮಹಾನಗರ ಪಾಲಿಕೆಯ ಕಮೀಷನರ್ ಮತ್ತು ಜನಪ್ರತಿನಿಧಿಯಾಗಿ ಆಯ್ಕೆಯಾದ ಮೇಯರ್‌ಗಳ ನಡುವೆ ಆಗಾಗ ಜಟಾಪಟಿಗಳಾಗುವುದು ಸಹಜ. ಒಬ್ಬರ ಕಮೀಷನ್ "ತಿನ್ನುವುದಕ್ಕೆ, ಮತ್ತೊಬ್ಬರು ಅಡ್ಡಬಂದರಂತೂ ಈ ಜಗಳ ಬಹಿರಂಗರೂಪ ಪಡೆದುಬಿಡುತ್ತದೆ. ಆದರೆ, ಪಾಲಿಕೆಯ ಕಮೀಷನರ್ ಒಬ್ಬ ಜನಪ್ರತಿನಿಧಿ ಮೇಯರ್ ಅವರ ಸದಸ್ಯತ್ವವನ್ನೇ ರದ್ದುಗೊಳಿಸಬೇಕೆಂದು ಹಠ ಹಿಡಿದು ಸರ್ಕಾರಕ್ಕೆ ಪತ್ರ ಬರೆದಿರುವುದು ಕರ್ನಾಟಕದ ಇತಿಹಾಸದಲ್ಲಿ ಪ್ರಾಯಶಃ ಇದೇ ಮೊದಲಿರಬೇಕು.



ಅಜಯ್ ನಾಗಭೂಷಣ್

ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯ ಮೇಯರ್ ರಾಧಕ್ಕನೇ ಕಮೀಷನರ್ ಡಾ.ಅಜಯ್ ನಾಗಭೂಷಣ್ ಅವರ ಕ್ರೋಧಕ್ಕೆ ಗುರಿಯಾಗಿರುವ ವ್ಯಕ್ತಿ. ಇದು ಕೇವಲ ಮೇಯರ್-ಕಮೀಷನರ್ ನಡುವೆ ಸ್ವಹಿತಾಸಕ್ತಿಗಾಗಿ ನಡೆಯುತ್ತಿರುವ ಜಗಳವಲ್ಲ. ಭ್ರಷ್ಟಾತಿಭ್ರಷ್ಟ ಎಂಬ ಸ್ಪರ್ಧೆಯನ್ನೇನಾದರೂ ಇಟ್ಟರೆ ಪ್ರಥಮ ಬಹುಮಾನ ಗೆಲ್ಲಬಲ್ಲ ಮೇಯರ್ ರಾಧಕ್ಕನ ಭ್ರಷ್ಟಾಚಾರಕ್ಕೆ, ಸ್ವಜನಪಕ್ಷಪಾತಕ್ಕೆ, ಕಮೀಷನರ್ ಡಾ.ಅಜಯ್ ನಾಗಭೂಷಣ್ ಹಾಕುತ್ತಿರುವ ಬ್ರೇಕ್! ಅದಕ್ಕೆ ನಾಗಭೂಷಣ್ ಅವರನ್ನು ಪ್ರಶಂಸಿಸಲೇಬೇಕು.


ಪಾಲಿಕೆಯಲ್ಲಿ ನಡೆಯುತ್ತಿರುವುದೇನು?

ಮೇಯರ್ ರಾಧಕ್ಕನಿಗೆ ಮಂಜುನಾಥ ಸಫಾರೆ ಹಾಗೂ ಸಿದ್ದಾರೂಢ ಸಫಾರೆ ಎಂಬಿಬ್ಬರು ಪುತ್ರರತ್ನರಿದ್ದಾರೆ. ಅದೇನು ತಿಂದು ಬೆಳೆದಿವೆಯೋ ಗೊತ್ತಿಲ್ಲ, ಅವೆರಡೂ ಕೆಲಸಕ್ಕೆ ಬಾರದ ದಂಡಪಿಂಡಗಳಂತಿವೆ. ಸಾರ್ವಜನಿಕ ದುಡ್ಡನ್ನು ಮೇಯುವ ಕುಶಲತೆಯಲ್ಲಿ ತಾಯಿಯನ್ನು ಮೀರಿಸುವ ಚಾಕಚಕ್ಯತೆಯನ್ನು ಚೆನ್ನಾಗಿ ಬೆಳೆಸಿಕೊಂಡಿವೆ. ಅವರಿಗಿರುವ ಟ್ಯಾಲೆಂಟ್ ಎಂದರೆ ಪ್ರಾಯಶಃ ಇದೊಂದೇ ಇರಬೇಕು. ಮಕ್ಕಳಿಗಿರುವ ಟ್ಯಾಲೆಂಟನ್ನು ಗುರುತಿಸಿ ಅದಕ್ಕೆ ಪೂರಕವಾಗಿ ಅವರ ಕೆರಿಯರ್ ಅನ್ನು ರೂಪಿಸುವುದು ತಂದೆತಾಯಿಗಳ ಕರ್ತವ್ಯವಲ್ಲವೆ? ಮೇಯರ್ ರಾಧಕ್ಕ ಕೂಡ ಅದೇರೀತಿ ಯೋಚಿಸಿದ್ದಾರೆ. ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯಂತಹ ಹುಲುಸಾಗಿ ಬೆಳೆದ ಹುಲ್ಲುಗಾವಲೇ ತನ್ನ ಮಕ್ಕಳ ಮೇಯುವಿಕೆಗೆ ಸರಿಯಾದ ಜಾಗ ಎಂದುಕೊಂಡು ಅವರನ್ನು ಪ್ರಾರಂಭದಲ್ಲಿ ಹೆಲ್ತ್ ಇನ್ಸ್‌ಪೆಕ್ಟರ್ ಮಾಡುವುದಕ್ಕೆ ತಯಾರಿ ಮಾಡಿಕೊಂಡಿದ್ದಾಳೆ. ಮಕ್ಕಳ ರಕ್ಷಣೆಗೆ ಬೇಕಾಗುತ್ತೆ ಅಂತ ವಿರೂಪಾಕ್ಷ ಶಿರೂರ, ಜಾವೇದ್ ರಾಯ ಬಾಗ್, ಪುಂಡಲೀಕ ಯಾತನೂರ, ಸಂತೋಷ್ ಹಿರೇಮಠರನ್ನೂ ಹೆಲ್ತ್ ಇನ್ಸ್‌ಪೆಕ್ಟರ್ ಮಾಡುವುದಕ್ಕೆ ಒಪ್ಪಿಕೊಂಡಿದ್ದಾರೆ.



ಹೂವಪ್ಪ

ಕಳೆದೆರಡು ವರ್ಷಗಳಿಂದ ಈ ಗ್ಯಾಂಗಿಗೆ ಹೊರಗುತ್ತಿಗೆ ನೀಡುತ್ತಾ ತಾಲೀಮು ಮಾಡಿಕೊಂಡಿದ್ದ ರಾಧಾಭಾಯಿ ಮೊನ್ನೆ ಅವರನ್ನು ಕಾಯಂಗೊಳಿಸುವ ಕಾರ್ಯಕ್ಕೆ ಚಾಲನೆ ನೀಡಿದ್ದಾರೆ. ಅದಕ್ಕಾಗಿ ಕಮೀಷನರ್ ಡಾ.ಅಜಯ್ ನಾಗಭೂಷಣ್ ಮೇಲೆಯೂ ಒತ್ತಡ ಹೇರಲು ಪ್ರಯತ್ನಿಸಿದರು. ಇದ್ದುದರಲ್ಲಿ ಉತ್ತಮ ಎನ್ನಬಹುದಾದ ನಾಗಭೂಷಣ್ ರಾಧಕ್ಕನ ಮಾತಿಗೆ ಸೊಪ್ಪು ಹಾಕಿಲ್ಲ; ಕಾನೂನಿನಡಿಯಲ್ಲಿ ಅದಕ್ಕೆ ಹೇಗೆ ಅವಕಾಶವಿಲ್ಲ ಎಂಬುದನ್ನು ರಾಧಕ್ಕನಿಗೆ ಮನವರಿಕೆ ಮಾಡಿಕೊಡಲು ಪ್ರಯತ್ನಿಸಿದ್ದಾರೆ. ಆದರೆ, ಮೂರುಬಿಟ್ಟವರಿಗೆ, ಕಾಯಿದೆ-ಕಾನೂನುಗಳ, ನೀತಿ-ನಿಯಮಾವಳಿಗಳ ಗಂಧ-ಗಾಳಿ ಗೊತ್ತಿಲ್ಲದ ರಾಧಕ್ಕನಿಗೆ ಅದೆಲ್ಲಾ ಎಲ್ಲಿ ಅರ್ಥವಾಗಬೇಕು?



ವಿಜಯಾನಂದ

ಮಕ್ಕಳ ಮೇಯುವ ಕೆರಿಯರ್‌ಗೆ ಅಡ್ಡಿಪಡಿಸಿದ್ದ ಕ್ರೋಧಗೊಂಡ ಜಗಳಗಂಟಿ ರಾಧಕ್ಕ ನಾಗಭೂಷ ವಿರುದ್ಧ ಸಮರ ಸಾರಿಬಿಟ್ಟಳು. "ಕಮೀಷನರ್ ತ ಆದೇಶಕ್ಕೆ ಮನ್ನಣೆ ನೀಡುತ್ತಿಲ್ಲ, ಅಭಿವೃದ್ಧಿ ಕಾರ್ಯಗಳ ಕೈಗೆತ್ತಿಕೊಳ್ಳುತ್ತಿಲ್ಲ" ಎಂದೆಲ್ಲಾ ವಾಗ್ದಾಳಿ [illegible] ನಾಗಭೂಷಣ್‌ರೊಂದಿಗೆ ಬಹಿರಂಗ ಜಗಳಕ್ಕಿಳಿದುಬಿಟ್ಟ ಮೊನ್ನೆ ಜನವರಿ 16ರಂದು ನಡೆದ ಸಾಮಾನ್ಯ ಸಭೆಯ ತಮ್ಮದೇ ಬಿಜೆಪಿ ಪಕ್ಷದ ಸದಸ್ಯರಾದ ವಿಜಯಾನಂ ಶೆಟ್ಟಿ ಹಾಗೂ ಹೂವಪ್ಪ ದಾಯಗೋ ಮೂಲಕ ನೇರ ನೇಮಕಾತಿಗೆ ಆದೇ ಮಾಡಿಯೇ ಬಿಟ್ಟಿದ್ದಾರೆ (ಠರಾವ ಸಂ 25 ಪಾಲಿಕೆಯಲ್ಲಿ ಹೆಲ್ತ್ ಇನ್ಸ್‌ಪೆಕ್ಟ ಕೊರತೆಯಿರುವುದರಿಂದ ದೃಢೀಕರಣಕ್ಕಾ ಕಾಯದೇ ತುರ್ತಾಗಿ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಬೇಕೆಂದು ಕಮೀಷನರ್‌ಗೆ ಆದೇಶವನ್ನು ನೀಡಿದ್ದಾರೆ.

ಆದರೆ ಇದಕ್ಕೆ ಜಗ್ಗದ ಕಮೀಷನರ ನಾಗಭೂಷಣ್ ಮೇಯರ್ ರಾಧಕ್ಕ ಮೇಲೆಯೇ ಬ್ರಹ್ಮಾಸ್ತ್ರ ಬಿಟ್ಟಿದ್ದಾರೆ. ಠರಾವಿನ ಮೇಯರ್ ರಾಧಕ್ಕ ಮಾಡಿರುವ ಆದೇಶ ಕಾನೂನನ್ನು ಉಲ್ಲಂಘಿಸುತ್ತದೆಯೆಂದು, ಕೆ.ಎಂ. ಕಾಯಿದೆ – 1976ರ ಕಲಂ 72ರ ಪ್ರಕಾ ಸದರಿ ಠರಾವನ್ನು ರದ್ದುಗೊಳಿಸಬೇಕೆಂದು ಪ್ರಸ್ತುತ ವಿಷಯದ ಮೇಲೆ ತನಿ ಕೈಗೊಳ್ಳಬೇಕೆಂದು, ಕೆ.ಎಂ.ಸಿ. ಕಾಯಿದೆ 1976ರ ಕಲಂ 262 (ಬ) ಪ್ರಕಾರ ಮೇಯರ್ ರಾಧಕ್ಕನನ್ನೂ ಒಳಗೊಂಡಂತೆ ಮೂವರು ಬಿಜೆಪಿ ಸದಸ್ಯರ ಸದಸ್ಯತ್ವವನ್ನು ರದ್ದುಗೊಳಿಸಬೇಕೆಂದು ಸರ್ಕಾರಕ್ಕೆ ಪತ್ರ ಬರೆದಿದ್ದಾರೆ!

▶▶▶

ಚಿತ್ರದುರ್ಗ ಬಿಸ್ವಾಸ್‌ರ ಇನ್ನೊಂದು ಮುಖ


ಚಿತ್ರದುರ್ಗದಲ್ಲಿ ನಡೆದ 75ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಸಂಬಂಧಿಸಿದಂತೆ ಆದ ಅವ್ಯವಸ್ಥೆಗಳು, ಯಡವಟ್ಟುಗಳ ಕಹಿನೆನಪುಗಳ ನಡುವೆಯೂ ಜಿಲ್ಲಾಧಿಕಾರಿ ಆದಿತ್ಯ ಅಮ್ಲಾನ್ ಬಿಸ್ವಾಸ್ 'ಹೀರೋ' ಇಮೇಜ್ ಪಡೆದುಕೊಂಡುಬಿಟ್ಟಿದ್ದಾರೆ. ಸಾಹಿತ್ಯ ಸಮ್ಮೇಳನದಲ್ಲಿ ಜಿಲ್ಲಾಧಿಕಾರಿಗಳ ಕಾರ್ಯವೈಖರಿಯ ಕುರಿತು ಪ್ರಶಂಸೆಗಳ ಸುರಿಮಳೆಯೇ ಆಯಿತು.

ಸಮ್ಮೇಳನದ ಆರಂಭದಲ್ಲಿ ಕೊಂಚ ನಿರಾಸಕ್ತಿ ತೋರಿಸಿದ್ದ ಜಿಲ್ಲಾಧಿಕಾರಿ ಬಿಸ್ವಾಸ್ ಜಿಲ್ಲಾ ಉಸ್ತುವಾರಿ ಸಚಿವ ಕರುಣಾಕರ ರೆಡ್ಡಿ ಗ್ರೀನ್‌ಸಿಗ್ನಲ್ ಕೊಡುತ್ತಿದ್ದಂತೆ ನೇರವಾಗಿ ಅಖಾಡಕ್ಕಿಳಿದರು. ನಗರದ ಪ್ರಮುಖ ರಸ್ತೆಗಳ ಕಾಮಗಾರಿಗಳು ಉತ್ತಮ ಗುಣಮಟ್ಟದಲ್ಲಿ ನಡೆಯುವಂತೆ ನೋಡಿಕೊಂಡರು. ಹೆಜ್ಜೆಹೆಜ್ಜೆಗೂ ಸ್ಥಳ ಪರಿಶೀಲನೆ-ತನಿಖೆ ಮಾಡುತ್ತಾ ಕಾಂಟ್ರಾಕ್ಟುದಾರರು ಯಾಮಾರಿಸದಂತೆ ಎಚ್ಚರಿಕೆ ವಹಿಸಿದರು.

ಜಿಲ್ಲಾಧಿಕಾರಿಗಳು ಪ್ರತಿ ವಿಷಯದಲ್ಲೂ ಹೀಗೆ ಕಟ್ಟುನಿಟ್ಟಿನ ಧೋರಣೆ ಅನುಸರಿಸಿ ಹಣ ಪೋಲಾಗದಂತೆ ನೋಡಿಕೊಂಡರಾದರೂ ಇದೀ ಸಮ್ಮೇಳನದಲ್ಲಾದ ಅವ್ಯವಸ್ಥೆಗೂ ಇದೇ ಕಾರಣವಾಯಿತು. ಯಾರೊಬ್ಬರನ್ನೂ ವಿಶ್ವಾಸಕ್ಕೆ ತೆಗೆದುಕೊಳ್ಳದೆ ತಮ್ಮ ಜೊತೆ ಹೆಗಲು ನೀಡಿ ಕೆಲಸ ಮಾಡುವವರನ್ನೆ ಸಂಶಯದಿಂದ ನೋಡಿದರು. ನೀರು ಪೂರೈಕೆ-ನಗರದ ಸ್ವಚ್ಛತೆಯ ನಿರ್ವಹಣೆಯ ಜವಾಬ್ದಾರಿ ಹೊತ್ತಿದ್ದ ನಗರಸಭೆಯ ಅಧಿಕಾರಿಗಳ ಸಲಹೆಗಳನ್ನು ನಿರ್ಲಕ್ಷಿಸಿದರು. ಕೌನ್ಸಿಲರುಗಳ ವಿಷಯದಲ್ಲಂತೂ ತುಂಬಾ ಅನ್‌ಡೆಮಾಕ್ರಟಿಕ್ ಆಗಿ ನಡೆದುಕೊಂಡರು. ಬಹುತೇಕ ಕೌನ್ಸಿಲರುಗಳು ತಾವು ಜನಪ್ರತಿನಿಧಿಗಳೆಂಬುದನ್ನೂ ಮರೆತು ಜಿಲ್ಲಾಧಿಕಾರಿಗಳ ಮುಂದೆ ಶಾಲಾ ಬಾಲಕರಂತೆ ವರ್ತಿಸಿದರು. ಅವರ್‍ಯಾರೂ ಜಿಲ್ಲಾಧಿಕಾರಿಗಳ ಧೋರಣೆಯನ್ನು ನೇರವಾಗಿ ಖಂಡಿಸುವ, ವಿಮರ್ಶಿಸುವ ಗೋಜಿಗೆ ಹೋಗಲಿಲ್ಲ.

ನಾಮಕಾವಸ್ಥೆ ಉಪಸಮಿತಿಗಳು

ಉಪಸಮಿತಿಗಳನ್ನು ನಾಮಕಾವಸ್ಥೆಗೆ ರಚಿಸಲಾಯಿತೇ ವಿನಃ ಆಯಾ ಸಮಿತಿಗಳಿಗೆ ನೀಡಬೇಕಾದ ಜವಾಬ್ದಾರಿಯನ್ನು ನೀಡಲಿಲ್ಲ. ಎಷ್ಟೋ ಉಪಸಮಿತಿಗಳಲ್ಲಿನ ಗಣ್ಯರಿಗೆ ಆಹ್ವಾನ ಪತ್ರಿಕೆಯನ್ನು ತಲುಪಿಸಿರಲಿಲ್ಲ. ಆದರೆ ಜಿಲ್ಲಾ



ಬಿಸ್ವಾಸ್

ಉಸ್ತುವಾರಿ ಸಚಿವ ಕರುಣಾಕರ ರೆಡ್ಡಿಯನ್ನು ಮೆಚ್ಚಿಸಲೆಂಬಂತೆ ಎಲ್ಲೆಲ್ಲಿ ಸಾಧ್ಯವೋ ಅಲ್ಲೆಲ್ಲಾ ಬಿಜೆಪಿ ಮುಖಂಡರುಗಳಿಗೆ ಮನ್ನಣೆ ಹಾಕಿದರು. ಉಪಸಮಿತಿಗಳ ಪಟ್ಟಿ ಪ್ರಕಟಿಸಿದಾಗ ನಗರಸಭೆಯ ಮಾಜಿ ಅಧ್ಯಕ್ಷ ಬಿ. ಕಾಂತರಾಜ್ ತಕ್ಷಣವೇ ಬಹಿರಂಗ ಆಕ್ಷೇಪ ವ್ಯಕ್ತಪಡಿಸಿದರಲ್ಲದೇ ತಮಗೆ ನೀಡಲಾಗಿದ್ದ "ಮೆರವಣಿಗೆ ಸಮಿತಿಯ ಜವಾಬ್ದಾರಿಯನ್ನು ಅದರ ಮಹತ್ವದ ಅರಿವು ಇರುವಂತವರಿಗೆ ಕೊಡಿ. ನನಗೆ ಸಮ್ಮೇಳನದ ನಾಲ್ಕೂದಿನ ನೀರು ಪೂರೈಕೆಯ ಜವಾಬ್ದಾರಿ ವಹಿಸಿ. ಇದಕ್ಕಾಗಿ ನಯಾಪೈಸೆ ಹಣ ಕೊಡಬೇಡಿ. ಸ್ವಂತ ಖರ್ಚಿನಲ್ಲಿ ಶುದ್ಧ ನೀರನ್ನು ಯಾವುದೇ ಕೊರತೆಯಾಗದಂತೆ ಪೂರೈಸುತ್ತೇನೆ" ಎಂದು ಹೇಳಿದಾಗ ಜಿಲ್ಲಾಧಿಕಾರಿಗಳಿಂದ ಯಾವ ಸ್ಪಂದನೆಯೂ ಸಿಗಲಿಲ್ಲ. ಇದೊಂದು ಉದಾಹರಣೆ ಮಾತ್ರ. ಬಿಸ್ವಾಸ್ ಸ್ವಯಂಸ್ಫೂರ್ತಿಯಿಂದ ಕೆಲಸ ಮಾಡಲು ಮುಂದೆ ಬಂದವರನ್ನು ಸಂಶಯದಿಂದ ನೋಡಿದರೇ ವಿನಃ ಅವರ ಸಾಮರ್ಥ್ಯಗಳನ್ನು ಅಳೆದು ಜವಾಬ್ದಾರಿ ನೀಡುವ ಗೋಜಿಗೆ ಹೋಗಲಿಲ್ಲ. ಜಿಲ್ಲಾ ಕಸಾಪ ಅಧ್ಯಕ್ಷ ವೀರೇಶ್‌ರನ್ನಂತೂ ಯಾವ ಸಂದರ್ಭದಲ್ಲಿ ಗಂಭೀರವಾಗಿ ಪರಿಗಣಿಸಲಿಲ್ಲ. ಸಮ್ಮೇಳನದ ಸಾಂಸ್ಕೃತಿಕ ಕಾರ್ಯಕ್ರಮಗಳೂ ತಾವು ನಿಗದಿ ಮಾಡಿದ ಸಮಯದೊಳಗೆ ಮುಗಿಯಬೇಕೆಂಬಂತಹ ನಿರ್ಬಂಧಗಳನ್ನು ವಿಧಿಸುವವರೆಗೂ ಜಿಲ್ಲಾಧಿಕಾರಿಗಳ ಸವಾರಿ ಮುಂದುವರಿಯಿತು. ಇದೆಲ್ಲದರಿಂದ ಬೇಸತ್ತಿದ್ದ ವೀರೇಶ್ ಸಮ್ಮೇಳನದ ಎರಡನೇ ದಿನ ರಾತ್ರಿ ಜಿಲ್ಲಾಧಿಕಾರಿಗಳನ್ನು ನೇರವಾಗಿ ತರಾಟೆಗೆ ತೆಗೆದುಕೊಂಡರು. "ಹಣ ಎಷ್ಟು ಬೇಕ್ರಿ ನಿಮಗೆ ಹೇಳ್ರಿ. ಈಗ್ಲೆ ಚೆಕ್ ಹರಿದುಕೊಡ್ತೀನಿ. ನೀವು ಐಎಎಸ್ ಆಗಿರ್ಬಹುದು. ಇವೊತ್ತು ಇರ್ತೀರಿ. ನಾಳೆ ಹೋಗ್ತೀರಿ. ನಾಳೆ ಇಲ್ಲಿನ ಜನ ಕೇಳೋದು ನಮ್ಮನ್ನ. ವಾಸ್ತವ ಪರಿಸ್ಥಿತಿ ಅರ್ಥ ಮಾಡ್ಕೊಂಡು ಮ್ಯಾನೇಜ್ ಮಾಡಿ" ಅಂತ ಗುಡುಗಿದರು.



ಊಟದ ಅವ್ಯವಸ್ಥೆಗೆ ಮುರುಘಾಮಠ ನಿರ್ವಹಣೆಗೆ ಸೂಕ್ತ ವ್ಯವಸ್ಥೆ ಮಾಡಿಕೊಳ್ಳದಿರುವುದು ಒಂದು ಕಾರಣವಾದರೆ ಅದಕ್ಕೆ ಬೇಕಾದ ರೇಷನ್ನನ್ನು ಅಳೆದೂ-ತೂಗಿ ಕೊಟ್ಟಿದ್ದು, ಸಮ್ಮೇಳನದಲ್ಲಿ ಭಾಗವಹಿಸುವ ಜನರ ಬಗ್ಗೆ ಕಡಿಮೆ ಅಂದಾಜು ಮಾಡಿದ್ದು ಮುಖ್ಯ ಕಾರಣ. ಊಟದ ಕೌಂಟರ್ ಬಳಿ ಮೊದಲ ದಿನದಂದು ಆದ ಅವ್ಯವಸ್ಥೆಯನ್ನು ಶಿವಮೂರ್ತಿ ಶರಣರು ಕಣ್ಣಾರೆ ನೋಡಿದ ನಂತರವೇ ಪರಿಸ್ಥಿತಿಯ ಅಂದಾಜು ಸಿಕ್ಕಿದ್ದು. ಎರಡನೇ ದಿನ ಪರಿಸ್ಥಿತಿ ತಹಬಂದಿಗೆ ಬಂದಿತಾದರೂ ಊಟದ ಅವ್ಯವಸ್ಥೆಯ ಕಹಿನೆನಪು ಹಾಗೆ ಉಳಿಯಿತು. ಪುಸ್ತಕ ಮಾರಾಟಗಾರರ ಗೋಳಂತೂ ಹೇಳತೀರದಾಗಿತ್ತು.

ಪುಸ್ತಕ ಮಳಿಗೆಗಳ ಅವ್ಯವಸ್ಥೆ ಕುರಿತು ಅಸಮಾಧಾನ ವ್ಯಕ್ತಪಡಿಸುತ್ತಲೇ ಇದ್ದರು. ಪದೇಪದೇ ತೆರೆತೆರೆಯಾಗಿ ಮೇಲೇಳುತ್ತಿದ್ದ ಕೆಂಪು ಧೂಳಿನ ನಡುವೆ ಉಸಿರುಕಟ್ಟಿಸುವ ವಾತಾವರಣದಲ್ಲಿ ಪುಸ್ತಕ ಮಾರಾಟ ಮಾಡಬೇಕಾಯಿತು. ಚಿತ್ರದುರ್ಗದ ಸಮ್ಮೇಳನದಲ್ಲಿ ಪುಸ್ತಕಗಳ ದಾಖಲೆಯ ಮಾರಾಟ ಆದರೂ ಇಲ್ಲಿನ ಅವ್ಯವಸ್ಥೆಯಂತೂ ಚಿರಕಾಲ ನೆನಪಲ್ಲಿ ಉಳಿಯುತ್ತದೆ.

ಸಮ್ಮೇಳನದಲ್ಲಿ ಆದ ತಪ್ಪುಗಳಿಗೆಲ್ಲಾ ಜಿಲ್ಲಾಧಿಕಾರಿಗಳೇ ನೇರವಾಗಿ ಕಾರಣರಲ್ಲದಿರಬಹುದು. ಆದರೆ ಸಮ್ಮೇಳನದುದ್ದಕ್ಕೂ ನಡೆದ ಯಡವಟ್ಟುಗಳಿಗೆ ಜಿಲ್ಲಾಧಿಕಾರಿಗಳ ಸಂಶಯ ಧೋರಣೆ, ಬಿಗಿನಿಲುವುಗಳೇ ವಾಹಕವಾಗಿ ಕೆಲಸ ಮಾಡಿವೆ. ಇಲ್ಲಿ ಜಿಲ್ಲಾಧಿಕಾರಿಯ ಪ್ರಾಮಾಣಿಕತೆ ಬಗ್ಗೆ, ಅವರ ಕರ್ತವ್ಯ ನಿಷ್ಠೆ ಬಗ್ಗೆ ಯಾರಿಗೂ ತಕರಾರಿಲ್ಲ. ಇಂಥ ಡಿ.ಸಿ. ಚಿತ್ರದುರ್ಗದಲ್ಲಿದ್ದು ಮತ್ತಷ್ಟು ಒಳ್ಳೆಯ ಕೆಲಸಗಳಾಗಬಹುದು ಎಂಬ ಅಭಿಪ್ರಾಯಗಳೇ ಜನಜನಿತವಾಗಿವೆ.

ಹಾಗೆ ನೋಡಿದರೆ ಸಮ್ಮೇಳನದ ಯಶಸ್ಸು-ವೈಫಲ್ಯಗಳೆರಡಕ್ಕೂ ಅವರೇ ಸಮಪಾಲು ಪಾಲುದಾರರು. ಬಿಸ್ವಾಸ್‌ರಂತಹ ಅಧಿಕಾರಿಗಳು ತಾವು ಮಾತ್ರ ಪ್ರಾಮಾಣಿಕರಾಗಿದ್ದರೆ ಸಾಲದು ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು. ತಮ್ಮನ್ನು ಹೊರತುಪಡಿಸಿದರೆ ಉಳಿದ ಅಧಿಕಾರಿಗಳು-ನೌಕರರೆಲ್ಲಾ ಅಪ್ರಾಮಾಣಿಕರು, ಭ್ರಷ್ಟರು, ಜನಪ್ರತಿನಿಧಿಗಳೆಲ್ಲಾ ಕೆಟ್ಟವರು ಎಂಬ ಧೋರಣೆಯನ್ನಿಟ್ಟುಕೊಂಡು ಬಿಸ್ವಾಸ್ ಸಾಧಿಸುವುದಾದರೂ ಏನನ್ನು?

■ ವರದಿಗಾರ

ಬರುವ ಮೇ 1ಕ್ಕೆ ಹೊಸ ಮೇಯರ್ ಆಯ್ಕೆ ನಡೆಯಬೇಕಿದೆ. ತಮ್ಮ ಕೊನೆಗಳಿಗೆಯಲ್ಲಿ ಮಕ್ಕಳಿಗೊಂದು ನೆಲ್ಲುಗಾವಲು ಕೊಡಿಸಲು ಹೋಗಿ ರಾಧಕ್ಕ ನಗೆಪಾಟಲಿಯಾಗುತ್ತಿರುವುದನ್ನು ಜನ ಖುಷಿಯಿಂದ ನೋಡುತ್ತಿದ್ದಾರೆ. ಆದರೆ, ಬಿಟ್ಟ ನೆಲಕ್ಕೆ ಬಿದ್ದರೂ ಮೀಸೆ ಮಣ್ಣಾಗಿಲ್ಲ ಎನ್ನುವಂತೆ ರಾಧಕ್ಕ ಮೊನ್ನೆ ಮತ್ತೊಂದು ಪತ್ರಿಕಾಗೋಷ್ಠಿ ಕರೆದು ತಮ್ಮ ಪುತ್ರವ್ಯಾಮೋಹವನ್ನು ಅದ್ಭುತವಾಗಿ ಸಮರ್ಥಿಸಿಕೊಂಡಿದ್ದಾರೆ. ವಾಸ್ತವ ಏನೆಂದರೆ, ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯಲ್ಲಿ ನಗರ ನೈರ್ಮಲೀಕರಣ ಕರ್ತವ್ಯದಲ್ಲಿ ತೊಡಗಿರುವ ಕಾಯಂ ಪೌರಕಾರ್ಮಿಕರಿಗಿಂತ ಗುತ್ತಿಗೆ ಕಾರ್ಮಿಕರ ಸಂಖ್ಯೆಯೇ ಜಾಸ್ತಿಯಿದೆ. ಸುಮಾರು 24 ಜನ ಗುತ್ತಿಗೆದಾರರಿದ್ದು ಅವರಡಿಯಲ್ಲಿ ಸುಮಾರು 1200ಕ್ಕೂ ಹೆಚ್ಚು ಪೌರಕಾರ್ಮಿಕರು ಕೆಲಸ ಮಾಡುತ್ತಿದ್ದಾರೆ. ಗುತ್ತಿಗೆದಾರರು ಪ್ರತಿ ಕಾರ್ಮಿಕರಿಗೆ ತಿಂಗಳೊಂದಕ್ಕೆ 2400 ರಿಂದ 3000 ರೂ.ಗಳ ಲೆಕ್ಕದಲ್ಲಿ ಪಾಲಿಕೆಯಿಂದ ದುಡ್ಡು ಪಡೆಯುತ್ತಾರಾದರೂ ಕಾರ್ಮಿಕರಿಗೆ ನೀಡುವುದು ಕೇವಲ 1500 ರೂ. ಮಾತ್ರ.

ಅದಿರಲಿ, ಮಹಾನಗರ ಪಾಲಿಕೆಯಲ್ಲಿ ಹೆಲ್ತ್ ಇನ್ಸ್‌ಪೆಕ್ಟರ್ ಹುದ್ದೆಗಳು ಖಾಲಿಯಿರುವುದು ನಿಜ. ಈ ಕ್ಷೇತ್ರದಲ್ಲಿ ಈಗಾಗಲೇ ಹತ್ತಾರು ವರ್ಷಗಳಿಂದ ಗುತ್ತಿಗೆ ಆಧಾರದಲ್ಲಿ ದುಡಿಯುತ್ತಿರುವ ವ್ಯಕ್ತಿಗಳ ದೊಡ್ಡ ಹಿಂಡೇ ಇದೆ. ಅವರನ್ನೆಲ್ಲಾ ಬಿಟ್ಟು ಮೇಯರ್ ರಾಧಕ್ಕ ಅನುಭವವಿಲ್ಲದ ತನ್ನ ಮಕ್ಕಳನ್ನೇ ಈ ಹುದ್ದೆಗೆ ಆಯ್ಕೆ ಮಾಡಿಕೊಂಡಿದ್ದಾರೆಂದರೆ ಯಾರಿಗೆ ತಾನೆ ಕೋಪ ಬರೋದಿಲ್ಲ?

ಏನೇ ಆದರೂ ರಾಧಕ್ಕನ ಬುಡ ಅಲ್ಲಾಡುವಂತೆ ಮಾಡಿದ ಕಮೀಷನರ್ ಡಾ.ಅಜಯ್ ನಾಗಭೂಷಣ್ ಅವರನ್ನು ಪ್ರಶಂಸಿಸಲೇಬೇಕು.

■ ಹುಬ್ಬಳ್ಳಿಯಾಂವ



ತಂದೆಯಾದ ಪೋರ

ಆ ಹುಡುಗನಿಗೆ ಇನ್ನೂ 13 ವರ್ಷ ತುಂಬಿಲ್ಲ, ನಾಲ್ಕು ಅಡಿ ಎತ್ತರವಿರುವ, ಇನ್ನೂ 10 ವರ್ಷದ ಬಾಲಕನಂತೆ ಕಾಣುವ, ಗಂಟಲು ಇನ್ನೂ ಒಡೆದಿರದ ಬಾಲಕ ಆಲ್ಫೀ ಈಗ ನವಜಾತ ಶಿಶುವಿಗೆ ತಂದೆಯಾಗಿದ್ದಾನೆ! ಆತನ 15 ವರ್ಷ ವಯಸ್ಸಿನ ಗೆಳತಿ ಚಾಂಟೆಲ್ ಮೊನ್ನೆ ಆಲ್ಫೀಯ ಹೆಣ್ಣು ಮಗುವಿಗೆ ಜನ್ಮವೆತ್ತಿದ್ದಾಳೆ.

ವಿಚಿತ್ರ ಜಗತ್ತು

ಇದು ನಡೆದಿರುವುದು ಇಂಗ್ಲೆಂಡ್‌ನಲ್ಲಿ. "ನಾನು ನನ್ನ ಮಗುವಿಗೆ ಒಳ್ಳೆ ತಂದೆಯಾಗುತ್ತೇನೆ" ಎನ್ನುವ ಆಲ್ಫೀಯನ್ನು " ನಿನ್ನ ಗೆಳತಿ ಮತ್ತು ಮಗುವಿಗೆ ಆರ್ಥಿಕ ನೆರವು ನೀಡುತ್ತೀಯಾ?" ಎಂದು ಕೇಳಿದರೆ ತನ್ನ ಕೀರಲು ಗಂಟಲಲ್ಲಿ "ಆರ್ಥಿಕ ನೆರವು ಅಂದರೇನು" ಎಂದು ಮುಗ್ಧವಾಗಿ ಪ್ರಶ್ನಿಸುತ್ತಿದ್ದಾನೆ. ಮಾತ್ರವಲ್ಲ "ನನ್ನಪ್ಪ ನನಗೆ ಆಗೀಗ ಪಾಕೆಟ್‌ಮನಿ ಕೊಡುತ್ತಾರಷ್ಟೇ" ಎಂದು ಮುಕ್ತವಾಗಿ ಹೇಳುತ್ತಿದ್ದಾನೆ.

ಈ ಪ್ರಕರಣದಿಂದಾಗಿ ಈಗ ಇಂಗ್ಲೆಂಡ್‌ನಲ್ಲಿ ಮಕ್ಕಳಿಗೆ ಲೈಂಗಿಕತೆ ಕುರಿತ ಶಿಕ್ಷಣವನ್ನು ಇನ್ನಷ್ಟು ಹೆಚ್ಚಿಸಬೇಕೆಂದು ಚರ್ಚೆ ನಡೆಯುತ್ತಿದೆ. ಈ ಮಧ್ಯೆ, ಚಾಂಟೆಲ್ ಜೊತೆ ತಮಗೂ ಸಂಬಂಧವಿತ್ತು, ಆದ್ದರಿಂದ ಆ ಕೂಸು ತಮ್ಮದು ಎಂದು ಎಂಟು ಇತರೆ ಹುಡುಗರು ಮುಂದೆ ಬಂದಿದ್ದಾರೆ. ಈ ಕಾಲದ ಮಕ್ಕಳಿಗೆ ಏನಾಗಿದೆ?

ಭದ್ರಾ ಮೇಲ್ದಂಡೆ ಯೋಜನೆ

ಮತ್ತೊಂದು ಬಾಗೂರು-ನವಿಲೆ!


ಬಾಗೂರು-ನವಿಲೆ ರೈತರು ತಮ್ಮ ಉಳಿವಿಗಾಗಿ ನಡೆಸಿದ ಹೋರಾಟ, ಪೊಲೀಸರು ಅವರ ಮೇಲೆ ನಡೆಸಿದ ದೌರ್ಜನ್ಯ ಇನ್ನೂ ಜನಮನದಲ್ಲಿ ಹಸಿ ಹಸಿಯಾಗಿರುವಾಗಲೇ ಯಡ್ಡಿ ನೇತೃತ್ವದ ರಾಜ್ಯ ಸರ್ಕಾರ ಭದ್ರಾ ಮೇಲ್ದಂಡೆ ಯೋಜನೆಯನ್ನು ಅನುಷ್ಠಾನಗೊಳಿಸುವ ಮೂಲಕ ಮತ್ತೊಂದು ಬಾಗೂರು-ನವಿಲೆ ದೌರ್ಜನ್ಯವನ್ನು ಸೃಷ್ಟಿಸಲು ಹೊರಟಿದೆ. ಈಗಾಗಲೇ ತರೀಕೆರೆ ತಾಲ್ಲೂಕಿನಲ್ಲಿ ಈ ಯೋಜನೆಯ ವಿರುದ್ಧ ಜನ ಬೀದಿಗಿಳಿದು ಹೋರಾಟ ನಡೆಸುತ್ತಿದ್ದಾರೆ. ಮತ್ತೊಂದೆಡೆ, ಹಣ್ಣೆಯ ಶ್ರೀಶೈಲಾ ಶಾಖಾ ಮಠದ ಶ್ರೀ ಶಿವಾನಂದ ಶಿವಾಚಾರ್ಯ ಸ್ವಾಮಿಗಳ ನೇತೃತ್ವದಲ್ಲಿ ಉಪವಾಸ ಸತ್ಯಾಗ್ರಹ ಪ್ರಾರಂಭವಾಗಿದೆ. ಮಗದೊಂದೆಡೆ ಚಿಕ್ಕಮಗಳೂರು ಜಿಲ್ಲಾ ಪಂಚಾಯತ್ ಈ ಯೋಜನೆಯನ್ನು ವಿರೋಧಿಸಿ ಸರ್ವಾನುಮತದಿಂದ ನಿರ್ಣಯ ತೆಗೆದುಕೊಂಡಿದೆ. ಹೀಗೆ, ಇಡೀ ತಾಲ್ಲೂಕಿನ ಜನ ಒಕ್ಕೊರಲಿನಿಂದ ಒಂದಲ್ಲಾ ಒಂದು ರೀತಿಯಲ್ಲಿ ಇದಕ್ಕೆ ವಿರೋಧ ವ್ಯಕ್ತಪಡಿಸುತ್ತಿದ್ದರೂ ಯಡ್ಡಿ ಮಾತ್ರ ಅದ್ಯಾವುದನ್ನೂ ಲೆಕ್ಕಿಸದೇ ಯೋಜನೆಯ ಅನುಷ್ಠಾನಕ್ಕೆ ಮುಂದಾಗಿದ್ದಾರೆ.

■

ಈ ಯೋಜನೆಯಿಂದ ತುಂಗಾ-ಭದ್ರಾ ನದಿಗಳಿಂದ ದೂರವಿರುವ ಚಿತ್ರದುರ್ಗ, ತುಮಕೂರು ಮತ್ತು ಕೋಲಾರ ಜಿಲ್ಲೆಗಳ ಜನರಿಗೆ ಒಂದಿಷ್ಟು ಲಾಭವಾಗಬಹುದೇ ಹೊರತು ಆ ಎರಡೂ ನದಿಗಳ ಸುತ್ತಮುತ್ತವಿರುವ ಜನರಿಗೆ ಯಾವುದೇ ಲಾಭವಿಲ್ಲ. ಉದಾಹರಣೆಗೆ ನೋಡಿ. ಭದ್ರಾ ಜಲಾಶಯದಿಂದ ಸುರಂಗ ಕಾಲುವೆಯವರೆಗಿನ 50 ಕಿ.ಮೀ. ವ್ಯಾಪ್ತಿಯ ತರೀಕೆರೆ ತಾಲ್ಲೂಕಿನ ಪ್ರದೇಶಗಳಿಗೆ ನೀರಾವರಿಗಾಗಲೀ, ಕುಡಿಯುವುದಕ್ಕಾಗಲೀ ಒಂದು ತೊಟ್ಟು ನೀರೂ ಈ ಯೋಜನೆಯಿಂದ ಸಿಗುವುದಿಲ್ಲ.

■

ಯಾವುದೇ ಒಂದು ಹೊಸ ಯೋಜನೆಯ ಪ್ರಸ್ತಾಪವಾದಾಗ ಅದರ ಪರ-ವಿರೋಧ ಚರ್ಚೆಗಳಾಗುವುದು ಸಹಜ. ವಿರೋಧ ವ್ಯಕ್ತಪಡಿಸುವವರ ಕಾಳಜಿಗಳನ್ನು ಬದಿಗಿಟ್ಟು ಅವರಿಗೆ ಅಭಿವೃದ್ಧಿ ವಿರೋಧಿಗಳು ಎಂಬ ಹಣೆಪಟ್ಟಿ ಕಟ್ಟಿ ಮಟ್ಟ ಹಾಕುವುದು ಸರ್ಕಾರಗಳ ಜಾಯಮಾನ. ಅದು ಭದ್ರಾ ಮೇಲ್ದಂಡೆ ಯೋಜನೆಯ ವಿಚಾರದಲ್ಲೂ ಸತ್ಯವಾಗಿದೆ. ಇತ್ತೀಚಿನ ದಿನಗಳಲ್ಲಂತೂ ಸರ್ಕಾರಗಳಿಗೆ ದೇಶದ ಅಭಿವೃದ್ಧಿಗೆ ಎಂಥ ಯೋಜನೆಗಳು ಬೇಕು ಎಂಬುದು ಮುಖ್ಯವಲ್ಲ, ಯೋಜನೆಗಳನ್ನು ಅನುಷ್ಠಾನಗೊಳಿಸುವ ಕಂಪನಿಗಳ ಉದ್ಧಾರ ಮಾಡುವುದೇ ಅದರ ಉದ್ದೇಶ. ಹೀಗಾಗಿ, ಸ್ವದೇಶಿ-ವಿದೇಶಿ ಕಂಪನಿಗಳ ಅನುಕೂಲಕ್ಕೆ ತಕ್ಕಂತೆಯೇ ಯೋಜನೆಗಳು ರೂಪಿತಗೊಳ್ಳುತ್ತವೆ. ಅಂಥ ಯೋಜನೆಗಳು ಎಷ್ಟೇ ಅವೈಜ್ಞಾನಿಕವಾಗಿದ್ದರೂ, ಅವುಗಳಿಂದ ಪ್ರಕೃತಿಗೆ ಎಷ್ಟೇ ಹಾನಿಯಾಗುವಂತಿದ್ದರೂ, ಅವು ಜನರ ಬದುಕನ್ನು ಕಿತ್ತುಕೊಳ್ಳುವಂತಿದ್ದರೂ ಸರ್ಕಾರಗಳು ಮಾತ್ರ ಅಂಥ ಯೋಜನೆಗಳನ್ನು ಹಿಂದುಮುಂದು ನೋಡದೆ ಅನುಷ್ಠಾನ ಮಾಡಿಬಿಡುತ್ತವೆ. ಸಹಜವಾಗಿ ಇದು ಜನರ ಪ್ರತಿರೋಧಕ್ಕೆ ಕಾರಣವಾಗುತ್ತದೆ. ಪ್ರತಿರೋಧ ಪ್ರಬಲವಾಗಿದ್ದರೆ ಸರ್ಕಾರಗಳು ಹಿಂದೆ ಸರಿಯುತ್ತವೆ. ಇಲ್ಲದಿದ್ದರೆ ಜಾರಿಗೊಳಿಸಿಬಿಡುತ್ತವೆ.



ಈಗ ಅಂತಹ ಅವೈಜ್ಞಾನಿಕ, ಜನವಿರೋಧಿ, ಪ್ರಕೃತಿ ವಿರೋಧಿ ಯೋಜನೆಗಳ ಪಟ್ಟಿಗೆ ಇತ್ತೀಚಿನ ಸೇರ್ಪಡೆ ಎಂದರೆ ಭದ್ರಾ ಮೇಲ್ದಂಡೆ ಯೋಜನೆ. ಇದೊಂದು ಬೃಹತ್ ನೀರಾವರಿ ಯೋಜನೆ. ಈ ಯೋಜನೆಯ ವಿವರಗಳನ್ನು ನೋಡಿದರೇನೇ ಇದೆಷ್ಟು ಅಸಂಬದ್ಧ ಯೋಜನೆಯೆಂಬುದು ಅರ್ಥವಾಗಿ ಹೋಗುತ್ತದೆ. ಯೋಜನೆಯ ಸಾರಾಂಶವೇನೆಂದರೆ, ಮಳೆಗಾಲದಲ್ಲಿ ಶಿವಮೊಗ್ಗದ ಬಳಿಯ ಗಾಜನೂರಿನಲ್ಲಿರುವ ತುಂಗಾ ಜಲಾಶಯದಿಂದ ವಿದ್ಯುತ್ ಪಂಪುಗಳ ಮೂಲಕ 15 ಟಿ.ಎಂ.ಸಿ. ನೀರನ್ನು 250 ಅಡಿ ಎತ್ತರಕ್ಕೆ ಎತ್ತಿ ಅದನ್ನು ಉದ್ದವಾದ ಕಾಲುವೆಯ ಮೂಲಕ ಲಕ್ಕವಳ್ಳಿ ಹತ್ತಿರವಿರುವ ಭದ್ರಾ ಜಲಾಶಯಕ್ಕೆ ಹರಿಸಲಾಗುತ್ತದೆಯಂತೆ. ನಂತರ ಭದ್ರಾ ಜಲಾಶಯದಿಂದ 21.5 ಟಿ.ಎಂ.ಸಿ. ನೀರನ್ನು ಆಳವಾದ ಕಾಲುವೆಯ ಮೂಲಕ ಗ್ರಾವಿಟಿ ಹರಿಯುವಿಕೆಯಿಂದ 40 ಕಿ.ಮೀ. ದೂರದ ವರೆಗೆ ಹರಿಸಿ, ತರೀಕೆರೆ ತಾಲ್ಲೂಕಿನ ಇಟ್ಟಿಗೆ ಗ್ರಾಮ, ಸಮತಳ ಗ್ರಾಮ ಮತ್ತು ಬೊಮ್ಮನಹಳ್ಳಿಗಳಲ್ಲಿ ಒಟ್ಟು ಮೂರು ಕಡೆ ತಲಾ 100 ಅಡಿಯಂತೆ ಒಟ್ಟು 300 ಅಡಿ ಎತ್ತರಕ್ಕೆ ಜಾಕ್‌ವೆಲ್ ಅಳವಡಿಸಿ ಇಷ್ಟು ದೊಡ್ಡ ಪ್ರಮಾಣದ ನೀರನ್ನು ಎತ್ತಿ ನಂತರ ಸುಮಾರು 7 ಕಿ.ಮೀ. ಉದ್ದದ ಹಾಗೂ 200 ಅಡಿಯಷ್ಟು ಆಳದ ಸುರಂಗ ಮಾರ್ಗದ ಮೂಲಕ ದೂರದ ಚಿತ್ರದುರ್ಗ, ತುಮಕೂರು ಮತ್ತು ಕೋಲಾರ ಜಿಲ್ಲೆಗಳ ಭಾಗಕ್ಕೆ ನೀರನ್ನು ಹರಿಸುವ ಸರ್ಕಸ್ ಮಾಡಲಾಗುತ್ತದೆ!

ಈ ಯೋಜನೆಯಿಂದ ತುಂಗಾ-ಭದ್ರಾ ನದಿಗಳಿಂದ ದೂರವಿರುವ ಚಿತ್ರದುರ್ಗ, ತುಮಕೂರು ಮತ್ತು ಕೋಲಾರ ಜಿಲ್ಲೆಗಳ ಜನರಿಗೆ ಒಂದಿಷ್ಟು ಲಾಭವಾಗಬಹುದೇ ಹೊರತು ಆ ಎರಡೂ ನದಿಗಳ ಸುತ್ತಮುತ್ತವಿರುವ ಜನರಿಗೆ ಯಾವುದೇ ಲಾಭವಿಲ್ಲ. ಉದಾಹರಣೆಗೆ ನೋಡಿ. ಭದ್ರಾ ಜಲಾಶಯದಿಂದ ಸುರಂಗ ಕಾಲುವೆಯವರೆಗಿನ 50 ಕಿ.ಮೀ. ವ್ಯಾಪ್ತಿಯ ತರೀಕೆರೆ ತಾಲ್ಲೂಕಿನ ಪ್ರದೇಶಗಳಿಗೆ ನೀರಾವರಿಗಾಗಲೀ, ಕುಡಿಯುವುದಕ್ಕಾಗಲೀ ಒಂದು ತೊಟ್ಟು ನೀರೂ ಈ ಯೋಜನೆಯಿಂದ ಸಿಗುವುದಿಲ್ಲ. ಇನ್ನೊಂದೆಡೆಗೆ 200 ಅಡಿಯಷ್ಟು ಆಳವಾದ ಸುರಂಗ ಕಾಲುವೆ ತೋಡಿದರೆ ಇದರ ಸುತ್ತಮುತ್ತಲ ಕನಿಷ್ಠ 15



ಕಿ.ಮೀ. ವ್ಯಾಪ್ತಿಯಲ್ಲಿನ ಸುಮಾರು 25 ಹಳ್ಳಿಗಳ ಅಂತರ್ಜಲವೆಲ್ಲಾ ಈ ಸುರಂಗ ಕಾಲುವೆಗೆ ಬಸಿದು ಫಲವತ್ತಾದ ಆ ರೈತರ ಭೂಮಿಯೆಲ್ಲಾ ಬರಡಾಗಿ ಹೋಗುತ್ತದೆ. ಪ್ರಸ್ತುತವಾಗಿ ಈ ಭೂಮಿಯಲ್ಲಿ ರೈತರ ಅಡಿಕೆ, ತೆಂಗು, ಮಾವು, ಬಾಳೆ ತೋಟಗಳಲ್ಲದೇ ಸಾಂಬಾರ ಮತ್ತು ಭತ್ತದ ಬೆಳೆಗಳನ್ನು ಬೆಳೆಯಲಾಗುತ್ತಿದೆ. ಈ ಯೋಜನೆ ಯಥಾಸ್ಥಿತಿಯಲ್ಲಿ ಜಾರಿಗೆ ಬಂದರೆ ಅವೆಲ್ಲಾ ಒಣಗಿ ಹೋಗುತ್ತವೆಯಲ್ಲದೇ ಈಗಾಗಲೇ ಕುಡಿಯುವ ನೀರಿನ ಬವಣೆ ಅನುಭವಿಸುತ್ತಿರುವ ಅಜ್ಜಂಪುರ ಮತ್ತು ತರೀಕೆರೆ ಸುತ್ತಮುತ್ತಲ ಗ್ರಾಮಗಳಿಗೆ ಭಾರಿ ತೊಂದರೆಯಾಗಲಿದೆ.

ಕೆಲವು ವರ್ಷಗಳ ಹಿಂದೆ ಬಾಗೂರು-ನವಿಲೆ ಗ್ರಾಮಗಳಲ್ಲೂ ಇಂತಹುದೇ ಸುರಂಗ ಮಾರ್ಗ ತೋಡಿದ ಪರಿಣಾಮವಾಗಿ ಸುತ್ತಮುತ್ತಲ ತೋಟಗಳೆಲ್ಲಾ ಒಣಗಿ ಹೋಗಿದ್ದವು. ಇದರ ವಿರುದ್ಧ ಆ ರೈತರು ಅಭೂತಪೂರ್ವವಾಗಿ ಪ್ರತಿಭಟಿಸಿದ್ದರು. ಪೊಲೀಸರು ಈ ರೈತ ಪ್ರತಿಭಟನೆಯನ್ನು ಹತ್ತಿಕ್ಕುವುದಕ್ಕಾಗಿ ಅವರ ಮೇಲೆ ಹೇಳತೀರದ ದೌರ್ಜನ್ಯವೆಸಗಿದ್ದರು. ಅದರಿಂದಲೂ ರಾಜ್ಯ ಸರ್ಕಾರ ಇನ್ನೂ ಪಾಠ ಕಲಿತಂತಿಲ್ಲ.

ಈ ಯೋಜನೆಯಿಂದ ಬಳಲಿರುವ ತರೀಕೆರೆ ತಾಲ್ಲೂಕಿನ 52 ಕೆರೆಗಳಿಗೆ ನೀರು ತುಂಬಿಸುವ ಯೋಜನೆಯೂ ಇದೆಯಾದರೂ ಅದರ ರೂಪುರೇಷೆಯೇ ಸಿದ್ಧಗೊಂಡಿಲ್ಲ. ಒಂದು ವೇಳೆ ಅದು ಜಾರಿಯಾದರೂ ಯೋಜನೆಯಿಂದುಂಟಾಗುವ ಅಪಾರ ಹಾನಿಯನ್ನು ಬೆರಳೆಣಿಕೆಯಷ್ಟು ಕೆರೆಗಳಿಗಳಿಗೆ ನೀರು ತುಂಬುವುದರಿಂದ ಸರಿಪಡಿಸಲು ಸಾಧ್ಯವೂ ಇಲ್ಲ.

ಈ ಯೋಜನೆಯಿಂದ ಪ್ರಧಾನವಾಗಿ ಬಲಿಪಶುವಾಗುತ್ತಿರುವ ತರೀಕೆರೆ ತಾಲ್ಲೂಕಿನ ಜನ ಈಗ ದೊಡ್ಡ ಮಟ್ಟದ ಪ್ರತಿಭಟನೆಗೆ ಸಜ್ಜಾಗಿದ್ದಾರೆ. ಅದಕ್ಕಾಗಿ ಭದ್ರಾ ಮೇಲ್ದಂಡೆ ಯೋಜನೆ ವಿರೋಧಿ ಹೋರಾಟ ಸಮಿತಿಯೊಂದು ರೂಪುಗೊಂಡಿದೆ. ರಾಜಕಾರಣಿಗಳು, ಸ್ವಾಮಿಗಳು, ರೈತರು, ವಿದ್ಯಾರ್ಥಿಗಳು, ಪತ್ರಕರ್ತರು ಮತ್ತು ಸಾಮಾಜಿಕ ಕಾರ್ಯಕರ್ತರು ತಮ್ಮೊಳಗಿನ ಭೇದಗಳನ್ನು ಬದಿಗಿಟ್ಟು ಹೋರಾಟಕ್ಕೆ ಧುಮುಕಿದ್ದಾರೆ. ಯೋಜನೆಯಿಂದಾಗುವ ಅಪಾಯಗಳನ್ನು ಪಟ್ಟಿಮಾಡಿ ಈಗಾಗಲೇ ರಾಜ್ಯಪಾಲರಿಗೆ, ಮುಖ್ಯಮಂತ್ರಿಗಳಿಗೆ ಸಲ್ಲಿಸಲಾಗಿದೆ.

ಜೊತೆಗೆ ಪರ್ಯಾಯ ಸಾಧ್ಯತೆಗಳನ್ನು ಸರ್ಕಾರಕ್ಕೆ ತಿಳಿಸಲಾಗಿದೆ. ಆದರೂ ಯಾವುದೇ ಪ್ರಯೋಜನವಾಗಿಲ್ಲ. ಬದಲಿಗೆ ಯಡ್ಡಿ ಸರ್ಕಾರದ ಅಧಿಕಾರಿಗಳು ತರೀಕೆರೆಗೆ ಭೇಟಿ ಕೊಟ್ಟು 'ಸುರಂಗ ಕಾಲುವೆ ನಿರ್ಮಾಣ ಪ್ರಾರಂಭಿಸೋಣ, ಅಂತರ್ಜಲವೇನಾದರೂ ಬತ್ತಿಹೋಗಲಾರಂಭಿಸಿದರೆ ತಕ್ಷಣ ನಿಲ್ಲಿಸೋಣ' ಎಂದು ಅಸಂಬದ್ಧವಾಗಿ ಮಾತನಾಡಿ ಜನರಿಂದ ಛೀಮಾರಿ ಹಾಕಿಸಿಕೊಂಡು ಹೋಗಿದ್ದಾರೆ. ಮೊನ್ನೆ ತಾನೆ ಇಂಧನ ಸಚಿವ ಕೆ.ಎಸ್.ಈಶ್ವರಪ್ಪ ಕೂಡ ಅಜ್ಜಂಪುರದಲ್ಲಿ ಪ್ರತಿಭಟನೆ ನಡೆಸುತ್ತಿದ್ದ ಜನರ ಬಳಿಗೆ ಹೋಗಿ 'ಯೋಜನೆಯಿಂದ ಏನೂ ತೊಂದರೆಯಾಗುವುದಿಲ್ಲ' ಎಂದು ಕಣ್ಣೊರೆಸಲು ಪ್ರಯತ್ನಿಸಿದರು. ಆದರೆ, ತರೀಕೆರೆ ಸಮೀಪ 65 ರಿಂದ 70 ಅಡಿ ಆಳದಲ್ಲಿ ಹಾದುಹೋಗುವ ಡೀಪ್‌ಕಟ್ ಚಾನೆಲ್ ಅನ್ನೂ ಒಳಗೊಂಡಂತೆ ಯೋಜನೆಯ ವಿವಿಧ ಮುಖಗಳ ಬಗ್ಗೆ ಪ್ರತಿಭಟನಾಕಾರರು ಕೇಳಿದ ಒಂದೇ ಒಂದು ಪ್ರಶ್ನೆಗೂ ಉತ್ತರಿಸಲಾಗದೇ ಉಗಿಸಿಕೊಂಡು ಬಂದಿದ್ದಾರೆ. ಅಲ್ಲಿಂದ ಕಾಲ್ಕಿತ್ತು ಚಿಕ್ಕಮಗಳೂರು ತಲುಪುತ್ತಿದ್ದಂತೆಯೇ "ಭದ್ರಾ ಮೇಲ್ದಂಡೆ ಯೋಜನೆಯನ್ನು ಕೈಬಿಡುವ ಪ್ರಶ್ನೆಯೇ ಇಲ್ಲ" ಎಂದು ಮತ್ತೊಮ್ಮೆ ಘೋಷಣೆ ಮಾಡಿದ್ದಾರೆ; "ಸುರಂಗ ಮಾರ್ಗ ನಿರ್ಮಾಣದಿಂದ ಸುತ್ತಮುತ್ತಲ ಅಂತರ್ಜಲವೇನೂ ಬಸಿದುಹೋಗುವುದಿಲ್ಲ" ಎಂದು ತಮ್ಮ ವಿದ್ವತ್ತನ್ನು ಪ್ರದರ್ಶಿಸಿದ್ದಾರೆ.

"ಚಿತ್ರದುರ್ಗ, ತುಮಕೂರು ಮತ್ತು ಕೋಲಾರ ಜಿಲ್ಲೆಗಳಿಗೆ ಕುಡಿಯುವುದಕ್ಕೆ, ನೀರಾವರಿಗೆ ನೀರು ಕೊಡುವುದಕ್ಕೆ ನಮ್ಮದೇನೂ ಅಭ್ಯಂತರವಿಲ್ಲ. ಆದರೆ, ತುಂಗೆ-ಭದ್ರೆಯ ನೀರಿನಲ್ಲಿ ತರೀಕೆರೆ ಜನರನ್ನು ಮುಳುಗಿಸಿ ಬೇರೆ ಜಿಲ್ಲೆಗಳ ಜನರಿಗೆ ನೀರುಣಿಸುವುದು ಎಂಥಾ ಕಾರ್ಯ?" ಎಂದು ಹೋರಾಟ ಸಮಿತಿಯ ಸಂಚಾಲಕ ದೇವಾನಂದ್ ಹೇಳುತ್ತಾರೆ. ಈ ಮಾತನ್ನು ಯಡ್ಡಿ ಅರ್ಥಮಾಡಿಕೊಂಡರೆ ತರೀಕೆರೆಯ ಜನರಿಗೆ ಅನಾನುಕೂಲವಾಗದಂತೆ ಯೋಜನೆಯನ್ನು ಮಾರ್ಪಡಿಸಬಹುದು. ಆದರೆ, ಯಡ್ಡಿಗೆ ಆ ಸೂಕ್ಷ್ಮತೆಯಿದೆಯಾ ಎಂಬುದೇ ಪ್ರಶ್ನೆ. ■



ಶೋಭಾ ಡೀಲ್ ಟಾಟಾಗೆ ಕಾವೇರಿ ಹರಾಜ್!

ರಾ. ಸೋಮನಾಥ್

'ರಕ್ತ ಕೊಟ್ಟೇವು ಕಾವೇರಿ ಬಿಡೆವು' ಎಂದು ಜೈಲು ಕಂಡವರೆಷ್ಟೋ, ಬೀದಿಗಿಳಿದವರೆಷ್ಟೋ?

ಸರಿ; ಕಾವೇರಿ ನೀರನ್ನು ತಮಿಳುನಾಡಿಗೆ ಬಿಟ್ಟದ್ದಕ್ಕೆ ತಾನೇ ಇಷ್ಟೆಲ್ಲ ಹಾರಾಟ ಚೀರಾಟ? ಅದೇ ಕಾವೇರಿಯನ್ನು ಕರ್ನಾಟಕ ಸರ್ಕಾರ ಟಾಟಾ ಕಂಪನಿಗೋ, ಆಂಧ್ರದ ನಾಗಾರ್ಜುನ ಕಂಪನಿಗೋ ಮಾರಿಕೊಂಡರೆ?

ಕ್ಷಮಿಸಿ 'ಮಾರಿಕೊಂಡರೆ' ಎಂಬ ಪದಕ್ಕಿಂತಲೂ ಬಿಟ್ಟಿಗೆ ಧಾರೆಯೆರೆದರೆ? ಇನ್ನೂ ಕ್ಷಮೆ ಕೋರಿ ಹೇಳಬೇಕೆಂದರೆ ತಾನೇ ಕೋಟಿಗಟ್ಟಲೇ ದುಡ್ಡು ಕೊಟ್ಟು ಕಾವೇರಿಯನ್ನು ಬಿಟ್ಟಿಗೆ ಬಿಟ್ಟು ಕೊಟ್ಟರೆ?

ನಂಬಿದರೆ ನಂಬಿ ಬಿಟ್ಟರೆ ಬಿಡಿ; ಕರ್ನಾಟಕ ಸರ್ಕಾರ ತನ್ನ ಕೈಯಾರೆ ನೂರಾ ತೊಂಬತ್ತಾರು ಕೋಟಿ ರೂಪಾಯಿಗಳಷ್ಟು ಕಾಸು ಕೊಟ್ಟು ಕಾವೇರಿಯನ್ನು ಬಿಟ್ಟಿಗೆ ಬರೆದುಕೊಟ್ಟಿದೆ. ಲಾಲೂ ಪ್ರಸಾದ್ ಯಾದವ್ ಅದ್ಯಾವ ಬಾಯಿಂದ ಕರ್ನಾಟಕದ ಜನರನ್ನು ಭೋತಿಯಾಗಳು (ಮುಠ್ಠಾಳರು) ಎಂದನೋ ಅದನ್ನು ಸಾಬೀತು ಮಾಡಲೇನೋ ಎಂಬಂತಿದೆ ಇದೀ ಕರ್ಮಕಾಂಡ!

ಬಜೆಪಿಯ ಮುಖ್ಯಮಂತ್ರಿ ಯಡಿಯೂರಪ್ಪನಿಗೆ ತಲೆ ಕೆಟ್ಟಿದೆಯೋ ಅಥವಾ ಮೈಸೂರಿನ ಉಸ್ತುವಾರಿ ಮಂತ್ರಿಣಿ ಶೋಭಾ ಕರಂದ್ಲಾಜೆಗೆ ಹುಚ್ಚು ಹಿಡಿದಿದೆಯೋ ಅಥವಾ ಮೈಸೂರಿನ ಜನರ ಬುದ್ಧಿಗೇ ಮಂಕು ಮುಸುಕಿದೆಯೋ ಗೊತ್ತಾಗುತ್ತಿಲ್ಲ.

2008 ರ ನವೆಂಬರ್ 28 ರಂದು KUWS & DB ಅಂದರೆ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಮೈಸೂರು ಮಹಾನಗರ ಪಾಲಿಕೆ ಮತ್ತು ಟಾಟಾ ಮಾಲೀಕತ್ವದ JUSCO ಕಂಪನಿಯ ಮಧ್ಯೆ ನಡೆದ ಒಪ್ಪಂದದ ಪ್ರಕಾರ ಇನ್ನು ಮುಂದೆ ಕಾವೇರಿ ನದಿಯ ನೀರನ್ನು ತನಗಿಷ್ಟ ಬಂದಂತೆ ಮಾರಿಕೊಳ್ಳುವ ಹಕ್ಕು JUSCO ಕಂಪನಿಗೆ ಸೇರುತ್ತದೆ!

ಹೀಗೆ ಕಾವೇರಿ ಮಾತೆಯ ನೀರನ್ನು ಮೈಸೂರಿನ ಜನಕ್ಕೆ ತನಗಿಷ್ಟ ಬಂದ ರೇಟಿಗೆ ಮಾರಿಕೊಳ್ಳಲು ಟಾಟಾ ಒಡೆತನದ ಕಂಪನಿ ಮೈಸೂರಿನ ಜನಕ್ಕಾಗಲಿ, ಕಾವೇರಿಯ ಮಕ್ಕಳಾದ ರೈತರಿಗಾಗಲಿ, ಮೈಸೂರು ಮಹಾನಗರ ಪಾಲಿಕೆಗಾಗಲಿ, ಕರ್ನಾಟಕ ಸರ್ಕಾರಕ್ಕಾಗಲಿ ನಯಾಪೈಸೆಯನ್ನೂ ಕೊಡಬೇಕಿಲ್ಲ!

ಬದಲಾಗಿ ಕರ್ನಾಟಕ ಸರ್ಕಾರವೇ JUSCO ಕಂಪನಿಗೆ ತನ್ನ ಬೊಕ್ಕಸದಿಂದ 176 ಕೋಟಿ ರೂಪಾಯಿಗಳಷ್ಟನ್ನು ಕೊಡುತ್ತದೆ. ಒಟ್ಟು 196 ಕೋಟಿ ರೂಪಾಯಿಗಳ ಈ ಮೋಸದ ಮನೆಹಾಳ ಯೋಜನೆಯ ಪ್ರಕಾರ ಉಳಿಕೆ 20 ಕೋಟಿ ಆಂಧ್ರದ ನಾಗಾರ್ಜುನ ಕಂಪನಿಯ ಪಾಲಾಗುತ್ತದೆ. ಈ ನಾಗಾರ್ಜುನ ಖದೀಮರ ಕೆಲಸವೇನಪ್ಪಾ ಅಂದರೆ ಕೆಆರ್‌ಎಸ್ ಆಣೆಕಟ್ಟೆಯಿಂದ ನೀರನ್ನು ತಂದು ಟಾಟಾ ಕಂಪನಿಗೆ ಕೊಡುವುದು ಮತ್ತು ಹಾಗೇ ಸರ್ಕಾರಿ ಖರ್ಚಿನಲ್ಲಿ ನಾಗಾರ್ಜುನ ಖದೀಮರು ದಯಪಾಲಿಸಿದ(!) ಕಾವೇರಿ ನೀರನ್ನು ಟಾಟಾ ಡಕಾಯಿತರು ಮಾರಿಕೊಳ್ಳುವುದು!

ಬಹುಶಃ ಈ ಭೂಮಿಯ ಮೇಲೆಲ್ಲಾ ನಡೆಯದ, ನಡೆಯಲು ಸಾಧ್ಯವೇ ಇಲ್ಲದ ಕಣ್ಕಟ್ಟು ಕಪಟವೊಂದಕ್ಕೆ ಇಲ್ಲದ ಬಣ್ಣಕಟ್ಟಿ, ಸಲ್ಲದ ಅರ್ಥ ಕೊಟ್ಟು ಇದೀ ಮೈಸೂರಿನ ರೈತಸಂಕುಲಕ್ಕೇ ಮಂಕುಬೂದಿ ಎರಚಲು ಹೊರಟವನು ಮೈಸೂರಿನ ಹಾಲಿ ಜಿಲ್ಲಾಧಿಕಾರಿ ಮತ್ತು ಶೋಭಕ್ಕನ ಸಂಬಳಸ್ತ ಐಎಎಸ್ ಬಂಟ ಮಣಿವಣ್ಣನ್!

ಜೊತೆಗೆ ಮೈಸೂರು ಮಹಾನಗರ ಪಾಲಿಕೆಯ ಕಳ್ಳ ಕಮೀಷನರ್ ರಾಯ್ಸನ್, ಮೈಸೂರಿನ ಮೇಯರ್ ಅಯೂಬ್ ಖಾನ್, ಮೈಸೂರು ಮಹಾನಗರ ಪಾಲಿಕೆಯ ವಿರೋಧಿ ನಾಯಕ ಸಂದೇಶ್ ಸ್ವಾಮಿ, ಕರ್ನಾಟಕ ಸರ್ಕಾರದ ನಗರಾಭಿವೃದ್ಧಿ ಸಚಿವಾಲಯದ ಮನೆಹಾಳ ಪ್ರಿನ್ಸಿಪಲ್ ಸೆಕ್ರಟರಿ ಜ್ಯೋತಿ ರಾಮಲಿಂಗಮ್, ನಗರಾಭಿವೃದ್ಧಿ ಸಚಿವಾಲಯದ ಕಾರ್ಯದರ್ಶಿ ಮತ್ತು ಮಹಾನ್ ಭ್ರಷ್ಟ ಐಎಎಸ್ ಜಾವಿದ್ ಅಖ್ತರ್, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಗೆ ನಿನ್ನೆಮೊನ್ನೆಯ ತನಕ ಎಂ.ಡಿ.ಯಾಗಿದ್ದ ಡಕಾಯಿತ ಐಎಎಸ್ ಗೋಪಾಲ ಕೃಷ್ಣ ಗೌಡ– ಇತ್ಯಾದಿ ಗಂಟುಕಳ್ಳರೆಲ್ಲರೂ ಇಂಥದೊಂದು ಪಾಪದಲ್ಲಿ ಪಾಲುದಾರರು.



ಬಿಜೆಪಿಯ ಮುಖ್ಯಮಂತ್ರಿ ಯಡಿಯೂರಪ್ಪನಿಗೆ ತಲೆ ಕೆಟ್ಟಿದೆಯೋ ಅಥವಾ ಮೈಸೂರಿನ ಉಸ್ತುವಾರಿ ಮಂತ್ರಿಣಿ ಶೋಭಾ ಕರಂದ್ಲಾಜೆಗೆ ಹುಚ್ಚು ಹಿಡಿದಿದೆಯೋ ಅಥವಾ ಮೈಸೂರಿನ ಜನರ ಬುದ್ಧಿಗೇ ಮಂಕು ಮುಸುಕಿದೆಯೋ ಗೊತ್ತಾಗುತ್ತಿಲ್ಲ. 2008 ರ ನವೆಂಬರ್ 28 ರಂದು KUWS & DB ಅಂದರೆ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಮೈಸೂರು ಮಹಾನಗರ ಪಾಲಿಕೆ ಮತ್ತು ಟಾಟಾ ಮಾಲೀಕತ್ವದ JUSCO ಕಂಪನಿಯ ಮಧ್ಯೆ ನಡೆದ ಒಪ್ಪಂದದ ಪ್ರಕಾರ ಇನ್ನು ಮುಂದೆ ಕಾವೇರಿ ನದಿಯ ನೀರನ್ನು ತನಗಿಷ್ಟ ಬಂದಂತೆ ಮಾರಿಕೊಳ್ಳುವ ಹಕ್ಕು JUSCO ಕಂಪನಿಗೆ ಸೇರುತ್ತದೆ!

ಮೈಸೂರಿನ ಜನಕ್ಕೆ ಆ ಕಾಲದಿಂದಲೂ ಕಾವೇರಿಯ ನೀರನ್ನು ಸರಬರಾಜು ಮಾಡುತ್ತಲೇ ಬಂದದ್ದು ಅಲ್ಲಿನ ಸಿಟಿ ಕಾರ್ಪೊರೇಷನ್ನು. ಅದಕ್ಕೆಂದೇ ವಾಣಿ ವಿಲಾಸ್ ವಾಟರ್ ವರ್ಕ್ಸ್ ಎಂಬ ಪ್ರತ್ಯೇಕ ಇಲಾಖೆಯಿದೆ. ಡಜನ್ನುಗಟ್ಟಲೇ ಇಂಜಿನಿಯರ್‌ಗಳು ನೂರಾರು ಸಿಬ್ಬಂದಿಗಳು ಅಹೋರಾತ್ರಿ ದುಡಿದು ಮೈಸೂರು ಜನಕ್ಕೆ ನೀರುಣಿಸುತ್ತಾರೆ. ಪಕ್ಕದಲ್ಲೇ ಕಾವೇರಿ ನದಿ ಮತ್ತು ಕೆಆರ್‌ಎಸ್ ಆಣೆಕಟ್ಟೆಯಿರುವುದರಿಂದ ನೀರಿಗಾಗಲಿ, ನೀರನ್ನು ತರುವ ಮಳೆಗಾಗಲಿ, ಮಳೆ ಸುರಿಸುವ ಮೋಡಕ್ಕಾಗಲಿ ಅಥವಾ ಆ ತಾಯಿ ಕಾವೇರಿಗಾಗಲಿ ಯಾರೂ ದುಡ್ಡು ಕಟ್ಟಬೇಕಾಗಿಲ್ಲ.



ಕೊಟ್ಟ ನೀರಿಗೆ ಪಾಲಿಕೆಯೇ ಬಿಲ್ಲು ಕೊಡುತ್ತದೆ ಮತ್ತು ಜನ ಪಾಲಿಕೆಗೇ ಹಣ ಕಟ್ಟುತ್ತಾರಾದ್ದರಿಂದ ಇಲ್ಲಿ ಸರ್ಕಾರಕ್ಕಾಗಲಿ, ಮೈಸೂರು ಪಾಲಿಕೆಗಾಗಲಿ ನಷ್ಟದ ಮಾತೇ ಇಲ್ಲ. ಈತನಕ ನೀರಿನ ಬರವೆಂಬುದು ಮೈಸೂರಿನ ಮಟ್ಟಿಗೆ ಇಲ್ಲವೇ ಇಲ್ಲ.

ಕುಚೋದ್ಯವೆನ್ನಿ ಕುತಂತ್ರವೆನ್ನಿ. ಈ ಹಿಂದೆ ಹುಬ್ಬಳ್ಳಿ-ಧಾರವಾಡದ ಪಾಲಿಕೆ ಕಮಿಷನರ್ ಆಗಿದ್ದ ಮಣಿವಣ್ಣನ್ ಅದ್ಯಾವ ಗಳಿಗೆಯಲ್ಲಿ ಮೈಸೂರಿಗೆ ಕಾಲಿಟ್ಟನೋ, ಆವತ್ತಿನಿಂದ ವಿಚಿತ್ರ ಷಡ್ಯಂತ್ರವೊಂದನ್ನು ಹೊಸೆಯಲಾರಂಭಿಸಿದ. ಮೈಸೂರು ನಗರಕ್ಕೆ ಕುಡಿಯುವ ನೀರಿನ ಸರಬರಾಜು ಸಮರ್ಪಕವಾಗಿಲ್ಲವೆಂದೂ, ಅದನ್ನು ಸರಿಪಡಿಸುವುದು ಹೇಗೆಂದೂ ನಿರ್ಧರಿಸಲೆಂದೇ ಸುತ್ತೂರು ಸ್ವಾಮಿಗಳ ಒಡೆತನದ ಜೆಎಸ್‌ಎಸ್ ಕನ್ಸಲ್ಟೆಂಟ್ಸ್ ಎಂಬ ಏಜೆನ್ಸಿಯೊಂದಕ್ಕೆ ಲಕ್ಷಗಟ್ಟಲೇ ದುಡ್ಡು ಕೊಟ್ಟ.

ಪಾಪ, ಜೆಎಸ್‌ಎಸ್ ಮುಗ್ಧರಿಗೆಲ್ಲಿ ಮಣಿವಣ್ಣನ ಹುನ್ನಾರ ಗೊತ್ತಾಗಲು ಸಾಧ್ಯ? ಇಂಥಲ್ಲಿ ನ್ಯೂನತೆಯಿದೆ ಹೀಗೇ ನೀರು ಕೊಡಬೇಕು, ಏನೆಲ್ಲಾ ಮಾರ್ಪಾಡಾಗಬೇಕು ಎಂದೆಲ್ಲಾ ಜೆಎಸ್‌ಎಸ್ ಪಂಡಿತರು ವರದಿ ಬರೆದುಕೊಟ್ಟರು. ಅಲ್ಲಿಗೆ ಮಣಿವಣ್ಣನ್ ಮತ್ತು ಐಎಎಸ್ ದೂರ್ತ ಜಾವಿದ್ ಅಖ್ತರನ ಒಂದು ಹುನ್ನಾರ ಫಲಿಸಿತ್ತು.

ಇಲ್ಲದ ಅವ್ಯವಸ್ಥೆ ಮತ್ತು ನ್ಯೂನತೆಯನ್ನು ಆರೋಪಿಸಿದ ಕಳ್ಳರ ಗ್ಯಾಂಗಿನ ಮುಂದಿನ ಕ್ರಮವೇ; ಈ ಬಗ್ಗೆ ಯಾವ ಕಂಪನಿಗೆ ಗುತ್ತಿಗೆ ಕೊಡಬೇಕು? ಇದೀ ಮೈಸೂರಿನ ನೀರು ಸರಬರಾಜು ವ್ಯವಸ್ಥೆಯನ್ನು ಹೇಗೆ ಖಾಸಗೀಕರಿಸಬೇಕು? ಎಂಬುದಾಗಿತ್ತು. ಈ ಬಗ್ಗೆ ಅಭ್ಯಾಸ ಮಾಡಿ ಎರಡನೇ ವರದಿ ಕೊಡುವುದಕ್ಕೆಂದೇ ಆಂಧ್ರದ ಜಳಕಂ ಕನ್ಸಲ್ಟೆಂಟ್ಸ್ ಎಂಬ ಮತ್ತೊಂದು ಕಂಪನಿಗೆ ಇಪ್ಪತ್ನಾಲ್ಕು ಲಕ್ಷದ ಕಾಂಟ್ರಾಕ್ಟ್ ಕೊಟ್ಟರು ಮಣಿವಣ್ಣನ್. ಕೊಟ್ಟ ಹಡಬಿಟ್ಟಿ ದುಡ್ಡಿಗೆ ಬೇಕಾಬಿಟ್ಟಿ ವರದಿ ಕೊಡಲು ಜಳಕಂ ಕನ್ಸಲ್ಟೆಂಟ್ಸ್ ಖದೀಮ ಆನಂದ್ ಜಳಕಂಗೆ ತಾನೇ ಏನು ಕಷ್ಟ?

ಮೈಸೂರಿಗೆ ಕುಡಿಯುವ ನೀರು ಸರಬರಾಜು ಮಾಡುವ ಇದೀ ಪ್ರಕ್ರಿಯೆಯನ್ನೇ ಖಾಸಗೀಕರಣಗೊಳಿಸುವ ವಿಧಿವಿಧಾನಗಳನ್ನೆಲ್ಲ ನಿಯತ್ತಾಗಿಯೇ ರೂಪಿಸಿಕೊಟ್ಟ ಆನಂದ ಜಳಕಂನ ವರದಿಯನ್ನು ಮುಂದಿಟ್ಟುಕೊಂಡೇ ಮಣಿವಣ್ಣನ್ ಅದಕ್ಕೆಂದು ರಾಜ್ಯದ ಯಾವ್ಯಾವ ಕಾಯ್ದೆ ಕಾನೂನುಗಳಿಗೆ ತಿದ್ದುಪಡಿ ತರಬೇಕೆಂಬುದನ್ನು ನಿರ್ಧರಿಸುವುದಕ್ಕೆಂದೇ ಮತ್ತೊಂದು ಕನ್ಸಲ್ಟೆನ್ಸಿಯನ್ನು ಗೊತ್ತು ಮಾಡಿದ. ಅದು STUP ಕನ್ಸಲ್ಟೆಂಟ್ಸ್. ಇದು ಮುಂಬೈ ಮೂಲದ ಮತ್ತೊಂದು ವಂಚಕ ಏಜೆನ್ಸಿ. ಮೈಸೂರಿನ ನೀರು ಸರಬರಾಜು ವ್ಯವಸ್ಥೆಯನ್ನು ಖಾಸಗೀಕರಿಸಲೆಂದೇ ನಾಡಿನ ಯಾವ್ಯಾವ ಕಾಯ್ದೆ ಕಾನೂನುಗಳಿಗೆ ತಿದ್ದುಪಡಿ ತರಬೇಕೆಂಬುದನ್ನು ನಿರ್ಧರಿಸಲು STUP ಕನ್ಸಲ್ಟೆನ್ಸಿಯವರೇನು ಜನ ಆಯ್ಕೆ ಮಾಡಿದ ಪ್ರಜಾಪ್ರತಿನಿಧಿಗಳೇ ಅಥವಾ ಅಧಿಕಾರಾರೂಢ ಪಕ್ಷವೆ?

ಹೀಗೆ ಜನರ ಕಣ್ಣಿಗೆ ಮಂಕುಬೂದಿ ಎರಚಲು ಏನೇನು ಬೇಕೋ ಎಲ್ಲವನ್ನೂ ಪೂರೈಸಿಕೊಂಡ ಜಿಲ್ಲಾಧಿಕಾರಿ ಮಣಿವಣ್ಣನ್ ಹೇಳಿಕೇಳಿ ಕಾರ್ಪೊರೇಟ್ ಕಂಪನಿಗಳ ಪಾಲಿನ ಪರಮನಿಷ್ಠ ಹಿಟ್‌ಮನ್. ಅಂತಿಮವಾಗಿ ಮೈಸೂರಿನ ನೀರು ಸರಬರಾಜು ಗುತ್ತಿಗೆ ಹಿಡಿದದ್ದು ಟಾಟಾ ಒಡೆತನದ ಜಮ್ಷೆಡ್‌ಪುರ್ ಯುಟಿಲಿಟೀಸ್ ಅಂಡ್ ಸರ್ವೀಸಸ್ ಲಿಮಿಟೆಡ್ (JUSCO) ಎಂಬ ದೆಹಲಿ ಮೂಲದ ಕಂಪನಿ.

ಹಕೀಕತ್ತೇನೆಂದರೆ ಈ ಕಂಪನಿಗೆ ಅನುಕೂಲವಾಗುವಂತೆ ಆನಂದ ಜಳಕಂನ ಮೂಲಕ ಟೆಂಡರ್ ನಿಯಮಾವಳಿಯನ್ನು ಮಣಿವಣ್ಣನ್ ರೂಪಿಸಿದ್ದ. ಪ್ರಾರಂಭದಲ್ಲಿ ಜಿಲ್ಲಾಧಿಕಾರಿ ಹುದ್ದೆಯಷ್ಟೇ ಅಲ್ಲದೇ ಮೈಸೂರು ಮಹಾನಗರ ಪಾಲಿಕೆಯ ಕಮಿಷನರ್‌ಗಿರಿ ಮತ್ತು ಮೂಡಾ ಕಮಿಷನರ್‌ಗಿರಿಗಳೆಲ್ಲವನ್ನೂ ಒಟ್ಟೊಟ್ಟಿಗೆ ನಿಭಾಯಿಸುತ್ತಿದ್ದ ಮಣಿವಣ್ಣನ್ ಮೈಸೂರು ಜಿಲ್ಲಾ ಉಸ್ತುವಾರಿ ಮಂತ್ರಿಣಿ ಶೋಭಾ ಕರಂದ್ಲಾಜೆಗೆ ಪರಮನಿಷ್ಠ ಬಂಟನಂತಿದ್ದ. ಶೋಭಕ್ಕನಿಗೆ ಅದೇನು ತಲೆತಿಕ್ಕಿದನೋ ಗೊತ್ತಿಲ್ಲ. ತಾವೇ ದುಡ್ಡು ಕೊಟ್ಟು ಇದೀ ಮೈಸೂರಿನ ಕುಡಿಯುವ ನೀರಿನ ವ್ಯವಸ್ಥೆಯನ್ನು ಕಂಪನಿಗೊಪ್ಪಿಸುತ್ತಾರೆಂದರೆ, ಈ ಬಗ್ಗೆ ಜಿಲ್ಲಾ ಉಸ್ತುವಾರಿ ಮಂತ್ರಿಣಿ ಶೋಭಾ ಕಾಟಾಚಾರಕ್ಕೂ ತಲೆಕೆಡಿಸಿಕೊಂಡಿಲ್ಲವೆಂದರೆ ದೊಡ್ಡ ಮಟ್ಟದ ಡೀಲು ಮತ್ತು ಆ ಮೂಲಕ ಪಾಲು ಸಂದಾಯವಾಗಿರಲೇಬೇಕು! ▶▶▶

ಐಎಎಸ್ ಅಧಿಕಾರಿಗಳ ಹುನ್ನಾರ

ಇದೀ ಕರ್ನಾಟಕದ ಕುಡಿಯುವ ನೀರು ವ್ಯವಸ್ಥೆಯನ್ನೇ ಖಾಸಗೀಕರಣಗೊಳಿಸುವ ಹುನ್ನಾರವೊಂದನ್ನು ಹುಟ್ಟುಹಾಕಿದ್ದು ಕೇಂದ್ರದ ಐಎಎಸ್ ಅಧಿಕಾರಿ ಕೆ.ಪಿ. ಕೃಷ್ಣನ್. ಎಸ್.ಎಂ. ಕೃಷ್ಣ ಮುಖ್ಯಮಂತ್ರಿಯಾಗಿದ್ದಾಗ ಇದೀ ಕರ್ನಾಟಕವನ್ನೇ ನಾಲ್ಕು ಭಾಗಗಳನ್ನಾಗಿ ವಿಂಗಡಿಸಿ ಒಂದೊಂದು ಕಂಪನಿಗೆ ಒಂದೊಂದು ಭಾಗವನ್ನು ಒಪ್ಪಿಸುವ ಪ್ರಸ್ತಾವನೆಯೊಂದನ್ನು ಈತ ಮುಂದಿಟ್ಟಿದ್ದ. ಈತನ ಜೊತೆ ನೀರಜ ರಾಜ್‌ಕುಮಾರ್, ಜ್ಯೋತಿ ರಾಮಲಿಂಗಮ್, ನಿಲಯ್ ಮಿತಾಶ್, ಜಾವಿದ್ ಅಖ್ತರ್ ಮತ್ತು ಚಂದ್ರಮೋಹನ್‌ರಂಥ ಕರ್ನಾಟಕ ಕೇಡರಿನ ಐಎಎಸ್ ಅಧಿಕಾರಿಗಳ ಹಿಂಡೇ ಕೈಜೋಡಿಸಿದೆ.

ಖಾಸಗಿ ಕಂಪನಿಗಳ ಪಾಲಿಗೆ ಲಾಭ ಮಾಡಿಕೊಳ್ಳಲು ಈಗ ಉಳಿದಿರುವುದು ಸಾರ್ವಜನಿಕ ಸೇವಾವಲಯ ಮತ್ತು ಸರ್ಕಾರಿ ಯಂತ್ರಾಂಗ ಮಾತ್ರ. ಈ ಪೈಕಿ ವಿದ್ಯುತ್ ಸರಬರಾಜು ಮತ್ತು ಕುಡಿಯುವ ನೀರಿನ ವ್ಯವಸ್ಥೆಯನ್ನು ಖಾಸಗೀಕರಣಗೊಳಿಸಿಬಿಟ್ಟರೆ ಕೇಬಲ್ ಟೀವಿಯವರಂತೆ ಪ್ರತಿ ತಿಂಗಳೂ ದುಡ್ಡೆಣಿಸಿಕೊಳ್ಳುವುದು ಕಂಪನಿಗಳ ಪಾಲಿಗೆ ಸಲೀಸಾಗುತ್ತದೆ.

ಈ ನಿಟ್ಟಿನಲ್ಲಿ ಜವಾಹರ್‌ಲಾಲ್ ನೆಹರೂ 'ನರ್ಮ್' ಅಂದರೆ National Urban Renewal Mission ಅನ್ನೇ ಆಯುಧ್ಧವನ್ನಾಗಿ ಈ ಐಎಎಸ್ ಖದೀಮರ ಕೂಟ ಬಳಸುತ್ತಿದೆ. JN'NURM' ಯೋಜನೆಯ 12 ಸಹಸ್ರ ಕೋಟಿ ರೂಪಾಯಿಗಳಷ್ಟು ಹಣ ಈಗಾಗಲೇ ರಾಜ್ಯಕ್ಕೆ ಮಂಜೂರಾಗಿದೆ. ಆದರೆ ಈ ದುಡ್ಡು ನೇರವಾಗಿ ಸರ್ಕಾರಕ್ಕೆ ಬಾರದೇ KUIDFC ಎಂಬ ಐಎಎಸ್ ಅಧಿಕಾರಿಗಳೇ ಹುಟ್ಟುಹಾಕಿರುವ ಕಂಪನಿಯೊಂದರ ಮೂಲಕ ಹರಿದು

...08 ರ ನವೆಂಬರ್ 28 ರಂದು JUSCO ಕಂಪನಿ ಮತ್ತು ...ನ ಪಾಲಿಕೆ ಕಮಿಷನರ್ ಮಧ್ಯೆ ನಡೆದ ಒಪ್ಪಂದದ ಪ್ರಕಾರ ಮೈಸೂರು ನಗರಕ್ಕೆ ಕುಡಿಯುವ ನೀರೊದಗಿಸುವ ಜವಾಬ್ದಾರಿ ...ಮುಂದೆ JUSCO ಕಂಪನಿಗೆ ಸೇರುತ್ತದೆ. ಈ ಗುತ್ತಿಗೆಗೆ JUSCO ನಯಾ ಪೈಸೆಯನ್ನೂ ಕೊಡಬೇಕಿಲ್ಲ; ಬದಲಾಗಿ ರಾಜ್ಯ ಸರ್ಕಾರವೇ 176 ಕೋಟಿ ರೂಪಾಯಿಗಳಷ್ಟನ್ನು ಕೊಡುತ್ತವೆ!

...ಗುತ ಕೆಆರ್‌ಎಸ್ ಆಣೆಕಟ್ಟೆಯಿಂದ ನೀರನ್ನು ತಂದು ಮೈಸೂರಿಗೆ ...ವ ರಿಸ್ಕ್, JUSCO ಕಂಪನಿಗೆ ಬೇಕಿಲ್ಲ. ಸರ್ಕಾರವೇ ಕೆಆರ್‌ಎಸ್‌ನಿಂದ ತಂದು ಮೈಸೂರಿನಲ್ಲಿ JUSCO ಕಂಪನಿಗೆ ಕೊಟ್ಟರೆ, JUSCO ... ಮೊದಲೇ ಪಾಲಿಕೆಯವರು ಹಾಕಿಕೊಟ್ಟ ಪೈಪು ಮತ್ತು ನಲ್ಲಿಗಳ ...ಕ ಮನೆಮನೆಗೆ ಸರಬರಾಜು ಮಾಡುತ್ತದೆ. ಎಷ್ಟು ನೀರನ್ನು ...ತ್ತಾರೆ, ಎಷ್ಟು ಮೀಟರ್ ಓಡಿದೆ, ಎಷ್ಟು ದುಡ್ಡು ಕಟ್ಟಿಸಿಕೊಳ್ಳಬೇಕು ...ವನ್ನು ಕೂಡ JUSCO ಕಂಪನಿ ತಲೆಕೆಡಿಸಿಕೊಳ್ಳಬೇಕಿಲ್ಲ, ಏಕೆಂದರೆ ...ಗಲೇ ಸರ್ಕಾರವೇ ಅಳವಡಿಸಿದ ಮೀಟರ್ ಇದೆ. ಇಲ್ಲಿ ದುಡ್ಡು ...ಕೊಂಡು ಅದನ್ನು ಎಣಿಸಿಕೊಂಡು ಸರ್ಕಾರಕ್ಕೆ ಕಟ್ಟಿ, ಅದರಲ್ಲಿ ತನ್ನ ...ದ ಶೇ. 60 ರಷ್ಟನ್ನು ಜೇಬಿಗಿಳಿಸುವುದಷ್ಟೇ JUSCO ಕಂಪನಿಯ...

...ನ್ನೂ ತಮಾಷೆಯೆಂದರೆ ...ಎಸ್ ಆಣೆಕಟ್ಟೆಯಿಂದ ...ರಿನತನಕ ನೀರನ್ನು ತಂದು ... ಫಿಲ್ಟರ್ ಮಾಡಿಕೊಡು... ಆಂಧ್ರದ ನಾಗಾರ್ಜುನ ...!

...ದಕ್ಕೆಂದು ಮತ್ತೆ 20 ...ಟಿ ರೂಪಾಯಿಗಳ ಪ್ರತ್ಯೇಕ ...ಕ್ಕು. ಒಟ್ಟು 196 ಕೋಟಿ ...ಯಿಗಳಲ್ಲಿ ಮನೆಮನೆಗೆ ...ರಾಜು ಮಾಡಿದ ನೀರಿಗೆ ... ರೊಕ್ಕ ಎಣಿಸಿಕೊಳ್ಳಲು ...ಕೋಟಿ ಮತ್ತು ಈಗಾಗಲೇ ...ರ ಕೆಆರ್‌ಎಸ್‌ನಿಂದ ನೀರು ... ಮಾಡಿದ ವ್ಯವಸ್ಥೆಯನ್ನು ...ಯುಸಲು ಮತ್ತೆ 20 ಕೋಟಿ! ಯಾರಿಗುಂಟು ಯಾರಿಗಿಲ್ಲ?


ಕೆಆರ್‌ಎಸ್ ಡ್ಯಾಂ

ಇಲ್ಲಿ JUSCO ಕಂಪನಿಯಾಗಲಿ ಆಂಧ್ರದ ನಾಗಾರ್ಜುನ ...ಯಾಗಲಿ ಹಾಕುವ ಬಂಡವಾಳ, ಪಡುವ ಪಾಡು, ಬಳಸುವ ...ವಾದರೂ ಏನಪ್ಪಾ ಎಂದು ಲೆಕ್ಕ ಹಾಕಿದರೆ ಇಡೀ ಹಗರಣದ ...ಸ ಬಯಲಾಗುತ್ತದೆ. ಕೆಆರ್‌ಎಸ್‌ನಿಂದ ಇಡೀ ಮೈಸೂರಿಗೆ ನೀರು ...ವ ವ್ಯವಸ್ಥೆಯನ್ನು ಮೈಸೂರು ಮಹಾರಾಜರ ಕಾಲದಿಂದಲೇ ಮಾಡಿ ...ಸಿದ್ದಾಗಿದೆ. ಅದಕ್ಕೆಂದೇ ಸರ್ಕಾರ ಇಂಜಿನಿಯರ್‌ಗಳು ಸಿಬ್ಬಂದಿಗೆ ...ಟ್ಟಲೆ ಸಂಬಳ ಕೊಡುತ್ತದೆ. ಸರ್ಕಾರವೇ ಕಟ್ಟಿಸಿಟ್ಟ ಜಲಾಶಯಗಳು ... ಓವರ್‌ಹೆಡ್ ಟ್ಯಾಂಕುಗಳಿವೆ. ಇಂಥ ಟ್ಯಾಂಕುಗಳಿಗೆ ಕೆಆರ್‌ಎಸ್‌ನಿಂದ ... ಹರಿಸಲು ಯಾವತ್ತೋ ವ್ಯವಸ್ಥೆಯಾಗಿದೆ. ಹಾಗಿದ್ದ ಮೇಲೆ ಇಲ್ಲಿ ...ರ್ಜುನ ಕಂಪನಿಗಾಗಲಿ ಮತ್ತೊಂದು ಕಂಪನಿಗಾಗಲಿ ಏನು ಕೆಲಸ?

...ವಾಸ್ತವವಾಗಿ ಹೊಸ ಕಾಂಟ್ರಾಕ್ಟ್ ಹೆಸರಿನಲ್ಲಿ 20 ಕೋಟಿಯ ರೊಕ್ಕ ...ಚುವುದನ್ನು ಬಿಟ್ಟರೆ ಇಲ್ಲಿ ಬೇರೇನೂ ಕೆಲಸವಿಲ್ಲ. ನಾಗಾರ್ಜುನ ...ನಿ ಇಲ್ಲಿ ಹೊಸ ಪೈಪ್ ಹಾಕಬೇಕಿಲ್ಲ, ಮಳೆ ಸುರಿಸುವುದಕ್ಕಾಗಲಿ, ...ಕಟ್ಟೆ ತುಂಬಿಸುವುದಕ್ಕಾಗಲಿ ಅಥವಾ ಬಳಸಿದ ನೀರಿಗಾಗಲಿ ಅದು ...ವಿಗೂ ದುಡ್ಡು ಕೊಡಬೇಕಿಲ್ಲ. ಇದರರ್ಥ ಸರ್ಕಾರ ತಾನೇ ...ತ್ತಿಗಟ್ಟಲೇ ದುಡ್ಡು ಕೊಟ್ಟು ಕಪಟ ಕಾಂಟ್ರಾಕ್ಟ್ ಸೃಷ್ಟಿಸಿ ಹಗಲು ...ದರೋಡೆಯೊಂದಕ್ಕೆ ಅವಕಾಶ ಮಾಡಿಕೊಟ್ಟಿದೆ. ಹೋಗಲಿ ನೀರು ...ರಬರಾಜು ವ್ಯವಸ್ಥೆ ನೋಡಿಕೊಳ್ಳುವ ಸಿಬ್ಬಂದಿಗಾದರೂ ನಾಗಾರ್ಜುನ ...ನಿ ಸಂಬಳ ಕೊಡುತ್ತದೆಯಾ?

...ಅದೂ ಇಲ್ಲ. ಸರ್ಕಾರವೇ ಸಂಬಳ ಕೊಟ್ಟು ತಾನೇ ಶ್ರಮ ವಹಿಸಿ ...ತುವ ವ್ಯವಸ್ಥೆಗೆ ನಾಮಕಾವಸ್ಥೆಗೊಂದು ಕಂಪನಿಯನ್ನು ...ಸಿ ಕೂರಿಸುತ್ತಿದೆ. ಇದರರ್ಥ 20 ಕೋಟಿ ...ಪಾಯಿಗಳ ಗಂಟು ದೋಚಲು ಇದೊಂದು ...ಷ್ಟೇ. ಆದರೆ ಇದರ ದೂರಗಾಮಿ ಅಪಾಯ

ಎಷ್ಟು ಭಯಂಕರವೆಂದರೆ, ಮುಂದೊಮ್ಮೆ ಇಡೀ ಮೈಸೂರಿಗೆ ಬೇಕಾದ ಕಾವೇರಿ ನೀರಿನ ಪಾಲಿನ ಮೇಲೆ ನಾಗಾರ್ಜುನ ಕಂಪನಿಗೆ ಹಕ್ಕು ಸಿಕ್ಕಿಬಿಡುತ್ತದೆ. ತನಗಿಷ್ಟ ಬಂದ ರೇಟಿಗರು ನೀರನ್ನು ಮಾರಿಕೊಳ್ಳಬಹುದು. ಹಾಗೊಮ್ಮೆ JUSCO ಕಂಪನಿ ಆ ರೇಟು ಕೊಡಲಿಲ್ಲವೆಂದರೆ ನೀರನ್ನೇ ನಿಲ್ಲಿಸಬಹುದು!

ಇನ್ನು ನಾಗಾರ್ಜುನ ಕಂಪನಿ ಕೊಟ್ಟ ನೀರನ್ನು ಮೈಸೂರಿನ ಮನೆಮನೆಗೆ ತಲುಪಿಸುವ JUSCO ಕಂಪನಿಯ ಹಿನ್ನೆಲೆಯಾದರೂ ಏನು?

ಜಮ್ಷೆಡ್‌ಪುರದಲ್ಲಿರುವ ಟಾಟಾ ಸ್ಟೀಲ್ ಕಾರ್ಖಾನೆಯ ಸಿಬ್ಬಂದಿಗಳಿಗೆ ಮನೆ ಕಟ್ಟಿಸಿಕೊಟ್ಟು, ಮನೆಮನೆಗೂ ನೀರು ಸರಬರಾಜು ಮಾಡಿದ ಅನುಭವ ಬಿಟ್ಟರೆ ಈ JUSCO ಮೈಸೂರು ಪಾಲಿಕೆಯ ನೀರು ಸರಬರಾಜು ಘಟಕದ ಪಾದಧೂಳಿಗಿಂತಲೂ ಕೀಳಾದ ಕಂಪನಿ. ಮಹಾರಾಜರ ಕಾಲದಿಂದಲೂ ಮೈಸೂರಿನ ಜನಕ್ಕೆ ಕುಡಿಯುವ ನೀರು ಕೊಡುತ್ತಲೇ ಬಂದ ಮೈಸೂರು ಕಾರ್ಪೊರೇಷನ್‌ಗೆ ಹತ್ತು ಲಕ್ಷ ಜನಕ್ಕೆ ನೀರು ಕೊಟ್ಟ ವರ್ಷಾನುಗಟ್ಟಲೇ ಅನುಭವವಿದೆ. ಆದರೆ ತನ್ನ ಕಾರ್ಖಾನೆಯ ಸಿಬ್ಬಂದಿಗಳ ಕುಟುಂಬದ ಎರಡೂವರೆ ಲಕ್ಷ ಜನಕ್ಕೆ ನೀರು ಕೊಟ್ಟಿದ್ದನ್ನೇ ನೆಪವಾಗಿಟ್ಟುಕೊಂಡು ಟೆಂಡರ್ ಗಿಟ್ಟಿಸಿದ ಟಾಟಾ ಒಡೆತನದ JUSCO ನಿನ್ನೆಮೊನ್ನೆಯಷ್ಟೇ ಕಣ್ಣುಬಿಟ್ಟ ಬಚ್ಚಾ ಕಂಪನಿ. ಇದಕ್ಕೆ 176 ಕೋಟಿ ರೂಪಾಯಿ ಕೊಡುವ ಬದಲು ಮೈಸೂರು ಮಹಾನಗರ ಪಾಲಿಕೆಗೆ ಕೇವಲ 20 ಕೋಟಿ ಕೊಟ್ಟರೆ ಈಗಷ್ಟೇ ತಲೆ ಎತ್ತಿದ ಹೊಸ ಬಡಾವಣೆಗಳಿಗೆ ನೀರು ಕೊಡುವುದು ಯಾವ ಮಹಾಕಷ್ಟ?


ಅಷ್ಟಕ್ಕೂ JUSCO ಕೆಆರ್‌ಎಸ್ ನಿಂದ ನೀರು ತಂದು ಕೊಟ್ಟರೆ ಮಾತ್ರವೇ ಮನೆಗೆ ನೀರು ಕೊಡುತ್ತದೆಯೇ ಹೊರತು ತಾನೇ ನೀರನ್ನು ತರುವುದಿಲ್ಲ, ಈಗಾಗಲೇ ಪಾಲಿಕೆ ಅಳವಡಿಸಿದ ಪೈಪು, ನಲ್ಲಿ ಮೀಟರು ಎಲ್ಲವನ್ನೂ JUSCO ಬಳಸಿಕೊಳ್ಳುತ್ತದೆ. ಇದಕ್ಕೆಂದು ಅದು ಸರ್ಕಾರಕ್ಕೆ ನಯಾಪೈಸೆ ಕಟ್ಟುವುದಿಲ್ಲ, ಬದಲಾಗಿ ಕೆಲ ಹೊಸ ಬಡಾವಣೆಗಳಿಗಷ್ಟೇ ಪೈಪು ಎಳೆಯುತ್ತದೆ. ಅದೂ ಸರ್ಕಾರ ಕೊಟ್ಟ ದುಡ್ಡಿನಲ್ಲಿ, ಹಾಗೇ ಸರ್ಕಾರದ ಬಂಡವಾಳದಲ್ಲಿ ಸರಬರಾಜಾಗುವ ನೀರಿಗೆ ಬಿಲ್ಲು ಕೊಡುವುದು, ಸಂಗ್ರಹಗೊಂಡ ದುಡ್ಡಿನಲ್ಲಿ ತನ್ನ ಪಾಲಾದ ಶೇ. 60 ರಷ್ಟನ್ನು ಜೇಬಿಗಿಳಿಸಿ ಉಳಿಗೆ ಶೇ. 40 ರಷ್ಟನ್ನೇ ಸರ್ಕಾರಕ್ಕೆ ಕಟ್ಟಲು JUSCO ಕಂಪನಿಯೇ ಬೇಕೆ?

ಬೀದಿ ಬಿಕಾರಿಗೆ ಪುಕ್ಕಟೆಯಾಗಿ ಇಂಥದೊಂದು ಕಾಂಟ್ರಾಕ್ಟ್ ಕೊಟ್ಟರೂ ಸಲೀಸಾಗಿ ನಿಭಾಯಿಸುತ್ತಾನೆ. ಹಾಗೇ JUSCO ಸಂಗ್ರಹಿಸಿಕೊಟ್ಟ ಶೇ. 40 ರಷ್ಟು ಬಿಲ್ಲಿನ ಮೊತ್ತದಲ್ಲೇ ಪಾಲಿಕೆ ತನ್ನ ನೀರು ಸರಬರಾಜು ಸಿಬ್ಬಂದಿಗೆ ಸಂಬಳ ಕೊಡಬೇಕು. ಯಾವುದೇ ಬಂಡವಾಳವಿಲ್ಲದೇ ಶ್ರಮವಿಲ್ಲದೇ ಕುಂತ ಜಾಗದಲ್ಲಿ ದುಡ್ಡೆಣಿಸಿಕೊಂಡು ತನಗಿಷ್ಟ ಬಂದಷ್ಟು ತಿಂದು ಉಳಿಕೆಯನ್ನು ಸರ್ಕಾರಕ್ಕೆ ಕಟ್ಟುವ JUSCO ಕಂಪನಿಗೇಕೆ 176 ಕೋಟಿ ಸರ್ಕಾರಿ ದುಡ್ಡು?

ಒಂದೆಡೆ ಕಾಂಟ್ರಾಕ್ಟ್ ಮೊತ್ತವಾದ 176 ಕೋಟಿಯನ್ನೂ ಮುಕ್ಕಿದಂತಾಯ್ತು, ಮತ್ತೊಂದೆಡೆ ಕಾವೇರಿಯ ನೀರನ್ನು ಮಾರಿಕೊಳ್ಳಲು JUSCO ಕಂಪನಿಗೆ ಅವಕಾಶ ಕಲ್ಪಿಸಿದಂತೆಯೂ ಆಯ್ತು. ಇದಕ್ಕೆ ಪ್ರತಿಯಾಗಿ JUSCO ಕೊಡುವ ಕಮೀಷನ್ನಿನ ಪಾಲೆಷ್ಟು? ಎಂಬುದೇ ಉಳಿದಿರುವ ಪ್ರಶ್ನೆ.

ನಾಗಾರ್ಜುನ ಮತ್ತು JUSCO ಕಂಪನಿಗಳೆರಡಕ್ಕೂ ಕೊಟ್ಟ 196 ಕೋಟಿ ರೂಪಾಯಿಗಳ ಪೈಕಿ ಅಷ್ಟನ್ನೂ ಕಮೀಷನ್ನಾಗಿ ಕೊಟ್ಟರೂ ನೀರು ಮಾರಿಕೊಳ್ಳುವ ಟೆಂಡರ್ ಇದ್ದೇ ಇರುತ್ತದೆ. ಉಳಿದಂತೆ ಇದ್ದಷ್ಟೂ ದಿನ ಮಾರಿದ ನೀರಿನ ಪಾಲಿನಲ್ಲಿ ಶೇ. 60 ರಷ್ಟು ಬಿಟ್ಟಿಯಾಗಿ ಸಿಗುತ್ತದೆ.

ಬಿಟ್ಟಿಗೆ ಸಿಕ್ಕ ನದಿಯನ್ನೂ ನೀರನ್ನೂ ಮಾರಿಕೊಳ್ಳಲು ಸರ್ಕಾರವೇ ತಟ್ಟೆಯೊಳಗಿಟ್ಟು 196 ಕೋಟಿ ಕೊಡುತ್ತದೆಯೆಂದರೆ ಕರ್ನಾಟಕಕ್ಕಿಂತ ಮುಠ್ಠಾಳರು ಟಾಟಾ ಕಂಪನಿಗೆಲ್ಲಿ ಸಿಗುತ್ತಾರೆ? ■



...ವಂಥ ವ್ಯವಸ್ಥೆಯೊಂದನ್ನು ಕೆ.ಪಿ ಕೃಷ್ಣನ್ ಪಟಾಲಂ ...ಸಿಟ್ಟಿದೆ. ವಿಶ್ವಬ್ಯಾಂಕ್‌ನಿಂದ ಹರಿದುಬರುವ ...ಂದು ಬೃಹತ್ ಪ್ರಮಾಣದ ನಿಧಿಯನ್ನು ಹೇಗೆ ...ಚಬೇಕು, ಯಾರ್‍ಯಾರಿಗೆ ಎಷ್ಟೆಷ್ಟು ತಿನ್ನಿಸಿ ...ಾಯಿಸಬೇಕೆಂಬುದನ್ನು ಮೊದಲೇ ಈ ಐಎಎಸ್ ಗಂಟುಕಳ್ಳರು ...ಜಿಸಿಬಿಟ್ಟಿದ್ದಾರೆ. ತಮಗೆ ಬೇಕಾದ ಕಂಪನಿಗಳಿಗೇ ಕಾಂಟ್ರಾಕ್ಟ್ ...ಂತೆ ತಮ್ಮದೇ ಆಜ್ಞಾಪಾಲಕ ಕನ್ಸಲ್ಟೆನ್ಸಿಗಳ ಮೂಲಕ ಟೆಂಡರ್ ...ಗಳನ್ನು ರೂಪಿಸುತ್ತಾರೆ. ಇನ್ನು ಕರ್ನಾಟಕದಲ್ಲಿರುವ ಐಎಎಸ್ ...ಕಾರಿಗಳೆಲ್ಲ ಈ ದೆಹಲಿ ಮೂಲದ ಹಿರಿಯ ಐಎಎಸ್‌ಗಳ ನಿಯತ್ತಿನ ...ರೆ.

...ಇಂಥ ಐಎಎಸ್ ಅಧಿಕಾರಿಗಳೆಲ್ಲ ಸೇರಿ ಮೊದಲು ಕೈಯಿಟ್ಟದ್ದು ...ಳೂರಿಗೆ. ಅದಕ್ಕೆಂದೇ Karnataka Muncipal Reforms ...ject (KMRP) ಎಂಬ ಷಡ್ಯಂತ್ರವೊಂದನ್ನು ಹೆಣೆದು ಪೌರಾಡಳಿತ ...ಗೇ ಖಿಡ್ಕಿಪಡಿ ತರಲು ಮುಂದಾದರು. ಇದರ ಫಲವಾಗಿಯೇ ... WASP ಅಂದರೆ Greater Bangalore Water and ...itation Project ಅನ್ನು ಹುಟ್ಟುಹಾಕಿ ಇಡೀ ಬೆಂಗಳೂರಿನ ...ಮುಂದ ನೀರು ವ್ಯವಸ್ಥೆಯನ್ನೇ ಖಾಸಗೀಕರಿಸಲು ಯತ್ನಿಸಿದರು.

ಅದಕ್ಕೆಂದು ಜನರನ್ನು ದಿಕ್ಕುತಪ್ಪಿಸಲು 'ಜನಾಗ್ರಹ' ಎಂಬ ಎನ್‌ಜಿಓ ಕಟ್ಟಿಕೊಂಡಿದ್ದ ರಮೇಶ್ ರಾಮನಾಥನ್ ಎಂಬ ವಿದೇಶಿ ಏಜೆಂಟನೊಬ್ಬನನ್ನು ತಂದರು.

ಯಾವತ್ತು ಬೆಂಗಳೂರು ಜಲಮಂಡಳಿಯ ಸಿಬ್ಬಂದಿ ತಿರುಗಿಬಿದ್ದರೋ ಮತ್ತು ಜನ ಪ್ರತಿಭಟಿಸಲಾರಂಭಿಸಿದರೋ GB WASP ಪ್ರಾಜೆಕ್ಟನ್ನು ಬದಿಗಿಟ್ಟು ತಮಗೆ ಸಹಕರಿಸಲಿಲ್ಲ ಎಂಬ ಒಂದೇ ಕಾರಣಕ್ಕೆ ಜಲಮಂಡಳಿಯ ಮುಖ್ಯಸ್ಥರಾಗಿದ್ದ ನಿಷ್ಠಾವಂತ ಐಎಎಸ್ ಅಧಿಕಾರಿ ಅಶೋಕ್ ಮನೋಳಿಯನ್ನು ಕಿತ್ತೆಸೆದರು. ಹಾಗಂತ ಕೃಷ್ಣನ್ ಗ್ಯಾಂಗ್ ಸುಮ್ಮನಾಗಲಿಲ್ಲ. ತಮ್ಮ ನೆಚ್ಚಿನ ಬಂಟ ಮಣಿವಣ್ಣನ್ ಮೂಲಕ ಹುಬ್ಬಳ್ಳಿ-ಧಾರವಾಡ, ಬಿಜಾಪುರ ಮತ್ತು ಬೆಳಗಾವಿ ನಗರಗಳ ಒಟ್ಟು 20 ವಾರ್ಡುಗಳನ್ನು ಆಯ್ದುಕೊಂಡು Veiolia ಎಂಬ ಫ್ರೆಂಚ್ ಕಂಪನಿಗೆ ನೀರು ಸರಬರಾಜು ಗುತ್ತಿಗೆ ಕೊಟ್ಟರು. ಹೇಗಿದ್ದರೂ ಅದು ನರ್ಮ್ ಯೋಜನೆಯ ದುಡ್ಡು, ಸಾಲ ಕೊಡುವುದು ವಿಶ್ವ ಬ್ಯಾಂಕ್. ಕೊಳ್ಳೆ ಹೊಡೆಯುವುದಕ್ಕೊಂದು ನೆಪಬೇಕಷ್ಟೇ.

ಹುಬ್ಬಳ್ಳಿ-ಧಾರವಾಡ ಪಾಲಿಕೆ ಕಮೀಷನರ್ ಆಗಿದ್ದಾಗ ಫ್ರೆಂಚ್ ಕಂಪನಿಗೆ ಮಾಡಿದ ಉಪಕಾರವನ್ನೇ ಮಣಿವಣ್ಣನ್ ಈಗ ಮೈಸೂರಿನಲ್ಲಿ ರತನ್ ಟಾಟಾರ JUSCO ಕಂಪನಿಗೆ ಮಾಡಿದ್ದಾನೆ.

ಬಿಜೆಪಿ ಗುಹೆಗೆ ಸಿಂಹ?



ಲೋಕಸಭಾ ಚುನಾವಣೆಗಳು ಹತ್ತಿರಾಗುತ್ತಿರುವಂತೆ ರಾಜ್ಯ ರಾಜಕೀಯದಲ್ಲಿ ಈಗ ಒಂದು ತರದ ಲಗುಬಗೆ ಕಂಡುಬರುತ್ತಿದೆ.

ನಟ ವಿಷ್ಣುವರ್ಧನ್‌ಗೂ ಅಂತಾದ್ದೊಂದು ಲಗುಬಗೆಯ ಕನವರಿಕೆ ಶುರುವಾಗಿರುವಂತಿದೆ.

ಚುನಾವಣೆಗೆ ನಿಲ್ಲುವ ಕನವರಿಕೆ ಅದು!

ಈಗ್ಗೆ ಕೆಲ ವಾರಗಳ ಹಿಂದೆ ಬಿಜೆಪಿಯ ನಾಯಕ ಅನಂತ್‌ಕುಮಾರ್‌ರನ್ನು ವಿಷ್ಣು ಭೇಟಿಯಾಗಿ ಬಂದಿದ್ದಾರೆ. ಬೆಂಗಳೂರು ದಕ್ಷಿಣ, ಬೆಂಗಳೂರು ಸೆಂಟ್ರಲ್ ಅಥವಾ ಮಂಡ್ಯ ಲೋಕಸಭಾ ಕ್ಷೇತ್ರದಿಂದ ಕಣಕ್ಕಿಳಿದರೆ ಹೇಗೆಂಬ ಯೋಚನೆ ವಿಷ್ಣುಗಿರುವಂತಿದೆ.

ಇನ್ನೊಂದು ಸಂಗತಿ ಏನೆಂದರೆ ವಿಷ್ಣು ಕಾಂಗ್ರೆಸ್ ಸೇರಿ ರಾಜಕೀಯಕ್ಕೆ ಬರುತ್ತಾರೆ ಎಂಬುದು. ಕಳೆದ ಶತಮಾನದಿಂದಲೂ ಈ ರೂಮರ್ ಇದೆ. ವಿಷ್ಣು ಗೆಳೆಯ ಇಸ್ಪೀಟು ರಾಜ ಅಂಬರೀಷ್ ಮೂಲಕ ಕಾಂಗ್ರೆಸ್ ಸೇರುವ ತವಕ ವಿಷ್ಣುಗಿದೆ ಎಂಬ ಮಾತು ಬಹಳ ದಿನದಿಂದಲೂ ಕೇಳಿಬರುತ್ತಿದೆ. ಆದರೆ ಇವತ್ತಿನ ವಿದ್ಯಮಾನ ಏನೆಂದರೆ ಸ್ವತಃ ಅಂಬರೀಷೇ ಕಾಂಗ್ರೆಸ್ ತ್ಯಜಿಸಿ ಬಿಜೆಪಿ ಸೇರಿ ಬೆಂಗಳೂರಿನ ಯಾವುದಾದರೂ ಒಂದು ಕ್ಷೇತ್ರದಿಂದ ಸ್ಪರ್ಧಿಸುತ್ತಾರೆ ಎಂಬುದು. ಕಾಂಗ್ರೆಸ್‌ನ ಶಿವರಾಮೇಗೌಡ ತಾನು ಮಂಡ್ಯ ಟಿಕೆಟ್ ಆಕಾಂಕ್ಷಿ ಎಂದು ಈಗಾಗಲೇ ಯುದ್ಧ ಘೋಷಣೆ ಮಾಡಿಬಿಟ್ಟಿದ್ದಾರೆ. ಮಂಡ್ಯ ಸಂಸದನಾಗಿ ಅಂಬಿ ಕಡಿದು ಕಟ್ಟೆ ಹಾಕಿರುವುದು ಏನೂ ಇಲ್ಲ ಎಂದು ಮತದಾರರೂ ಈಗಾಗಲೇ ಸಿಟ್ಟಿಗೆದ್ದಿದ್ದಾರೆ. ಜೊತೆಗೆ ಜೆಡಿಎಸ್‌ನಿಂದ ಚೆಲುವರಾಯಸ್ವಾಮಿ ಮಂಡ್ಯ ಅಭ್ಯರ್ಥಿಯಾಗುವುದು ಈಗಾಗಲೇ ಗ್ಯಾರಂಟಿಯಾಗಿದೆ. ಹಾಗಾದಲ್ಲಿ ಆತನ ವೈರಿ ಶಿವರಾಮೇಗೌಡ ಕಾಂಗ್ರೆಸ್ ಕ್ಯಾಂಡಿಡೇಟಾಗುವುದು ಒಂದು ಸಹಜ ಬೆಳವಣಿಗೆ ಎಂಬಂತಾಗಿ ಹೋಗಿದೆ. ಆದರೆ ಮಂಡ್ಯ ಬಿಜೆಪಿಯಿಂದ ತಮ್ಮಣ್ಣನೆಂಬ ನುಂಗಣ್ಣ ಈಗಾಗಲೇ ಕುಸ್ತಿಗೆ ರೆಡಿಯಾಗಿರುವುದರಿಂದ ವಿಷ್ಣುವರ್ಧನ್ ಬಿಜೆಪಿಗೆ ಸೇರಿಕೊಂಡರೂ ಮಂಡ್ಯ ಟಿಕೆಟ್ ಸಿಗಲಾರದು.

ವಿಷ್ಣುವರ್ಧನ್ ಒಂಥರಾ ಇಬ್ಬಂದಿತನಗಳ ಮೊತ್ತ. ರಾಜಕೀಯಕ್ಕೆ ಬರಬೇಕೆಂಬ ಆಸೆ ಇದೆಯಾದರೂ ಗೆಲ್ಲುವಂತಿದ್ದರೆ ಮಾತ್ರ ಸ್ಪರ್ಧಿಸುವೆ ಎಂಬ ಹಿಂಜರಿಕೆ ವಿಷ್ಣುಗಿದೆ. ಹಾಗಾಗಿ ಒಮ್ಮೆ ತಮ್ಮ 56ನೇ ಬರ್ತ್‌ಡೇಯನ್ನು ಮಂಡ್ಯದಲ್ಲೇ ಆಚರಿಸಿಕೊಂಡ ವಿಷ್ಣು 'ನಾನು ನಿಮ್ಮವನೆ, ಮೇಲುಕೋಟೆಯವನು' ಎಂದು ಒಂದು ಪ್ಲೇಟ್ ಹಾಕಿದ್ದರು. ಆ ಕಾರ್ಯಕ್ರಮದ ಅಜೆಂಡಾದಲ್ಲಿ ಕ್ಷೇತ್ರದ ಜನರ ನಾಡಿಮಿಡಿತ ಪರೀಕ್ಷಿಸುವುದೂ ಒಂದಾಗಿತ್ತು. ಆದರೆ ಒಂದು ವೇಳೆ ಅಂಬಿ ಕಾಂಗ್ರೆಸ್‌ನಲ್ಲೇ ಉಳಿದು ಪುನಃ ಮಂಡ್ಯದಿಂದಲೇ ಸ್ಪರ್ಧಿಸಿದರೆ ಅದೇ ಕಣದಲ್ಲಿ ವಿಷ್ಣು ಇರಲಾರರು ಅಲ್ಲವೆ. ಹಾಗಾಗಿ ಅಂಬಿ ಮುಂದೇನು ಮಾಡುತ್ತಾರೆ, ಯಾವ ಪಾರ್ಟಿಯಲ್ಲಿರುತ್ತಾರೆ ಎಂಬುದರ ಮೇಲೆ ವಿಷ್ಣುವಿನ ತೀರ್ಮಾನಗಳಿರುತ್ತವೆ.

ಅನಂತ್‌ಕುಮಾರ್ ಆಪ್ತರು ಹೇಳುವ ಪ್ರಕಾರ ವಿಷ್ಣು ಬೆಂಗಳೂರಿನಿಂದ ಸ್ಪರ್ಧಿಸುವ ಬಗ್ಗೆ ಅನಂತೂಗೆ ಅಷ್ಟು ಇಷ್ಟವಿಲ್ಲವಂತೆ. ಅದು ಯಾಕೆಂದರೆ ಬೆಂಗಳೂರಿನಲ್ಲೇ ಇಬ್ಬರು ಬ್ರಾಹ್ಮಣ ಕಾಂಡಿಡೇಟ್‌ಗಳಿರುವುದು ಸೂಕ್ತ ಅಲ್ಲ ಎಂಬ ಕಾರಣಕ್ಕೆ.

ಇಲ್ಲಿ ವಿಷ್ಣುವರ್ಧನ್‌ರ ಸಮಸ್ಯೆ ಏನೆಂದರೆ ಅವರ ನಟನಾ ಕೆರಿಯರ್ ಹೆಚ್ಚುಕಡಿಮೆ ಮುಗಿದೇಹೋಗಿದೆ. ಸಿನಿಮಾ ಇಂಡಸ್ಟ್ರಿಯಲ್ಲಿದ್ದ ಜೊತೆಗಾರನೇಕರು ರಾಜಕೀಯಕ್ಕೆ ಹೋಗಿ ಯಶಸ್ವಿಯಾಗಿರುವಾಗ ತಾನೂ ಒಂದು ಕೈ ನೋಡಬಾರದೇಕೆಂಬ ಆಸೆ ವಿಷ್ಣುಗಿದೆ. ಆದರೆ ಅದಕ್ಕೆ ಬೇಕಾದ ಧೈರ್ಯ, ಸಾಹಸ, ಮನೋಭಾವ ಈ ಸಾಹಸಸಿಂಹನಿಗಿಲ್ಲ. ಇನ್ನು ಎಲೆಕ್ಷನ್‌ಗೆ ನಿಂತರೆ ದುಡ್ಡು ಖರ್ಚು ಮಾಡಬೇಕಲ್ಲ ಎಂಬ ಚಿಗುಟು ಯೋಚನೆಯೂ ವಿಷ್ಣುಗಿದೆ. ಇದೊಂಥರ 'ಅಕ್ಕಿ ಮೇಲೆ ಆಸೆ, ನೆಂಟರ ಮೇಲೆ ಪ್ರೀತಿ' ಇದ್ದಂತೆ.

ಸದ್ಯಕ್ಕೆ ರಾಜ್ಯ ಬಿಜೆಪಿಯ ಉನ್ನತ ನಾಯಕರ ಲೆವೆಲ್‌ನಲ್ಲಿ ಮಾತ್ರ ವಿಷ್ಣು ಭೇಟಿ, ಚರ್ಚೆಗಳು ನಡೆದಿವೆ. ಹಾಗೆ ವಿಷ್ಣುವರ್ಧನ್‌ರನ್ನು ಪಾರ್ಟಿಗೆ ಕರೆದುಕೊಂಡರೆ ಕ್ಷೇತ್ರ ಒದಗಿಸುವುದೇ ಅವರಿಗೆ ಒಂದು ದೊಡ್ಡ ಸಮಸ್ಯೆ. ಬೆಂಗಳೂರು ದಕ್ಷಿಣ ಅನಂತ್‌ಕುಮಾರ್‌ಗೆ ಮೀಸಲು. ಇನ್ನು ಬೆಂಗಳೂರು ಉತ್ತರ ಹಾಗೂ ಬೆಂಗಳೂರು ಗ್ರಾಮಾಂತರ (ಕನಕಪುರ) ಕ್ಷೇತ್ರದಲ್ಲಿ ಒಕ್ಕಲಿಗರು, ಅಲ್ಪಸಂಖ್ಯಾತರದ್ದೇ ಮೇಲುಗೈ. ಅಂತಲ್ಲಿ ಈ ಸಿಂಹ ಹೋಗಿ ಕೇವಲ ಊಳಿಡಬೇಕಾಗುತ್ತದೆಂಬುದು ಬಿಜೆಪಿ ಲೀಡರ್‌ಗಳಿಗೇ ಗೊತ್ತಿದೆ. ಇನ್ನುಳಿಯುವ ಬೆಂಗಳೂರು ಸೆಂಟ್ರಲ್‌ಗೆ ಈಗಾಗಲೇ ಮಾಜಿ ಶಾಸಕ ಪಿ.ಸಿ. ಮೋಹನ್ 'ಟಿಕೆಟ್ ನಂದೆ' ಎಂದು ಹೊರಟುಬಿಟ್ಟಿದ್ದಾರೆ. ಪರಿಸ್ಥಿತಿ ಹೀಗಿರುವಾಗ ವಿಷ್ಣು ತಾನೆ ಏನು ಮಾಡುತ್ತಾರೆ ಹೇಳಿ?

ವಿಷ್ಣು ರಾಜಕೀಯದ ಆಕಾಂಕ್ಷೆಗಳ ಬಗ್ಗೆ ಅವರ ಆಪ್ತರೊಬ್ಬರು ಸವಿಯಾಗಿ ಹೇಳುತ್ತಾರೆ. ಅವರ ಪ್ರಕಾರ ಹಣ ಖರ್ಚು ಮಾಡಿಕೊಂಡು, ಸೋಲು ಗೆಲುವಿನ ರಿಸ್ಕ್ ತೆಗೆದುಕೊಳ್ಳುವುದು ವಿಷ್ಣುವಿಗೆ ಬೇಕಿಲ್ಲ. ಅದರ ಬದಲಾಗಿ ತನ್ನನ್ನು ರಾಜ್ಯಸಭೆಗೆ ಆರಿಸಿ ಕಳುಹಿಸುವುದಾದರೆ ಆ ಪಾರ್ಟಿಗೆ ಸೇರಲು ವಿಷ್ಣು ರೆಡಿಯಂತೆ.

ಈತನ ಮುಗ್ಧತೆ ಎಷ್ಟಿದೆ ನೋಡಿ?

ರಾಜ್ಯಸಭೆಗೆ ನೇಮಕಗೊಳ್ಳಲು ರಾಜಕೀಯ ಪಕ್ಷಗಳಿಗೆ ಇಂತಿಷ್ಟು ಫೀಸ್ ಅಂತ ಕೊಡಬೇಕಾಗುತ್ತದೆ ಎಂಬುದು ಸಾಹಸಸಿಂಹನಿಗೆ ಗೊತ್ತಿಲ್ಲವೇ! ■

"ಕೊಡಗಿಗೊಂದು ಮಂಡೆತುಣಿ: ನಂದಿನೆರವಂಡ ನಾಚಪ್ಪ ಕೊಡವ"

ಈ ಜಗತ್ತಿನಲ್ಲಿ ಯಾವುದೂ ಸ್ಥಾಯಿಯಾದುದಲ್ಲ, ಎಲ್ಲವೂ ಚಲನೆಯಲ್ಲಿರುತ್ತವೆ ಹಾಗೂ ಬದಲಾಗುತ್ತಿರುತ್ತವೆ ಎನ್ನುವ ವೈಜ್ಞಾನಿಕ ಮತ್ತು ದಾರ್ಶನಿಕ ಸತ್ಯಕ್ಕೆ ಜ್ವಲಂತ ಉದಾಹರಣೆ ನಮ್ಮ ಕಥಾನಾಯಕ ಎನ್.ಯು.ನಾಚಪ್ಪ ಅಲಿಯಾಸ್ ನಂದಿನೆರುವಂಡ ನಾಚಪ್ಪ ಅಲಿಯಾಸ್ ನಂದಿನೆರವಂಡ ನಾಚಪ್ಪ ಕೊಡವ. ಕೊಡಗನ್ನು ಕರ್ನಾಟಕ ರಾಜ್ಯದಿಂದ ಪ್ರತ್ಯೇಕಿಸುವ ಘೋಷಣೆಯೊಂದಿಗೆ ಲಿವಾಕ್ (LIWAK ಅಂದರೆ LIBERATION WARRIORS OF KODAGU) ಎನ್ನುವ ಉಗ್ರಗಾಮಿ ಗುಂಪೊಂದನ್ನು ಕಟ್ಟಿದ್ದರು, ಇದೀಗ ಸಿ.ಎನ್.ಸಿ. (CODAGU NATIONAL COUNCIL) ಎನ್ನುವ ಜಾತಿ ಉದ್ಧಾರದ ಶೋಕಿನ ಸಂಸ್ಥೆಯನ್ನು ರಚಿಸುವ ತನಕ ಈತನ ಸಂಘಟನೆ, ನಿಲುಮೆ, ವೈಚಾರಿಕತೆ, ಸ್ನೇಹಾಚಾರ, ಆದರ್ಶ, ಅಷ್ಟೇ ಏಕೆ ವೇಷಭೂಷಣ ಸಹ ನಿರಂತರ ಬದಲಾವಣೆಯನ್ನು ಕಂಡಿವೆ.

ಮೊದಮೊದಲು ಯುರೋಪಿಯನ್ನರಂತೆ ಫೆಲ್ಟ್ ಹ್ಯಾಟ್ ಧರಿಸುತ್ತಿದ್ದ ನಾಚಪ್ಪ ತದನಂತರ ಏಕಾಏಕಿ ಮಹಾನ್ ಸ್ವಾತಂತ್ರ್ಯವಾದಿ ಅರ್ಜಂಟೀನಾದ ಚೆಗುವಾರ ಧರಿಸುತ್ತಿದ್ದ ಪನಾಮ ಕ್ಯಾಪ್‌ಗೆ ಬದಲಾಗಿದ್ದರು. ಒಂದಿಷ್ಟು ಕಾಲ ಕ್ರಿಕೆಟ್ ಕ್ಯಾಪ್ ತಲೆಯನ್ನು ಅಲಂಕರಿಸಿತ್ತು. ನಂತರದ ದಿನಗಳಲ್ಲಿ ಬಕ್ಕತಲೆ ಫ್ಯಾಶನ್ ಆಗಿತ್ತು. ಇದೀಗ ಪಾಲೆಸ್ಟೈನ್‌ನ ಧೀಮಂತ ನಾಯಕ ಯಾಸರ್ ಅರಾಫತ್ ಧರಿಸುತ್ತಿದ್ದ 'ಗೋತ್ರ'ವನ್ನು, ಹೋಲುವ, ಕಾಕಾ ಹೋಟೆಲ್ಲಿನಲ್ಲಿ ಚಹಾ ಹಿಂಡಲು ಬಳಸುವ ಕೆಂಪು-ಬಿಳಿ ಚೌಕುಳಿಯ ಬಟ್ಟೆ ತರಹದ ಚಕ್ಕುವಸ್ತ್ರವನ್ನು ತಲೆಗೆ ಕಟ್ಟಿ ಇನ್ನಿಲ್ಲದಂತೆ ಮೆರೆಯುತ್ತಿದ್ದಾರೆ.


ಈ ನಾಚಪ್ಪ ಇಷ್ಟೇ ಆಗಿದ್ದರೆ ನಕ್ಕು ಸುಮ್ಮನಾಗಬಹುದಿತ್ತು. ಈ ತಮಾಷೆಯ ವ್ಯಕ್ತಿತ್ವದ ಜೊತೆ ಕೊಡಗಿನ ಹಲವು ಕಂಟಕಗಳು ಕ್ಷುದ್ರಾತ್ಮಗಳಂತೆ ಸೇರಿಕೊಂಡಿವೆ.

> ಕೊಡಗಿನ ಪ್ರಗತಿಪರರು [illegible] ... ದಲಿತ ... ಎನ್.ಯು.ನಾಚಪ್ಪ ಅಲಿಯಾಸ್ ನಂದಿನೆರವಂಡ ನಾಚಪ್ಪ ... ಕೊಡಗು ಒಂದೆಡೆ ಕೋಮುವಾದಿ ವಿಧ್ವಂಸಕರ ಕೈಯಲ್ಲಿ ನಲುಗುತ್ತಿದ್ದರೆ ಇನ್ನೊಂದೆಡೆ ಈ ನಾಚಪ್ಪ ಎಂಬ ಧೋರಣೆಯ ಕಾಟದಿಂದ ತತ್ತರಿಸುತ್ತಿದೆ. ನಿಜವಾಗಲೂ ಈ ಎರಡು ಶಕ್ತಿಗಳಿಂದ ಕೊಡಗಿಗೆ ಬಿಡುಗಡೆ ಎಂದು?

ಗೌಡ ಕೆ.ಜಿ.ಬೋಪಯ್ಯನ ವಿರುದ್ಧ ಸೋತಿರುವುದು, ವಿಧಾನ ಪರಿಷತ್ತು ಚುನಾವಣೆಯಲ್ಲಿ ಕೊಡವರ ಮಿಟ್ಟು ಚೆಂಗಪ್ಪ ಪರಾಜಯ ಗೊಂಡು ಒಕ್ಕಲಿಗರ ಎಸ್.ಜಿ.ಮೇದಪ್ಪ ಗೆದ್ದಿರುವುದು ಇವರ ಜಾತಿ ರಾಜಕೀಯಕ್ಕೆ ಹೇಳಿಮಾಡಿಸಿದ ಸಂದರ್ಭ ವನ್ನು ಸೃಷ್ಟಿ ಮಾಡಿದೆ. ಒಂದೊಮ್ಮೆ ತನ್ನ ಶಿಷ್ಯನಾಗಿದ್ದೂ ನಂತರ ತನಗೇ 'ಸ್ಟುವರ್ಟ್ ಹಿಲ್ ಶಕುನಿ' ಎಂದು ಕರೆದಿದ್ದ ನಾಚಪ್ಪನೊಂದಿಗೆ ಎಂ.ಸಿ.ನಾಣಯ್ಯ ಈಗ ರಾಜಿಯಾಗಿರುವುದು ಸಾಬೀತಾಗಿದೆ. ಹಾಗೆಂದೇ ಒಮ್ಮೆ ಮೂಲೆಗುಂಪಾಗಿದ್ದ ನಾಚಪ್ಪ ಈಗ ಮೈಕೊಡವಿ ಎದ್ದು ಕುಳಿತಿದ್ದಾರೆ.

ಈತ 1991ರಲ್ಲಿ ತುಲಾ ಸಂಕ್ರಮಣದ ದಿನ ತಲಕಾವೇರಿಯಲ್ಲಿ ಲಿವಾಕ್ ಎನ್ನುವ ಸಂಘಟನೆಯನ್ನು ಸ್ಥಾಪಿಸಿದರು. 'ಪವಿತ್ರ ಕಾವೇರಿಯ ನಾಡಾದ ಕೊಡಗನ್ನು ಕರ್ನಾಟಕದ ಕೊಟ್ಟೆಯಿಂದ ಮೇಲೆತ್ತುತ್ತೇನೆ'ಎನ್ನುವುದು ಅಂದಿನ ಘೋಷಣೆಯಾಗಿತ್ತು.

ಲಿವಾಕ್ ಸಂಘಟನೆ ಇದ್ದಾಗ ಮೊದಲಲ್ಲಿ ರಂಗಸಮುದ್ರ, ಗುಡ್ಡೆಹೊಸೂರು, ನಂಜರಾಯಪಟ್ಟಣ ಗ್ರಾಮಗಳ ಅರೆಭಾಷೆ ಗೌಡರ ನಿರುದ್ಯೋಗಿ ತರುಣರು ನಾಚಪ್ಪನ ಬೆಂಬಲಕ್ಕೆ ನಿಂತಿದ್ದರು. ಕೊಡಗಿನ ಹದಿನೆಂಟು ಮೂಲನಿವಾಸಿ ಸಮುದಾಯಗಳ ಏಳಿಗೆಗಾಗಿ ಪ್ರತ್ಯೇಕ ರಾಜ್ಯ ಹುಟ್ಟಿಕೊಳ್ಳುತ್ತದೆ ಎಂಬ ಕನಸನ್ನು ಈತ ಬಿಕರಿಗಿಟ್ಟಿದ್ದರು. ಈ ಪ್ರದೇಶದಲ್ಲಿ ಗುತ್ತಿಗೆ ನಡೆಸುತ್ತಿದ್ದ ಮಲೆಯಾಳಿ ಕಾಂಟ್ರ್ಯಾಕ್ಟರ್ ಗಳನ್ನು ಲಿವಾಕ್ ಹುಡುಗರು ಹೊಡೆದು ಹೆದರಿಸಿ ಓಡಿಸಿದರು. ಸ್ಥಳೀಯ ರಾಜಕಾರಣಿಗಳನ್ನು ಬೆದರಿಸಿ ಹಣ ವಸೂಲಾತಿಗೆ ಇಳಿದರು. ಕ್ರೌರ್ಯ ಇದ್ದಲ್ಲಿ ತಾವು ಇರಲೇಬೇಕು ತಾನೆ, ಲಿವಾಕ್ ಜೊತೆ ಬಜೆಪಿ ಎಲಿಮೆಂಟುಗಳೂ ಸೇರಿಕೊಂಡವು.



ಬಜೆಪಿಯನ್ನು ತ್ಯಜಿಸಿ ಕಾಂಗ್ರೆಸ್ ಪಾಳೆಯ ಸೇರಿದ್ದ ಷಣ್ಮುಗಂ ಕುಶಾಲನಗರದಲ್ಲಿ ಪ್ರಭಾವಿಯಾದ ಯುವ ಮುಂದಾಳುವಾಗಿದ್ದರು. ಡೀಲ್ ಯಾವ ಮಟ್ಟದಲ್ಲಿ ನಡೆಯಿತೋ ಗೊತ್ತಿಲ್ಲ, 1994ರ ಮೊದಲಭಾಗ ಷಣ್ಮುಗಂ ಕುಶಾಲನಗರದಲ್ಲಿ ಸಾರ್ವಜನಿಕವಾಗಿ ಕೊಲೆಯಾಗಿಬಿಟ್ಟರು. ಆ ಕೊಲೆ ಪ್ರಕರಣದಲ್ಲಿ ಮಾಜಿ ಸೈನಿಕ ಮಾವಜಿ ಗಣೇಶ್, ಜೀವನ್ ಮತ್ತು ಕೆಲವರು ಜೀವಾವಧಿ ಶಿಕ್ಷೆಗೆ ಒಳಗಾಗಿ ಈಗ ಜೈಲಿನಲ್ಲಿದ್ದಾರೆ. ಈ ಕೇಸಲ್ಲಿ ಕೊಲೆಯ ಪಿತೂರಿ ನಡೆಸಿದ್ದಾರೆಂದು ನಾಚಪ್ಪ ಎಂಟನೇ


ಐರಿ ಮತ್ತು ಅಮ್ಮ ಕೊಡವ ಸಮುದಾಯಗಳ ಮು[...] ಸೇರಿ 'ಕೊಡಗು ಮೂಲನಿವಾಸಿಗಳ ಸಂಘ[...] ಸ್ಥಾಪಿಸಿದರು. ಕೊಡಗಿನ ನಿರ್ಲಕ್ಷಿತ ಮೂಲನಿವಾಸಿ[...] ಕೆಂಬಟ್ಟಿ, ಎರವ, ಫಣಿಯ, ಕುಡಿಯ, ಗೊಲ್ಲ, ಮ[...] ಬೆಟ್ಟ ಕುರುಬ, ಜೇನು ಕುರುಬ, ಹಾಲೆ, [...] ಕೋಯವ ಮೊದಲಾದವರನ್ನು ತಮ್ಮ ಸಂಸ್ಥೆಯ ಮ[...] ಸಂಘಟಿಸಲು ಮತ್ತು ಪ್ರತಿನಿಧಿಸಲು ಪ್ರಯತ್ನಿಸಿದ[...]

ಕೊಡಗಿನ ಕೊಡವರೆಂದರೆ ಇಪ್ಪತ್ತನೆಯ ಶತಮಾ[...] ಒಂದಾಗಿ ಬೆರೆತುಹೋಗಿರುವ ಮಲ್ಲ ಕೊಡವ, [...] ಕೊಡವ, ಜಮ್ಮ ಕೊಡವ ಮತ್ತು ಬಡ್ಡು ಕೊ[...] ಎನ್ನುವ ನಾಲ್ಕು ಪಂಗಡಗಳಿವೆ. ಮೊದಲು ಇವರ [...] ತರುವ-ಕೊಡುವ ಸಂಬಂಧಗಳಿರಲಿಲ್ಲ, ಹಲವು ವೈ[...] ಸಂಘರ್ಷ ಹಾಗೂ ಜಾತಿ ತಾರತಮ್ಯಗಳ ನಡುವೆ [...] ಈ ಗುಂಪುಗಳ ಸಮಾನ ಅಂಶವೆಂದರೆ ಇವರು ಕೊ[...] ಭಾಷೆಯನ್ನಾಡುವವರು ಮತ್ತು ಜಮೀನುದಾರರು. ಕೊ[...] ಇತಿಹಾಸದಲ್ಲಿ, ಅದರಲ್ಲೂ ಬ್ರಿಟಿಷ್ ಆಳ್ವಿಕೆ ಕಾಲ[...] ಇವರು ಕೊಡಗಿನ ಉ[...] ಜನಸಮುದಾಯಗಳಿಗಿಂತ ಹೆ[...] ಅವಕಾಶಗಳನ್ನು ಗಳಿಸಿಕೊಂಡವ[...] ಅಂತೆಯೇ ಸಹಜವಾಗಿ ಉಳಿದ[...] ಮೇಲೆ ಆರ್ಥಿಕ ಮತ್ತು ಸಾಂಸ್ಕ[...] ದಬ್ಬಾಳಿಕೆಯನ್ನು ನಡೆಸುತ್ತಾ ಬಂದವ[...] ಈ ಅಸಮಾನತೆಯ ಧೋರಣೆಗ[...] ಎಂ.ಸಿ.ನಾಣಯ್ಯ ಎನ್.ಯು.ನಾ[...] ತರಹದ ಜನರ ಮೂಲಕ ಇಂ[...] ಸಮಾಜದಲ್ಲೂ ಮುಂದುವರಿದಿ[...] ವುದನ್ನು ಕೊಡಗು ಮೂಲನಿವಾಸಿ[...] ಸಂಘ ಪ್ರತಿರೋಧಿಸತೊಡಗಿತು.

ಕೊಡಗು ಮೂಲನಿವಾಸಿಗಳ ಸ[...] ಇದಿಷ್ಟಕ್ಕೇ ಸುಮ್ಮಗಾಗಲಿಲ್ಲ. ಸ[...] ಮೂಲನಿವಾಸಿಗಳ ವಕ್ತಾರನಂತೆ ಮ[...] ನಾಡುತ್ತಿದ್ದ ನಾಚಪ್ಪನವರ ಅಧಿಕಾರವನ್ನು, ನೈತಿಕತೆಯ[...] ಪ್ರಶ್ನಿಸಿತು. ನಾಚಪ್ಪ ಕೊಡಗಿನಲ್ಲಿ ಜಾತಿಜಾತಿಗಳ ಮ[...] ಹುಟ್ಟುಹಾಕಿದ ಸಂಘರ್ಷವನ್ನು ಕೊನೆಗೊಳಿಸಲು [...]

ಅದು ಅಪಾಯದ ಸಂಕೇತ. ಕೊಡಗಿನ ವಿಷಜಂತು ತಮ್ಮು ಪೂವಯ್ಯ, ಈತನ ಕನಸಿನ ಕೂಸಾದ 'ಕಾವೇರಿ ಸೇನೆ' ಎನ್ನುವ ಲೋಕಲ್ ರಕ್ಷಣಾ ವೇದಿಕೆಯ ರವಿ ಚೆಂಗಪ್ಪ ಪರಿಸರ ಸಂರಕ್ಷಣೆಯ ಹೆಸರಲ್ಲಿ ರಾಷ್ಟ್ರದ ಮತ್ತು ವಿದೇಶಿ ಹಣವನ್ನು ಲೂಟಿ ಹೊಡೆಯುವುದಲ್ಲದೆ ದೇಶದ್ರೋಹಿ ಚಟುವಟಿಕೆಗಳಿಗೆ ಬಳಸಿಕೊಳ್ಳುತ್ತಿರುವ ನಿವೃತ್ತ ಸೇನಾಧಿಕಾರಿಗಳು ಮತ್ತು ನಿವೃತ್ತ ಅರಣ್ಯಾಧಿಕಾರಿಗಳು, ಪರಂಪರಾಗತವಾಗಿ ಕಟ್ಟಿಹರುಕರಾಗಿರುವ ಕೆಲವು ಶಕ್ತಿಯುತ ಪತ್ರಿಕೋದ್ಯಮಿಗಳು, ಇವರೆಲ್ಲ ತಮ್ಮೊಳಗಿನ ಸ್ಪರ್ಧೆ, ಅಸೂಯೆ, ಒಳಜಗಳ, ಒಣಜಂಭ, ಆತ್ಮಾಭಿಮಾನವೆಲ್ಲವನ್ನೂ ಮರೆತು ಜೊತೆ ಸೇರಿದ್ದಾರೆ. ಕುಳ್ಳಪ್ಪ ಅಡ್ಡಂಡ ಕಾರ್ಯಪ್ಪ ಇವರ ಜೊತೆ ಶಾಮೀಲಾಗಿರುವುದು ಖಚಿತವಾಗಿಲ್ಲ, ಆಗಿದ್ದರೂ ಇಲ್ಲದಿದ್ದರೂ ಹೆಚ್ಚಿನ ವ್ಯತ್ಯಾಸವಿಲ್ಲ.

ಜನಪರವಲ್ಲದ ಮತ್ತು ಜನಪ್ರಿಯನಲ್ಲದ, ಆದರೂ ಪ್ರಖರ ನಾಲಿಗೆಯ ಕಾರಣದಿಂದ ಎಂದೂ ಹಿಂಬಾಗಿಲಿನಿಂದ ಅಧಿಕಾರ ಗಿಟ್ಟಿಸುವ ಎಂ.ಸಿ.ನಾಣಯ್ಯ ಎನ್ನುವ ಹಿರಿಯ ರಾಜಕಾರಣಿ. ಇವರು ಈ ಹಿಂದೆ ವಿರೋಧ ಪಕ್ಷದಲ್ಲಿದ್ದಾಗಲೂ, ಆಡಳಿತ ಪಕ್ಷದಲ್ಲಿದ್ದಾಗಲೂ ಜಾತಿ ರಾಜಕೀಯ ಮಾಡುವುದರಲ್ಲಿ ಸಫಲರಾಗಿದ್ದವರು. ತನ್ನ ಕೊಡವ ಜಾತಿಯವರನ್ನು ಮಾತ್ರ ಕೊಡವ ಭಾಷಾ ಸಾಹಿತ್ಯ ಅಕಾಡೆಮಿಯ ಸದಸ್ಯರನ್ನಾಗಿ ಮಾಡಿ ಉಳಿದ ಹದಿನೇಳು ಜಾತಿಯ ಕೊಡವ ಭಾಷಿಕ ಸಮುದಾಯಗಳಿಗೆ ವಂಚಿಸಿದವರು, ಕೇವಲ ತನ್ನ ಜೀವದ ಗೆಳೆಯ ಭೀಮಯ್ಯನಿಗಾಗಿ ಮರ ಕಡಿಯುವ ಹಕ್ಕನ್ನು ದೊರಕಿಸಿ ಕೊಟ್ಟವರು, ಬಡ ರೈತರ ಹಿತವನ್ನು ಮನಸಲ್ಲಿಟ್ಟುಕೊಂಡು ಮತ್ತೊಬ್ಬ ಹಿರಿಯ ರಾಜಕಾರಣಿ ಎ.ಕೆ.ಸುಬ್ಬಯ್ಯ ಮರದ ಹಕ್ಕಿಗಾಗಿ ಹೋರಾಡಿದಾಗಲೆಲ್ಲ ಸಂಸ್ಕೃತಿಯ ಹೆಸರಲ್ಲಿ ಅದಕ್ಕೆ ಅಡ್ಡಗಾಲು ಹಾಕುತ್ತಿರುವವರು, ಶಿಷ್ಯ ಎಳನೀರು ಮುತ್ತಪ್ಪನಿಗಾಗಿ ಶಾಸಕರ ನಿಧಿಯಿಂದ ಲಕ್ಷಾಂತರ ಹಣವನ್ನು ರಿಟೈರ್ಸ್ ಗೋಡೆ ಕಟ್ಟಿಸಲು ಖರ್ಚು ಮಾಡಿದವರು ಇವರು.



ಕಳೆದ ಚುನಾವಣೆಯಲ್ಲಿ ಕೊಡವ ಪ್ರಾಬಲ್ಯದ ವಿರಾಜಪೇಟೆ ವಿಧಾನಸಭಾ ಕ್ಷೇತ್ರದಲ್ಲಿ ಕೊಡವರಾದ ಅರುಣ್ ಮಾಚಯ್ಯ ಮತ್ತು ವೀಣಾ ಅಚ್ಚಯ್ಯ ಅರೆಭಾಷೆ

ಪ್ರತ್ಯೇಕತೆಯ ಬೀಜಗಳು

ಕೊಡಗಿನ ಪ್ರತ್ಯೇಕತೆಯ ಕೂಗಿಗೆ ಹಲವು ದಶಕಗಳ ಇತಿಹಾಸವಿದೆ. ಭಾಷಾವಾರು ರಾಜ್ಯ ರಚನೆಗಿಂತ ಹಿಂದೆ ಕೊಡಗು 'ಸಿ' ದರ್ಜೆಯ ರಾಜ್ಯವಾಗಿತ್ತು. 1952-56ರ ತನಕದ ಸರಕಾರದಲ್ಲಿ ಇಬ್ಬರು ಮಂತ್ರಿಗಳಿದ್ದರು. ಚೆಪ್ಪುದಿರ ಪೂಣಚ್ಚ ಮುಖ್ಯಮಂತ್ರಿಯಾಗಿದ್ದರೆ ಕೆ.ಎಂ.ಮಲ್ಲಪ್ಪ ಗೃಹಮಂತ್ರಿಯಾಗಿದ್ದರು. ಇವರಲ್ಲಿ ಚೆಪ್ಪುದಿರ ಪೂಣಚ್ಚ ಕೊಡವ ಜಾತಿಗೆ ಸೇರಿದ್ದರೆ ಕೆ.ಎಂ.ಮಲ್ಲಪ್ಪ ಲಿಂಗಾಯತ ಮತಸ್ಥರು. ಕನ್ನಡದ ಪ್ರಾಂತಗಳ ಏಕೀಕರಣದ ಸಂದರ್ಭ ಕೊಡಗು ಅನಿವಾರ್ಯವಾಗಿ ಅಂದಿನ ಮೈಸೂರು (ಇಂದಿನ ಕರ್ನಾಟಕ) ರಾಜ್ಯದ ಭಾಗವಾಯಿತು.

ಕೊಡಗಿನಲ್ಲಿ ಪ್ರತ್ಯೇಕತೆಯ ಕೂಗು ಮತ್ತೆ ಮೊಳೆಯಲು ಕಾರಣರಾದವರು 'ಮೈಸೂರು ಮಿತ್ರ' ಮತ್ತು 'Star of Mysore' ಪತ್ರಿಕೆಗಳನ್ನು ಸ್ಥಾಪಿಸಿ ಮೈಸೂರಿನಲ್ಲಿ ಬದುಕು ಕಂಡುಕೊಂಡ ಕಲ್ಯಾಟಂಡ ಬಿ.ಗಣಪತಿ. ಈತನಿಗೆ ಕೊಡಗಿನಲ್ಲಿ ನಡೆಯುತ್ತಿರುವ ಬದಲಾವಣೆ, ಪ್ರಗತಿಗಳೆಲ್ಲವೂ ಕಂಟಕಪ್ರಾಯವಾಗಿ ಕಂಡಿದೆ. ಜಮೀನ್ದಾರ ಶಾಹಿಯ ಮತ್ತು ಜಾತಿ ವ್ಯವಸ್ಥೆಯ ಬಿಗಿ ಹಿಡಿತಕ್ಕೆ ಬೀಳುತ್ತಿರುವ ಏಟುಗಳೆಲ್ಲವೂ ಸಂಸ್ಕೃತಿ ವಿನಾಶದ ಅಸ್ತ್ರಗಳಾಗಿ ಈತನಿಗೆ ಗೋಚರಿಸಿದೆ. ಕೊಡವ ಸಂಸ್ಕೃತಿಯ ಉಳಿವಿನ ಹೆಸರಲ್ಲಿ ಕೆ.ಬಿ.ಗಣಪತಿ ನೇತೃತ್ವದಲ್ಲಿ ಹಲವು ಸಭೆಗಳು, ಚರ್ಚಾಕೂಟಗಳು ನಡೆದಿದ್ದವು. ಆ ಹೊತ್ತಿನಲ್ಲೇ (1990-91) ಕೊಡಗಿನಲ್ಲಿ ತಮ್ಮು ಪೂವಯ್ಯ ನಾಯಕತ್ವದ 'ಕೊಡಗು ಏಕೀಕರಣ ರಂಗ' ಹುಟ್ಟಿಕೊಂಡಿದ್ದು.


ಲಿವಾಕ್ (LIWAK) ಜನನ

ನಾಚಪ್ಪ ಮೊದಲು ಕೊಡಗಿನ ಅಪರೂಪದ ರಾಜಕೀಯ ಪ್ರಜ್ಞೆಯಾಗಿರುವ ಎ.ಕೆ.ಸುಬ್ಬಯ್ಯ ಹತ್ತಿರ ಕಿರಿಯ ನ್ಯಾಯವಾದಿಯಾಗಿ ಸೇರಿಕೊಂಡು ಬೆಂಗಳೂರಿನಲ್ಲಿ ಪ್ರ್ಯಾಕ್ಟೀಸ್ ಆರಂಭಿಸಿದ್ದವರು. ಆದರೆ ಆ ವೃತ್ತಿ ಆತನಿಗೆ ಒಗ್ಗಲಿಲ್ಲ, ಕುಶಾಲನಗರದ ಸಮೀಪದ ರಂಗಸಮುದ್ರದ ಕೆಳಮಧ್ಯಮ ವರ್ಗದ ಬಡ್ಡುಕೊಡವ ಕುಟುಂಬಕ್ಕೆ ಸೇರಿದ

ಆರೋಪಿಯಾಗಿದ್ದರು. ಆದರೆ ಪ್ರಾಸಿಕ್ಯೂಶನ್ ಪಿತೂರಿಯ ಭಾಗವನ್ನು ಸಾಬೀತುಪಡಿಸಲು ವಿಫಲವಾದ ಕಾರಣ ಈತ ಶಿಕ್ಷೆಯಿಂದ ತಪ್ಪಿಸಿಕೊಂಡಿದ್ದರು.

ಷಣ್ಮುಗಂ ಕೊಲೆಯ ನಂತರ ಅರೆಭಾಷೆ ಗೌಡರ ಹುಡುಗರು ಈತನ ಕೈಬಿಟ್ಟಿದ್ದರು. ಏಕೆಂದರೆ ಕೇಸು ನಡೆಸುವ ಹಂತದಲ್ಲಿ ಅವರುಗಳಿಗೆ ಈತನೇ ಮೊದಲು ಕೈಕೊಟ್ಟಿದ್ದರು. ಈ ಹಂತದಲ್ಲಿ ನಾಚಪ್ಪ ಲಿವಾಕ್ ಬಾಗಿಲನ್ನು ಮುಚ್ಚಿ ಕೆ.ಆರ್.ಎಂ.ಎಂ. (ಕೊಡಗು ರಾಜ್ಯ ಮುಕ್ತಿ ಮೋರ್ಚಾ) ಎನ್ನುವ ಹೊಸ ಅಂಗಡಿಯನ್ನು ತೆರೆದರು.

ಅದರ ಭಾಷಣಗಳಲ್ಲಿ, ಬರಹಗಳಲ್ಲಿ ಬಾಳ್‌ಠಾಕ್ರೆ, ಪ್ರಭಾಕರನ್ ಬದಲು ಮಹಾತ್ಮ ಗಾಂಧೀಜಿ ಮತ್ತು ನೆಲ್ಸನ್ ಮಂಡೇಲಾ ಸ್ಥಾನಗಳನ್ನು ಪಡೆದುಕೊಂಡರು. ಕ್ಯಾಂಪ್ ರಂಗಸಮುದ್ರದಿಂದ ಮಡಿಕೇರಿಗೆ ಬದಲಾಯಿತು. ಆದರೆ ಹದಿನೆಂಟು ಮೂಲನಿವಾಸಿಗಳ ಏಳಿಗೆಗಾಗಿ ತನ್ನ ಹೋರಾಟ ಎಂಬ ಮಾತು ಮುಂದುವರಿದಿತ್ತು. "ಕೊಡಗು 'ಸಿ' ಸ್ಟೇಟ್ ಆಗಿದ್ದಾಗ ಮತ್ತು ಅದಕ್ಕೂ ಹಿಂದೆ ರಾಮ ರಾಜ್ಯವಾಗಿತ್ತು, ಕೊಡಗು ಜಿಲ್ಲೆ ಕರ್ನಾಟಕ ರಾಜ್ಯ ಬೊಕ್ಕಸಕ್ಕೆ ವಾರ್ಷಿಕ 72 ಕೋಟಿ ಪಾವತಿಸುತ್ತಿದೆ, ಕೊಡಗಿನ ಕಾವೇರಿ ನೀರನ್ನು ತಮಿಳುನಾಡು ಮತ್ತು ಕರ್ನಾಟಕಕ್ಕೆ ಮಾರಿ ಅಪಾರ ಸಂಪತ್ತನ್ನು ಕ್ರೋಢೀಕರಿಸಬಹುದು,



ಕೊಡಗು ಪ್ರತ್ಯೇಕಗೊಂಡರೆ ಇಲ್ಲಿನ ರಸ್ತೆಗಳಿಗೆ ಚಿನ್ನದ ತಗಡುಗಳನ್ನೇ ಹಾಸಬಹುದು.." ಹೀಗೆ ಉತ್ಪ್ರೇಕ್ಷೆಯ ಮಾತುಗಳು ನಾಚಪ್ಪನವರ ಬಾಯಿಯಿಂದ ಬಂದವು.

ಯಾವ ಪಾಪದ ಫಲವೋ ಕೊಡವರು ಹೆಚ್ಚಾಗಿರುವ ವಿರಾಜಪೇಟೆ ತಾಲೂಕಿನಲ್ಲಿ ಕೆ.ಆರ್.ಎಂ.ಎಂ. ಸಾಕಷ್ಟು ಜನಬೆಂಬಲವನ್ನು ಪಡೆಯಿತು. 1997ರಲ್ಲಿ ಮಡಿಕೇರಿಯಲ್ಲಿ ಒಂದು ವಿಜೃಂಭಣೆಯ ರ್‍ಯಾಲಿ ನಡೆಸಲಾಯಿತು. ನಾಚಪ್ಪ ಹದಿನೆಂಟು ಮೂಲನಿವಾಸಿಗಳ ಕತೆ ಹೇಳುತ್ತಿದ್ದರೂ ಈಗ ಕೊಡವ ಜಾತಿಯ ಜನರ ನಡುವೆ ಈತನ ಓಡಾಟ ಹೆಚ್ಚಾಗತೊಡಗಿತು.

ಸುಮಾರು ಇದೇ ಸಮಯದಲ್ಲಿ ಕೊಡಗಿನ ಹೆಗ್ಗಡೆ,

ಸಮುದಾಯ ಗಳನ್ನೂ ಒಳಗೊಂಡ 'ಕೊಡಗು[...] ಪ್ರಜಾವೇದಿಕೆ'ಯ ರಚನೆ ಆ ಹೊತ್ತಲ್ಲಿ ನಡೆಯಿತ[...] ಕೊಡಗು ಮೂಲನಿವಾಸಿಗಳ ಸಂಘ ಅದರೊಳ[...] ವಿಲೀನವಾಯಿತು.

ಆಗ ನಾಚಪ್ಪ ಕೊಡಗು ಬಂದ್‌ಗೆ ಕರೆ ಕೊಟ್ಟದ್ದ[...] ಜೊತೆಗೆ ಯಾರೂ ಸರಕಾರಕ್ಕೆ ಕಂದಾಯ, ತೆರಿ[...] ಪಾವತಿಸಬಾರದೆಂದು ಫತ್ವಾ ಹೊರಡಿಸಿದ್ದರು. ಕೊಡ[...] ಪ್ರಜಾವೇದಿಕೆ ಜನರ ನಡುವೆ ಸಂಚರಿಸಿ ಈ ಪ್ರತ್ಯೇಕ[...] ಕೂಗಿನ ವಿರುದ್ಧ ಕೆಲಸ ಮಾಡತೊಡಗಿತು. ನಾಚ[...] ಈಗ 'ಕೊಡಗು ದೇಶ' ಎನ್ನುವ ನಿಯತಕಾಲಿಕವ[...] ಪ್ರಕಟಿಸಿ ತನ್ನ ಧೋರಣೆಗೆ ವಿರುದ್ಧ ಇರುವವ[...] ತೇಜೋವಧೆಗೆ ತೊಡಗಿದರು.

ತಾ. 3.12.1997ರ ಬಂದ್ ಮಡಿಕೇರಿ ತಾಲೂಕಿನ[...] ಮಿಶ್ರ ಪ್ರತಿಕ್ರಿಯೆಯನ್ನು ಕಂಡರೆ ವಿರಾಜಪೇಟೆಯ[...] ಬಹುತೇಕ ಯಶಸ್ವಿಯಾಗಿತ್ತು. ಆದರೆ ಸೋಮವಾರಪೇ[...] ತಾಲೂಕಿನಲ್ಲಿ ಮಾತ್ರ ಸಂಪೂರ್ಣವಾಗಿ ವಿಫಲವಾಗಿತ್[...] ಇದಾದನಂತರ ಕೊಡ[...] ಪ್ರಜಾವೇದಿ[...] ಸೋಮವಾರಪೇಟೆ ಮ[...] ಮಡಿಕೇರಿಗಳಲ್ಲಿ ಎರ[...] ಬೃಹತ್ ರ್‍ಯಾಲಿಗಳನ್ನು ನಡೆಸಿತು. ಹಲವು ಕನ್[...]ಪರ ಸಂಘಟನೆಗಳು ಇದರಲ್ಲಿ ಭಾಗವಹಿಸಿದ್ದವು.

ಕೊಡಗು ಪ್ರಜಾವೇದಿಕೆಯ ಹೊಡೆತಗಳ ಜೊತೆಗೇ ವಿವಿಧ ಕೊಡವ ಹಿತಾಸಕ್ತಿಗಳ ನಡುವೆ ನಡೆದ ಜಗ[...] ಕೆ.ಆರ್.ಎಂ.ಎಂ.ನ ಏಳಿಗೆಗೆ ಬಲವಾದ ಏಟನ್ನು ಕೊಟ್ಟಿತು. ಈ ಅಂಗಡಿಯನ್ನು ಮುಚ್ಚುವುದೂ ನಾಚಪ್ಪನವರಿಗೆ ಬೇಕಾಗಿತ್ತು. ಲೆಕ್ಕಪತ್ರವಿಲ್ಲದೆ ಲಕ್ಷಾಂತರ ಹಣಕ್ಕೆ ನಾಚಪ್ಪ ಏಕೈಕ ವಾರಸುದಾರರಾದರು.

ಕೊಡವೋದ್ಧಾರಕ

ಆದಾದ ನಂತರ ನಾಚಪ್ಪ ಕೊಡವರ ಉದ್ಧಾರಕ್ಕೆಂ[...] ಆರಂಭಿಸಿದ ಸಿ.ಎನ್.ಸಿ. (CODAG[...]

…IONAL COUNCIL) ಈ ಹೊತ್ತಲ್ಲಿ …ವಾಗಿವೆ. ಬಳುತಲೆಗೆ ಕೆಂಪು-ಬಿಳಿ ಚೆಕ್ಸಿನ ಚಟ್ಟುಮಸ್ತ್ರ …ಸುಳಿತಿದೆ. ನಾಚಪ್ಪ ನಂದಿನೆರವಂಡ ನಾಚಪ್ಪನಾಗಿ …ನಂದಿನೆರವಂಡ ನಾಚಪ್ಪ ಕೊಡವ ಆಗಿದ್ದಾರೆ. …ದಿಗಾಗಿ ಕೊಡವ ಲ್ಯಾಂಡ್‌ನ ದೊಡ್ಡದೊಂದು ಲ್ಯಾಂಡ್ …ಇಳಿದಿದ್ದಾರೆ. ಕೊಡವ ಯುನಿವರ್ಸಿಟಿ ಮಾಡುವ …ಯವಕಪಾಡಿ ಗ್ರಾಮದಲ್ಲಿ ಅರವತ್ತು ಎಕ್ರೆ ಪೈಸಾರಿ …ಕಬಳಿಸಲು ಪ್ರಯತ್ನಿಸಿದ್ದಾರೆ.

…ಡವರು ಪ್ರತ್ಯೇಕ ಅಸ್ತಿತ್ವವನ್ನು ಹೊಂದಿರುವ ವಿನಾಶದ …ವಲ್ಲಿರುವ ಮೂಲ ನಿವಾಸಿಗಳು, ಅವರ …ಉಳಿಕೆಗಾಗಿ ಸಂವಿಧಾನಾತ್ಮಕವಾದ ವಿಶೇಷ …ಾನವನ್ನು ಕೊಡಬೇಕೆಂಬುದು ನಾಚಪ್ಪನವರ ಈ …ು ವಾದ.

…ಎನ್.ಸಿ. ಸ್ಥಾಪನೆಗೊಂಡು ನಾಲ್ಕಾರು ವರ್ಷಗಳೇ …ಾ ನಾಚಪ್ಪನವರಿಗೆ ಕೆ.ಆರ್.ಎಂ.ಎಂ. ಕೊಟ್ಟ ಹೆಸರು, …ಜನ ಬೆಂಬಲ ದಕ್ಕಿರಲಿಲ್ಲ. ಆದರೆ ಈ ಸಲ …ನ ದುಷ್ಟಶಕ್ತಿಗಳೆಲ್ಲವೂ ಒಂದಾಗಿವೆ. ಒಂದೆಡೆ …ತಗಾಗಿ ಕಾವೇರಿ ಸೇನೆ ಹೂಂಕರಿಸುತ್ತಿದೆ. ಈ ಸಲ …ಸೈನ್ಯಾಧಿಕಾರಿಗಳಾದ ಕರ್ನಲ್ ಮುತ್ತಣ್ಣ, ಮೇಜರ್ … ಮುಂತಾದವರು ಕಾವೇರಿಸೇನೆ ಜೊತೆ ಕೈಜೋಡಿಸಿ … 'ವಲಸಿಗ'ರ ವಿರುದ್ಧ ತೊಡೆ ತಟ್ಟುತ್ತಿದ್ದಾರೆ. … ಪೂವಯ್ಯನ ಡೋಂಗಿ ಪರಿಸರವಾದಿ ಸೈನ್ಯ …-ರವಿ ಚೆಂಗಪ್ಪನವರ ಬೆನ್ನಿಗಿದ್ದು ಬೆಂಬಲಿಸುತ್ತಿದೆ.

…ದೇ ಸಮಯದಲ್ಲಿ ಹೆಚ್ಚು ವೇತನವನ್ನು ಕೋರಿ … ಒಡ್ಡುವ ಶೈಲಿಯ ಪತ್ರವೊಂದು ವಿರಾಜಪೇಟೆ … ಪ್ಲಾಂಟರುಗಳಿಗೆ ಮಾತ್ರ ರವಾನೆ ಆಗಿದೆ. ಇದು …ದು ನಾಲ್ಕು ತಿಂಗಳ ಹಿಂದಿನಿಂದ ನಡೆದಿದೆ. ಇದು …ಯರು ಬರೆದಿರುವ ಪತ್ರ ಎಂದು ನಾಚಪ್ಪ ಹುಯಿ… ಪ್ಲಾಂಟರುಗಳ ಸಭೆಗಳನ್ನು ಕರೆದಿದ್ದಾರೆ. ಇದು …ಂದು ಕಲೆಕ್ಷನ್ ದಂಧೆ ಎಂದು ಖಾತರಿಯಾದ … ಪ್ಲಾಂಟರ್‌ಗಳು ನಾಚಪ್ಪನವರನ್ನು ಈಗ ದೂರ …ದ್ದಾರೆ. ಆದರೂ ನಾಚಪ್ಪ ತನ್ನ ವಾಚಾಳಿತನವನ್ನು … ಮಾಡಿಲ್ಲ.

…ಡಗಿನ ಪ್ರಗತಿಪರ ಚಿಂತಕರ ವೇದಿಕೆಯ ವಿದ್ಯಾಧರ್, …ಡ ವಿಠಲ್, ಮೈಸೂರಿನ ಪತ್ರಕರ್ತ ಸ್ವಾಮಿ ಆನಂದ್ …ಲಾದವರು ಬೆದರಿಕೆ ಪತ್ರದ ಹಿಂದಿರುವ …ಯರೆಂದು ನಾಚಪ್ಪ ಆರೋಪ ಮಾಡಿದ್ದಾರೆ, …ಸರಿಗೆ ದೂರು ನೀಡಿದ್ದಾರೆ. ತನ್ನ ಅಕ್ರಮ ಹಣ …ಂ ದಾರಿಯಲ್ಲಿ ತೋರಿಕೆಗೆ ಈತನಿಗೆ ಕೆಲವು ಶತ್ರುಗಳು …ಬೇಕು. ಇಂತಹವರು ನಮ್ಮ ಶತ್ರುಗಳು ಎಂದು …ಂಬಿಸದಿದ್ದರೆ ಆತನನ್ನು ನಂಬುವ ಜನ …ವುದಾದರೂ ಯಾರಿಗೆ! ಹಣ ಪೀಕುವುದದರೂ … ನಾಚಪ್ಪನವರ ಇಂದಿನ ವೇಷ ಕೊಡವ ಪ್ಲಾಂಟರ್ … ನಕ್ಸಲೈಟ್ ಹಾವಳಿಯಿಂದ ಸಂರಕ್ಷಿಸುವ ಯೋಧಾ…ನದ್ದು.

…ೀಗೆ ಕೊಡಗಿನ ಪ್ರಗತಿಶೀಲರು ನಕ್ಸಲೀಯರೆಂದು; …ದಯನೀಯ ಬದುಕಿನ ವನವಾಸಿಗಳನ್ನು ಸಂಘಟಿಸು… ಬುಡಕಟ್ಟು ಮಾಫಿಯಾ ಎಂದು; ದಲಿತ ಸಂಘರ್ಷ …ಗಳು ದಲಿತ ಮಾಫಿಯಾ ಎಂದು ನಾಚಪ್ಪ ಆರೋಪಿಸಿ …ವರ ಕಡೆ ನೋಡಿ ಕಿರುನಗೆ ಬೀರಿ ಅವರ ಜೇಬಿಗೆ …ಕುವ ಕಾಯಕದಲ್ಲಿ ಮಗ್ನರಾಗಿದ್ದಾರೆ.

…ಂದೊಮ್ಮೆ ಕೊಡಗು ಹದಿನೆಂಟು ಮೂಲನಿವಾಸಿ …ಎನ್ನುತ್ತಿದ್ದ ಈತನ ಪ್ರಕಾರ ಈಗ ಎರವರು ಕೇರಳದಿಂದ … ಬಂದವರು, ಕುರುಬರು ಹೆ.ಡಿ.ಕೋಟೆಯವರು, …ರು ತುಳುನಾಡಿನವರು. ನಿಜಕ್ಕೂ ಕೊಡವರ ಮೂಲದ …ಹಲವಾರು ವ್ವಾದ ವಿವಾದಗಳು ನಡೆದಿವೆ. ಎಲ್ಲ … ಅವರು ಕೊಡಗಿಗೆ ಹೊರಗಿನಿಂದ ಬಂದವರೆಂದು …ದಿಸಲಾಗಿದೆ. ಆದರೆ ನಾಚಪ್ಪನವರ ಪ್ರಕಾರ ಕೊಡವರು … ಇಲ್ಲಿನ ಮೂಲನಿವಾಸಿಗಳು!

…ಂಥ ನಾಚಪ್ಪ ಇತ್ತೀಚೆಗೆ ಮರಗೋಡು ಗ್ರಾಮದಲ್ಲಿ …ಂಗೆ ಸೇರಿದ್ದ 20 ಎಕ್ರೆ ಆಸ್ತಿಯನ್ನು ಅತಿಕ್ರಮಿಸಲು … ಮುಖಕ್ಕೆ ಇಕ್ಕಿಸಿಕೊಂಡಿದ್ದಾರೆ.

… ನಾಚಪ್ಪ ಇದೇ ಫೆಬ್ರವರಿ 21 ರಂದು ಬೆಂಗಳೂರಿ…ಚಾರ ಸಂಕಿರಣವೊಂದನ್ನು ಆಯೋಜಿಸಿದ್ದಾರೆ. ಕೊಡವ …ಗಾಗಿ ಹಕ್ಕೊತ್ತಾಯ ನಡೆಯಲಿದೆ. ಈತನ ವಂಚಕ … ದುರುದ್ದೇಶ, ಅಪಕ್ವ ವೈಚಾರಿಕತೆ ಯಾವುದೂ …ದ ಪ್ರಸಿದ್ಧ ಇತಿಹಾಸ ಶಾಸ್ತ್ರಜ್ಞ ಬಲ್ವಿಂದರ್ ಸಿಂಗ್ …ರ, ನಮ್ಮ ಯು.ಆರ್. ಅನಂತಮೂರ್ತಿ ಮತ್ತಿತರರು …ಹಿಸುತ್ತಾರೆಂದು ಈತನ ಪತ್ರಿಕಾ ಪ್ರಕಟಣೆ ಹೇಳಿದೆ. …ದೇಶದ ಬಹುತ್ವದ ಬಗ್ಗೆ ಅಪಾರ ಕಾಳಜಿ ಇರುವ …ನ್ನಾರು ಕೊಡುವ ಘನ ಉಪನ್ಯಾಸಗಳು ದುಷ್ಟನ …ಯ ವಿನಾಶಕಾರಿ ಅಸ್ತ್ರಗಳಾಗಲಿವೆ!

…ಡಗು ಒಂದೆಡೆ ಕೋಮುವಾದಿ ವಿಧ್ವಂಸಕರ ಕೈಯಲ್ಲಿ …ತ್ತರೆ ಇನ್ನೊಂದೆಡೆ ಈ ನಾಚಪ್ಪ ಎಂಬ ಢೋಂಗಿಯ …ದ ತತ್ತರಿಸುತ್ತಿದೆ. ನಿಜವಾಗಲೂ ಈ ಎರಡು …ಿಂದ ಕೊಡಗಿಗೆ ಬಿಡುಗಡೆ ಎಂದು?

■ ವರದಿಗಾರ, ಮಡಿಕೇರಿ

ಹಳ್ಳಿಬಿದರಗೋಡು ದರೋಡೆ ನಕಲಿ ನಕ್ಸಲೈಟರ ಕೈವಾಡ!

ಮಲೆನಾಡಿನಲ್ಲಿ ಇನ್ನೊಂದು ದರೋಡೆ ನಡೆದಿವೆ.

ಫೆಬ್ರವರಿ 1ರ ನಡುರಾತ್ರಿ ತೀರ್ಥಹಳ್ಳಿ ತಾಲ್ಲೂಕು ಹಳ್ಳಿಬಿದರಗೋಡಿನ ರೈತರಾದ ಅರುಣ್‌ಕುಮಾರ್-ಕಿರಣ್‌ಕುಮಾರ್ ಮನೆಗೆ ಕ್ರಿಮಿನಲ್‌ಗಳ ಒಂದು ಗುಂಪು ನುಗ್ಗಿದೆ. ಬೆಲೆಬಾಳುವ ವಸ್ತುಗಳನ್ನು ದೋಚಿ, ಮನೆಗೆ ಬೆಂಕಿ ಹಚ್ಚಿ ಕೊನೆಗೆ ವಾಪಸ್ ಹೊರಡುವಾಗ ತಾವು ನಕ್ಸಲರೆಂದು ಈ ಸಹೋದರರು ಸಮಾಜ ವಿರೋಧಿಗಳಾದ ಕಾರಣ ಈ ರೀತಿ ಶಿಕ್ಷೆ ನೀಡಿದ್ದೇವೆ ಎಂತಲೂ ಹೇಳಿ



ಕೆಲವು ಕರಪತ್ರಗಳನ್ನು ಎಸೆದು ಮಾಯವಾಗಿದ್ದರು. ಇದು ಸಾಲದೆಂಬಂತೆ ಮಲೆನಾಡಿನ ಯಾವುದೋ ಮೂಲೆಯಿಂದ ಯುವತಿಯೊಬ್ಬಳು ಪತ್ರಿಕೆಯೊಂದಕ್ಕೆ ಫೋನ್ ಮಾಡಿ 'ನಾವು ನಕ್ಸಲರೇ ದರೋಡೆ ಮಾಡಿದ್ದೇವೆ' ಅಂದಳೆಂತಲೂ ವರದಿ ಬಂದವು.

ಆಶ್ಚರ್ಯ ಅಂದರೆ ಸ್ವತಃ ಮಲೆನಾಡಿನ ಪೊಲೀಸರೇ ಇದನ್ನು ನಂಬುತ್ತಿಲ್ಲ. ಈ ಘಟನೆಯ ತನಿಖೆ ಶುರು ಮಾಡಿರುವ ಪೊಲೀಸರು ಎಫ್‌ಐಆರ್‌ನಲ್ಲಿ ಹಲ್ಲೆ, ದರೋಡೆ ಕೇಸು ದಾಖಲಿಸಿಕೊಂಡಿದ್ದಾರೆಯೇ ವಿನಃ ನಕ್ಸಲರಿಂದಾದ ಘಟನೆ ಎಂದಲ್ಲ.

ಮೇಲುನೋಟದಲ್ಲೇ ಈ ದರೋಡೆ ಘಟನೆಯು ತಲ್ಲೂರಂಗಡಿಯಲ್ಲಿ 2007ರ ಜುಲೈನಲ್ಲಿ ನಡೆದಿದ್ದ ಪ್ರಕರಣವನ್ನೇ ಹೋಲುತ್ತಿದೆ. ಅವತ್ತು ತಲ್ಲೂರಂಗಡಿಯ ನಾಗೇಶ, ಉಮೇಶ್, ಶಂಕರಪ್ಪ ಹಾಗೂ ಗ್ರಾಮ ಪಂಚಾಯತಿ ಮೆಂಬರ್ ಸತೀಶರ ಮನೆಗೆ ನುಗ್ಗಿದ್ದ ಗ್ಯಾಂಗ್ ಇದೇ ತರ ಹಲ್ಲೆ ಮಾಡಿ, ಲೂಟಿ ನಡೆಸಿ ನಕ್ಸಲರಿಗೆ ಜೈ ಎಂದು ಕೂಗು ಹಾಕಿ ಹೋಗಿದ್ದರು. ಆದರೆ ಇನ್ಸ್‌ಪೆಕ್ಟರ್ ಬಾಲರಾಜ್ ಹಾಗೂ ಜಿಲ್ಲಾ ಎಸ್ಪಿ ಅರುಣ್ ಚಕ್ರವರ್ತಿ ಅದನ್ನು ನಂಬದೆ ತನಿಖೆ ಮುಂದುವರೆಸಿ ಕೊನೆಗೆ ತಲ್ಲೂರಂಗಡಿಯವನೇ ಆಗಿದ್ದ ಶಿವರಾಮಾಚಾರಿಯನ್ನು ಹಿಡಿದಿದ್ದರು. ಅವನ ಜೊತೆಗೆ ಬೆಂಗಳೂರಿನ ಶಿವಕುಮಾರ್, ಬಿ.ಎನ್.ವಿಜಯಕುಮಾರ್, ಎಂ.ಎನ್.ರಾಜೇಶ್ ಎಂಬ ಪುಂಡರು ಸೆರೆಸಿಕ್ಕರು. ಈ ಗ್ಯಾಂಗಿನ ಜನ ವಿಜಯಲಕ್ಷ್ಮಿ, ಅಂಬಿಕಾ ಎಂಬ ಹುಡುಗಿಯರನ್ನೂ ಜೊತೆಲಿರಿಸಿಕೊಂಡು ದರೋಡೆ ನಡೆಸಿದ್ದರು.



ಅರುಣ್



ಕಿರಣ್

ಈಗ ಹಳ್ಳಿಬದರಗೋಡಿನ ವಿಚಾರ ನೋಡುವುದಾದರೆ ಹಲ್ಲೆ-ಲೂಟಿಯಾದ ಬಗ್ಗೆ ನಕ್ಸಲರಿಂದ ಇದುವರೆಗೆ ಸಮರ್ಥನೆಯ ಅಧಿಕೃತ ಹೇಳಿಕೆ ಬಂದಿಲ್ಲ, ಅದೇ ರೀತಿ ನಿರಾಕರಣೆಯ ಹೇಳಿಕೆಯೂ ಬಂದಿಲ್ಲ ಎಂಬುದು ನಿಜವಾದರೂ ಈ ದರೋಡೆ ಪ್ರಕರಣದಲ್ಲಿ ಸ್ಥಳೀಯರ ಕೈವಾಡವಿರುವ ಸಾಧ್ಯತೆ ಎದ್ದು ಕಾಣುತ್ತಿದೆ.

ದರೋಡೆ ನಡೆದ ದಿನ...

ಹಳ್ಳಿಬದರಗೋಡಿನ ರೈತ ಸೋದರರಾದ ಅರುಣ್ ಕುಮಾರ್-ಕಿರಣ್‌ಕುಮಾರ್ ಮಾಮೂಲಿ ರೈತರಂತಿರುವವರಲ್ಲ, ಸುತ್ತಲಿನ ಜನರ ಕುಂದುಕೊರತೆ ಕೇಳುತ್ತಾ, ಸಾಧ್ಯವಾದ ನೆರವು ನೀಡುತ್ತಾ ಬದುಕುತ್ತಿರುವ ಜನ ಅವರು.

ಹೀಗಿರುವಾಗ ಫೆಬ್ರವರಿ ಒಂದರಂದು ಭಾನುವಾರ ನಡುರಾತ್ರಿ ಸುಮಾರು ಒಂಬತ್ತು ಜನರ ತಂಡವೊಂದು ಅವರ ಮನೆ ಬಾಗಿಲು ತಟ್ಟಿ "ನಕ್ಸಲರು ಬಂದಿದ್ದೇವೆ. ಬಾಗಿಲು ತೆಗೆಯಿರಿ" ಎಂದು ಕೂಗಿದೆ. ಅನುಮಾನಗೊಂಡ ಒಬ್ಬರು ಮನೆಯೊಳಗಿನಿಂದಲೇ "ನೀವು ನಕಲಿ ನಕ್ಸಲೈಟರೊ ಇಲ್ಲಾ ಅಸಲೀನೋ?"" ಅಂತಲೂ ಕೇಳಿಬಿಟ್ಟಿದ್ದಾರೆ. "ಒರಿಜಿನಲ್ ನಕ್ಸಲೈಟರು" ಅಂದಿದ್ದಕ್ಕೆ ಬಂದವರಲ್ಲೊಬ್ಬ ಸರಿ ಅಂತಾ ಬಾಗಿಲು ತೆಗೆದಾಗ ಒಳಕ್ಕೆ ನುಗ್ಗಿಬಂದ ಗುಂಪು ಕಣ್ಣಿಗೆ ಕಂಡವರ ಮೇಲೆಲ್ಲಾ ಹಲ್ಲೆ ಮಾಡಿ ಒಂದೆಡೆ ಕೂಡಿ ಹಾಕಿ ಹಣ-ಆಭರಣ ಹುಡುಕಿ ಗಂಟುಕಟ್ಟಿಕೊಂಡಿದ್ದಾರೆ. ಅಲ್ಮೇರಾ ಮುರಿದು ಕೆಲ ನಿರ್ದಿಷ್ಟ ದಾಖಲೆ ಪತ್ರಗಳನ್ನು ಹುಡುಕಿ ಬೆಂಕಿ ಇಟ್ಟಿದ್ದಾರೆ. ಕೊನೆಗೆ ವಾಪಸ್ ಹೋಗುವಾಗ ಇಡೀ ಮನೆಗೆ, ಫರ್ನೀಚರ್‌ಗಳಿಗೆ, ಮೋಟಾರ್ ಬೈಕಿಗೆ ಬೆಂಕಿ ಹಾಕಿ ಸುಟ್ಟು ಪರಾರಿಯಾಗಿದ್ದಾರೆ. ಈ ಗುಂಪು ಸ್ಥಳದಲ್ಲೇ ಒಂದು ವಿಚಾರಣೆಯ ನಾಟಕ ಆಡಿ ಅರುಣ್-ಕಿರಣ್ ಸೋದರರ ಮೇಲೆ ಒಂದು ಆರೋಪ ಹೊರಿಸಿ ಹೋಗಿದೆ.

ಆ ಪ್ರಕಾರ ಇವರಿಗೆ 50 ಎಕರೆ ಜಮೀನಿದೆ. 40 ಸೈಟುಗಳಿವೆ. ಇನ್ನೂರೈವತ್ತು ಕ್ವಿಂಟಾಲ್ ಅಡಿಕೇನೂ ಸ್ಟಾಕಿದೆ. ಜೊತೆಗೆ ಬಡ್ಡಿ ವ್ಯವಹಾರ ನಡೆಸುತ್ತಾ ಬಡವರನ್ನು ಗೋಳು ಹೊಯ್ದುಕೊಳ್ಳುತ್ತಿದ್ದಾರೆ. ಅಷ್ಟೇ ಅಲ್ಲದೆ ಗ್ರಾಮದ ಹೆಣ್ಣುಮಕ್ಕಳನ್ನು ಶೋಷಿಸುತ್ತಿದ್ದಾರೆ. ಅವರ ದೊಡ್ಡಮ್ಮ ಒಬ್ಬರಿಗೆ



ಆಸ್ತಿಯಲ್ಲಿ ಸರಿಪಾಲು ಕೊಡದೆ ವಂಚಿಸಿದ್ದಾರೆ ಎಂಬಿತ್ಯಾದಿ ಆರೋಪಗಳಿವು.

ಆದರೆ ಸತ್ಯಸಂಗತಿ ಬೇರೆಯೇ ಇದೆ.

ಈ ಕುಟುಂಬಕ್ಕೆ ಎರಡು ತಲೆಮಾರುಗಳ ಹಿಂದೆ 50 ಎಕರೆ ಜಮೀನಿದ್ದುದು ನಿಜವಾದರೂ 1973ರ ಟೆನೆನ್ಸಿ ಕಾಯಿದೆ ಪ್ರಕಾರ 35 ಎಕರೆ ಗೇಣಿದಾರರಿಗೆ ಹೋಗಿದೆ. ಇನ್ನು ಸೈಟು ಅಂತಾ ಒಂದೇ ಒಂದು ಇದೆಯಾಗಲಿ ನಲವತ್ತು ಸೈಟಿಲ್ಲ.

ಮನೆಯಲ್ಲಿ ಶೇಖರಿಸಿದ್ದ ಅಡಿಕೆ ಸ್ವತಃ ಅವರೇ ಬೆಳೆದಿದ್ದು. ಇನ್ನೂ ಬಡ್ಡಿ ವ್ಯವಹಾರ, ಸ್ತ್ರೀಶೋಷಣೆಯ ಆರೋಪಗಳನ್ನು ಹಳ್ಳಿಬದರಗೋಡಿನ ಜನರೇ 'ನಿಜ' ಎನ್ನುತ್ತಿಲ್ಲ. ಉಳಿದಂತೆ ದೊಡ್ಡಮ್ಮ ಒಬ್ಬರಿಗೆ ಕೋರ್ಟು ಆದೇಶದಂತೆ ಆಸ್ತಿಯಲ್ಲಿ ಪಾಲೂ ಸಿಕ್ಕಿದೆ. ಅವರ ಕುಟುಂಬದೊಳಗೆ ಈ ಆಸ್ತಿವಿವಾದ ಈಗ ಮುಗಿದ ಅಧ್ಯಾಯ ಮಾತ್ರ.

ವಸ್ತುಸ್ಥಿತಿ ಹೀಗಿದ್ದಾಗಲೂ ಇವರ ಮೇಲಿನ ಯಾವುದೇ ಆರೋಪದಲ್ಲಿ ಸಾಕ್ಷಾತ್ ನಕ್ಸಲರೇ ಬಂದು ವಿಚಾರಿಸುವಷ್ಟು ಸತ್ಯ ಇಲ್ಲದಿದ್ದರೂ ಅರುಣ್-ಕಿರಣ್ ಮನೆ ಯಾಕೆ ದಾಳಿಗೊಳಗಾಯಿತು? ಏನಿದರ ಮಸಲತ್ತು?

ದುಷ್ಮನ್ ಬಗಲ್ ಮೆ ಹೈ!

ಹಳ್ಳಿಬದರಗೋಡಿನಲ್ಲಿ ಕಳೆದ ಎರಡು-ಮೂರು ವರ್ಷಗಳಲ್ಲಿ ನಡೆದಿರುವ ಘಟನೆಗಳನ್ನು ಒಮ್ಮೆ ಚೆಕ್ ಮಾಡಿದರೆ ಕೆಲವು ಸಂಶಯ ಹುಟ್ಟಿಸುವ ಸಂಗತಿಗಳು ಕಾಣುತ್ತವೆ.

ಅನಧಿಕೃತ ಕ್ರಷರ್ ದಂಧೆ ಅದರಲ್ಲೊಂದು!

ಸುಧಾಕರ ಎಂಬುವನು ಅದೇ ಗ್ರಾಮಕ್ಕೆ ತಾಗಿಕೊಂಡಿರುವ ಸರ್ಕಾರಿ ಗೋಮಾಳ ಜಮೀನಿನಲ್ಲಿ ಅಕ್ರಮ ಜಲ್ಲಿಕಲ್ಲು ಕ್ರಷರ್ ದಂಧೆ ನಡೆಸುತ್ತಿದ್ದಾನೆ. ಇದರ ಹಾವಳಿ ಎಷ್ಟಾಗಿದೆಯೆಂದರೆ ಅಕ್ಕಪಕ್ಕದ ರೈತರ ಬಾಳೆತೋಟ, ಅಡಿಕೆ ತೋಟಗಳೆಲ್ಲಾ ಈಗ ನಾಶಗೊಂಡಿವೆ. ಇದನ್ನು ತಡೆಯಲು ರೈತರು ಹೊರಟಾಗ ಇದೇ ಅರುಣ್‌ಕುಮಾರ್ ರವಿನ್ಯೂ ಆಫೀಸ್‌ಗೆ ಹೋಗಿ ಮಾಹಿತಿಹಕ್ಕಿನಡಿ ಕೆಲ ದಾಖಲೆ ಹೊರತೆಗೆದರು. ಅದರಲ್ಲಿ ಕ್ರಷರ್ ದಂಧೆ ಅಕ್ರಮ ಎಂಬುದು ಸಾಬೀತಾಗಿ ಹೋಯಿತು.

ಇದರಿಂದ ನಷ್ಟ ಮತ್ತು ಅವಮಾನ ಆಗಿದ್ದು ಸುಧಾಕರ್‌ಗೆ!

ಹಳ್ಳಿಬದರಗೋಡು ಗ್ರಾಮ ಪಂಚಾಯತ್ ಪೂರಾ ಹೊಸಳ್ಳಿ ಸುಧಾಕರನ ಕಂಟ್ರೋಲ್‌ನಲ್ಲಿದೆ. ಇವನು ಪಂಚಾಯತಿ ದುಡ್ಡಿನಲ್ಲೇ ತನ್ನ ಕ್ರಷರ್ ಕೆಲಸ ನಡೆಯುವ ಜಾಗದವರೆಗೂ ಒಂದು ರೋಡ್ ಮಾಡಿಸಿಕೊಂಡಿದ್ದಾನೆ. ಗ್ರಾಮ ಪಂಚಾಯತಿಯಲ್ಲಿ 2,63,000 ರೂಪಾಯಿಯ ಅವ್ಯವಹಾರವೊಂದರ ಬಗ್ಗೆ ಅರುಣ್ ನೇತೃತ್ವದಲ್ಲಿ ಗ್ರಾಮಸ್ಥರಿಂದ ಪ್ರತಿಭಟನೆಯೂ ಆಗಿತ್ತು. ಮೊನ್ನೆ ನಕಲಿ ನಕ್ಸಲರಿಂದ ದಾಳಿಗೊಳಗಾಗಿರುವ ನಾಗೇಶ, ಸತೀಶ, ಶಂಕರಪ್ಪ ಮುಂತಾದವರು ಸುಧಾಕರನ ಭ್ರಷ್ಟಾಚಾರಗಳ ವಿರುದ್ಧದ ಪ್ರತಿಭಟನೆಯಲ್ಲಿ ಭಾಗವಹಿಸಿದ್ದವರೆ. ಇವರೆಲ್ಲರ ವಿರುದ್ಧ ಸೇಡು ತೀರಿಸಲು ಇಷ್ಟು ಕಾರಣ ಸಾಕಲ್ಲವೇ ಸುಧಾಕರನಿಗೆ?

ಇದರೊಂದಿಗೆ ಸ್ಥಳೀಯ ವಾಸುದೇವ್ ಎಂಬುವವರ ಮನೆ ಸುಟ್ಟ ಘಟನೆಯೂ ಒಂದಿದೆ. ಕಿರಣರ ಕೆಲಸದಾಳೀತ. 2006ರ ಜನವರಿ 1ರಂದು ರಾತ್ರಿ ಕೆಲವರು ದ್ವೇಷದಿಂದ ವಾಸುದೇವನ ಮನೆಗೆ ಬೆಂಕಿ ಇಟ್ಟಿದ್ದರು. ಆಗ ಕಿರಣ್ ಇನ್ಸ್‌ಪೆಕ್ಟರ್ ಬಾಲರಾಜ್‌ಗೆ ಹೇಳಿ ತನಿಖೆ ಮಾಡಿಸಿದಾಗ ಅದೇ ಬದರಗೋಡಿನ ಕೆರೆಬೈಲ್ ದಿನೇಶ್, ಬಾಬುನಾಯ್ಕ ಚಂದ್ರು, ಕೃಷ್ಣನಾಯಕ ಆರೋಪಿಗಳೆಂದು ಪತ್ತೆಯಾಗಿತ್ತು. ಕೋರ್ಟ್‌ನಲ್ಲಿ ಈಗ ಅದರ ಕೇಸು ನಡೆದಿದೆ. ಈ ನಡುವೆ ಕಿರಣ್ ತಾನೇ ಖುದ್ದಾಗಿ ವಾಸುದೇವ್‌ಗೆ ಮನೆ ಕಟ್ಟಿಸಿಕೊಟ್ಟಿದ್ದರು. ಈ ಬೆಳವಣಿಗೆಯು ಅವತ್ತು ಬೆಂಕಿ ಹಚ್ಚಿದ್ದ ಕ್ರಿಮಿನಲ್‌ಗಳಲ್ಲಿ ಕಿರಣ್ ಬಗ್ಗೆ ದ್ವೇಷ ಹುಟ್ಟಿಸಿತ್ತು. ಅಷ್ಟೇ ಅಲ್ಲ ಬದರಗೋಡಿನ ಕೂಲಿ ಕಾರ್ಮಿಕರಾದ ಹೇಮಂತ ಕಳಸಪ್ಪ ಎಂಬುವರಿಗೆ ಕರೆಂಟ್ ಲೈನ್ ಎಳೆದುಕೊಳ್ಳಲು ಭೂಮಾಲೀಕರಾದ ಯೋಗೇಂದ್ರ ಭಟ್ಟ ಹಾಗೂ ದಯಾನಂದ ಕಿರುಕುಳ ಕೊಟ್ಟಿದ್ದರು. ಆಗ ಅರುಣ್ ಪಂಚಾಯತಿ ನಡೆಸಿ ವಿವಾದ ಬಗೆಹರಿಸಿದ್ದಾರೆ.

ಹಾಗಾಗಿ ಅರುಣ್-ಕಿರಣ್ ವಿರೋಧಿಗಳ ಪಟ್ಟಿಗೆ ನೆರೆಯಾತ ಯೋಗೇಂದ್ರನೂ ಸೇರಿದಂತಾಯಿತು. ಅನುಮಾನಿತರ ಪಟ್ಟಿಗೆ ಸೇರಬೇಕಾದ ಇನ್ನೊಂದು ಪ್ರಮುಖ ಹೆಸರಿದೆ.

ಆತ ಶಿವಾನಂದ ಹೆಗಡೆ!

ಈ ಹಿಂದೆ ತಲ್ಲೂರಂಗಡಿ ಉಮೇಶ್ ಮನೆಗೆ ನಕಲಿ ನಕ್ಸಲೈಟರ ದಾಳಿಯಾದಾಗ ಪೊಲೀಸರಿಗೆ ಒಂದು ಕೈ ಬರಹದ ನಕ್ಸಲ್ ಪೋಸ್ಟರ್ ಸಿಕ್ಕಿತ್ತು. ಆ ಕಲಾಕೃತಿಯನ್ನು ರಚಿಸಿದ್ದ ಕೇಡಿ ಇದೇ ಶಿವಾನಂದ ಹೆಗಡೆ. ಆ ಸಂಬಂಧ ಶಿವಾನಂದನ ಮೇಲೂ ಕೇಸಾಗಿದ್ದು ಅದರಲ್ಲಿ ಶಿವಾನಂದನ ವಿರುದ್ಧ ಅರುಣ್ ಮತ್ತವರ ಸೋದರ ಬಿ.ಕೆ. ರವಿ ಸಾಕ್ಷಿಗಳಾಗಿದ್ದಾರೆ.

ಇದನ್ನೆಲ್ಲಾ ಪರಿಶೀಲಿಸಿ ನೋಡಿದರೆ ಫೆಬ್ರವರಿ ಒಂದರಂದು ಹಳ್ಳಿಬದರಗೋಡಿನ ಅರುಣ್-ಕಿರಣ್ ಮನೆ ಮೇಲಿನ ದಾಳಿ, ದರೋಡೆ, ಬೆಂಕಿ ಹಚ್ಚಿರುವುದರ ಹಿಂದೆ ಸ್ಥಳೀಯರ ಕೈವಾಡವಿರುವ ಸಾಧ್ಯತೆಗಳೇ ಹೆಚ್ಚಾಗಿ ಕಂಡುಬರುತ್ತಿವೆ. ಪೊಲೀಸರು ಸುಧಾಕರ, ಕೆರೆಬೈಲು ದಿನೇಶ, ಶಿವಾನಂದ ಹೆಗಡಿ ಮತ್ತಿತರರ ಕೈವಾಡದ ಬಗ್ಗೆ ಸರಿಯಾದ ತನಿಖೆ ಮಾಡಬೇಕಿದೆ.



ಮಲೆನಾಡಿನ ನಕ್ಸಲರು ಇದುವರೆಗೆ ಇಂತಹ ದರೋಡೆ ಮಾಡಿರುವ ಪುರಾವೆಗಳು ಇಲ್ಲ. ಇಷ್ಟಕ್ಕೂ ದರೋಡೆ ಮಾಡಿ ಜೀವನ ನಡೆಸಬೇಕಾಗಿದ್ದರೆ ಅವರೆಲ್ಲಾ ರಾಜಕಾರಣಿಗಳಾಗಬಹುದಿತ್ತು, ಅದು ಬಿಟ್ಟು ಹೋರಾಟ ನಡೆಸಲು ನಕ್ಸಲೈಟ್ ಆಗುತ್ತಿದ್ದುದಾದರೂ ಯಾಕೆ? ■

ದಲಿತ ಸಂಸ್ಕೃತಿ ಮತ್ತು ರಾಜಕೀಯದ ವೈಚಾರಿಕ ವಿಶ್ಲೇಷಣೆ

ಪುಸ್ತಕ ವಿಮರ್ಶೆ


ಬುದ್ಧನೆಡೆಗೆ...
(ವಿಮರ್ಶಾ ಲೇಖನಗಳು)
ಡಾ. ವಡ್ಡಗೆರೆ ನಾಗರಾಜಯ್ಯ,
ಪ್ರ: ಕರ್ನಾಟಕ ಸಾಹಿತ್ಯ ಪರಿಷತ್,
ಬೆಂಗಳೂರು-72
2008, ಪುಟಗಳು - 210 ಬೆಲೆ-
ರೂ. 110



ಸಂಸ್ಕೃತಿ, [illegible] ದಲಿತ [illegible] ಧರ್ಮ ಮತ್ತು [illegible]. [illegible] ಈ ಕೃತಿಯ [illegible] ಲೇಖನಗಳಲ್ಲಿ ವಡ್ಡಗೆರೆ [illegible].

[illegible] ತಮ್ಮ ಮೊದಲ ಕೃತಿ '[illegible]'ಗೆ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ಪಡೆದಿದ್ದ ನಾಗರಾಜಯ್ಯ ವಿಮರ್ಶೆ ಹಾಗೂ ವಿಶ್ಲೇಷಣೆಯಲ್ಲಿ ತಮಗಿರುವ ಸಾಮರ್ಥ್ಯವನ್ನು 'ಬುದ್ಧನೆಡೆಗೆ' ಕೃತಿಯಲ್ಲಿ ನಿರೂಪಿಸಿದ್ದಾರೆ. ಇಲ್ಲಿರುವ ಕೆಲವು ಲೇಖನಗಳ ಹಿಂದಿರುವ ಅಧ್ಯಯನಶೀಲತೆ ಮತ್ತು ಚಿಂತನಶೀಲತೆಗಳು ಅವರ ಬರವಣಿಗೆಯ ಶಕ್ತಿಯ ಬಗ್ಗೆ ಮೆಚ್ಚುಗೆ ಹುಟ್ಟಿಸುತ್ತವೆ.

ಇದರಲ್ಲಿರುವ ಲೇಖನಗಳು ಪ್ರಧಾನವಾಗಿ ವಿಶ್ಲೇಷಣಾತ್ಮಕವಾದವುಗಳಾಗಿದ್ದು ಸಮಕಾಲೀನ ಸಂದರ್ಭದಲ್ಲಿ ಚರ್ಚೆಗೊಳಪಡುತ್ತಿರುವ ಹಲವು ವಿದ್ಯಮಾನಗಳನ್ನು ನಾಗರಾಜಯ್ಯ ಮುಖ್ಯವಾಗಿ ಅಂಬೇಡ್ಕರ್‌ವಾದದ ದೃಷ್ಟಿಕೋನದಿಂದ ಪರಿಶೀಲಿಸಿದ್ದಾರೆ. ಸಾಮಾನ್ಯವಾಗಿ ಸಾಹಿತ್ಯ ಮತ್ತು ಸಾಹಿತ್ಯ ಕೃತಿಗಳ ಬಗ್ಗೆ ಬರೆಯಲಾದ ಲೇಖನಗಳನ್ನು ವಿಮರ್ಶಾ ಲೇಖನಗಳೆಂದು ಕರೆಯುವ ಪರಿಪಾಠ ಇದೆ. 'ಬುದ್ಧನೆಡೆಗೆ' ಕೃತಿಯಲ್ಲಿ ಸಾಹಿತ್ಯ ಸಂಬಂಧಿಯಾದ ಲೇಖನಗಳಿವೆಯಾದರೂ ಅವುಗಳ ಸಂಖ್ಯೆ ಕಡಿಮೆ. ಸಂಸ್ಕೃತಿ ಮತ್ತು ರಾಜಕೀಯವನ್ನು ಕುರಿತಾದ ಲೇಖನಗಳ ಸಂಖ್ಯೆ ಹೆಚ್ಚಾಗಿದೆ. ಕೃತಿಯ ಶೀರ್ಷಿಕೆ ಹೇಳುವಂತೆ ಬುದ್ಧ ಧರ್ಮ ಮತ್ತು ಆ ಕುರಿತು ದಲಿತ ಸಮುದಾಯಗಳಿಗಿರಬೇಕಾದ ಅಭಿಮಾನವನ್ನು ನಿದರ್ಶಿಸುವ ಲೇಖನಗಳು, ಜಾತಿ ವ್ಯವಸ್ಥೆಯ ಕರಾಳತೆಗಳನ್ನು ವಿವರಿಸುವ ಲೇಖನಗಳು ಇದರಲ್ಲಿ ಪ್ರಧಾನವಾಗಿವೆ.


ವಡ್ಡಗೆರೆ ನಾಗರಾಜ್

ವರ್ತಮಾನ ಸಂದರ್ಭದ ಸಂಗತಿಗಳನ್ನು ಜನಪರ ದೃಷ್ಟಿಕೋನದಿಂದ ವಿಶ್ಲೇಷಿಸುವ ಗಂಭೀರ ಪ್ರಯತ್ನವನ್ನು 'ಬುದ್ಧನೆಡೆಗೆ' ಕೃತಿ ಮಾಡಿದ್ದು ಹಲವಾರು ರೀತಿಯಲ್ಲಿ ಗಮನಾರ್ಹವಾಗಿದೆ. 'ನೋಡ ನೋಡುತ್ತಿದ್ದಂತೆಯೇ ಕನ್ನಡ ದಲಿತ ಸಾಹಿತ್ಯ ಮೂರನೆಯ ತಲೆಯೊಂದನ್ನು ತಲುಪಿದೆ' ಎಂಬ ಮಾತನ್ನು ದೃಷ್ಟಿಯಲ್ಲಿಟ್ಟುಕೊಂಡು ಹೇಳುವುದಾದರೆ ಅಂತಹ ಮೂರನೆಯ ತಲೆಮಾರಿನವರು ಎಂದು ಕರೆಯಬಹುದಾಗಿರುವ ಲೇಖಕರಲ್ಲಿ ವಡ್ಡಗೆರೆ ನಾಗರಾಜಯ್ಯ ಗಮನಾರ್ಹ ಪ್ರತಿಭೆಯುಳ್ಳವರು. ತಮ್ಮ ಅಧ್ಯಯನಶೀಲ ಪ್ರವೃತ್ತಿ ಮತ್ತು ಸಾಂಸ್ಕೃತಿಕ ಪರಿಕರಗಳ ಮೂಲಕ ಅಭಿವ್ಯಕ್ತಿಸುವ ಆಸಕ್ತಿಗಳಿಂದಾಗಿ ಅವರು ಈ ಕೃತಿಯಲ್ಲಿ ಗಮನ ಸೆಳೆಯುತ್ತಾರೆ.

'ದಲಿತ ಹೋರಾಟದ ಹೆಜ್ಜೆಗಳು–ಒಂದು ಹಿನ್ನೋಟ'; 'ನಕ್ಸಲೀಯತೆ, ದಲಿತ ಚಳವಳಿ, ಹಿಂದೂ ಫ್ಯಾಸಿಸಂ ಇತ್ಯಾದಿ'; 'ಡಾ. ಅಂಬೇಡ್ಕರ್ ಕನಸು–ಬುದ್ಧ ಭಾರತ'; 'ಅಂಬೇಡ್ಕರ್: ವ್ಯಕ್ತಿ ಸ್ವಾತಂತ್ರ್ಯದ ದಾರಿಯೆಡೆಗಿನ ಬೆಳಕ ಹೆಜ್ಜೆ'; 'ಅಂಬೇಡ್ಕರ್ ದಾರಿಯಲ್ಲಿ ನಡೆಯುತ್ತೇವೆ'; 'ದಲಿತ-ರೈತ ಒಂದುಗೂಡಬೇಕು, ಯಾಕೆ?' ಮುಂತಾದ ಲೇಖನಗಳಲ್ಲಿ ನಾಗರಾಜಯ್ಯ ದಲಿತ ಹೋರಾಟದ ಆಶಯಗಳನ್ನು ಮಂಡಿಸಿದ್ದಾರೆ. ಅಂಬೇಡ್ಕರ್ ತತ್ವಗಳ ಬಗ್ಗೆ ದಲಿತ ನಾಯಕರಲ್ಲಿ ಇರಬೇಕಾದ ಸ್ಪಷ್ಟತೆಯನ್ನು ಕುರಿತು ಈ ಲೇಖನಗಳು ಮಾಹಿತಿ ನೀಡುತ್ತವೆ. ದಲಿತ ಹೋರಾಟವನ್ನು ಕೇವಲ ಸಮರ್ಥನೆಯ ನೆಲೆಯಿಂದ ಮಾತ್ರ ನೋಡದೆ, ವಿಮರ್ಶಾತ್ಮಕ ನೆಲೆಗಳಿಂದ ಅವಲೋಕನ ನಡೆಸುವ ದಿಸೆಯಲ್ಲಿ ಈ ಲೇಖನಗಳು ಯಶಸ್ವಿಯಾಗಿವೆ.

'ಟಿಪ್ಪು, ಇತಿಹಾಸದ ಗೋರಿಯ ಮೇಲೆ ಹಿಂದೂ ರಾಮರಾಜ್ಯಶಾಹಿ ಸ್ಥಾಪನೆ ಸಾಧ್ಯವಿಲ್ಲ'; 'ಎಮ್ಮೆ: ಕನ್ನಡ ಸಂಸ್ಕೃತಿಯ ಲಾಂಛನ'; 'ಕಾಪಾಲಿಕ ಮಠಮನೆ'; 'ಬಸವಣ್ಣ ಬ್ರಾಹ್ಮಣನಲ್ಲ; ಮಾದಿಗ ಜಾತಿಯವನೇ' ಲೇಖನಗಳಲ್ಲಿ ಇನ್ನೂ ಹೆಚ್ಚು ನಿಖರವಾದ, ಮಾಹಿತಿಪೂರ್ಣವಾದ ವಿಶ್ಲೇಷಣೆಯನ್ನು ನಾಗರಾಜಯ್ಯ ಮಾಡಿದ್ದಾರೆ. ಈ ಲೇಖನಗಳು ಸಂಸ್ಕೃತಿ ಅಧ್ಯಯನ ಹಾಗೂ ಪರಿಶೋಧನೆಗಳ ಹಾದಿಯಲ್ಲಿ ಈಚಿನ ಹಲವಾರು ವಿದ್ವಾಂಸರು ನಡೆಸುತ್ತಿರುವ ಪ್ರಯೋಗಗಳಿಗೆ ಪೂರಕವಾಗಿದ್ದು, ಈ ವಿಧಾನದಲ್ಲಿ ನಾಗರಾಜಯ್ಯನವರಿಗಿರುವ ಶಕ್ತಿ ಹಾಗೂ ಸಾಮರ್ಥ್ಯದ ಬಗ್ಗೆ ಇವು ಬೆಳಕು ಚೆಲ್ಲುತ್ತವೆ. ಸ್ಥಳೀಯ ಮಾಹಿತಿಯನ್ನು, ಜನಪದರ ಆಚರಣೆಗಳನ್ನು, ಅವರ ಮಾತಿನಲ್ಲಿ ಉಳಿದುಬಂದಿರುವ ಸಾಕ್ಷ್ಯವನ್ನು ಕೂಡ ಪರಿಣಾಮಕಾರಿಯಾದ ಆಕರಗಳಾಗಿ ಬಳಸುವ ಸೂಕ್ಷ್ಮಗ್ರಾಹಿತ್ವವನ್ನು ಈ ಲೇಖನಗಳು ತೋರಿಸುತ್ತವೆ.


'ಎಮ್ಮೆ: ಕನ್ನಡ ಸಂಸ್ಕೃತಿಯ ಲಾಂಛನ' ಹಾಗೂ 'ಕಾಪಾಲಿಕ ಮಠಮನೆ' ಎಂಬ ಎರಡು ಲೇಖನಗಳು ಸಂಸ್ಕೃತಿ ಬೇರುಗಳ ಮೂಲಪರಿಶೋಧನೆಯೊಂದಿಗೇ ದಲಿತ ರಾಜಕೀಯ ಚಿಂತನೆಯ ಸಾಮರ್ಥ್ಯ ವಿಸ್ತರಿತವಾಗಬೇಕು ಎಂಬ ಗ್ರಹಿಕೆಯನ್ನು ಅರ್ಥಪೂರ್ಣವಾಗಿ ಮಂಡಿಸುತ್ತವೆ.

'ಉರಿ ಚಮ್ಮಾಳಿಗೆ: ಅಡಿಗಲ್ಲು ಒಂದು'; 'ದಲಿತ ಸಾಹಿತ್ಯದ ದಿಕ್ಕುದೆಸೆ'; 'ಬಾಬಾ ಆಮ್ಟೆ: ಕಳಚಿಹೋದ ಕರುಣೆಯ ಕೊಂಡಿ'; 'ಮಂಟೇಸ್ವಾಮಿ ಆಧ್ಯಾತ್ಮಿಕ ದಂಗೆಯ ಸ್ವರೂಪ' ಮುಂತಾದ ಲೇಖನಗಳು ಪ್ರಾಸಂಗಿಕ ಬರಹಗಳಂತಿದ್ದು ಒಟ್ಟಾರೆ ನಾಗರಾಜಯ್ಯನವರ ಆಸಕ್ತಿಯ ಹರಹನ್ನು ಬಿಂಬಿಸುವ ಮಟ್ಟಿಗೆ ಮಾತ್ರ ಯಶಸ್ವಿಯಾಗಿವೆ.

ಈ ಕೃತಿಗೆ ಕವಿ-ಹೋರಾಟಗಾರ ಕೋಟಿಗಾನಹಳ್ಳಿ ರಾಮಯ್ಯ ಒಳ್ಳೆಯ ಮುನ್ನುಡಿ ಬರೆದು, ಬರಹಗಾರನ ಸಾಮರ್ಥ್ಯ ಮತ್ತು ಮಿತಿಗಳನ್ನು ಚೆನ್ನಾಗಿ ಗುರುತಿಸಿದ್ದಾರೆ. "ಒಟ್ಟಾರೆ ಇದುವರೆಗೆ ಯಾರೂ ಮುಟ್ಟದಿದ್ದ ದಲಿತ ತಾತ್ವಿಕತೆಯ ತಳಹದಿ ನಿರ್ಮಾಣದತ್ತ ನಾಗರಾಜಯ್ಯ ಮುಂದಾಗಿರುವ ನಿಟ್ಟಿನಲ್ಲಿ 'ಬುದ್ಧನೆಡೆಗೆ' ಕೃತಿಯು ಮಹತ್ವದ ವೈಚಾರಿಕ ಲೇಖನಗಳ ಸಂಕಲನ; ದಲಿತ ಚಳವಳಿಯ ವೈಚಾರಿಕ ನಡಿಗೆಯ ದಿಕ್ಸೂಚಿ ಕೃತಿ ಎಂಬುದರಲ್ಲಿ ಅನುಮಾನವಿಲ್ಲ" ಎಂದು ಹೇಳಿರುವ ರಾಮಯ್ಯ "ವೈದಿಕ ಧರ್ಮದ ವರ್ಣ ವ್ಯವಸ್ಥೆ ವಿರುದ್ಧ ಪುರೋಹಿತಶಾಹಿಯ ವಿರುದ್ಧ ಅದು ರೂಪಿಸಿದ ಲಿಂಗ ತಾರತಮ್ಯ ಜಾತಿ ಪದ್ಧತಿ ಮುಂತಾದ ವಿಷಯಗಳ ವಿರುದ್ಧ ತಮ್ಮ ಲೇಖನಗಳಲ್ಲಿ ಗಟ್ಟಿ ಧ್ವನಿಯಿಂದ ಮಾತಾಡಲು ತೊಡಗಿದಂತೆಲ್ಲಾ ನಾಗರಾಜಯ್ಯನೊಳಗಿರುವ **Dalit Activist** ನ ಮನೋಗುಣವು ವ್ಯಕ್ತಗೊಳ್ಳುತ್ತದೆ. ಹಾಗೆಯೇ ದಲಿತ ಪರಂಪರೆಯ ಉತ್ಕೃಷ್ಟ ಅಂಶಗಳನ್ನು ಕುರಿತು, ಅದರ ಆಶಯ ಮತ್ತು ಮಹತ್ವಗಳನ್ನು ಕುರಿತು ಮಾತನಾಡುವಾಗೆಲ್ಲ ನಾಗರಾಜಯ್ಯನೊಳಗೊಬ್ಬ ಸೃಜನಶೀಲದಾಹದಿಂದ ಆಲೋಚಿಸುವ ದಲಿತ ಸಂಶೋಧಕ ಕಾಣಿಸುತ್ತಾನೆ" ಎಂದಿದ್ದಾರೆ.

ಈವರೆಗೆ ಬೇರೆಬೇರೆ ಪತ್ರಿಕೆಗಳಲ್ಲಿ ಬರೆದಿರುವ ಹಲವಾರು ಲೇಖನಗಳನ್ನು ಒಂದೆಡೆಯಲ್ಲಿ ಪ್ರಕಟಿಸುವಾಗ ಅದರಲ್ಲಿರುವ ಎಲ್ಲ ಲೇಖನಗಳು ಒಂದೇ ಬಗೆಯ ಪ್ರಸ್ತುತತೆಯನ್ನು ಹೊಂದಿರುವುದಿಲ್ಲ, ಹಾಗಾಗಿ ಇದರಲ್ಲಿ ಅನುಭವ ಮಂಡನೆ, ಘಟನೆಗಳ ವಿವರಣೆ, ಅನಿಸಿಕೆ ಹಂಚಿಕೆಯ ಮಟ್ಟದಲ್ಲಿ ಮಾತ್ರ ಯಶಸ್ಸು ಕಂಡಿರುವ ಲೇಖನಗಳೂ ಇವೆ. ಸಾಂಸ್ಕೃತಿಕ ವಿಶ್ಲೇಷಣೆಯ ಲೇಖನಗಳಿಗಿರುವ ಮಹತ್ವ ಅವುಗಳಿಗಿಲ್ಲ, ಬರಹಗಾರನೊಬ್ಬನ ಪ್ರೇರಣೆಗಳನ್ನು, ಲೋಕಾನುಭವದ ಹಿನ್ನಲೆಯನ್ನು ಗುರುತಿಸುವುದಕ್ಕೆ ಮಾತ್ರ ಇಂತಹ ಲೇಖನಗಳು ನೆರವಾಗುತ್ತವೆ.

ಸಾಹಿತ್ಯ ಸಂಸ್ಕೃತಿ ಹಾಗೂ ಸಂದರ್ಭಗಳನ್ನು ಅಧ್ಯಯನಾತ್ಮಕ ಪರಿಶೀಲನೆಗೊಡ್ಡುವ ಬಹುಮುಖಿ ಆಸಕ್ತಿಯುಳ್ಳ, ಹಲವಾರು ಜನಪರ ಚಟುವಟಿಕೆಗಳಲ್ಲಿ ಸಕ್ರಿಯ ಪಾಲ್ಗೊಳ್ಳುವಿಕೆ ಇರುವ ವಡ್ಡಗೆರೆ ನಾಗರಾಜಯ್ಯನವರ 'ಬುದ್ಧನೆಡೆಗೆ' ಕೃತಿಯ ಲೇಖನಗಳಿಗೆ ಪ್ರಸ್ತುತತೆ ಇದ್ದು ಇಂತಹ ಲೇಖಕರ ಕೃತಿಯನ್ನು ಪ್ರಕಟಣೆಗೆತ್ತಿಕೊಂಡಿರುವ ಕರ್ನಾಟಕ ಸಾಹಿತ್ಯ ಪರಿಷತ್‌ನ ಪ್ರಕಟನಾ ಮಂಡಳಿಯ ಅಭಿರುಚಿ ಕೂಡ ಮೆಚ್ಚುಗೆಗೆ ಪಾತ್ರವಾಗುತ್ತದೆ.




■ ಡಾ. ಬಂಜಗೆರೆ ಜಯಪ್ರಕಾಶ

ಮಂಗಳೂರಿನ ಪೊಲೀಸರು ಮತ್ತು ನೈತಿಕ ಪೊಲೀಸರು

ಮಂಗಳೂರು ಗ್ರಾಮಾಂತರ ಪೊಲೀಸು ಠಾಣೆಯ ಸಬ್‌ಇನ್‌ಸ್ಪೆಕ್ಟರ್ ಕೆ. ಪ್ರಕಾಶ್ ಅವ[illegible] ಅಕ್ಷರಜ್ಞಾನದ ಜೊತೆಗೆ ಕ್ರಿಮಿನಲ್ ಕಾಯ್ದೆಯ ತಿಳುವಳಿಕೆಯೂ ಇದೆ. ಒಬ್ಬ ಠಾಣಾಧಿಕಾರಿಯಾ[illegible] ಪೊಲೀಸು ಠಾಣೆಯಲ್ಲಿ ಜನರೊಟ್ಟಿಗೆ ಹೇಗೆ ನಡೆದುಕೊಳ್ಳಬೇಕು ಎಂದು ಸಹ ಅವರಿಗೆ ಗೊತ್ತಿ[illegible] ಆದ್ದರಿಂದ, ಸದರಿ ಕೆ. ಪ್ರಕಾಶ್, ಮೊನ್ನೆ ಅಂದರೆ ಫೆಬ್ರವರಿ 10, ಮಂಗಳವಾರ, ನಡುರಾತ್ರಿ ಅಬ್ದು[illegible] ರಹಿಮಾನ್ ಎಂಬುವರನ್ನು ಜೊತೆಗೆ ಅವರ ಮಗ, 15ರ ಹರಯದ ಹುಸೇನ್ ಅಶ್‌ಫಕ್‌ನ[illegible] ಠಾಣೆಗೆ ಕರೆಸಿ, ಇಬ್ಬರಿಗೂ ಹೊಡೆದು ಬಡಿದು, ಮರುದಿನ ಮನೆಗೆ ಕಳುಹಿಸುವಾಗ, "ಠಾಣೆಯ[illegible] ಏನು ನಡೆಯಿತು ಎಂದು ಪೇಪರ್‌ನವರಿಗೆ ತಿಳಿಸಬೇಡ; ಆಸ್ಪತ್ರೆಗೆ ದಾಖಲಾಗಬೇಡ" ಎಂದ[illegible] ತಾಕೀತು ಮಾಡಿದ್ದಾರೆ. ಈ ಸಂಗತಿಯನ್ನು ಫೆಬ್ರವರಿ 12, ಗುರುವಾರದಂದು, ಮಂಗಳೂರಿನ ಸರ್ಕಾರೀ ವೆನ್‌ಲಾಕ್ ಆಸ್ಪತ್ರೆಯ ಬೆಡ್‌ನಲ್ಲಿ ಮಲಗಿದ್ದ ಅಬ್ದುಲ್ ರಹಿಮಾನ್‌ರೇ ನಮಗೆ ತಿಳಿಸಿದರು. ಜೊತೆಗೆ ಸಬ್‌ಇನ್‌ಸ್ಪೆಕ್ಟರ್ ಪ್ರಕಾಶ್ ಅವರ ಲಾಠಿಯ ಪ್ರತಾಪವನ್ನೂ ನಮಗೆ ತೋರಿಸಿದರು. ಅಬ್ದುಲ್ ರಹಿಮಾನ್‌ರ ಸೊಂಟದ ಮೇಲುಭಾಗದಲ್ಲಿ ಒಂದು ಅಂಗೈ ಅಗಲಕ್ಕಿಂತಲೂ ಜಾ[illegible] ಜಾಗದಲ್ಲಿ ರಕ್ತ ನೀಲಿ ಗಟ್ಟಿತ್ತು. ಗಮನಿಸಿ: ನಾವು ಅವರನ್ನು ನೋಡಿದ್ದು ಈ ಘಟನೆ ನಡೆದ ಎರಡು ದಿನಗಳ ನಂತರ.

ಸುಮಾರು 40 ವರ್ಷ ಪ್ರಾಯದ ಅಬ್ದುಲ್ ರಹಿಮಾನ್, ಮಂಗಳೂರು ಸಮೀಪದ ಉಳಾಯಿಬೆಟ್ಟು ಎಂಬ ಗ್ರಾಮದವರು. 5 ನೆಯ ತರಗತಿಯವರೆಗೆ ಓದಿರುವ ಅವರು, ನದಿಯಲ್ಲಿ ಮರಳು ತೆಗೆದು ದೋಣಿಗೆ ತುಂಬುವ ಕೂಲಿ ಮಾಡುತ್ತಾರೆ. ಉಳಾಯಿಬೆಟ್ಟುವಿನಲ್ಲಿ ಅವರಿಗೆ ಸ್ವಂತ ಮನೆಯಿಲ್ಲ ತಿಂಗಳಿಗೆ 700 ರೂಪಾಯಿ ಬಾಡಿಗೆ ಮನೆಯಲ್ಲಿ ಅವರು ತಮ್ಮ ಹೆಂಡತಿ ಮತ್ತು ನಾಲ್ಕು ಮಕ್ಕಳ ಜೊತೆ ವಾಸಿಸುತ್ತಿದ್ದಾರೆ. ಅವರ ಹಿರಿಮಗ ಅಶ್‌ಫಕ್ 9 ನೆಯ ಕ್ಲಾಸಿನಲ್ಲಿ ಕಲಿಯುತ್ತಿದ್ದಾನೆ. ಅವರ ಇನ್ನೊಬ್ಬ ಮಗ 7 ನೆಯ ಕ್ಲಾಸು. ಅಬ್ದುಲ್ ರಹಿಮಾನ್‌ರ ಹಿರಿಯ ಮಗಳು 10 ನೆಯ ತರಗತಿಯವರೆಗೆ ಓದಿ ಈಗ ಉಳಾಯಿಬೆಟ್ಟುವಿಗೆ ಸಮೀಪದ ವಾಮಂಜೂರಿನ ಟೈಲರಿಂಗ್ ಕ್ಲಾಸಿಗೆ ಹೋಗುತ್ತಾಳೆ. ಅಲ್ಲಿ ಹೋಗಿ ಬರುವುದಕ್ಕೆ ಬಸ್ ಚಾರ್ಜು 10 ರೂಪಾಯಿ ಆಗುತ್ತದೆ. ಅವಳು ಮೊದಲು ಬೀಡಿ ಕಟ್ಟುತ್ತಿದ್ದಳು. ಅದು ಅವಳ ದೇಹ ಪ್ರಕೃತಿಗೆ ಒಗ್ಗಿ ಬರಲಿಲ್ಲ. ಬೀಡಿ ಕಟ್ಟುವಾಗ ಅವಳಿಗೆ ಒಂದೇ ಸಮನೆ ಕಣ್ಣಲ್ಲಿ ನೀರು ಸುರಿಯಲು ಶುರುವಾಯಿತು. ಹಾಗಾಗಿ ಅವಳು ಆ ಕೆಲಸ ಬಿಟ್ಟು ಈಗ ಟೈಲರಿಂಗ್ ಕಲಿಯುತ್ತಿದ್ದಾಳೆ.



ರಹಿಮಾನ್‌ರ ಸಂಸಾರ ಅವರೊಬ್ಬರ ದಿನಗೂಲಿಯಿಂದಲೇ ನಡೆಯಬೇಕು. ತನಗೆ ಬಿದ್ದ ಹೊಡೆತದಿಂದಾಗಿ ಇನ್ನು ಕನಿಷ್ಠ 15 ದಿನ ತನಗೆ ಕೆಲಸಕ್ಕೆ ಹೋಗಲಿಕ್ಕೆ ಆಗಲಿಕ್ಕಿಲ್ಲ ಎಂದು ರಹಿಮಾನ್ ಆಸ್ಪತ್ರೆಯ ಬೆಡ್‌ನಲ್ಲಿ ಚಿಂತೆ ಹಚ್ಚಿಕೊಂಡಿದ್ದರು. ಕರಾವಳಿಯ ಪೊಲೀಸು ಠಾಣೆಗಳಲ್ಲಿ ಮುಸ್ಲಿಂ ಪಾರ್ಟಿಗಳನ್ನು ಈ ರೀತಿ ವಿಚಾರಿಸಿಕೊಳ್ಳುವುದರಲ್ಲಿ ವಿಶೇಷವೇನೂ ಇಲ್ಲ. ಅದನ್ನು ಹೇಳುವುದಕ್ಕೆ ಇಷ್ಟೆಲ್ಲ ಮಾಹಿತಿ ಒದಗಿಸಬೇಕಾದ ಅಗತ್ಯವಿದೆಯಾ? ಪಾರ್ಟಿ ಮುಸ್ಲಿಮನಾಗಿರುವ ಕಾರಣಕ್ಕೇನೆ ಅಬ್ದುಲ್ ರಹಿಮಾನ್‌ರ ಬದುಕಿನ ಈ ಪ್ರಾಥಮಿಕ ವಿವರಗಳನ್ನು ನಮಗೆ ಇಲ್ಲಿ ಕಾಣಿಸಬೇಕಾದ ಅಗತ್ಯ ಕಂಡಿದೆ. ಕನ್ನಡದ ಬಹುಪ್ರಸಾರದ ಪ್ರತಿಷ್ಠಿತ ಪತ್ರಿಕೆಗಳು ಆಳುವ ಬಿಜೆಪಿ ಸರ್ಕಾರದ ಬಾಲಬಡುಕರಾಗಿ, ನಾಡಿನ ಮುಸ್ಲಿಮ್ ಸಮುದಾಯಕ್ಕೆ ಸಾರಾಸಗಟಾಗಿ "ಭಯೋತ್ಪಾದಕ" ಎಂಬ ವ್ಯಕ್ತಿತ್ವವನ್ನು ಅಂಟಿಸಿರುವುದರಿಂದ, ಮುಸ್ಲಿಮರೂ ನಮ್ಮ ಹಾಗೆ ಮನುಷ್ಯಮಾತ್ರರು ಮತ್ತು ಸಂಸಾರವಂದಿಗರು ಎಂದು ನಮಗೆ ನಾವೇ ಮನವರಿಕೆ ಮಾಡಿಕೊಳ್ಳಲು ಈ ವಿವರಗಳು ಅಗತ್ಯ. ಹಾಗೆಯೇ ಆ ಸಮುದಾಯದಲ್ಲೂ, ಇತರ ಎಲ್ಲೆಡೆ ಇರುವಂತೆ ಪೋಲಿಗಳು, ಪೋಕರಿಗಳು, ದಗಲ್‌ಬಾಜಿಗಳು ಮತ್ತು ಕ್ರಿಮಿನಲ್‌ಗಳೂ ಇದ್ದಾರೆ; ಯಾರದ್ದೋ ತಪ್ಪಿಗೆ ಪೆಟ್ಟು ತಿನ್ನುವ ಮುಗ್ಧರೂ ಇದ್ದಾರೆ. ಅಬ್ದುಲ್ ರಹಿಮಾನ್ ಇಂತಹವರಲ್ಲಿ ಒಬ್ಬರು.

ಅಬ್ದುಲ್ ರಹಿಮಾನ್‌ರ ಹೆಂಡತಿ ತಾಹಿರಾಗೆ ಖಾಲಿದ್ ಎಂಬ ಒಬ್ಬ ತಮ್ಮನಿದ್ದಾನೆ. ಈತ ಪೊಲೀಸರಿಗೆ ಬೇಕಾದ ಆಸಾಮಿ. ಅವನ ಮೇಲೆ ಮೂರುನಾಲ್ಕು ಕೇಸಿವೆ; ಇತ್ತೀಚೆಗೆ ಅವನ ಮೇಲೆ ಮಾರಾಮಾರಿಯ ಒಂದು ಕೇಸಿತ್ತು, ಅವನು ತಲೆ ಮರೆಸಿಕೊಂಡಿದ್ದ. ಹಾಗಾಗಿ ಅವನ ಠಿಕಾಣಿ ಅವನ ಭಾವ ಅಬ್ದುಲ್ ರಹಿಮಾನ್‌ಗಾದರೂ ಗೊತ್ತಿರುತ್ತದೆ ಎಂದು ಭಾವಿಸಿ, ವಿಚಾರಣೆ ನಡೆಸಲು ಸಬ್‌ಇನ್‌ಸ್ಪೆಕ್ಟರ್ ಪ್ರಕಾಶ್, ನಡುರಾತ್ರಿ ಅವರನ್ನೂ ಮಗ ಅಶ್‌ಫಕ್‌ನನ್ನೂ ಜೀಪಿನಲ್ಲಿ ಹಾಕಿ ಠಾಣೆಗೆ ತೆಗೆದುಕೊಂಡು ಹೋಗಿದ್ದಾರೆ. ಅಬ್ದುಲ್ ರಹಿಮಾನ್ "ದೇವರಾಣೆಗೂ ಖಾಲಿದ್ ಎಲ್ಲಿದ್ದಾನೆ ಎಂದು ನನಗೆ ಗೊತ್ತಿಲ್ಲ" ಎಂದು ನಮ್ಮೊಡನೆ ಹೇಳಿದರು. ಆದರೆ ಪ್ರಕಾಶ್ ಅದನ್ನು ನಂಬಲು ತಯಾರಿರಲಿಲ್ಲ; ಹೊಡೆದುಬಡಿದು ಅಬ್ದುಲ್ ರಹಿಮಾನ್‌ರ ಬಾಯಿಬಿಡಿಸಬಹುದು ಎಂದು ಭಾವಿಸಿದರು.

ಮರುದಿನ ಅವರ ಧಣಿ ಎ.ಕೆ. ಉಸ್ಮಾನ್ ಠಾಣೆಗೆ ಬಂದು ಮುಚ್ಚಳಿಕೆ ಬರೆದು ಕೊಟ್ಟ ಮೇಲೆ ರಹಿಮಾನ್‌ರನ್ನು "ಸೂಕ್ತ ಎಚ್ಚರಿಕೆ"ಯ ಜೊತೆಗೆ ಮನೆಗೆ ಕಳುಹಿಸಿಕೊಡಲಾಗಿದೆ. ಬಿಡುಗಡೆ ಮಾಡುವಾಗ ಪ್ರಕಾಶ್, ಅಬ್ದುಲ್ ರಹಿಮಾನ್‌ರ ಪತ್ನಿಗೆ, "ಪೆಟ್ಟು ಸ್ವಲ್ಪ ಜಾಸ್ತಿ ಬಿದ್ದಿದೆ; ಮನೆಯಲ್ಲೇ ಮದ್ದು ಮಾಡಿ" ಎಂದು ಸಹ ಹೇಳಿದರಂತೆ! ಅಬ್ದುಲ್ ರಹಿಮಾನ್ ಈಗ ಪ್ರಕಾಶ್ ವಿರುದ್ಧ ಒಂದು ದೂರು ದಾಖಲು ಮಾಡಿದ್ದಾರೆ. ಆದರೆ ಅದರಿಂದ ನ್ಯಾಯ ದೊರಕೀತು ಎಂಬ ಭರವಸೆ ಏನೂ ಇಲ್ಲ. ಹೊಡೆಯುವವರಿಗೆ ಹೆದರಿಸಲು ಬರುವುದಿಲ್ಲವೆ? ಎರಡು ವಾರಗಳ ಹಿಂದೆ ಮಂಗಳೂರಿನಲ್ಲಿ ವೆಂಕಟೇಶ ಪ್ರಸನ್ನರಿಂದ ಸತತ ಚಿತ್ರಹಿಂಸೆ ಅನುಭವಿಸಿದ ಕಿನ್ನಿಗೋಳಿಯ ನೂರುದ್ದೀನ್ ಕೂಡ ಒಂದು ದೂರು ದಾಖಲಿಸಿದ್ದರು. ಆದರೆ ಈಗ ಆತ ವಿಚಾರಣೆಗೇ ಬರುತ್ತಿಲ್ಲ; ವಾಸ್ತವವಾಗಿ ಮಂಗಳೂರಿನ ಆಸ್ಪತ್ರೆಯಿಂದ ಡಿಸ್ಚಾರ್ಜ್ ಆದನಂತರ ಆತನ ಪತ್ತೆಯೇ ಇಲ್ಲ. ನೂರುದ್ದೀನ್‌ನ ಕೇಸು ಗೊತ್ತಿರುವ ವಕೀಲರೊಬ್ಬರು ಹೇಳುವ ಪ್ರಕಾರ ಅವನು ಜೀವಭಯದಲ್ಲೇ ತಲೆಮರೆಸಿಕೊಂಡಿದ್ದಾನೆ.

* * * *

ಮಂಗಳೂರಿನ ಭಜರಂಗಿಗಳು ಮತ್ತು ಪತ್ರಕರ್ತರು (ಕೆಲವು ಗೌರವಾರ್ಹ ಅಪವಾದಗಳನ್ನು ಹೊರತುಪಡಿಸಿ) ಎಂಬ ನೈತಿಕ ಪೊಲೀಸರಿಗೆ ಹೋಲಿಸಿದರೆ ಇಲ್ಲಿನ ಖಾಕಿ ಸಮವಸ್ತ್ರದ ಪೊಲೀಸರೇ ವಾಸಿ. ಈ ನೈತಿಕ ಪೊಲೀಸರ ದಾಳಿಗೆ ಇತ್ತೀಚೆಗಿನ ಬಲಿ ಅಶ್ವಿನಿ ಕುಲಾಲ್ ಎಂಬ 16 ವರ್ಷ ಪ್ರಾಯದ ಕಾಲೇಜು ವಿದ್ಯಾರ್ಥಿನಿ. ಮೂಡಬಿದಿರೆಯ ಸಮೀಪ ಏಳಿಂಜೆ ಎಂಬ ಗ್ರಾಮದ ಈ ತರುಣಿ ಕಿನ್ನಿಗೋಳಿಯ ಪಾಂಪೈ ಕಾಲೇಜಿನ ವಿದ್ಯಾರ್ಥಿನಿ. ಬಸ್ಸಿನಲ್ಲಿ ಹೋಗುವಾಗ ಅವಳು ಬಸ್ಸಿನ ಕಂಡಕ್ಟರ್–ಆತ ಮುಸ್ಲಿಮ್–ಜೊತೆಗೆ ಸಲುಗೆಯಲ್ಲಿ ವರ್ತಿಸಿದಳು ಎಂಬ ಕಾರಣಕ್ಕೆ ಭಜರಂಗದಳದವರು ಅವರಿಬ್ಬರನ್ನೂ ಮೂಡುಬಿದಿರೆ ಪೊಲೀಸು ಠಾಣೆಗೆ ಕರೆದುಕೊಂಡು ಹೋದರು. ಇದು ನಡೆದದ್ದು ತಾ. 10.2.2009 ಮಂಗಳವಾರದಂದು. ಠಾಣೆಗೆ ಅಶ್ವಿನಿಯ ತಂದೆಯನ್ನೂ ಕರೆಸಿ ಅವರಿಗೆ "ಬುದ್ಧಿವಾದ"

▶▶


ಕಡಿದಾಳು ಶಾಮಣ್ಣ

ಕಾಡ ತೊರೆಯ ಜಾಡು 8



ಅಕ್ಷರ ರೂಪ: ಅಕ್ಷತಾ ಕೆ.

ಯಶಸ್ವಿಯಾದ ಕಬ್ಬು ಬೆಳೆಗಾರರ ಹೋರಾಟ...



ನಮ್ಮ ಕಡೆಯ ನೀರಾವರಿ ಪ್ರದೇಶದ ಹೆಚ್ಚಿನ ಬ ಎಪ್ಪತ್ತು ಮತ್ತು ಎಂಬತ್ತರ ದಶಕದಲ್ಲಿ ಕಬ್ಬನ್ನೇ ನ್ನ ಬೆಳೆಯಾಗಿ ಬೆಳೆಯುತ್ತಿದ್ದವು. ಕಬ್ಬಿನ ಮುಖ್ಯ ಸ್ಯೆ ಎಂದರೆ ಸೂಲಂಗಿ ಬಂದ ಮೇಲೆ ಕಬ್ಬು ೋಕೆ ಶುರುವಾಗಿ ತೂಕ ಕಳೆದುಕೊಳ್ಳುತ್ತದೆ. ಾಲದಲ್ಲಿ ಸೂಲಂಗಿ ಬರೋದು. ಆ ಕಾಲದಲ್ಲೆ ಕಟಾವು ನಡೆದುಬಿಡಬೇಕು. ಹಾಗೆಯೇ ಬಿಟ್ಟರೆ ತೂಕ ಕಳೆದುಕೊಂಡು ರೈತರಿಗೆ ತೀವ್ರ ನಷ್ಟ ವಿಶೋದು. ಕಟಾವು ಮಾಡಿದ್ರೆ ಕೂಡಲೇ ರ್ನೆಗೆ ಸಾಗಿಸಿಬಿಡಬೇಕು. ಹಾಗೆ ಇಟ್ಟುಕೊಳ್ಳೋ ು ಬರಲ್ಲ. ಆದರೆ ಕಬ್ಬು ಕಟಾವಿಗೆ ಕಾರ್ಖಾನೆಯಿಂದ ್ಮಿಟ್ ಪಡೀಬೇಕು. ಇಡೀ ಶಿವಮೊಗ್ಗ ಜಿಲ್ಲೆಯಲ್ಲಿ ಮತ್ತು ತುಂಗಾಭದ್ರಾ ಸಕ್ಕರೆ ಕಾರ್ಖಾನೆಯೊಂದೆ. ಕಬ್ಬು ಬೆಳೆಗಾರರಿಗೆ ಆಧಾರ. ಆದರೆ ಅಲ್ಲಿ ಕಾರಣಿಗಳು, ಶಾಸಕರು ಮತ್ತು ಅವರ ಾಲಕರದೇ ಕಾರುಬಾರಾಗಿತ್ತು. ಕಬ್ಬು ಬೆಳೆಗಾರರ ನಿಗದಿ ಸಮಿತಿ ಅಂತ ಇತ್ತು, ಆ ಸಮಿತಿ ್ದವರೇ ದೊಡ್ಡ ಮೋಸಗಾರರು. ಕಬ್ಬು ಬೆಳೆಯದ ್ಟೋ ಜನರು ಪರ್ಮಿಟ್ ಪಡೆದು ರೈತರಿಂದ ಮುದ್ದಿಗೆ ಕಬ್ಬು ಕೊಂಡು ಕಾರ್ಖಾನೆಗೆ ಹಾಕಿ ಿ ಮಾಡವು. ಸಮಿತಿ ತನಗೆ ಬೇಕಾದವರಿಗೆ ರ್ಮಿಟ್ ಕೊಡೋದು. ಕಬ್ಬು ತುಂಬಾ ಶೇಖರವಾಗಿದೆ, ್ಲಿ ಒಟ್ಟಿಗೆ ಅರೆಯೋಕೆ ಆಗಲ್ಲ ಅಂತ ಹೇಳಿ ್ಟೋ ರೈತರಿಗೆ ಪರ್ಮಿಟ್ ಕೊಡೋಕೆ ನಿಧಾನ ಡೋರು. ಕಬ್ಬು ಬೆಳೆದ ರೈತರು ಇನ್ ಟೈಮ್‌ಗೆ ್ ಹಾಕಿದ್ರೂ ಯಾಕೆ ತಮಗಿನ್ನು ಪರ್ಮಿಟ್ ಸಿಕ್ಕಿಲ್ಲ ಕ ಯೋಚನೆ ಮಾಡ್ತಿದ್ರೆ ಇನ್ನೊಂದು ಕಡೆಯಿಂದ ್ಬ ಬೆಳೆಯದ ಎಷ್ಟೋ ದಲ್ಲಾಳಿಗಳು ಪರ್ಮಿಟ್ ದುಕೊಂಡು ಕಾರ್ಖಾನೆಗೆ ಕಬ್ಬನ್ನು ಸಾಗಿಸುತ್ತಲೇ ದ್ರು. ಡಿಸೆಂಬರ್, ಜನವರಿ ತಿಂಗಳಲ್ಲಿ ಕಬ್ಬು ಕಟಾವಿಗೆ ಮು ನಿಂತಿದ್ದರೆ ಮಾರ್ಚ ತಿಂಗಳಾದರೂ ಪರ್ಮಿಟ್ ನೇ ಕಬ್ಬನ್ನು ಕಡಿಯದೇ ಬಿಡಬೇಕಾದ ಸ್ಥಿತಿಯಿತ್ತು, ನೆಗೆ ಇನ್ನೇನು ಪೂರ್ತಿ ನಷ್ಟವಾಗೋದಕ್ಕಿಂತ ದಷ್ಟು ಬರಲಿ ಅಂತ ರೈತರು ಯಾರ ಹತ್ರ ರ್ಮಿಟ್ ಇರತ್ತೋ. ಅವರಿಗೆ ಮಾರಿಬಿಡೋರು. ಿತಿಯ ಸದಸ್ಯರು ಪರ್ಮಿಟ್‌ನ್ನು ಮಾರಾಟ ಮಾಡಿ ್ಂಟೇಜ್ ಪಡೆಯೋದು ಎಲ್ಲ ಮಾಡ್ತಿದ್ದರು. ಮೊಗ್ಗದ ಬಿ.ಎನ್. ಕಾಮತ್ ಅಂತವ್ರು ಮೂರ್‍ನಾಲ್ಕು ರ ಟನ್ ಕಬ್ಬನ್ನು ಪ್ರತಿವರ್ಷ ಸುಳ್ಳು ಲೆಕ್ಕದಲ್ಲಿ ರ್ಖಾನೆಗೆ ಮಾರಾಟ ಮಾಡ್ತಿದ್ದರು. ಅವರೊಬ್ಬರೇ ಅಲ್ಲ ಎಷ್ಟೋ ಜನ ಈ ರೀತಿ ಮೋಸ ಮಾಡ್ತಿದ್ದರು. ರು ಹರಿಸಿದ ರೈತರಿಗೆ ಮಾತ್ರ ನಿಜವಾದ ಬೆಲೆ ್ತ ಇರ್‍ಲಿಲ್ಲ, ಒಟ್ಟಾರೆ ಕಬ್ಬು ಮಾರಾಟ ಅನ್ನೋದು ಪೂರ್ಣ ಗೊಂದಲಮಯವಾಗಿತ್ತು.

ಈ ತುಂಗಾಭದ್ರಾ ಸಕ್ಕರೆ ಕಾರ್ಖಾನೆ ಯಾರೋ ಮಾರ್ವಾ ಡಿದ್ದು ಅದರ ನಿಜವಾದ ಮಾಲೀಕನನ್ನು ನಾವ್ಯಾರೂ ೇದಿರಲಿಲ್ಲ, ಹಾಥಿ ಅಂತ ಒಬ್ಬರು ಜನರಲ್ ್ಯಾನೇಜರ್ ಇದ್ದರು. ಅವರದ್ದೇ ಆಡಳಿತ. ನರಪೇತಲ ಮನುಷ್ಯ ಹಾಥಿ. ಅವರನ್ನು ಕೇಳಿದ್ರೆ ಹಿಂಗೆಲ್ಲ ಸಮಿತಿಯವರು ಮೋಸ ಮಾಡ್ತಿದಾರೆ ನೀವು ಏನು ಮಾಡ್ತಿದೀರಿ ಅಂದ್ರೆ, 'ನಾನೇನು ಮಾಡಕ್ಕಾಗತ್ತೆ' ಅಂತ ಅವರು ಮರು ಪ್ರಶ್ನೆ ಹಾಕೋರು. ಹಾಥಿಗೆ ಕನ್ನಡ ಬರ್ತಿರಲಿಲ್ಲ, ರೈತರಿಗೆ ಇಂಗ್ಲಿಷ್ ಬರಲ್ಲ, ಇನ್ನು ಮಾತುಕತೆ ಎಲ್ಲಿಂದ? ಶಿವಮೊಗ್ಗದಲ್ಲಿ ನಾಗರಾಜ್ ಅಂತ ಕಬ್ಬು ಬೆಳೆಗಾರರು ಇದ್ದರು. ಅವರು ಮೊದಲಿಗೆ ಕಬ್ಬು ಬೆಳೆಗಾರರಿಗೆ ಆಗ್ತಾ ಇರೋ ಅನ್ಯಾಯದ ಬಗ್ಗೆ ನನಗೆ ತಿಳಿಸಿದರು. ನಾನು ಸುಂದ್ರೇಶ್‌ಗೆ ಈ ವಿಷಯ ತಿಳಿಸಿದಾಗ ಅವರು ಕೂಡಾ 'ಹೌದು, ಇದಕ್ಕೇನಾದ್ರೂ ಪರಿಹಾರ ಹುಡುಕಲೇಬೇಕು' ಅಂದ್ರು. ಮೊದಲಿಗೆ ನಾವ್ವೊಂದಿಷ್ಟು ಜನ ರೈತರು ಸೇರಿ ಕಬ್ಬು ಬೆಳೆಗಾರರ ಬೆಲೆ ನಿಗದಿ ಸಮಿತಿ ಏನಿದೆ ಅದು ಸಂಪೂರ್ಣ ಬದಲಾಗಬೇಕು, ಹೊಸ ಸಮಿತಿ ರಚನೆಯಾಗೋ ಹಾಗೆ ಮಾಡಬೇಕು, ಆ ಮೂಲಕ ಕಬ್ಬು ಬೆಳೆಗಾರರ ಸಮಸ್ಯೆಗೆ ಪರಿಹಾರ ದೊರಕಿಸಿ ಕೊಡಬಹುದು ಅಂತ ನಿರ್ಧರಿಸಿದ್ವಿ. ಮೊದಲಿಗೆ ಹಳ್ಳಿ ಹಳ್ಳಿ ಸುತ್ತಿ ಕಬ್ಬು ಬೆಳೆಗಾರರನ್ನು ಸಂಘಟಿಸಿದ್ವಿ. ತಾಲ್ಲೂಕು ಕಚೇರಿ ಎದುರಿಗೆ ಕಬ್ಬು ಬೆಳೆಗಾರರ ಬೆಲೆ ನಿಗದಿ ಸಮಿತಿಯ ಸಭೆ ಕರೀತಿದ್ದರು, ಸಭೆಗೆ ನಾಮಕಾವಸ್ತೆಗೆ ಕಬ್ಬು ಬೆಳೆಗಾರರನ್ನು ಕರೆಸುತ್ತಿದ್ದರು. ಸಮಿತಿ ಸದಸ್ಯರದ್ದೆ ಸಂಪೂರ್ಣ ಕಾರುಬಾರು. ಬೆಳೆಗಾರರು ಯಾರೂ ಸಭೆಗೆ ಹೋಗುತ್ತಲೂ ಇರಲಿಲ್ಲ, ಆದರೆ ಆವತ್ತು ಮಾತ್ರ ನಾವು ಸಂಘಟಿಸಿದ್ದರ ಪರಿಣಾಮವಾಗಿ ಸಾವಿರ ಸಂಖ್ಯೆಯಲ್ಲಿ ರೈತರು ಸೇರಿದ್ದರು. ಸೇರಿದ ರೈತರನ್ನು ನೋಡಿಯೇ ಇವತ್ತು ಏನೋ ಘಟಿಸುವುದು ಇದೆ ಎಂದು ಸಮಿತಿಯ ಸದಸ್ಯರಿಗೆ ಖಾತ್ರಿಯಾಗಿಬಿಟ್ಟಿತ್ತು. ಸಮಿತಿಯ ಅಧ್ಯಕ್ಷರು ಮಾತನಾಡಲಿಕ್ಕೆ ಎದ್ದ ಕೂಡಲೇ ನಾನು 'ನಿಮ್ಮ ಅಹವಾಲುಗಳನ್ನೆಲ್ಲ ತುಂಬಾ ಕೇಳಿದೀವಿ. ಅವೆಲ್ಲ ಆಮೇಲೆ. ಮೊದಲಿಗೆ ಕಬ್ಬು ಬೆಳೆಗಾರರ ಸಮಿತಿ ಏನಿದೆ ಅದು ಬದಲಾವಣೆ ಆಗಬೇಕು' ಎಂದು ಕರೆಕೊಟ್ಟೆ. ಅಷ್ಟೂ ಜನರು ನನ್ನ ಮಾತಿಗೆ ಸಹಮತ ವ್ಯಕ್ತಪಡಿಸಿದರು. ಸಮಿತಿಯವರಿಗೆ ತಮ್ಮ ಆಟ ಇವತ್ತು ನಡೆಯೋಲ್ಲ ಅನ್ನೋದು ಖಾತ್ರಿ ಯಾಗಿಬಿಟ್ಟಿತು. ಏನಾದ್ರೂ ಹೇಳಕ್ಕೋದ್ರೆ ತಾವು ಹೊಡೆತ ತಿನ್ನೋದು ಖಚಿತ ಅಂತ ಗೊತ್ತಾಗಿ ಸಮಿತಿಯ ಸದಸ್ಯರು ಸುಮ್ಮನಾಗಿಬಿಟ್ಟರು. ಇದೇ ಸಂದರ್ಭ ಅಂತ ನಾನು ಮತ್ತು ನಾಗರಾಜ್ ಎದ್ದು ನಿಂತು 'ಕಬ್ಬು ಬೆಳೆಗಾರರ ಸಂಘದ ಕಾರ್ಯದರ್ಶಿಯಾಗಿ ಎನ್.ಡಿ.ಸುಂದರೇಶ್ ಅವರನ್ನು ಆರಿಸಲಾಗಿದೆ' ಎಂದು ಘೋಷಿಸಿದ ಕೂಡಲೇ ಅಲ್ಲಿದ್ದ ಅಷ್ಟೂ ರೈತರು ಕೈ ಎತ್ತಿ ತಮ್ಮ ಬೆಂಬಲ ಸೂಚಿಸಿದರು. ಜ್ಯೋತಿರಾವ್, ನಾಗರಾಜ್, ಪುಟ್ಟಪ್ಪ ಮತ್ತಿತರರನ್ನು ಸದಸ್ಯರಾಗಿ ಘೋಷಿಸಲಾಯಿತು. ಹಳೆಯ ಸಮಿತಿಯಲ್ಲಿದ್ದ ಒಬ್ಬೊಬ್ಬರಿಗೂ ಈ ಸಮಿತಿಯಲ್ಲಿ ಜಾಗ ಕೊಡಲಿಲ್ಲ. ಆವತ್ತು ಮೊದಲ ಬಾರಿಗೆ ಥೇಟ್ ಸರ್ವಾಧಿಕಾರಿಯಂತೆ ನಾನು ಮತ್ತು ನಾಗರಾಜ್ ವರ್ತಿಸಿದ್ದೆವು. ಆದರೆ ಇಡೀ ರೈತರ ಸಮುದಾಯವನ್ನು ವಿಶ್ವಾಸಕ್ಕೆ ತೆಗೆದುಕೊಂಡು ಸಮಿತಿ ರಚನೆ ಮಾಡಿದ್ದೆವು. ಈ ಬಗ್ಗೆ ಯಾರಿಗೂ ಯಾವ ಆಕ್ಷೇಪವೂ ಇರಲಿಲ್ಲ. ಸುಂದರೇಶರ ಆಯ್ಕೆ ಅಲ್ಲಿದ್ದವರ ಹುರುಪನ್ನು ಹೆಚ್ಚಿಸಿತ್ತು. ಹಳೆ ಸಮಿತಿ ಅಧ್ಯಕ್ಷರು ಆಘಾತ ತಡೆಯಲಾರದೆ ಎದೆ ಹಿಡಿದುಕೊಂಡು ಕುಳಿತಿದ್ದರು. ರೈತರಲ್ಲಿ ಎಚ್ಚರ ಮೂಡಿ ತಮಗೆ ಇಂಥ ದಿನ ಎದುರಾಗಬಹುದೆನ್ನುವ ಸನ್ನಿವೇಶವನ್ನು ಅವರು ಎಂದಿಗೂ ಕಲ್ಪಿಸಿಕೊಂಡಿರಲಿಲ್ಲವೇನೋ?

ಕಬ್ಬು ಬೆಳೆಗಾರರ ಸಂಘ ರಚನೆಯಾದ ನಂತರ ಅಧ್ಯಕ್ಷರು ಯಾರು ಎಂಬ ಪ್ರಶ್ನೆ ಬಂತು. ಪರಮೇಶ್ವರಪ್ಪ (ಅಣ್ಣಯ್ಯ) ಇದ್ದವರು 'ಹೆಚ್.ಎಸ್. ರುದ್ರಪ್ಪನವರನ್ನು ಅಧ್ಯಕ್ಷರನ್ನಾಗಿ ಮಾಡಿಕೊಳ್ಳಿ. ಅವರಿಗೆ ಇಡೀ ಜಿಲ್ಲೆಯ ರೈತ ಸಮುದಾಯದ ಬೆಂಬಲವಿದೆ' ಎಂದರು. ರುದ್ರಪ್ಪನೋರು ಕಾಂಗ್ರೆಸ್ ನಲ್ಲಿದ್ದು ಮಂತ್ರಿಯಾಗಿದ್ದೋರು, ಆದಾಗಲೇ ಅವರು ರೈತರ ಸಂಘವೊಂದನ್ನು ಸಣ್ಣ ಪ್ರಮಾಣದಲ್ಲಿ ಕಟ್ಟಿದ್ದರು. ಅವರನ್ನೇ ನಮ್ಮ ಸಂಘದ ಅಧ್ಯಕ್ಷರನ್ನಾಗಿ ಮಾಡಿಕೊಂಡ್ವಿ. ದೊಡ್ಡ ಜಮೀನುದಾರರಾಗಿದ್ದ ರುದ್ರಪ್ಪನವರು ಬಹಳ ಮುಗ್ಧ ಮನುಷ್ಯರು. ಅವರ ಮುಖದ ಮೇಲಿನ ನಗೆಯೇ ಅವರ ಮುಗ್ಧತೆಯನ್ನು ಸಾರುತಿತ್ತು. ಅವರು ಎಷ್ಟು ಸರಳ, ಮುಗ್ಧ ಮನುಷ್ಯರೆಂದರೆ ಹೋರಾಟದ ಸಂದರ್ಭದಲ್ಲಿ ಕೆಲವೊಮ್ಮೆ ನಾವು ನಾನ್ವೆಜ್ ಹೋಟೆಲ್‌ಗಳಲ್ಲಿ ಊಟ ಮಾಡುತ್ತಿದ್ದರೆ, ನಮ್ಮ ಪಕ್ಕದಲ್ಲಿ ಕುಳಿತಿರುತಿದ್ದ ರುದ್ರಪ್ಪನೋರು 'ನನಗೆ ಒಂದು ಲೋಟ ಮಜ್ಜಿಗೆ ಸಾಕು' ಅನ್ನೋರು. ನಾನ್‌ವೆಜ್ ಹೋಟೆಲ್‌ನಲ್ಲಿ ಎಲ್ಲಿ ಸಿಗಬೇಕು ಮಜ್ಜಿಗೆ? ಎರಡು ಇಡ್ಲಿ ಮತ್ತು ಒಂದು ಲೋಟ ಮಜ್ಜಿಗೆ ಇಷ್ಟೇ ಅವರ ಊಟ. ಆದ್ದರಿಂದ ಅವರಿಗೆ ಮಜ್ಜಿಗೆ ರುದ್ರಪ್ಪನವರು ಅಂತ್ಲೆ ನಾಮಕರಣವಾಗಿತ್ತು.

ಕಬ್ಬು ಬೆಳೆಗಾರರ ಸಂಘ ಅಸ್ತಿತ್ವಕ್ಕೆ ಬಂದ ಮೇಲೆ ಮೊದಲಿಗೆ ಹಾಥಿ ಸಾಹೇಬರಿಗೆ 'ಇಷ್ಟು ದಿನ ನಡೆದಂಗೆ ಇನ್ನು ನಡೆಯಲ್ಲ, ರೈತರಿಗೆ ಇನ್ ಟೈಮ್‌ನಲ್ಲಿ ಪರ್ಮಿಟ್ ಸಿಗಬೇಕು. ಸೌಲಭ್ಯಗಳು ಸಹ ರೈತರಿಗೆ ಹಂಚಿಕೆಯಾಗಬೇಕು. ಇವುಗಳೆಲ್ಲದರ ಮೇಲ್ವಿಚಾರಣೆಯನ್ನು ಸಂಘ ನೋಡಿಕೊಳ್ಳೋದರಿಂದ ಸಂಘಕ್ಕೆ ಪ್ರತಿಯೊಬ್ಬ ರೈತನು ಒಂದು ಟನ್ ಕಬ್ಬಿಗೆ ಒಂದು ರೂಪಾಯಿಯಂತೆ ದೇಣಿಗೆ ನೀಡಬೇಕು. ಅದನ್ನು ಕಾರ್ಖಾನೆಯಲ್ಲೆ ಸಂಗ್ರಹಿಸಿ ಕೊಡಬೇಕು' ಎಂದು ಸೂಚಿಸಿದ್ವಿ. ರೈತರಿಗೆ ಸಂಘದಿಂದ ಒಳ್ಳೆಯದಾದ ರಿಂದ ಯಾರೂ ಮೋಸ ಮಾಡಲಿಲ್ಲ, ಒಂದೆ ವರ್ಷದಲ್ಲಿ ಚೆನ್ನಾಗಿ ದುಡ್ಡುಬಂತು. ಕಬ್ಬು ಬೆಳೆಗಾರರ ಸಂಘಕ್ಕೆ ಒಳ್ಳೆಯ ಹೆಸರು ಬರಲು ಶುರುವಾ



ಯಿತು. ಸಂಗ್ರಹವಾದ ಹಣ ದಿಂದ ಸಂಘಕ್ಕೆ ಅಂತ ಶಿವಮೊಗ್ಗದಲ್ಲಿ ಆಫೀಸ್ ತೆಗೆದ್ವಿ ಮತ್ತು ಒಂದು ಅಂಬಾಸಡರ್ ಕಾರು ಕೊಂಡುಕೊಂಡ್ವಿ. ಚಿಕ್ಕಮಗಳೂರು ರೈತರಿಂದ ಡಾ. ಶಿವರಾಮ್ ಸಂಘಕ್ಕೆ ಸಂಗ್ರಹಿಸಿಕೊಟ್ಟ ಹಣ ಕಾರು ಕೊಳ್ಳಲು ಬಳಕೆಯಾಯಿತು.

ಈ ನಡುವೆ ಇನ್ನೊಂದು ಘಟನೆ ನಡೆಯಿತು. ಅದಕ್ಕೂ ಕಬ್ಬು ಬೆಳೆಗಾರರ ಸಂಘಕ್ಕೂ ಏನೇನೂ ಸಂಬಂಧವಿಲ್ಲ, ಆದರೂ ಅದನ್ನು ಇಲ್ಲಿ ಕಾಣಿಸಿಬಿಡುವುದೇ ಸೂಕ್ತ ಅನಿಸುತ್ತದೆ. ಶಿವಮೊಗ್ಗದಲ್ಲಿ ಬ್ಯಾಂಕ್ ಆಫ್ ಇಂಡಿಯಾದ ಶಾಖೆ ಪ್ರಾರಂಭವಾದಾಗ ಅಲ್ಲಿಗೆ ತೀರ್ಥಹಳ್ಳಿ ಕಡೆಯ ಮ್ಯಾನೇಜರ್ ಒಬ್ಬರು ಬಂದರು. ಅವರು ಒಮ್ಮೆ 'ಶಾಮಣ್ಣೋರೆ, ಒಂದಿಷ್ಟು ಹಳ್ಳಿಗಳನ್ನು ಒಟ್ಟು ಮಾಡಿಕೊಂಡು ಒಂದು ನಿಗದಿತ ಬೆಳೆ ಬೆಳೆಯೋರಿಗೆ ಸಾಲ ಕೊಡುವ ಯೋಜನೆ ಇದೆ. ಕಬ್ಬು ಬೆಳೆಯೋರಿಗೆ ಕೊಡೋಣ ಅಂತಿದೀವಿ. ಯಾವ ಊರಿಗೆ ಕೊಡಬಹುದು?' ಅಂದಾಗ 'ಏಯ್, ನಮ್ಮ ಕಡೆಯ ಊರುಗಳ ರೈತರಿಗೆ ಕೊಡ್ರಿ' ಎಂದು ಶಿಫಾರಸ್ ಮಾಡಿದೆ. ಅವರು ನನಗೆ, ಸುಂದ್ರೇಶ್‌ಗೆ, ಮತ್ತೊಂದಿಷ್ಟು ರೈತರಿಗೆ ಬೆಳೆ ಸಾಲ ನೀಡಿದರು. ಬೆಳೆ ಬಂದ ಕೂಡಲೇ ನಾವು ಸಾಲ ವಾಪಸ್ ಮಾಡಬೇಕಿತ್ತು, ಆ ಮ್ಯಾನೇಜರ್ ಜೊತೆ ಈ ವಿಷಯವಾಗಿ ಒಡನಾಟ ಜಾಸ್ತಿಯಾಯಿತು. ನಂತರದಲ್ಲಿ 'ಕಬ್ಬು ಬೆಳೆಗಾರರಿಗಿಂತ ಭತ್ತ ಬೆಳೆಯೋರದ್ದು ಹೆಚ್ಚು ಗೋಳು. ಆದ್ದರಿಂದ ಅವರಿಗೆ ಇದೇ ರೀತಿ ಬೆಳೆ ಸಾಲ ಕೊಟ್ಟರೆ ಬಹಳ ಒಳ್ಳೆಯದಾಗತ್ತೆ. ಬೆಳೆ ಬಂದಕೂಡಲೇ ಬ್ಯಾಂಕಿನವರು ಭತ್ತ ಸಂಗ್ರಹಿಸಿಟ್ಟುಕೊಂಡು ನಂತರ ಒಳ್ಳೆ ಬೆಲೆ ಬಂದಾಗ ಮಾರಿ ಸಾಲ ಮರುಪಾವತಿ ಮಾಡಿಕೊಳ್ಳಬಹುದು' ಅಂತ ಸೂಚಿಸಿದೆ. ಆ ಮ್ಯಾನೇಜರ್‌ಗೆ ರೈತರ ಬಗ್ಗೆ ಸಹಜವಾದ ಕಾಳಜಿಯಿತ್ತು, ಅವರಿದ್ದೋರು ಕೂಡಲೇ ಪ್ರಯತ್ನ ಮಾಡಿ ಆ ವರ್ಷವೇ ಭತ್ತ ಬೆಳೆಯೋರಿಗೂ ಬೆಳೆ ಸಾಲ ಕೊಡಿಸಿದರು. ಹೀಗೆ ಸಾಲ ಪಡೆದ ರೈತರೆಲ್ಲ ಬೆಳೆ ಕಟಾವಾದ ಮೇಲೆ ಭತ್ತ ಮೂಟೆ ಕಟ್ಟಿ ತಂದು ಮೈದೊಳಲು ಗ್ರಾಮದ ಒಂದು ಖಾಲಿ ಮನೆ ಪಡೆದು ಅಲ್ಲಿ ಸಂಗ್ರಹಿಸಿದ್ವಿ. ಮನೆಯ ಒಂದು ಬೀಗ ಬ್ಯಾಂಕ್ ಮ್ಯಾನೇಜರ್ ಸುಪರ್ದಿಯಲ್ಲೆ ಇತ್ತು. ಒಳ್ಳೆ ಬೆಲೆ ಬಂದ ಕೂಡಲೇ ಮಾರಿ ಸಾಲ ಮರುಪಾವತಿ ಮಾಡಿಕೊಳ್ಳು ವುದು ಎಂದು ನಿರ್ಧಾರವಾಗಿತ್ತು. ಒಂದು ದಿನ ನಿಧಾನಕ್ಕೆ ಭತ್ತ ಸಂಗ್ರಹಿಸಿದ್ವಲ್ಲ ಆ ಗೋಡೌನ್‌ನ ಹಂಚನ್ನು ಯಾರೋ ಇಳಿಸಿ ಒಳಗೆ ನುಗ್ಗಿದ್ದಾರೆ ಎಂಬ ಪುಕಾರೆದ್ದಿತು. ಆದರೆ ಎಣಿಸಿ ನೋಡಿದರೆ ಭತ್ತದ ಮೂಟೆಗಳು ಸರಿಯಾಗೇ ಇದ್ದುವು. ಹೆದರಿಸಲಿಕ್ಕಾಗಿ ಯಾರೋ ಕಿಡಿಗೇಡಿಗಳು ಹೀಗೆ ಮಾಡಿದ್ದಾರೆ ಎಂದು ಕೊಂಡು ಸುಮ್ಮನಾದೆವು. ಒಳ್ಳೆಯ ರೇಟ್ ಬಂದು ಮಾರಾಟ ಮಾಡಲು ಹೊರಟಾಗಲೇ ಗೊತ್ತಾಗಿದ್ದು ಅರವತ್ತು ಎಪ್ಪತ್ತು ಚೀಲಗಳಲ್ಲಿದ್ದ ಭತ್ತವನ್ನು ಸಾಗಿಸಿದ್ದಾರೆ ಮತ್ತು ಅದರ ಬದಲಿಗೆ ಅಂತದ್ದೆ ಚೀಲಗಳಲ್ಲಿ ಉಮಿ ಹೊಟ್ಟನ್ನು ತುಂಬಿ ಗೋಡೌನ್‌ನಲ್ಲಿಟ್ಟಿದ್ದಾರೆ ಎಂದು. ಮ್ಯಾನೇಜರ್ ತಲೆ ಮೇಲೆ ಕೈ ಹೊತ್ತು ಕೂತರು. ಇಷ್ಟಕ್ಕೆಲ್ಲ ಮುನ್ನುಡಿ ಬರೆದಿದ್ದ ನಾನೂ ತಲೆ ತಗ್ಗಿಸಿದೆ. ನಂತರದಲ್ಲಿ ಪೊಲೀಸ್ ಕೇಸ್ ಆಯಿತು. ಕಳ್ಳರು ಸಿಕ್ಕಿ ಬಿದ್ದರು. ನೋಡಿದರೆ ಯಾರೋ ಅಪರಿಚಿತರಲ್ಲ, ನಮಗೆ ಬೇಕಾದವರು ಮತ್ತು ಸಾಕಷ್ಟು ಸ್ಥಿತಿವಂತರು ಕೂಡ. ಪೊಲೀಸರು ಜಪ್ಪಿ ಜೀವ ಹಿಂಡುತ್ತಾರೆಂದು ನಾನೇ ಅವರಿಂದ ತಪ್ಪೊಪ್ಪಿಗೆ ಬರೆಸಿಕೊಟ್ಟು ಅವರನ್ನು ಬಿಡಿಸಿಕೊಂಡು ಬರಬೇಕಾಯಿತು. ಈ ಕಾರಣಕ್ಕೆ ಉಪಕಾರಿ ಮ್ಯಾನೇಜರ್‌ಗೆ ಅದೇ ತಿಂಗಳು ಶಿವಮೊಗ್ಗದಿಂದ ಎತ್ತಂಗಡಿ ಮಾಡಲಾಯಿತು.

(ಮುಂದುವರೆಯುವುದು)

ಾಯಿತು. ಹಿಂದೂ ತರುಣಿಯರು "ಅನ್ಯಮತೀಯರ ೫ ಸಾರ್ವಜನಿಕ ಸ್ಥಳಗಳಲ್ಲಿ ಹಗಲು ಹೊತ್ತಿನಲ್ಲಿ ಕೊಳ್ಳುವುದು ಒಂದು ಅಪರಾಧ" ಎಂದು ಿಸಿ, ಅವರನ್ನು ಪೊಲೀಸು ಠಾಣೆಗಳಿಗೆ ಯ್ಯುವುದು ಅಲ್ಲಿ ಪೊಲೀಸರು "ಬುದ್ಧಿ ಹೇಳಿ" ಕಳುಹಿಸುವುದು-ಈಗ ಕರಾವಳಿಯಲ್ಲಿ ಒಂದು ಾಯವೇ ಆಗಿದೆ. ವಾರ್ತಾ ಭಾರತಿಯನ್ನು ಹೊರತುಪಡಿಸಿ, ಇಲ್ಲಿನ ಎಲ್ಲ ಕನ್ನಡ ಪತ್ರಿಕೆಗಳೂ ಂಗಿಗಳ ಈ ನೈತಿಕ ಕಾರ್ಯಾಚರಣೆಯನ್ನು ಪೂರ್ವಕವಾಗಿಯೇ ವರದಿ ಮಾಡುತ್ತವೆ. ಗ ಕೆಲವು ವಾರಗಳ ಹಿಂದೆ ಮೂಡುಬಿದಿರೆಯ ೀಶ ಮುಸ್ಲಿಮ್ ವಿದ್ಯಾರ್ಥಿಯೊಬ್ಬ ಅವನ ಹಿಂದೂ ವಿದ್ಯಾರ್ಥಿನಿಯ ಜೊತೆ ಮಾತನಾಡಿದ ಎಂಬ ಕ್ಕೆ ಅವನನ್ನು ಥಳಿಸಲಾಗಿತ್ತು, ಅವನು ಮೂಡುಬಿದಿರೆ ಠಾಣೆಯಲ್ಲಿ ತನಗೆ ಹೊಡೆದವರ ವಿರುದ್ಧ ಅವರ ಹೆಸರುಗಳನ್ನು ನಮೂದಿಸಿ ಲಿಖಿತ ದೂರು ಕೊಟ್ಟ. ಠಾಣೆಯ ಸಬ್‌ಇನ್ಸ್‌ಪೆಕ್ಟರ್ ಜಿ. ಭಾರತಿ ಆರೋಪಿಗಳನ್ನು ಠಾಣೆಗೆ ಕರೆಸಿ ವಿಚಾರಣೆ ನಡೆಸಿದರು. ಕೇವಲ ಅಷ್ಟಕ್ಕೇ ಅವರ ವಿರುದ್ಧ ಠಾಣೆಯ ಎದುರೇ ವಿದ್ಯಾರ್ಥಿಗಳು ಪ್ರತಿಭಟನೆ ನಡೆಸಿದ್ದರು. ಇದು ಕರಾವಳಿಯ ಸಮಕಾಲೀನ ಸಂಸ್ಕೃತಿ. ನಿಸ್ಸಂದೇಹವಾಗಿ ಇದರಲ್ಲಿ ಇಲ್ಲಿನ ಕನ್ನಡ ಪತ್ರಿಕೆಗಳ ಕೊಡುಗೆ ದೊಡ್ಡದಿದೆ. ಈ ಸಂಸ್ಕೃತಿಯ ರೀತಿ ರಿವಾಜುಗಳಿಗೆ ಅನುಗುಣವಾಗಿ ಅಶ್ವಿನಿಯನ್ನೂ, ಅವಳು ಮಾತನಾಡಿಸಿದ ಮುಸ್ಲಿಮನನ್ನೂ ಮೂಡುಬಿದಿರೆ ಠಾಣೆಗೆ ಒಯ್ಯಲಾಗಿತ್ತು, ಈ ಅವಮಾನ ತಾಳಲಾರದೆ ಮರುದಿನ ಅಂದರೆ ತಾ. 11.2.09 ಬುಧವಾರ, ಅಶ್ವಿನಿ ಆತ್ಮಹತ್ಯೆ ಮಾಡಿಕೊಂಡಳು. ಇಷ್ಟು ಆದದ್ದೇ ಸಾಲದು ಎಂಬಂತೆ, ಕರಾವಳಿಯ ಪತ್ರಿಕೆಗಳು (ವಿ ಹಿಂದೂ ಮತ್ತು ವಾರ್ತಾ ಭಾರತಿಗಳನ್ನು ಹೊರತುಪಡಿಸಿ) ಅಶ್ವಿನಿಯ ಮೇಲೆ ಆ ಮುಸ್ಲಿಮ್ ಬಸ್ ಕಂಡಕ್ಟರ್ ಅತ್ಯಾಚಾರವೆಸಗಿದ್ದಾನೆ ಎಂಬ ಹಸಿಹಸಿ ಸುಳ್ಳನ್ನು ತಾ. 12.2.2009 ರ ತಮ್ಮ ಸಂಚಿಕೆಗಳಲ್ಲಿ ಪ್ರಕಟಿಸಿದ್ದಾವೆ! ಹೇಗಿದ್ದರೂ ಅಶ್ವಿನಿ ಮರಳಿ ಬರುವುದಿಲ್ಲ; ಆಕೆಯ ಶವವನ್ನು ಅವಸರದಲ್ಲಿ ಪೋಸ್ಟ್ ಮಾರ್ಟಮ್ ಮಾಡಿಸಿ, ಸುಟ್ಟೂ ಆಗಿದೆ. ಹಾಗಾಗಿ ಯಾವ ಸಾಕ್ಷ್ಯಾಧಾರವೂ ಉಳಿದಿಲ್ಲ, ಕರಾವಳಿಯ ಪತ್ರಕರ್ತರು ಅಶ್ವಿನಿಯ ಮೇಲೆ ಒಂದಲ್ಲ, ಸರಣಿ ಅತ್ಯಾಚಾರವನ್ನೇ ನಡೆಸಬಹುದು!

ಅಶ್ವಿನಿಯ ಆತ್ಮಹತ್ಯೆ ಸುದ್ದಿಯಾದರೂ ಆಯಿತು. ನಾಲ್ಕು ವರ್ಷಗಳ ಕೆಳಗೆ ಮುಸ್ಲಿಮ್ ಗಂಡಸೊಬ್ಬರನ್ನು ಮಾತನಾಡಿಸಿದಳು ಎಂಬ ಕಾರಣಕ್ಕೆ ಭಜರಂಗಿಗಳಿಂದ ಹಲ್ಲೆಗೊಳಗಾದ ಹೆಜಮಾಡಿಯ ವನಿತಾ ಆತ್ಮಹತ್ಯೆ ಮಾಡಿಕೊಂಡದ್ದು ಪತ್ರಿಕೆಗಳಿಗೆ ವರದಿ ಮಾಡಬೇಕಾದ ಸಂಗತಿ ಎಂದೇ ಅನ್ನಿಸಲಿಲ್ಲ, ಕಳೆದ ಶುಕ್ರವಾರ ತಾ 6.2.09 ರ ಸಂಜೆ (ರಾತ್ರಿ ಕೂಡ ಅಲ್ಲ!) ಬಸ್ಸಿನಲ್ಲಿ ಶೃತಿ ಎಂಬ ಹಿಂದೂ ತರುಣಿ (ಈಕೆ ಕೇರಳದ ಮಂಜೇಶ್ವರದ ಸಿಪಿಎಂ ಶಾಸಕರ ಪುತ್ರಿ), ತನ್ನ ಊರಿನವನೇ ಆದ ಮುಸ್ಲಿಮ್ ತರುಣನೊಬ್ಬನ ಜೊತೆ ಮಾತನಾಡಿದಳು ಎಂಬ ಕಾರಣಕ್ಕೆ ಅವರನ್ನು ಬಲಾತ್ಕಾರವಾಗಿ ಎಳೆದೊಯ್ದು ಹಲ್ಲೆ ಮಾಡಿ ಅವರನ್ನು "ವಿಚಾರಣೆ" ಮಾಡಲಾಗಿತ್ತು. ಈಗ ವಿಜಯ ಕರ್ನಾಟಕ ಮತ್ತು ಇತರ ಕನ್ನಡ ಪತ್ರಿಕೆಗಳು ತಮ್ಮದೇ ಆದ ನೈತಿಕ ವಿಚಾರಣೆ ನಡೆಸಿ, ಶೃತಿ ಮತ್ತು ಆಕೆಯ ಜೊತೆಗಿದ್ದವನು ಮುಸ್ಲಿಮ್ ತರುಣನ ಮೇಲೆ ಹಲ್ಲೆ ನಡೆಸಿದವರು ದೇವರಾಣೆಗೂ ಭಜರಂಗಿಗಳು ಅಲ್ಲವೆಂದೂ, ಬದಲಾಗಿ ಅವರು ಕಮ್ಯುನಿಸ್ಟರೆಂದೂ, ಶೃತಿ ಬಸ್ಸಿನಲ್ಲಿ ಆ ಮುಸ್ಲಿಮನೊಡನೆ ಚಕ್ಕಂದವಾಡುತ್ತಿದ್ದಳು ಎಂದೂ, ಅದಕ್ಕೂ ಮೊದಲು ಅವರಿಬ್ಬರ ನಡುವೆ "ಏನೋ ಇತ್ತು" ಎಂಬುದಕ್ಕೆ ಎಸ್‌ಎಂಎಸ್ ಸಂಭಾಷಣೆಯ ದಾಖಲೆಗಳು ಇವೆಯೆಂದೂ ಪ್ರಕಟಿಸಿದ್ದಾವೆ. ಈ ಪತ್ರಿಕೆಗಳು ಸತ್ಯಹರಿಶ್ಚಂದ್ರನ ತುಂಡುಗಳು ಎಂದೇ ಇಟ್ಟುಕೊಳ್ಳೋಣ. ಆದರೆ ಮಂಗಳೂರಿನಲ್ಲಿ ಹಿಂದೂ ತರುಣಿಯರು ಅನ್ಯಮತೀಯರ ಜೊತೆ ಸ್ನೇಹವಿಟ್ಟುಕೊಳ್ಳುವುದು ಅಪರಾಧವಾದದ್ದು ಯಾವತ್ತಿನಿಂದ?

■ ಜಿ. ರಾಜಶೇಖರ, ಪಟ್ಟಾಭಿರಾಮ ಸೋಮಯಾಜಿ

ಯಲ್ಲಾ ಚೇಪ್ ಮಿನಿಟ್ರು ಮಾಡದ್ನೆ ಅವುನು ಮಾಡ್ಯವುನೆ ತಗೊ

ಕರ್ನಾಟಕದಲ್ಲಿ ಮುಖ್ಯಮಂತ್ರಿಗಳಾದವರಿಗೆಲ್ಲಾ ಅಧಿಕಾರದ ಅಮಲು ನೆತ್ತಿಗೇರಿದ ಕೂಡಲೇ ಮಜಾ ಮಾಡಿಬಿಡಬೇಕೆನ್ನಿಸುವ ಹಂಬಲದ ಬಗ್ಗೆ ಚರ್ಚೆ ನಡೆಯುತ್ತಿತ್ತು. ಅದೇ ಸಮಯಕ್ಕೆ ಬಂದ ವಾಟಿಸ್ಸೆ,

"ರೆದ್ಯಾಂಡಲ್ಲಿ ಸಿಕ್ಕಿದ್ಲಪ್ಪ 'ರಾಧಿಕಾ" ಎಂದು ನಕ್ಕ.

"ಯಾವ ರಾಧಿಕುನ್ನ?" ಎಂದಳು ಜುಮ್ಮಿ.

"ಇನ್ಯಾವ ರಾಧಿಕನಕ್ಕ, ನಮ್ಮ ಉಗ್ರಿ ಸಿಸ್ಟರ್ ಇನ್‌ಲಾ ರಾಧಿಕಾ, ಕೋಟ್ಯಾಂತರುಪಾಯಿ ಸಮೇತ ಸಿಕ್ಕವುಳೆ."

"ಅವುಳ್ಯಾಕ್ ನನ್ನ ಸಿಸ್ಟರ್ ಇನ್‌ಲಾ ಆಯ್ತಳೊ? ನೀನೆ ಮಾಡಿಕೊ ಬೇಕಾದ್ರೆ" ಎಂದ ಉಗ್ರಿ.

ಬಯಲು ಸೀಮೆಯ ಕಟ್ಟೆಪುರಾಣ

ಬಿ. ಚಂದ್ರೇಗೌಡ

"ಆಟೊಂತರ ದುಡ್ಡು ಎಲ್ಲಿಂದ ಬತ್ತು ಅವುಳಿಗೆ?"

"ಸಿನುಮ ಆಗುಟ್ರು, ದುಡದವುಳೆ."

"ಅವುಳಂತ ಸಿನುಮ ಆಗುಟ್ರಗೆ ಇವತ್ತೇನಿದ್ರು ಮೂರ್ರಿಂದ ಐದು ಲಕ್ಷ ಕೊಡ್ತರೆ. ಅದುಕೂ ಜಾಸ್ತಿ ತಗತಳೆ ಅಂದ್ರೆ ಆ ವ್ಯವಾರನೆ ಬ್ಯಾರೆದು. ಆದ್ರೆ ಈ ರಾಧಿಕಾ ಮಾಡಿರೋದು. ನಾಕು ಸಿನುಮದಲ್ಲಿ, ಹತ್ತು ಕೋಟಿ ಎಲ್ಲಿಂದ ಬತ್ತು ಅಂತ ಜನಗಳು ತಲೆ ಕೆಡಿಸಿಗಂಡವುರೆ ಕಣೊ ಉಗ್ರಿ.'

"ತಲೆ ಕೆಡಿಸಿಗಳೊ ಅಂತ ವಿಷಯನೆ ಕಣೊ ಅದು. ಯಾಕೆ ಅಂದ್ರೇ, ಅವುಳತ್ರ ಇರದು ಜನಗಳ ದುಡ್ಡು ಗೊತ್ತೆ" ಎಂದ ಉಗ್ರಿ.

"ಅದ್ಯಾಂಗೆ ಜನಗಳ ದುಡ್ಡ?" ಎಂದಳು ಜುಮ್ಮಿ.

"ವಾಟಿಸ್ಸನೆ ಹೇಳ್ತನೆ ಕೇಳು."

"ನೋಡಕ್ಕ, ಈ ರಾಧಿಕಾ ಅನ್ನೊಳು ಗುಂಡೂರಾಯ ನಿಗೆ ಮಂಜೂ ಭಾರ್ಗವಿ ಇದ್ದಲ್ಲ, ಅಂಗೆ ಕುಮಾರಸ್ವಾಮಿ ಗಂತೆ."

"ಅವುಳ್ಯಾರು ಮಂಜು ಬಾರಗವಿ?"

"ನಿನಿಗೆ ಹಳೆ ದೀಟೈಲ್ಸನ್ನೆಲ್ಲ ಹೇಳಕ್ಕೆ ಈಗ ನಂಗೆ ಟೈಮಿಲ್ಲ. ಮಂಜು ಭಾರ್ಗವಿ ಅಂತ ಡ್ಯಾನ್ಸರಿದ್ಲು ಕಣಕ್ಕ. ಅವುಳು ಡ್ಯಾನ್ಸ್ ಮಾಡ್ತಯಿದ್ರೆ ಹಳೆ ನವುಲು ಕುಣದಂಗಾಗದು. ಆರಡಿ ಇದ್ಲು, ಅವುಳು ಡ್ಯಾನ್ಸ್ ಮಾಡದ ನೋಡ್ತಾಯಿದ್ದ ಗುಂಡೂರಾಯ ಇವುಳೇ ನನಗೆ ಲಯಕ್ಕಾದ ಹೆಣ್ಣು ಅಂತ ಅವುಳು ಕೇಳಿದ್ದನ್ನೆಲ್ಲ ಕೊಟ್ಟು ಜ್ವತಿಗಾಯ್ಕಂಡಿದ್ದ. ಅಲ್ಲಿಂದ ಸುರುವಾದ ಈ ಚೇಪ್ ಮಿನಿಷ್ಟ್ರ ಚಟಗಳು ಎಡೂರಪ್ಪನಗಂಟ ಮುಂದುರದವೆ."

"ಅಂಗರೆ ರಾಧಿಕನತ್ರ ಇರೊ ದುಡ್ಡು ಕಾಸು ಕುಮಾರಸ್ವಾಮಿದು ಅಂತಿಯಾ?" ಎಂದ ಸೀರ.

"ಕುಮಾರಸ್ವಾಮಿದು ಅಲ್ಲ, ಅವುರಪ್ಪುಂದು ಅಲ್ಲ, ಸದ್ದಿಕೆ ಅದು ರಾಧಿಕನತ್ರ ಇರೊ ದುಡ್ಡು ಚಿಗಪ್ಪ ಎನ್‌ಕ್ವಯಿರಿ ಆಗಿ ತನಿಖೆ ಮಾಡಿದ ಮ್ಯಾಲೆ ಅದು ಯಾರದು ಅಂತ ಗೊತ್ತಾಯ್ತದೆ."

"ಅಲ್ಲ ಕಣೊ ವಾಟಿಸ್ಸೆ, ರಾಧಿಕನತ್ರ ಇರೊ ದುಡ್ಡು ಸಾರ್ವಜನಿಕರದು ಅಂತ ನಾನಂದೆ. ನೀನದಕೆ ವಿವರಣೆ ಕೊಡಬೇಕಾಗಿತ್ತು" ಎಂದ ಉಗ್ರಿ.

"ನೋಡೊ ಉಗ್ರಿ, ರಾಧಿಕಾ ಫೇಮಸ್ ಆಗುಟ್ರು. ಅವುಳಿಗೆ ಸಿನಿಮಾದೋರ್ಯಲ್ಲ ಗೊತ್ತು. ರಾಜಕಾರಣದಲ್ಲಿ ನಮ್ಮ ಶಿವಕುಮಾರ, ಅವುನ್ಯಾರೊ ಗಣಿ ಲಾಡು, ಇವುರ್ಯಲ್ಲ ಪ್ರೆಂಡ್ಸಂತೆ. ಆದ್ರಿಂದ ಅಲ್ಲಿರದ್ಯಲ್ಲ ಕುಮಾರಸ್ವಾಮಿ ದುಡ್ಡು ಅಂತ ಹೇಳಕ್ಕೆ ಬರದಿಲ್ಲ."

"ಅಂಗಾದ್ರೆ ಸರಿಬುಡು. ಅವುಳತ್ರ ಇರೋದ್ಯಲ್ಲ ಯಾರ್‍ಯಾರ ದುಡ್ಡೋ ಅನ್ನದಾದ್ರೆ ಸುಮ್ಮನೆ ಕುಮಾರಸ್ವಾಮಿ ಯಾಕಪ್ಪ ದೂರದು. ಮಾಡಿದೋರ ಪಾಪ ಆಡಿದೋರ ಬಾಯಲಿ ಅಂತ ನಮಿಗ್ಯಾಕದು."

"ನೀವೇಳದ ನೋಡಿದ್ರೆ ಒಂದು ಪರಸಂಗ ಗೆಪ್ತಿಗೆ ಬತ್ತು ಕಂಡ್ಯ" ಎಂದ ಸೀರ.

"ಯಾವುದು ಹೇಳು ಚಿಗಪ್ಪ"

"ಇಲ್ವಬ್ಳು ರಾಜಮ್ಮ ಅಂತ ಇದ್ಲು. ಅವುಳತ್ರಕೆ ಮರೀಗೌಡ, ಗುಂಡಣ್ಣ, ಯರಕಣ್ಣ ಯಲ್ಲ ಹೋಯ್ತಿದ್ರು. ಕಡಿಗೊಂದಿನ ಊರ ಜನಕ್ಕೆ ಪಾಟಲ್ಲೆ (spot) ಸಿಕ್ಕಿದ್ರು. ಯಾರೂ? ಈ ರಾಜಮ್ಮನೂ ಯರಕಣ್ಣನೂನೆ. ಹುಲ್ಲು ಕೊಪ್ಪಲ ಬೇಲಿ ಸಂದಿಲಿ ಸಿಕ್ಕಿದ್ರು. ಆಗ ಊರ ಜನ



ಹಿಡುದು ಅವುರಿಬ್ರಿಗೂ ಮದುವೆ ಮಾಡಿದರಂತೆ. ಈ ನ್ಯಾಯದಲ್ಲಿ ಮರಿಗೌಡನ ಸುದ್ದಿನೂ ಬರಲಿಲ್ಲ, ಗುಂಡಣ್ಣನ ಸುದ್ದಿನೂ ಉಳ್ಕಿಕಂಡೋಯ್ತು. ಅಂಗಾಯ್ತಾ ಅದೆ. ಈ ಕುಮಾರಸ್ವಾಮಿ ಕತೆ ಕೇಳತಯಿದ್ರೆ" ಎಂದು ಸೀರ ನಕ್ಕ.

"ಕುಮಾರಣ್ಣ ಏನೂ ಮಾಡಬಾರ್ದ ಮಾಡಿಲ್ಲ ತಗೊ. ಯಲ್ಲ ಮಾಡದ್ನೆ ಅವುನು ಮಾಡ್ಯವುನೆ" ಎಂದ ಉಗ್ರಿ.

"ನೀನಿನ್ನೇನು ಹೇಳ್ತಿಯಪ್ಪ ಉಗ್ರಿ. ನೀನು ಮಾಡಿದ್ನೆ ಅವುನೂ ಮಾಡ್ತ ಅವುನೆ. ಏನಪ್ಪ ಅಂದ್ರೆ ನೀನು ಮ್ಯಾರೇಜಾಗಿಲ್ಲ, ಬಡಸ್ಥನದಲ್ಲಿದ್ದಿ. ಆದ್ರೆ ಕುಮಾರಸ್ವಾಮಿ ಮದಿವಾಗಿ ನಿನ್ನಂಥ ಮಗಿದ್ರು ಕೈತ್ವಳಕಂಡು ಮುಟ್ಬೊ ಹೆಂಡ್ತಿಯಿದ್ರು ಮಾಡದು ತೆಪ್ಪು"

"ಕುಮಾರಸ್ವಾಮಿ ಹೆಡತಿ ಕೈ ತ್ವಳಕಂಡು ಮುಟ್ಟಂಗಿದ್ದಳೇನ್ನ?"

"ಊ ಕಣಕ್ಕ ನೋಡಿಲವೆ ನೀನು?"

"ಅದಿರ್ಲಿ ಕುಮಾರಣ್ಣ ಮಾಡಬಾರ್ದ ಮಾಡಿಲ್ಲ ಅಂತಿಯಲ್ಲೊ ಉಗ್ರಿ ಜನ ಇಂತದ್ನೆಲ್ಲ ಮೆಚ್ಚತಾ ಹೋದ್ರೆ ಏನಾಯ್ತದೆ?"

"ಈ ಹಿಂದೆ ಮುಖ್ಯಮಂತ್ರಿಗಳಾಗಿದ್ದೋರು ಮಾಡಿದ್ನೆ ಅವುನೂ ಮಾಡಿದ, ಏನಾದತೊ?"

"ಸ್ವಲುಪ ದೀಟೈಲಾಗಿ ಹೇಳತಿಯಾ?"

"ನೋಡಪ್ಪಾ, ಕ್ಯಂಗಲ್ ಹನುಮಂತಯ್ಯ ಅವುನ್ಯಾರೋ ತಾಸೀಲ್ದಾರನ ಹೆಡತಿನೆ ಕೈಗಾಯ್ಕಂಡಿದ್ರಂತೆ. ಆದ್ರು ಯಾರಿಗೂ ಗೊತ್ತಾಗದಂತೆ ಮೇಂಟೇನು ಮಾಡಿದ ... ಇನ್ನು ನಿಜಲಿಂಗಪ್ಪನಂತೂ ಏಕಪತ್ನಿ ವ್ರತಸ್ತಾಗಿ ವ... ತುಂಬ ಮಕ್ಕಳ ಮಾಡಿದ್ರಂತೆ. ವೀರೇಂದ್ರ ಪಾಟೀ... ಕೂಡ ಯಾರ ಸವಾಸಕೂ ಹೋದೋರಲ್ಲ, ರಾಜ... ಕ್ಯಲಸಾಯ್ತು ಅವುರಾಯ್ತು ಅನ್ನಂಗಿದ್ರು. ಆಮ್ಯಾಲೆ ಬಂ... ದೇವರಾಜ ಅರಸು ಏಟೇ ಆಗ್ಲಿ ಅರಸ... ಸುಂದರವಾಗಿರೋದ್ಯಲ್ಲ ನನಿಗೇ ಬೇಕು ಅನ... ಮನಸಿದ್ದೊನು. ಅರಸುಗೆ ಕೊಡಗಿನ ಕಡೆ ಸುಂದ್ರಿ ತಂ... ತಾಗಿಸಿ ಗುಂಡೂರಾಯ ಮಂತ್ರಿಯಾದನಂತೆ. ಅದ್ಕೆ ಅರ... ಗುಂಡೂರಾಯನ ವಿಷಯದಲ್ಲಿ ಕಡೆವರಿಗೂ ಟ... ಮಾತಾಡಲಿಲ್ಲವಂತೆ."

"ನಿಜ ಬುಡು, ಜನ ಹತ್ರದಲ್ಲಿದ್ದಾಗ ಆಡಿದ ಮಾ... ದೂರಕೋದಾಗ ಮಾರಿಕತ್ತರಂತೆ."

"ಅದಿವತ್ತಿಗೂ ನ್ಯಡಿತಾ ಅದೆ, ಅದುಬಿಡು. ಆಮ್ಯಾ... ಯಗಡೆ ಬಂದ. ಅವುನೂ ಡ್ಯಾನ್ಸ್ ಮಾಡೋ... ಮಡಿಕಂಡಿದ್ದನಂತೆ. ಅವುನಾದ ಮ್ಯಾಲೆ ಬಂದ ಬಮ್ಮಾಯಿ... ಅದ್ಯಾವುದೊ ಹಳೆಗುಂಡಿವಳಿಕೆ ಬದ್ದೊನು ಅಲ್ಲಿಂದ ಎದ್ದು... ಬರಲೇಯಿಲ್ಲ."

"ಅದ್ಯಾವ ಹಳೆಗುಂಡಿನ್ನ?" ಎಂದು ಜುಮ್ಮಿ ನಕ್ಕಳು...

"ಗುಂಡಿ ಅಂದ್ರೆ ಊರೆಸರು ಕಣೆ. ಅಲ್ಲಿ ಯಾರು... ಇದ್ಲಂತೆ, ಕಂತಿಗೆ ತಕ್ಕ ಬಂತೆ ಅನ್ನಂಗೆ. ಆಮ್ಯಾಲೆ... ಬಂಗಾರಪ್ಪನ ಯವಾರ ಇವತ್ತಿಗೂ ಗೊತ್ತಾಗಿಲ್ಲ. ಅವುನು... ಕುಡಿತನೊ ಇಲವೊ ಅನ್ನದೂ ಗೊತ್ತಿಲ್ಲ. ಯಾರನಾ...

ಪಿಂಕ್ ಚೆಡ್ಡಿಗೆ ಸೀರೆ ಫ್ರೀ!

ಪ್ರೇಮಿಗಳ ದಿನ!

ಪ್ರೇಮಿಗಳು ಹೊರಬರುವಂತಿಲ್ಲ!

(ಮನೆಯ ಒಳಗೇ ಏನಾದರೂ ನಡೆಸಿಕೊಳ್ಳಬಹುದೋ ಗೊತ್ತಿಲ್ಲ!)

ಬಂದರೆ–ಪ್ರೇಮಿಗಳಾದರೆ ವಿವಾಹ; ಸ್ನೇಹಿತರಾದರೆ ರಾಖಿ ಬಂಧನ!

ಮುತಾಲಿಕ್ ಆರ್ಭಟ ಇದು. ಇದಕ್ಕೆ ಒಂದು ಸೇನೆಯೇ ಸಿದ್ಧವಿದೆಯಂತೆ. ಅವರು ತಾಳಿ, ರಾಖಿ ಹಿಡಿದು ಊರು ತುಂಬ ಗಸ್ತು ತಿರುಗುತ್ತಾರಂತೆ.

ಸ್ವಚ್ಛ ಮನಸ್ಸುಗಳ ಕೆರಳಿಸಿತು ಈ ಮಾತು. ತಿರುಗಿಬಿದ್ದರು ಅವರು. 'ಪ್ರೇಮಿಗಳ ದಿನ ಈ ಹುಚ್ಚು ನಾಯಿಗೆ ನೀಡುವೆವು ಪಿಂಕ್ ಚೆಡ್ಡಿ ಬಳುವಳಿ.'

'ಸಂಸ್ಕೃತಿ ರಕ್ಷಣೆ'ಗಿಂತ 'ಪಿಂಕ್ ಚೆಡ್ಡಿ'ಯೇ ಆಕರ್ಷಣೆಯಾಯಿತು. ಸಾವಿರಾರು ಜನ ಮುಗಿಬಿದ್ದರು. ಪಿಂಕ್ ಚೆಡ್ಡಿ ನೀಡಲು ರೆಡಿ ಅಂದರು.

(ಹೀಗೇನಾದರೂ ನಡೆದೇಬಿಟ್ಟರೆ... ಪ್ರಮೋದ್ ಮುತಾಲಿಕ್ ಮಹಾಶಯರ ಮನೆ 'ಪಿಂಕ್ ಚೆಡ್ಡಿ' ಮನೆ ಎಂದು ಜಗದ್ವಿಖ್ಯಾತವಾಗಬಹುದು!)

ಜನಸ್ತೋಮವೇ ಎದುರುಬಿದ್ದಿದ್ದರೂ ಮುತಾಲಿಕ್ ಕಂಗಾಲಾಗಲಿಲ್ಲ, ತಿರುಗೇಟು ನೀಡಿದರು.

(ಈ ಏಟು ತಿರುಗೇಟು ಇತ್ತೀಚೆಗೆ ನಮ್ಮ ಪತ್ರಿಕಾ ವಲಯದಲ್ಲಿ ಬಹಳವಾಗಿ ಚಾಲ್ತಿಯಲ್ಲಿರುವ ಪದ. ಸುಸಂಬದ್ಧವಾಗಿ, ಆಳವಾದ ಒಳನೋಟ ಬೀರುವ ಮಾತುಗಳಿಗೆ ಪ್ರತಿಯಾಗಿ ವಕ್ರಬುದ್ಧಿಯ ಯಾವನೋ ನೀಡಿದ ಹೇಳಿಕೆಯೂ ಅವರ ಕಣ್ಣಿಗೆ ತಿರುಗೇಟಾಗಿ ಗೋಚರಿಸುತ್ತದೆ.)

'ಚೆಡ್ಡಿ ಕಳುಹಿಸುವುದು ಹೀನ ಸಂಸ್ಕೃತಿ. ವೈಚಾರಿಕ ಚರ್ಚೆಗೆ ಬರಲಿ' ಎಂದು ಸಾರಿದರು ಮುತಾಲಿಕ್!

(ವೈಚಾರಿಕತೆ ಎನ್ನುವುದು ಒಂದು ಇದೆ ಅಂತೇನಾದರೂ ಅವರಿಗೆ ಅರ್ಥ ಆಯಿತಲ್ಲ!)


ದಿಢೀರನೆ ವೈಚಾರಿಕತೆ ಬೆನ್ನುಬಿದ್ದ ತಮ್ಮ ನಾಯಕನ ಮಾತು ಕೆಲವು ಮಾಧ್ಯಮದವರಿಗೂ ಬೆಚ್ಚು ಬೀಳಿಸಿರಬಹುದು. ಆದರೂ ಹಿಂದೂ ಸಂಸ್ಕೃತಿಯ ರಕ್ಷಣೆಯನ್ನು ಪರೋಕ್ಷವಾಗಿಯಾದರೂ ಮಾಡಲೇಬೇಕೆಂಬ ಕಳಕಳಿಯಿಂದ ನಿರಂತರವಾಗಿ ಅವರ ಹೇಳಿಕೆಯನ್ನು ಚಿತ್ರಸಮೇತ ಪ್ರಸಿದ್ಧಪಡಿಸಿ ಕೃತಾರ್ಥರಾದರು!

ಒಂದು ವೇಳೆ ಮನೆಯಲ್ಲಿನ ಪುಟ್ಟ ಮಕ್ಕಳು ಪತ್ರಿಕೆ ನೋಡುವ ಅಭ್ಯಾಸ ಹೊಂದಿದ್ದರೆ ಏನು ನಡೆಯಬಹುದಾಗಿತ್ತು ಅಂದರೆ....

'ಮರಿ ನೀನು ಮುಂದೇನಾಗ್ತೀಯಾ?

'ನಾನು.... ನಾನೂ.....'

'ಹೂ ಹೇಳು ಮರಿ. ಡಾಕ್ಟರ್ ಆಗ್ತೀಯ?'



'ಉಹುಂ'

'ಇಂಜಿನಿಯರ್ ಆಗ್ತೀಯ?'

'ಉಹುಂ'

'ಸಮಾಜ ಸೇವಕ ಆಗ್ತೀಯ'

'ಉಹುಂ'

'ಹೇಳು ಮರಿ ಮತ್ತೇನಾಗ್ತೀಯ?'

'ದಿನಾ ಪೇಪರಲ್ಲಿ ಫೋಟೋ ಬರ್ತದಲ್ಲ... ಇವರಂಗಾಗ್ತೀನಿ!'

ಹಿಂದೂ ಧರ್ಮಕ್ಕೆ ಪತ್ರಿಕೆ ಕೊಡುಗೆ ಇದು ಎಂದೇ ಭಾವಿಸೋಣ!

ಮಾಧ್ಯಮಗಳ ದುರ್ದೈವ. ಅವರೆಷ್ಟೇ ಹೆಣ ತೂಕದ ಹೊರೇನ ಮೇಲೆ ತಳ್ಳಲು ಪ್ರಯತ್ನಿಸಿದರೂ ಅದು ಅವರ ತಲೆಯ ಮೇಲೇ ಕುಸಿದು ಬೀಳುತ್ತಿತ್ತು. ಪಿಂಕ್ ಚೆಡ್ಡಿ ಚಳವಳಿ ಬಿರುಗಾಳಿಯನ್ನೇ ಎಬ್ಬಿಸಿತು. ಚೆಡ್ಡಿಗಳ ಶೇಖರಣೆ ಹೆಚ್ಚುತ್ತಲೇ ಹೋಯಿತು. ಮಾಧ್ಯಮಗಳ ರಕ್ಷಣೆಗೆ ಮುತಾಲಿಕ್ ಮಹಾಶಯರೇ ಬರಬೇಕಾಯಿತು. ಅವರಿಂದ ಹೊರಬಿತ್ತು ಒಂದು ಬಂಪರ್ ಕೊಡುಗೆ–ಒಂದು ಪಿಂಕ್ ಚೆಡ್ಡಿ ನೀಡಿದರೆ ಸೀರೆ ಫ್ರೀ!

ಎಂತಹ ಅದ್ಭುತವಾದ **exchange offer!**

ಮನೆ ಹಂಗಸರಿಗೆ ತಿಳಿದಿರುತ್ತೆ, ಎಂಟತ್ತು ಹಳೆ ಪಾತ್ರೆ ಕೊಟ್ಟು ಹೊಸ ಪಾತ್ರೆ ತೆಗೊಳ್ತಾರೆ. ಹಳೆ ಜರತಾರಿ ಬಟ್ಟೆ ಕೊಟ್ಟರೆ ಹೊಸ ಪಾತ್ರೆ ಬರುತ್ತೆ. ಹಳೆ ಮಾಡೆಲ್ ವಸ್ತು ಏನಾದರೂ ಇದ್ದರೆ ಅದನ್ನು ಹೊಸ ಮಾಡೆಲ್‌ಗೆ ಬದಲಾಯಿಸಿಕೊಳ್ಳಬಹುದು. ಮೇಲೆ ಒಂದಿಷ್ಟು ಹಣ ನೀಡಬೇಕು ಅಷ್ಟೆ. ಒಂದು ರೀತೀಲಿ ಇದು **barter system.** ಸಂಸ್ಕೃತಿ ರಕ್ಷಿಸಬೇಕು ಅಂತಾನೋ ಏನೋ ನಾಣ್ಯ ಚಲಾವಣೆ ಇಲ್ಲದ ಯುಗಕ್ಕೆ ಹೋಗಿದ್ದಾರೆ! ಒಂದು ಪಿಂಕ್ ಚೆಡ್ಡಿ ಕಳುಹಿಸಿದರೆ ಸಾಕು. ಸೀರೆ ಬಂದು ಬೀಳುತ್ತೆ! ಹಣದ ಬಗ್ಗೆ ಚಿಂತೆಬೇಡ. ಅದನ್ನು ಸಂಗ್ರಹಿಸುವ ಮಾರ್ಗೋಪಾಯಗಳು ಅವರಿಗೆ ಗೊತ್ತಿದೆ!

ಸನ್ಮಾನ್ಯರೆ ತಮ್ಮ ಘನವಾದ ಈ **exchange offer**ನಲ್ಲಿ ಒಂದು ಚೆಡ್ಡಿಗೆ ಒಂದು ಸೀರೆ ಎಂದು ಘೋಷಿಸಿದ್ದೀರಿ. ಅವೇನು ಹಳೆಯ ಸೀರೆಗಳೊ ಅಥವಾ ಹೊಸ ಸೀರೆಗಳೊ? ಪಿಂಕ್ ಪ್ಯಾಂಟಿ ಹೊಸದೇ ಇರಬೇಕೊ? ಅಥವಾ ಹಳೆಯದಾದರೂ ನಡೀತದೊ? ಇನ್ನೂ ಅವಿವಾಹಿತರಾಗಿರುವ ತಾವು ಹೊಸದಕ್ಕಿಂತ ಹಳೆಯ ಪ್ಯಾಂಟಿಗಳನ್ನೇ ಖಾಯಸ್ಸು ಪಡಬಹುದಾದುದರಿಂದ ಇಂತಹವುಗಳನ್ನು ಕಳುಹಿಸಿದರೆ ಒಂದಕ್ಕಿಂತ ಹೆಚ್ಚು ಸೀರೆಗಳನ್ನೇನಾದರೂ ಕಳುಹಿಸುವ ಸಂಭವ ಉಂಟೇ ಎಂಬುದನ್ನು ವಿಷದೀಕರಿಸಿದ್ದರೆ ಛೇಷಿತ್ತು!

ಈ ಲೇಖನ ಸಿದ್ಧಪಡಿಸುವ ಹೊತ್ತಿಗೆ ಬೆಂಗಳೂರಿ... ಪ್ರೇಮಿಗಳಿಗೆ ಉದಾರ ಮನಸ್ಸಿನಿಂದ ಶ್ರೀರಾಮಸೇ... ಪ್ರೇಮಿಗಳ ದಿನ ಪ್ರೇಮಿಸಲು ಅನುಮತಿ ನೀಡಿರುವುದು... ಪತ್ರಿಕೆಗಳಲ್ಲಿ ವರದಿಯಾಗಿದೆ. ಪರ ಊರಿನ ಪ್ರೇಮಿಗಳು... ಪ್ರೇಮಿಸಬೇಕಾದರೆ ಬೆಂಗಳೂರಿಗೆ ಹೋಗಬೇಕು!

ಅಯ್ಯೋ ರಾಮನೆ ಇಂತಹ ನಿರ್ಧಾರಾನ ಶ್ರೀರಾಮಸೇ... ತೆಗೆದುಕೊಂಡರೆ 'ಸಂಸ್ಕೃತಿ ರಕ್ಷಣೆ' ಹೇಗಪ್ಪಾ ಎಂದೇನೂ... ಚಿಂತಿಸಬೇಕಿಲ್ಲ, ಅವರು ಈ ಜವಾಬ್ದಾರಿಯನ್ನು ಪ್ರೇಮಿಗ... ತಂದೆತಾಯಿಗಳಿಗೆ ಬಹಳ ಕಳಕಳಿಯಿಂದ ಒಪ್ಪಿಸಿದ್ದಾರೆ... ಈ ಆಲೋಚನೆ ಸರ್ಕಾರದ ಆಲೋಚನೆಗೆ ಸರಿ... ಹೊಂದುವಂತಿದೆ. ಕೇರಳದ ಶಾಸಕ ಕುಂಞಂಬು ಅವ...

ಅಣಕ

ಎಚ್.ಎಲ್. ಕೇಶವಮೂರ್ತಿ

ಪುತ್ರಿಯನ್ನು ಹಿಂದೂಪರ ಸಂಘಟನೆಗಳು ಮುಸ್ಲಿ... ಯುವಕನೊಡನೆ ಮಾತನಾಡಿದ ಘನಘೋರ ಅಪರಾಧಕ್ಕಾ... ಅಪಹರಿಸಿ ಥಳಿಸಿ ಬುದ್ಧಿ ಹೇಳಿದಾಗ ಗೃಹಮಂತ್ರಿ ಹೇಳಿದ... ಮಾತನ್ನು ನೆನಪು ಮಾಡಿಕೊಳ್ಳಿ. 'ನಿಮ್ಮ ಮಕ್ಕಳ ಸುರಕ್ಷೆಯ... ಹೊಣೆ ನೀವೇ ಹೊತ್ತು ಕೊಳ್ಳಬೇಕು. ಗೂಂಡಾಗಳು... ದಾರಿಯಲ್ಲಿ ಹಲ್ಲೆ ಮಾಡಿದರೆ ನಾವೇನು ಮಾಡಲು... ಸಾಧ್ಯ' ಎಂದಲ್ಲವೆ ಅವರು ಬುದ್ಧಿಮಾತು ಹೇಳಿದ್ದು... ಇದಕ್ಕೆ ಅನುರೂಪವಾಗಿಯೇ ಇಲ್ಲವೆ ಶ್ರೀರಾಮಸೇನೆಯ... ಮಾತು!

ಈ ಸಂಸ್ಕೃತಿ ಅನ್ನೋದು ಯದ್ವಾತದ್ವಾ... ಹಾಳಾಗಿರೋದು ಮಂಗಳೂರಿನಲ್ಲಿ ಅನ್ನಿಸುತ್ತೆ. ಅದಕ್ಕೆ... ಏನೋ ಅದರ ರಕ್ಷಣೆಯ ಭರಾಟೆಯೂ ಅಲ್ಲಿ ಜೋರು... ಉಸ್ತುವಾರಿ ಸಚಿವರೇ 'ಇವೆಲ್ಲ ನಮ್ಮ ಜಿಲ್ಲೆಯಲ್ಲಿ ಸಾಮಾ... ಘಟನೆಗಳು. ಮುಂಚಿನಿಂದಲೇ ನಡೆಯುತ್ತಲೇ ಇವೆ... ಯಾಕೆ ದೊಡ್ಡದು ಮಾಡುತ್ತೀರಿ' ಎಂದೆಲ್ಲ ಬುದ್ಧಿ ಮಾತು... ಹೇಳಿದ್ದಾರೆ. ಇದನ್ನು ಅರಿತುಕೊಳ್ಳದೆ ಆ ಕೇಂದ್ರ ಸಚಿ... ರೇಣುಕಾ ಚೌಧುರಿ ಪಬ್ ದಾಳಿ, ಯುವತಿಯ ಅಪಹರ... ಇಂತಹವನ್ನೆ ಗುಡ್ಡಾನ ಬೆಟ್ಟ ಮಾಡ್ದಂಗೆ ಮಾಡಿ ಭಾರತೀಯ... ಜನತಾ ಪಕ್ಷಕ್ಕೆ ಕೆಟ್ಟ ಹೆಸರು ತರಬೇಕು ಅಂತ ಇದಾ...

ರವೂ ಗೊತ್ತಿಲ್ಲ. ಅಂತೂ ಅವುನ ಮನೆಲಿ
ಲಿ ಗಲಾಟೆ ಆಗ್ಯದೆ ಅನ್ನೋದೊಂದು ದಿಟವದೆ"
ಂಗಿ.
ಯಿಲಿದೇನು ಇಲವೇನ್ನ?"
ಪ್ರಂದು ಲವ್ವು ಮ್ಯಾರೇಜು. ಆದ್ರಿಂದ ಮಾಲತಿ
ಮೊಯ್ಲಿ ಮೈಯಿಗೆ ಅಂಟಗಂಡೇ ಇರತಳೆ.
ಮೊಯ್ಲಿ ಗೊಂತಿಗೆ ಬಗದ ಕ್ಯಾಣ ಮರಿಯಂಗೇ
ಕಿರಬವುದು."
ದರಲ್ಯಲ್ಲಿ ದ್ಯಾವೇಗೌಡನ ಇಸಿಯದಲ್ಲಿ ಯಾರೂ
ಬಿಡಚಂಗಿಲ್ಲ" ಎಂದ ಕಾಳಮಾವ.
ಹೋ, ನಮ್ಮ ಕಾಳದ್ಯಡಪ್ಪ ದ್ಯಾವೇಗೌಡನೂ
ಗುಳಕಂಡವ್ರುನೆ ಅಂತ ತಿಳಕಂಡವ್ರುನೆ. ದ್ಯಾವೇಗೌಡ್ರು
ಮೈಸೂರಲ್ಲಿ ಸೈಟ್ ಕೊಟದ್ರು ದ್ವಡಪ್ಪ"
ಟ್ ಕೊಟ್ರೆ ಏನಾಯಿತ್ಲ?"
ನೂ ಆಗಲಿಲ್ಲ, ರುಣ ತೀರಿದಂಗಾಯ್ತು.
ಮ್ಮನೆ ಯಾರಾರ ಸೈಟು ಕೊಟ್ಟರೆ?"
ಲಿ ಬಡ್ಕತ್ತುದ್ರು ನಿನ್ನ ಕುಟ್ಟೆ ಮಾತಾಡಕ್ಯಾದತ್ಲ?"
ಮ್ಯಾಟ್ರು ತಗಂಡ್ರೆ ಮಾತಾಡಕ್ಯಾಗದಿಲ್ಲ ದ್ವಡಪ್ಪ
ಕ್ಸ್ ಮ್ಯಾಟ್ರು."
ಂಥಾ ಸೆಕ್ಸ್ ಮ್ಯಾಟ್ರು ನಾನು ಕಾಣದ್ದು?"
ಸ್ ಮ್ಯಾಟ್ರೆ ದ್ವಡಪ್ಪ ಇವತ್ತು ಬಿಜೆಪಿಗಳ ತಲೆ
ೀದು. ನೋಡು, ಹುಡುಗ ಹುಡುಗಿ ಜ್ವತೆಲಿದ್ರೆ
ಮದುವೆ ಮಾಡ್ತಿವಿ ಅಂತ ಹೆದರಿಸ್ಯವುರೆ.
ನಮ್ಮ ಜುಮ್ಮಕ್ಕ ಉಗ್ರಿ ಎಲ್ಲಿ ಸಿಗಾಯ್ಕಂಡು
ಳ ಕೈಲಿ ಮ್ಯಾರೇಜ್ ಮಾಡಿಸಿಗತ್ತರೊ ಅಂತ
ಕಂಡಿದ್ದೆ. ನಿಜವಾಗ್ಲು ಕಣಕ್ಕ."
ಳೆಮಕ್ಕಳು ನನ್ನತ್ರಕೆ ಬಂದಿದ್ರೆ ಬೀಜಕಿತ್ತು ಕೈಗೇ
ದ್ದೆ ಕಂಡ್ಯ" ಎಂದು ಜುಮ್ಮಿ ರಾಂಗಾದಳು.
ನಾತರ ತಿರುಗಿಬಿದ್ರೆ ಓಡ್ತರೆ ಕಣಕ್ಕ. ಆದ್ರು ಮಂಡ್ಯ
ರು ಬೆಂಗಳೂರಿಗೆ ಹೋದಾಗ ಉಗ್ರಿ ನೀನು
ಾಗಿರಿ."
ಂತದ್ದೇನು ಮಾಡಿದ್ದಿವುಲಾ?"
ಾಡಿಲ್ಲ ಕಣಕ್ಕ, ಪ್ರೇಮಿಗಳು ಸಿಕ್ಕಿದ್ರೆ ಮದುವೆ
ಂತೆ ರಾಮಸೇನೆ ಜನ."
ವುರವ್ವದೀರಿಗೆ ಮಾಡಕ್ಕೇಳು. ಅವುರಕ್ಕದೀರಿಗೆ
ಳು. ಅದಿನ್ಯಾವ ಮಿಂಡ್ರುಬಡಕಿ ಪಟ್ಟೆಲುಟ್ಟದ್ದವುಲ
ಮದುವೆ ಮಾಡ್ತರಂತೆ ಮದುವೆಯಾ."
ಾಲ್ ಡೌನಕ್ಕ." ■

ಮುಖ್ಯಮಂತ್ರಿ ಗೋಳೋ ಅಂತಿದಾರೆ. ಇಂತಹ
ರಕ್ಷಣೆ ಮಾಡುತ್ತಿರುವ ಸಂಘ ಪರಿವಾರದ ಅವಿರತ
ರಿತುಕೊಳ್ಳದೆ ಮಾನವಹಕ್ಕುಗಳ ಆಯೋಗ ಹಾಗೂ
ಲರು ಕಾನೂನು ಕುಸಿಯುತ್ತಿದೆ ಎಂದು ಆರೋಪದ
ಯಾರದ್ದೋ ಕೈವಾಡ ಇರಬೇಕು! ಈ ಆಪಾದನೆ
ವೇ ಸರಿ.


ಟೆರರ್ ಡಿಸ್ಟ್ರಿಕ್ಟ್

ಯೋತ್ಪಾದನೆ ಕುರಿತು ವ್ಯಾಪಕ ಚರ್ಚೆ ನಡೆಯುತ್ತಿದೆ.
ದ್ಯಾರ್ಥಿಗಳಲ್ಲಿ ಇದರ ಕುರಿತು ಅರಿವು
ಸಲು ಅಭಿಯಾನ ಮಾಡುತ್ತಿದ್ದೇವೆ ಅಂತ ಸರ್ಕಾರ.
ಕೇಸರೀಕರಣದ ಕಾರ್ಯಕ್ರಮ ಅಂತ ಕಾಂಗ್ರೆಸ್ಸು.
ರ್ಥಿಗಳಲ್ಲಿ ರಾಷ್ಟ್ರ ಪ್ರೀತಿ ಹುಟ್ಟಿಸುವುದನ್ನೇ
ಕರಣ ಅಂದರೆ ಏನೆನ್ನಬೇಕು ಅಂತ ಮುಖ್ಯಮಂತ್ರಿ.
ಕ್ರಮ ಯೋಜಿಸುವಾಗ ಒಂದೇ ವಿದ್ಯಾರ್ಥಿ
ನೆಯನ್ನು ಪರಿಗಣಿಸಿದ್ದೀರಲ್ಲ, ಆದರ ಮೂಗಿನ
! ಎಲ್ಲರೂ ಕುಣೀತ ಬಿದ್ದವರಲ್ಲ, ಇದು
ರ್ಥಿಗಳಲ್ಲೇ ಒಡಕು ಮೂಡಿಸುವ ಕಾರ್ಯಕ್ರಮ
ಪಕ್ಷದವರು. ಒಟ್ಟನಲ್ಲಿ ಭಯೋತ್ಪಾದನಾ ವಿರೋಧಿ
ಅಭಿಯಾನ ಅನ್ನೋದು ಹಾದಿರಂಪ ಬೀದಿರಂಪ
ಭಯೋತ್ಪಾದನೆ ಜಾಗೃತಿ ಅಭಿಯಾನ ಭಯೋತ್ಪಾದನಾ
ಾನ ಆಗಿದೆ.
ಇದನ್ನು ಕುರಿತು ಒಂದು ಚರ್ಚೆ.
ಕಿಸ್ತಾನ ಟೆರರ್ ಸ್ಟೇಟ್' ಚರ್ಚೆಯ ನಡುವೆ
ಮಾತು.
ದನ್ನು ಅಮೆರಿಕವೇ ಹೇಳಿದೆ.
ಬಿಗಿಯಿತಲ್ಲ! ದೊಡ್ಡಣ್ಣ ಹೇಳಿದ ಮೇಲೆ ಅದೇ


ಯೋತ್ಪಾದಕರನ್ನು ಅದು ಉತ್ಪಾದಿಸುತ್ತದೆ.
ರಿಂದ ಅದು ಭಯೋತ್ಪಾದಕರ ರಾಜ್ಯ
ದೇ ಅಳತೆಗೋಲಾದರೆ ಕರ್ನಾಟಕ ರಾಜ್ಯ
ೀಕು? 'ಟೆರರ್ ಸ್ಟೇಟಾ?' ಇದು ಬಂದ ಪ್ರಶ್ನೆ.
ರ್ನಾಟಕ ಆ ಹಂತವನ್ನು ಇನ್ನೂ ತಲುಪಿಲ್ಲ, ತಲುಪುವ
ಮಲ್ಲಿದೆ!
ಗಾಡದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯನ್ನು ಏನೆಂದು
ೀಕು?
ಶ್ನೆ, ಉತ್ತರ ಎರಡೂ ಇದ್ದ ಅವರ ಮಾತು:
ರರ್ ಡಿಸ್ಟ್ರಿಕ್ಟ್?' ■

"ಈ ಗೊಂದಲದ ಒತ್ತಡದ ಬದುಕಿನಲ್ಲಿ..."

ಮರೆಯುವ ಮುನ್ನ



■ಪಿ. ಲಂಕೇಶ್ ಏಪ್ರಿಲ್ 28, 1991



ಹೆನ್ರಿ ಜೇಮ್ಸ್ ಎಂಬ ಪ್ರಖ್ಯಾತ ಕಾದಂಬರಿಕಾರ ಗಮನಿಸುವುದು ಮತ್ತು ಗ್ರಹಿಕೆಗೆ ಬಹಳ ಪ್ರಾಮುಖ್ಯತೆ ಕೊಡುತ್ತಿದ್ದ. ಒಂದು ಪಾತ್ರದ ಚಲನವಲನ, ಮಾತುಕತೆ, ಕಣ್ಣು ಮೂಗು-ಎಲ್ಲವನ್ನು ಗಮನಿಸಿ ವಿವರಿಸುತ್ತಿದ್ದ. ಅಂತರಾಳದ ನೋವು ಮತ್ತು ನಲಿವನ್ನೊಳಗೊಂಡು ಪಾತ್ರದ ವೈಶಿಷ್ಟ್ಯ ಕೂಡ ಆ ಪಾತ್ರದ ಸೂಕ್ಷ್ಮ ವರ್ತನೆಯಿಂದ ಅಭಿವ್ಯಕ್ತಗೊಳ್ಳುತ್ತೆ ಎಂದು ಆತ ತಿಳಿದಿದ್ದ. ಆತನ ನಂಬಿಕೆಗೆ ಕಾರಣಗಳಿದ್ದವು. ನಾವೆಲ್ಲ ಏನನ್ನೂ ಗಮನಿಸದಿದ್ದರೂ ಗಮನಿಸಿರುವುದಾಗಿ ತಿಳಿದಿರುತ್ತೇವೆ: ಮರ ಹಸಿರಾಗಿ ಕಾಣುತ್ತದೆ, ಆ ಹಸಿರನ್ನು ಗಮನಿಸುವುದಿಲ್ಲ, ಮರದ ಚೈತನ್ಯ ನಮ್ಮ ಒಳಗೆ ಹೋಗಿರುವುದೇ ಇಲ್ಲ.

ಆದ್ದರಿಂದಲೇ ಹೆನ್ರಿ ಜೇಮ್ಸ್ ಹೇಳುತ್ತಾನೆ: "ಈ ಜೀವನವೆಂಬ ಗೊಂದಲದಲ್ಲಿ ನಿಜಕ್ಕೂ ನೋಡುವ, ಗ್ರಹಿಸುವ ಪ್ರಯತ್ನ ಅಂಥ ಸಾಮಾನ್ಯವಾದದ್ದೇನಲ್ಲ. ನೋಡದಂತೆ ನಮ್ಮನ್ನು ಇಟ್ಟಿರುವ ಜಗತ್ತಿನಲ್ಲಿ ಅದು ಅರ್ಥಪೂರ್ಣ ಪ್ರಯತ್ನ ಕೂಡ."

ಸಾಧುಪ್ರಾಣಿ



ಮೊನ್ನೆ ಲೇಖಕರ ಮೇಲಿನ ಕತೆಗಳನ್ನು ಓದುತ್ತಿದ್ದಾಗ ಹದಿನೆಂಟನೇ ಶತಮಾನದ ಇಂಗ್ಲಿಷ್ ಲೇಖಕ ಸ್ಯಾಮ್ಯುಯಲ್ ಜಾನ್‌ಸನ್ ಕುರಿತು ಎರಡು ಘಟನೆಗಳನ್ನು ಓದಿ ನಕ್ಕುಬಿಟ್ಟೆ. ಅವುಗಳಲ್ಲೊಂದು ಅವನ ಶಿಷ್ಯ ಬಾಸ್ವೆಲ್‌ನನ್ನ ಕುರಿತದ್ದು. ಬಾಸ್ವೆಲ್ ಕಟ್ಟಾ ಶಿಷ್ಯ: ತನ್ನ ಗುರು ಜಾನ್‌ಸನ್‌ನ ಜೀವನ ಚರಿತ್ರೆ ಬರೆಯುವುದಕ್ಕಾಗಿ ಅವನೊಂದಿಗೆ ಸದಾ ಇರುವವನೀತ. ಶ್ರೀಮಂತನ ಮಗನಾದ ಬಾಸ್ವೆಲ್ ಮದ್ಯಪಾನಿ, ಸ್ತ್ರೀವ್ಯಸನವುಳ್ಳವನು, ಸುಳ್ಳ, ಪ್ರತಿಭಾವಂತ. ಇಡೀ ಜೀವನದಲ್ಲಿ ಒಂದೇ ಒಂದು ಸಲ ಕಷ್ಟಪಟ್ಟು ಕೆಲಸ ಮಾಡದೆ ಇರುವವನು. ಒಮ್ಮೆ ಬಾಸ್ವೆಲ್ ಮತ್ತು ಜಾನ್‌ಸನ್ ದೂರದೂರಿಗೆ ಪ್ರಯಾಣ ಮಾಡುತ್ತಿದ್ದಾಗ ಜಾನ್‌ಸನ್ ಕೆಲವರು ಅಪರಿಚಿತರೊಂದಿಗೆ ಸಂಭಾಷಣೆ ಶುರುಮಾಡುತ್ತಾನೆ. ಅಪರಿಚಿತರಲ್ಲಿನ ಒಬ್ಬಳು ಮಹಿಳೆ ತನ್ನ ಮಗನ ಸೋಮಾರಿತನದ ಬಗ್ಗೆ ಹೇಳುತ್ತಾಳೆ; ಅವನನ್ನು ಕಷ್ಟಜೀವಿಯನ್ನಾಗಿ ಮಾಡುವ ಬಗ್ಗೆ ಮಾರ್ಗದರ್ಶನ ಕೇಳುತ್ತಾಳೆ. ಆಗ ಜಾನ್‌ಸನ್ ಬಾಸ್ವೆಲ್‌ನನ್ನು ತೋರಿಸಿ, "ಈತನೂ ಅಷ್ಟೆ. ಮೈಗಳ್ಳರಲ್ಲಿ ಮೈಗಳ್ಳ, ಒಂದೇ ಒಂದು ಕೆಲಸ ಮಾಡುವವನಲ್ಲ. ಆದರೂ ಸುಖವಾಗಿದ್ದಾನೆ ನೋಡಿ" ಅನ್ನುತ್ತಾನೆ.

ಅಲ್ಲಿಂದ ಹೊರಟಮೇಲೆ ಬಾಸ್ವೆಲ್ ಹುಸಿಮುನಿಸಿನಿಂದ, "ನೀವು ಬೇರೆಯವರ ಹತ್ತಿರ ನನ್ನನ್ನು ಹಾಗೆ ಅವಮಾನ ಮಾಡಬಹುದೆ?" ಎಂದು ಕೇಳುತ್ತಾನೆ.

"ಅವರು ಅಪರಿಚಿತರು ಕಣಯ್ಯ, ಅವರೆದುರು ಏನು ಹೇಳಿದರೂ ಅವಮಾನವಾಗೋಲ್ಲ, ಸುಮ್ಮನಿರು" ಅನ್ನುತ್ತಾನೆ.


ಇನ್ನೊಮ್ಮೆ ಬಾಸ್ವೆಲ್ ತನ್ನ ಗುರುವನ್ನು ಕೆಲವರು ತರುಣಿಯರಿಗೆ ಪರಿಚಯ ಮಾಡಿಸಲು ಕರೆದೊಯ್ಯುತ್ತಾನೆ. ಹುಡುಗಿಯರು ಜಾನ್‌ಸನ್‌ನನ್ನು ನೋಡಿ ಹೌಹಾರಿ ವಿಸ್ಮಯದಿಂದ ಅವನ ಸುತ್ತ ನಡೆದು ನೋಡುತ್ತಾರೆ. ಎತ್ತರದ, ಮೈಲಿ ಮುಖದ, ದಢೂತಿ ಆಸಾಮಿ ಜಾನ್‌ಸನ್. ಅವರು ಹಾಗೆ ಅಚ್ಚರಿಯಿಂದ ನೋಡುತ್ತಿದ್ದಾಗ ಪ್ರಾಣಿಯಂತೆ ನಿಂತಿದ್ದ ಜಾನ್‌ಸನ್ ಗಂಭೀರವಾಗಿ ಹೇಳುತ್ತಾನೆ: "ನಾನು ಸಾಧುಪ್ರಾಣಿ, ಬೇಕಾದರೆ ನೀವು ನೇವರಿಸಬಹುದು!"

"ಅಕ್ಕ"- ಪೊರೆ

ಪ್ರತಿಯೊಬ್ಬ ಲೇಖಕನೂ ಆಗಾಗ ಪೊರೆ ಬಿಡಬೇಕಾಗುತ್ತದೆ-ಎಲ್ಲರೂ ಸೇರಿ ಅವನ ಮನಸ್ಸಿಗೆ ಪೊರೆ ಕಟ್ಟಿಸಿರುತ್ತಾರೆ. ಮಹಾಸಾಹಿತಿ, ಪ್ರತಿಭಾವಂತ, ಗೌರವಾನ್ವಿತ ವ್ಯಕ್ತಿ, ಆದರ್ಶಪ್ರಜೆ-ಇತ್ಯಾದಿಯಾಗಿ ಅವನನ್ನು ಹೊಗಳಿಹೊಗಳಿ ಆತ ಕೂಡ ಅದನ್ನೆಲ್ಲ ನಂಬಿ ಪೂಜ್ಯನಂತೆ, ಹೆಣದಂತೆ ವರ್ತಿಸತೊಡಗುತ್ತಾನೆ. ಈ ಭಟ್ಟಂಗಿಗಳ ಸೇವೆ ನನಗೂ ಆಗುತ್ತಿರುತ್ತದೆ ಎಂಬುದು ನಿಮಗೆ ಗೊತ್ತು. ಮೊನ್ನೆ 1982ರಲ್ಲಿ ಬರೆದ 'ಕ್ಯಾತನ ಪಡ್ಡೆ ದಿವಸಗಳು' ಎಂಬ ಕಾದಂಬರಿಯನ್ನು ಪತ್ರಿಕೆಯಲ್ಲಿ ನೋಡಿದೆ. 'ಪರವಾಗಿಲ್ಲವೇ' ಅನ್ನಿಸಿತು. ಸಾಕಷ್ಟು ಬಿಸಿಬಿಸಿಯಾಗಿತ್ತು, ಕ್ಯಾತ ತಾನು ಕೊಳೆಗೇರಿಯಲ್ಲಿ ಕಲಿತ ಬೈಗುಳವನ್ನೆಲ್ಲ ಬಳಸಿದ್ದ, ಅನ್ನಿಸಿದ್ದನ್ನೆಲ್ಲ ಬರೆದಿದ್ದ. ನೋವು, ಭಯವೆಲ್ಲ ಇದ್ದವು. ಅದನ್ನು ಕೂಡಲೇ ಪ್ರಕಟಿಸುವುದು ಒಂದು ಪೊರೆ ಕಳಚಿಕೊಂಡಂತೆ ಅನ್ನಿಸಿತು.

ಅಚ್ಚುಮಾಡಲು ಕೊಟ್ಟೆ, ಹೊದಿಕೆಗೆ ಸ್ವಲ್ಪ ಸೆಕ್ಸಿ ಚಿತ್ರ ಕೊಟ್ಟೆ. ಯಾರಿಗೂ ತೋರಿಸಿರಲಿಲ್ಲ. ಅಚ್ಚಾಗಿ ಬಂದಾಗ... 'ಬೇಡ' ಎಂದು ಸ್ನೇಹಿತರೆಲ್ಲ ಹಠ ಹಿಡಿದರು. 'ಕಾದಂಬರಿಯ ದೃಶ್ಯ ಕತ್ತರಿಸುವುದು ಬೇಡ-ಆದರೆ ಈ ಹೊದಿಕೆ ಬೇಡ' ಅಂದರು. ನಿರ್ವಾಹವಿಲ್ಲದೆ ಒಪ್ಪಿ 'ಬಿಸಿ' ಚಿತ್ರವಿದ್ದ ಕಡೆ ಒಂದು ಕಣ್ಣಿನ ಚಿತ್ರ ಅಚ್ಚು ಮಾಡಿಸಿದೆ. ಪ್ರಖ್ಯಾತ ತಾರೆ ಗ್ರೇಸ್ ಕೆಲ್ಲಿಯ ಮಗಳು ಕ್ಯರೋಲಿನ್ ಕಣ್ಣಿನ ಚಿತ್ರ. ಇದರಿಂದಾಗಿ ಪುಸ್ತಕಕ್ಕೆ ಐದು ರೂಪಾಯಿ ಜಾಸ್ತಿ ಬೆಲೆ ಇಡಲೇಬೇಕಾಯಿತು.

ಅರ್ಧ ಪೊರೆ ಮಾತ್ರ ಕಳಚಿದಂತಾಯಿತು. ಸ್ವಲ್ಪ ಕಡಿಮೆ ಪೂಜ್ಯನಾಗಿದ್ದರೆ ತುಂಬ ಸಂತೋಷವಾಗುತ್ತೆ....



ಸಾವು ಬೇಡುವ ಭೂಮಿ
ಸುಡುಗಾಡು ಇದು
ಕೊಟ್ಟದ್ದನ್ನು ಪಡೆದು ಲೆಕ್ಕವಿಡುತ್ತಿದೆ
ಒಂದು ಎರಡು ಮೂರು......

ಬೆಳ್ಳಂಬೆಳಿಗ್ಗೆ
ಮೂರು ವರ್ಷದ ಕೆಂಚ
ಈರಿಯ ಮಗ
ಹೊಲೆಗೇರಿಯಲ್ಲಿ ಊಟವಿಲ್ಲದೆ
ಸತ್ತ
ಸಮಾಧಿ ಮೇಲೆ ಹೂಗಳು ಬಾಡಿಲ್ಲ

ಮಟ ಮಟ ಮಧ್ಯಾಹ್ನ
ಇಪ್ಪತ್ತರ ಹರೆಯದ ಕರಿಯ
ಮಾರನ ಮಗ
ಕುರುಬಗೇರಿಯಲಿ ಖಾಯಿಲೆ ಬಿದ್ದು
ಸತ್ತ
ಸಮಾಧಿ ಮೇಲೆ ಹೂಗಳು ಬಾಡಿಲ್ಲ

ಗುದ್ದಲಿ ಹೆಗಲೇರಿಸಿ
ಗುದ್ದು ತೋಡಲು ಹೋದ
ಆ ನಾಲ್ಕು ಜನ
ತಿರುಗಿ ಬಂದಿಲ್ಲ
ಅವರ ಹಸಿವಿಗೆ ಬುತ್ತಿ ಹೊರಬೇಕು

ಹೊತ್ತು ಮುಳುಗುವುದರೊಳಗೆ
ಇನ್ನಾರ ಸಾವೋ
ಉರಿವ ಸೂರ್ಯನದೋ
ಚಿಮಣಿ ದೀಪದ್ದೋ
ಒಲೆಯ ಬೆಂಕಿಯದೋ
ಯಾವ ಗುಡಿಸಲಿನ ಮುಂದೆ
ಅಲಾಯಿ ಕುಣಿತವೋ

ದೊಡ್ಡ ಮನೆಯ ತೋರಣ
ನಗುತ್ತಲೇ ಇದೆ
ಮುಚ್ಚಿದ ಬಾಗಿಲ ಮುಂದೆ

■ವಿ. ಹರಿನಾಥ ಬಾಬು ಸಿರುಗುಪ್ಪ

ಸಾಹಿತ್ಯ ಪುಟಗಳಿಗೆ ನೀವೂ ಬನ್ನಿ....!

ಲಂಕೇಶ್‌ನಲ್ಲಿ ಇನ್ನು ಮುಂದೆ ಸಾಹಿತ್ಯ ಕುರಿತಂತೆ ಸ್ವಲ್ಪ ಹೆಚ್ಚು ಸ್ಥಳಾವಕಾಶ ಇರಲಿದೆ. ಈಗಾಗಲೇ ಪುಸ್ತಕ ವಿಮರ್ಶೆಗಳು ರೆಗ್ಯೂಲರ್ ಆಗಿ ಪ್ರಕಟವಾಗುತ್ತಿವೆ; ಅದೇ ರೀತಿ ಪದ್ಯಗಳೂ ಸಹ.


ಇನ್ನು ಸಣ್ಣ ಕತೆಗಳಿಗೂ ಒಂದು ಪುಟ ಮೀಸಲಿಡಬಹುದು. ಹಾಳೆಯ ಒಂದೇ ಬದಿಗೆ, ಸ್ಫುಟವಾಗಿ ಬರೆದಿರುವ ಒಂದು ಪುಟ ಮೀರದಂತೆ ಕತೆಗಳನ್ನು ಕಳುಹಿಸಿಕೊಡಿ. ಜೊತೆಯಲ್ಲಿ ನಿಮ್ಮದೊಂದು ಫೋಟೋ, ಫೋನ್ ನಂಬರ್, ವಿಳಾಸ ಇರಲಿ. ಪ್ರಬಂಧ, ವೈಚಾರಿಕ ಲೇಖನಗಳು ಎಂದಿನಂತೆ ಇರಲಿವೆ.

ನಿಮ್ಮ ಬರವಣಿಗೆಯನ್ನು ಇ-ಮೇಲ್ ಮೂಲಕ ಕಳಿಸುವುದಾದರೆ ನುಡಿ, ಬರಹ ಅಥವಾ ಆಕೃತಿ ಸಾಫ್ಟ್‌ವೇರ್ ಬಳಸಿ. Lankesh70@ rediffmail ಅಥವಾ glankesh@ gmail.com ಕಳುಹಿಸಿ.

ಸಂ.

ಬಿಡಿ ಚಿತ್ರಗಳು

• ಈಶ



ಚಿಕ್ಕೀರಮ್ಮನ ತ್ರಂಕು.... ತ್ರಂಕೂ....!

ಈ ಚಿಕ್ಕೀರಮ್ಮ ನನ್ನಪ್ಪನ ನನ್ನಪ್ಪನ ಅಮ್ಮ. ಈಕೆಗೆ ತನ್ನ ಡೇಟ್ ಆಫ್ ಬರ್ತ್ ಗೊತ್ತಿಲ್ಲ. ಚೂರೋ ಪಾರೋ ಮಾಹಿತಿ ಇದ್ದವರು ಈಗ ಬದುಕಿಲ್ಲ ಬಿಡಿ. ನಾನೊಂದು ಅಂದಾಜಿನ ಮೇಲೆ ಅಜ್ಜಿಗೆ ತೊಂಭತ್ತೊಂದೊ, ತೊಂಭತ್ತೆರಡೋ ವರ್ಷ ಆಗಿರಬಹುದು ಅಂದುಕೊಂಡಿದ್ದೀನಿ. ಅಂತಾ ಅಜ್ಜಿ ಇವತ್ತು ಇದೇ ಮೊದಲ ಬಾರಿಗೆ ಜವರಾಯನೊಡನೆ ಒಂದನೇ ಸುತ್ತಿನ ಸಾವು-ಬದುಕಿನ ಹೋರಾಟ ನಡೆಸುತ್ತಿದ್ದಾಳೆ.

ನನ್ನ ಬಳಿದಾಳೆಯ ಹಳ್ಳಿ ಮನೆಗೆ ಈಗ್ಗೆ 85 ವರ್ಷದ ಹಿಂದೆ ಮದುವೆಯಾಗಿ ಬಂದು ಪ್ರತಿಷ್ಠಾಪನೆಯಾದ ಅಜ್ಜಿ ಕಳೆದ ವಾರ ಎಡವಿಬಿದ್ದಳು. ಮೂಗು-ಹಣೆಗೆ ದೊಡ್ಡ ಗಾಯ ಮಾಡಿಕೊಂಡಳು. ನಾನು ಚೆಕ್ ಮಾಡಿ ನೋಡಿದರೆ ನನ್ನಜ್ಜಿ ತನ್ನಿಡೀ ಜೀವನದಲ್ಲಿ ಇದೇ ಮೊದಲ ಬಾರಿಗೆ ಎಡವಿದ್ದಳು. ಅಷ್ಟು ಅಚ್ಚುಕಟ್ಟಾಗಿತ್ತು ಅವಳ ಜೀವನ. ಆದರೆ ಈಗ ಮುಖ ಅಡಿಯಾಗಿ ಕಲ್ಲಿನ ಮೇಲೆ ಬಿದ್ದಳಲ್ಲ, ಆ ರಭಸಕ್ಕೆ ಅವಳ ಕನ್ನಡಕ ಒಡೆದು, ಹಣೆ ಸೀಳಿ ಹೋಗಿ ಮೂಗಿನ ಮೂಳೆ ಮುರಿದು ಚೂರಾಯಿತು. ವಿಪರೀತ ರಕ್ತ ಹರಿದುಹೋಯಿತು. ಆಗ ಬಂಧುಗಳು ತಕ್ಷಣ ಒಂದು ಕಾರ್ ಅರೇಂಜ್ ಮಾಡಿಕೊಂಡು ಅರೆಪ್ರಜ್ಞಾವಸ್ಥೆಯಲ್ಲಿದ್ದ ಅಜ್ಜನ ಮನೆಯಿಂದ ಎತ್ತಿಕೊಂಡು ಹೊರ ತರುತ್ತಿದ್ದಾಗ.. ಆಗಲೂನೂ ಈ ಅಜ್ಜಿ.. "ಅಯ್ಯೋ... ನನ್ ತ್ರಂಕು.... ಅಲ್ಲಿ ನನ್ ತ್ರಂಕದೆ ಕಣ್ರೋ ಜ್ಞಾಪಾನಾ" ಅಂತ ಕೂಗಿಕೊಂಡಳಂತೆ!

ಆಗ ಜೊತೆಗಿದ್ದವನು "ಏ.... ಅದ್ಯಾಕ್ ಅಂಗಾಡಿ... ನಿನ್ ತ್ರಂಕ್ ಎಲ್ಲೋದಾತು ಬಿಡು" ಎಂದೇಳಿ ಬಳಿದಾಳೆಯಿಂದ ಉತ್ತರಕ್ಕೆ ಎಪ್ಪತ್ತೈದು ಕಿಲೋಮೀಟರ್ ದೂರದಲ್ಲಿರುವ ಬೆಂಗಳೂರು ಮಹಾನಗರಕ್ಕೆ ಟ್ರೀಟ್‌ಮೆಂಟಿಗೆಂದು ಸಾಗಿಸಿ ತಂದರು. ಇದನ್ನು ಕೇಳಿದವರಿಗೆ "ಅಲ್ಲಾ ಈ ಅಜ್ಜಿ ಆಯ್ಯೋ ನನ್ ಕನ್ನಡಕಾ ಅನ್ನಲಿಲ್ಲ ನನ್ ಮೂಗೂ ಅಂತಾ ಗೋಳಾಡಲಿಲ್ಲ ಎಲ್ಲಾ ಬಿಟ್ಟು ನನ್ ತ್ರಂಕು.... ತ್ರಂಕು ಅಂತಾ ಅಲವತ್ತುಕೊಂಡಳು ಯಾಕೆ" ಅಂತನ್ನಿಸಬಹುದು.

ಅಜ್ಜಿಯ ಭಾಷೆಯ ತ್ರಂಕೆಂದರೆ ಬೇರೇನೂ ಅಲ್ಲ ಅದೊಂದು ಟ್ರಂಕ್, ತಗಡಿನ ಪೆಟ್ಟಿಗೆ. ಆಕೆಯ ಪಾಲಿಗೆ ಉಳಿದಿರುವ ಬಹಳ ಜೋಪಾನವಾಗಿರಿಸಿಕೊಂಡಿರುವ ಏಕೈಕ ಆಸ್ತಿ ಅದು. ಅದರೊಳಗೇನಿರಬಹುದೆಂದು ಕೆಲ ವರ್ಷಗಳ ಹಿಂದೆ ನಾವೊಂದಿಷ್ಟು ವಾರಿಗೆಯ ಹುಡುಗರು ತಲಾಶ್ ಮಾಡಲಾಗಿ ಅಲ್ಲಿ ಕಂಡಿದ್ದೇನು ಗೊತ್ತೆ?

ಬಹುಶಃ ಮೊದಲ ವಿಶ್ವಮಹಾಯುದ್ಧದ ಕಾಲದ್ದೆನ್ನಿಸುವ ಮೂರು ಸಾಧಾರಣ ರೇಷ್ಮೆ ಸೀರೆಗಳು. ಒಂದೆರಡು ಸಾದಾ ಸೀರೆ, ಬಿರುಕುಬಿಟ್ಟಿದ್ದ ಗಾಜಿನ ಫ್ರೇಮಿನ ದೇವರ ಫೋಟೋ, ಆಕೆಯದೊಂದು ಫೋಟೋ. ಸಂದಿಗೊಂದಿ ಹುಡುಕಿದಾಗ ನನಗೆ ಒಂದಿಷ್ಟು ಪುಡಿ ನೋಟುಗಳೂ ಕಂಡವು. ಇದು ಹಳೇ ಕತೆ ಬಿಡಿ.

ಬಹುಶಃ ಒಬ್ಬ ಮನುಷ್ಯ ತಾನೇ ವೃದ್ಧಾಪ್ಯ ಪ್ರವೇಶಿಸದ ಹೊರತು ಆ ಸೀಮಿತ ಆಸ್ತಿ ಸಂಗ್ರಹದ ಅಂತಾ ಸ್ಥಿತಿಯನ್ನು ಅರ್ಥಮಾಡಿಕೊಳ್ಳಲಾರ ಎನಿಸುತ್ತದೆ. ಅವೆಲ್ಲಾ ಜುಜುಬಿ ಮೌಲ್ಯದ್ದೇ ಆಗಿರಬಹುದು. ಆದರೆ ಆ ಮೌಲ್ಯ ನಗದಿನದ್ದಲ್ಲ, ನೆನಪುಗಳದ್ದು, ಖುದ್ದು ತಾನೇ ಬದುಕಿ ಬಂದ ದಿನಗಳ ಅಳಿದುಳಿದ ಖಾಸಾ ಭಂಡಾರವಲ್ಲವೆ ಅದು. ಅಷ್ಟೆಲ್ಲಾ ಯಾಕೆ, ಒಂದು ಚಿಕ್ಕ ಮಗೂನೇ ಆಗಿರಲಿ, ಅದು ತನ್ನ ಆಟದ ಸಾಮಾನು, ಪೆನ್ಸಿಲ್ಲು, ರಬ್ಬರು, ಬಳೆ-ಟೇಪುಗಳ ಒಂದು ಖಾಸಗಿ ಕಲೆಕ್ಷನ್ ಇಟ್ಟುಕೊಂಡಿರುತ್ತದೆ, ಅದನ್ನಿಡಲು ಮನೇಲಿ ತನ್ನದೇ ಗೂಡು ಮಾಡಿಕೊಂಡಿರುತ್ತದೆ. ದೊಡ್ಡವರಾದಂತೆಲ್ಲಾ ಬಿಡಿ, ಅವೆಲ್ಲಾ ಟ್ರಂಕು, ಬೀರು, ವಾರ್ಡ್‌ರೋಬುಗಳಾಗಿ ಬೆಳೆಯುತ್ತಾ ಹೋಗುತ್ತವೆ.

ನಮ್ಮ ಚಿಕ್ಕೀರಮ್ಮನ ಹೆಸರಲ್ಲಿ ಈಗಲೂ ಮೂವತ್ತೈದು ಎಕರೆ ಜಮೀನಿದೆ, ನೂರಾರು ಮಾವಿನ ಮರಗಳಿವೆ. ಇದಕ್ಕೆ ಒಂದು ಡಜನ್ ವಾರಸುದಾರರಿದ್ದಾರೆ ಎಂಬುದು ಇನ್ನೊಂದು ವಿಚಾರ. ಆದರೂ ಆಕೆಗೆ ಈಗ ಯಾವುದರ ಮೇಲೂ ಕಂಟ್ರೋಲ್ ಇಲ್ಲ, ಅಸಲಿ ದುರಂತ ಏನೆಂದರೆ ಮೊನ್ನೆ ಆದ ಪೆಟ್ಟಿನಿಂದ ಆಕೆ ಸತ್ತೇ ಹೋಗುತ್ತಾಳೆ ಎಂಬ ಡೌಟು ಬಂತೇನೋ; ಆಕೆಯನ್ನು ನೋಡಿ ಹೋಗಲು ಬಂದ ನೆಂಟರು ಕಣ್ಣಿಗೆ ಕಂಡದ್ದನ್ನೆಲ್ಲಾ ಎತ್ತಿಕೊಂಡು ಮಾಯವಾದರು. ಅಜ್ಜಿಯನ್ನು ಕಾರಿಗೆ ಸಾಗಿಸುವಾಗ ಆಕೆಯ ಬೆಳ್ಳಿಯ ಕರಡಿಗೆಯನ್ನು ಪವಾಡ ಪುರುಷನೊಬ್ಬ ಮಟಾಮಾಯಾ ಮಾಡಿದನಂತೆ. ಒಟ್ಟಿನಲ್ಲಿ ಅಜ್ಜಿ ಬೆಂಗಳೂರಿನಿಂದ ವಾಪಸ್ ಬರುವಷ್ಟರಲ್ಲಿ ಆಕೆಯದೆಂದು ಇದ್ದ ಬಹುತೇಕ ವಸ್ತುಗಳು ಅಲ್ಲಿರಲಿಲ್ಲ, ಆಸ್ಪತ್ರೆಯಲ್ಲಿ ಉಡಿಸಿದ್ದ ಒಂದು ತರಕಲು ನೈಟಿ ಬಿಟ್ಟು!

'ಕ್ರಿಸ್ತಪೂರ್ವ .....ನೇ ಶತಮಾನದಲ್ಲಿ ನಾಗರಿಕತೆ ಆರಂಭವಾಯಿತು....' ಅಂತೆಲ್ಲಾ ನಾವು ಹಿಸ್ಟರಿ ಪುಸ್ತಕದಲ್ಲಿ ಓದಿದ್ದೆವಲ್ಲ, ಈಗ ಕ್ರಿಸ್ತಶಕ 2009 ರ ಫೆಬ್ರವರಿ ತಿಂಗಳಲ್ಲಿ ಈ ಘಟನೆ ನೋಡಿಯಾದ ಮೇಲೆ 'ನಾಗರಿಕತೆ' ಅಂದರೇನಂತಲೇ ನನಗೆ ಡೌಟು ಶುರುವಾಗಿ ಬಿಟ್ಟಿದೆ. ಹೋಗಲಿ ಬಿಡಿ ನಾನಿಲ್ಲಿ ಹೇಳಬೇಕಾದ ಇನ್ನೊಂದು ಮುಖ್ಯ ವಿಚಾರ ಇದೆ.

ನಮ್ಮ ಚಿಕ್ಕೀರಮ್ಮ ಯಾರು ದುಡ್ಡು ಕೊಟ್ಟರು ಬೇಡಾ ಅನ್ನದೆ ತೆಗೆದಿರಿಸಿಕೊಳ್ಳುತ್ತಿದ್ದಳು. ನಾನೂ ಕೂಡ ತಿಂಗಳಿಗೊಮ್ಮೆ ಬಳಿದಾಳೆಗೆ ಹೋದಾಗೆಲ್ಲಾ ಐವತ್ತೋ-ನೂರೋ ಕೈಗಿಡುತ್ತಿದ್ದೆ. ಕೆಲವು ಸಾರಿ ದುಡ್ಡಿಲ್ಲದಾಗ ಕಡಿಮೆ ಕೊಟ್ಟರೆ 'ಎಷ್ಟಿದಾತಯ್ಯ' ಅಂತ ಕೇಳಿ ಮುಖ ಗಂಟು ಹಾಕಿಕೊಳ್ಳುತ್ತಿದ್ದಳು. ಈಗೊಂದು ಹತ್ತು ವರ್ಷದ ಹಿಂದೆ ಅಂದರೆ ಅಜ್ಜಿಗೆ ಎಂಭತ್ತಾಗಿದ್ದಾಗ ತನ್ನಲ್ಲಿ ಸೇರುತ್ತಿರುವ ಹಣಾನಾ ಈ ಅಜ್ಜಿ ಏನು ಮಾಡುತ್ತಿದೆ ಅಂತಾ ಸಣ್ಣದೊಂದು ತನಿಖೆ ಮಾಡಿದೆ ನೋಡಿ, ಭಾರಿ ಮಜಾ ಅನ್ನಿಸಿಬಿಟ್ಟಿತು.

ಚಿಕ್ಕೀರಮ್ಮ ಲೇವಾದೇವಿ ನಡೆಸುತ್ತಿದ್ದಳು!

ಸಮಾಜವಾದಿಯಾಗಿರುವ ನನಗೆ ಅದು ಮೊದ ಮೊದಲು ಕಿರಿಕಿರಿ ಅನ್ನಿಸಿಬಿಟ್ಟಿತು. ಆಮೇಲೆ ಅದನ್ನೇ ಯೋಚಿಸುತ್ತಾ ಹೋದರೆ ಹಣದ ಲಾಭ-ಲೋಭದ ಜೊತೆಗೆ ಬೇರೆ ವಿಚಾರಗಳೂ ಇವೆ ಅನ್ನಿಸತೊಡಗಿತು. ಅದು ಲೌಕಿಕದ್ದು.

ಒಮ್ಮೆ ಯೋಚಿಸಿ ನೋಡಿ.

ಹೊಲದ ಬಳಿ ಹೋಗಲಾಗದ, ಯಾವ ಮನೆ ಕೆಲಸದಲ್ಲೂ, ಮನೆಯ ಆಗುಹೋಗುಗಳಲ್ಲೂ ಭಾಗಿಯಾಗಲಾರದ, ಊರಿನ ವಿದ್ಯಮಾನಗಳಲ್ಲಿ ಪಾತ್ರವೇ ಇರದ ಒಬ್ಬ ಮನುಷ್ಯ ಏನು ಮಾಡಬಲ್ಲ?

ಎಂಥ ಕಠಿಣ ಸಂದರ್ಭದಲ್ಲೂ ಪಟ್ಟುಬಿಡದೆ ನಿಲ್ಲುವುದಕ್ಕೆ ನಾವು ಇಂಗ್ಲಿಷ್‌ನಲ್ಲಿ 'hang on' ಅಂತನ್ನುತ್ತೇವಲ್ಲ ಆ ಥರಾ ಒಬ್ಬ ವ್ಯಕ್ತಿ ನಿಸ್ಸಹಾಯಕತೆಯ ಪರಾಕಾಷ್ಠೆಯಲ್ಲಿ ತಾನು ಲೌಕಿಕದಲ್ಲೇ ಉಳಿಯಲು ಕೆಲ ಒಳದಾರಿ ಹುಡುಕಿಕೊಳ್ಳಬಲ್ಲ, 'ನನ್ನ ಇರುವಿಕೆಯನ್ನು ನಿರ್ಲಕ್ಷಿಸಿ ನೀವೆಲ್ಲಾ ಅದು ಹೇಗೆ ಬದುಕುತ್ತೀರೋ ಒಂದು ಕೈ ನೋಡೇ ಬಿಡ್ತೀನಿ' ಅನ್ನುವ ಹಠವಿರಬಹುದು ಅದು. ಬಹುಶಃ ಈ ಅಜ್ಜಿ ಊರಿನ ಆಗುಹೋಗುಗಳಲ್ಲಿ ತನಗೆ ಇನ್ನು ಒಂದು ರೋಲ್ ಇದೆ ಅಂತ ತನ್ನನ್ನೇ ಸಮಾಧಾನ ಮಾಡಿಕೊಳ್ಳಲು, ತನ್ನ ಅಸ್ತಿತ್ವಕ್ಕೆ ಒಂದು ಸಮಕಾಲೀನತೆ ತಂದುಕೊಳ್ಳಲು ಈ ಲೇವಾದೇವಿ ನಡೆಸುತ್ತಿದ್ದಳೆಂದು ಕಾಣುತ್ತದೆ. ಯಾರೋ ಒಬ್ಬ ಬಂದು ಐವತ್ತೋ-ನೂರೋ ಸಾಲ ಕೇಳುತ್ತಾನೆ. ಕೊಡಬಹುದು, ಅಸಲು ಬಡ್ಡಿಗೆ ಸಂಬಂಧಿಸಿ ಆಗಾಗ್ಗೆ ಸಾಲಗಾರರನ್ನು ಕರೆಸಿ ವಿಚಾರಣೆ ನಡೆಸಬಹುದು, ಗದರಿಸಿ ಬಯ್ಯಬಹುದು. ಮಳೆ-ಬೆಳೆ, ಕರಾವು, ಅವನ ಹೆಂಡತಿ-ಮಕ್ಕಳ ಬಗ್ಗೆ ಹರಟಬಹುದು...



ಸಣ್ಣ, ಬಡವರ ಹಳ್ಳಿಗಳಲ್ಲಿ ವಾಸಿಸುವವರ ಕೈಲಿ ಚೂರು ಹಣವಿದ್ದರೆ ಊರಿನ ಜನ ಅಂತವರನ್ನು ನಿರ್ಲಕ್ಷಿಸುವುದಿಲ್ಲ.

ಇದನ್ನೆಲ್ಲಾ ಯೋಚಿಸುತ್ತಾ ನಾನು ಇನ್ನೊಂದಿಷ್ಟು ವಿವರ ಕಲೆ ಹಾಕಿ ನೋಡಿದರೆ ಅಜ್ಜಿಯ ಜೊತೆಗೆ ಅವರದೇ ವಯಸ್ಸಿನ ಇನ್ನಿಬ್ಬರಿದ್ದರು. ಅವರಿಗೂ ಲೇವಾದೇವಿ ವ್ಯವಹಾರವಿತ್ತು. ಹೊರನೋಟಕ್ಕೆ ಊರಿನ ಜನ ಇವರ ಅಸ್ತಿತ್ವವನ್ನು ಗಣನೆಗೇ ತೆಗೆದುಕೊಂಡಿಲ್ಲ ಅಂತ ಭಾಸವಾದರೂ ಈ ಕಿಲಾಡಿ ಅಜ್ಜಿಯರು ತಮ್ಮದೇ ಒಳದಾರಿ ಹುಡುಕಿಕೊಂಡು, ಬಡ್ಡಿ ವ್ಯಾಪಾರದ ಸಿಂಡಿಕೇಟ್ ರಚಿಸಿಕೊಂಡಿದ್ದರು. ದೊಡ್ಡ ಹಣಕಾಸು ಸಂಸ್ಥೆಗಳ ಡೈರಕ್ಟರುಗಳಂತೆ ಆಗಾಗ್ಗೆ ಸಭೆ ಸೇರಿ ಯಾವನು ಸಾಲ ತಗಂಡ, ಯಾರು ಬಡ್ಡಿಕೊಡದೆ ತಪ್ಪಿಸಿಕೊಂಡು ತಿರುಗುತ್ತಿದ್ದಾನೆ, ಯಾರು ಕಷ್ಟದಲ್ಲಿದ್ದಾರೆ... ಇತ್ಯಾದಿ ಊರಿನ ಸಮಗ್ರ ಮಾಹಿತಿ ಅವರಲ್ಲಿತ್ತು.

ಎಲಾ ಅಜ್ಜಿ ಅಂದುಕೊಂಡೆ ನಾನು.

ಮನುಷ್ಯ ಯಾವುದೇ ವಯಸ್ಸಿನಲ್ಲಿರಲಿ ಲೇ... ವ್ಯವಹಾರ, ಹಣದ ಚಲನೆ ಆತನ ಬದುಕನ್ನು ಸಜೀ... ವಾಗಿಡುತ್ತದೆ ಅನ್ನಿಸಿಬಿಟ್ಟಿತು ನನಗೆ.

ಈ ಅಜ್ಜಿಗೆ ಇಂದ್ರಾಗಾಂಧಿ, ದ್ಯಾವೇಗೌಡ ಬಿ... ಹಳ್ಳಿಯಾಚೆಗಿನ ಹೆಚ್ಚಿನ ಜನರ ಹೆಸರು ಗೊತ್ತಿಲ್ಲ, ಇ... ವರೆಗೂ ರೈಲು ನೋಡಿಲ್ಲ, 1991 ರಲ್ಲಿ ನಾ... ಕನಕಪುರದಲ್ಲಿದ್ದಾಗ ನಮ್ಮನೆಗೆ ಬಂದು ಟಿವಿ ನೋ... ದವಳೇ "ಈ ಪೆಟ್ಗೇ ವಳಿಕೆ ಜನ ಅದೆಂಗಯ್ಯ ಸೇ... ಕಂಡವರೆ" ಅಂತ ಬೊಚ್ಚುಬಾಯಿನ ಬೆರಗಿನ ಪ್ರ... ಕೇಳಿದ್ದಳು. ಅವಳ ತವರೂರು ಬ್ಯಾಲಪಟ್ಟಿ ಅಂ... ತಮಿಳುನಾಡಿಗೆ ಸೇರಿದ ಹಳ್ಳಿ ಅದು. ನಮ್ಮೂರಿ... ಪಕ್ಕದ ಹುಣಸನಹಳ್ಳಿಯಲ್ಲಿ ಕಾಂಗ್ರೆಸ್ ನಾಯಕ ಡಿ.ಕೆ. ಶಿವಕುಮಾರನ ಸಿನಿಮಾ ಟೆಂಟ್ ಒಂದಿತ್ತು, ಈ ಬ್ಯಾಲಪ... ಉದುಬರಾಣೆ ಗ್ರಾಮದ ಜನ ಸಿನಿಮಾಗೆ ಬಂದರೆ ಮ್ಯಾಟಿ... ಶೋಗೆ (ಅವರ ಪ್ರಕಾರ ಮೊದಲಆಟ) ಮಾತ್ರ ಬರೋರು... ಯಾಕಂತ ನಾನೊಮ್ಮೆ ವಿಚಾರಿಸಿದರೆ 'ಆಗುಟ್ಟುಸ... ವತ್ತೇನಿಂದ ಕುಣದ್ರೊ ಕುಣದು ರಾತ್ರಿ ಆಟ ಬರೋಷ್ಟರ... ಸುಸ್ತಾಗಿರ್ತಾರೆ, ನೋಡಕ್ಕೂ ಚನ್ನಾಗಿರಕ್ಕಿಲ್ಲ" ಅಂದಿದ್ದರು... ಅಂತ ಪ್ರತಿಭಾವಂತ ಮುಗ್ಧರವರು.

ನಮ್ಮ ಪ್ರಾಂತ್ಯದಲ್ಲಿ ತೀರಾ ವಯಸ್ಸಾದವರು, ಸಾವಿಗೆ ಸಮೀಪ ಇರುವವರು ಸದಾ ತಮ್ಮ ಬಳಿ ಒಂದಿಷ್ಟು ನಗದು ಹಣ ಇಟ್ಟುಕೊಂಡಿರುತ್ತಾರೆ. ಯಮಧೂತರು ಬಂದಾಗ 'ಕ್ವಾ... ಮಡಿಕೋ' ಅಂತ ಹಣ ತೋರಿಸಿದರೆ ಅವರು ಬಿಟ್ಟುಬಿಡುತ್ತಾರೆ ಎಂಬ ಹುಂಬ ನಂಬಿಕೆ ಕೆಲವರಿಗಿರುತ್ತದೆ.

ಜಪ್ಪಯ್ಯ ಅಂದರೂ ಅವರು ಈ ದುಡ್ಡು ಖರ್ಚು ಮಾಡುವುದಿಲ್ಲ, 'ಈ ದುಡ್ಡಿಟ್ಟುಕೊಂಡು ಅವರೇನು ಮಾಡ್ತಾರೆ?' ಅಂತ ವಿಚಾರಿಸಿದಾಗ 'ಸತ್ತ ಮೇಲೆ ಆ ಹಣ ತಮಗೆ ಸಿಗುತ್ತೆ ಅಂತಲಾದರೂ ಬದುಕಿರೋವರೆಗೂ ಚೆನ್ನಾಗಿ ನೋಡಿಕೊಳ್ಳಲಿ ಅಂತ' ಎಂಬ ವಿವರಣೆ ಸಿಕ್ಕಿತು.

ಅಂದರೆ ಹಣದ ಪ್ರಲೋಭನೆಯ ಬಲೆ ಹರಡಿ ಒಬ್ಬರ ಗಮನ ಸೆಳೆದು ಆರೈಕೆ ಪಡೆಯುವ ಸರ್ಕಸ್!

ಮೊನ್ನಿನ ಗಾಯದ ಘಟನೆಯ ಕ್ಲೈಮಾಕ್ಸ್ ಏನು ಗೊತ್ತಾ?

ಯಮಧೂತರ ಪಾಶಕ್ಕೆ ಸಿಗದೆ ಅವರನ್ನು ಹಿಮ್ಮೆಟ್ಟಿಸಿ ಚಿಕ್ಕೀರಮ್ಮ ವಿಜಯಶಾಲಿಯಾಗಿ ಬಳಿದಾಳೆಗೆ ವಾಪಸ್ ಹೋಗಿದ್ದಾಳೆ!

ಆದರೆ ಅವಳ ತ್ರಂಕು ಖಾಲಿಯಾಗಿದೆ!!

ಅವಳಿಗೆ ನಾಗರಿಕ ಸಮಾಜದ ರೀತಿರಿವಾಜುಗಳು ಗೊತ್ತಿಲ್ಲ ನಿಜ. ಆದರೆ ಕಾಲನ ಕರೆ ಬರುವತನಕ ಕಾದಿದ್ದು ಅವಳನ್ನು ಘನತೆಯಿಂದ ಬೀಳ್ಕೊಡುವಷ್ಟು ಸ್ಥೈರ್ಯ ನಾಗರಿಕರೆನಿಸಿಕೊಂಡವರಿಗಿಲ್ಲ ಅಷ್ಟೆ. ■

ತಮ್ಮ ಗೋರಿ ತೋಡಿಕೊಳ್ಳುತ್ತಿರುವ ಕೇಸರಿ ಪಡೆ

ಒಂದು ಪತ್ರ

ಮಾತುಮಾತಿಗೆ ಬುದ್ಧಿವಂತರ ಜಿಲ್ಲೆ, ಪೂರ್ಣ ಸಾಕ್ಷರ ಸುಸಂಸ್ಕೃತ ತುಳುವ ಜನರ ಜಿಲ್ಲೆ ಎಂದು ದಕ್ಷಿಣ ಕನ್ನಡ ಜಿಲ್ಲೆಯವರು ಹೆಮ್ಮೆ ಪಟ್ಟುಕೊಳ್ಳುತ್ತಾರೆ. ಆದರೆ ಇತ್ತೀಚೆಗೆ ಶ್ರೀರಾಮ ಸೇನೆಯವರು ಹೆಣ್ಮಕ್ಕಳಿಗೆ ನಡುಬೀದಿಯಲ್ಲಿ ಹೊಡೆದದ್ದು ಇದೇ ಬುದ್ಧಿವಂತ-ಸುಸಂಸ್ಕೃತರ ಜಿಲ್ಲೆಯಲ್ಲಿ. ಇದರಿಂದ ಇಲ್ಲಿ ಬಹಳಷ್ಟು ಅನಾಗರಿಕ ಬರ್ಬರರೂ ಇದ್ದಾರೆ ಎಂಬುದು ಸಾಬೀತಾಯಿತು. ಹೀಗಾಗುತ್ತಿರುವುದು ಮೊದಲ ಸಲವೇನಲ್ಲ, ಹಿಂದಿನ 4-5 ವರ್ಷಗಳಿಂದ ಕೇಸರಿ ಪಡೆಗಳು ಆಗಾಗ "ನೈತಿಕ ಕಾವಲುಗಾರರಾಗಿ" ಇಂತಹ ಗೂಂಡಾಗಿರಿ ನಡೆಸುತ್ತಲೇ ಬಂದಿದ್ದಾರೆ. ಆದರೆ ಪೊಲೀಸರು ಇಂತಹ ಘಟನೆಗಳನ್ನು "ಯುವಕರ ಸಣ್ಣ ಗುಂಪು ಘರ್ಷಣೆ" ಎಂದು ಹೇಳಿ ವಿಷಯ ಹತ್ತಿಕ್ಕುತ್ತಿದ್ದರು. ಆದರೆ ಈ ಸಾರಿ ಸಾಕ್ಷಾತ್ ವಿಡಿಯೋ ಇದ್ದುದರಿಂದಾಗಿ ಹಾಗೂ ರಾಷ್ಟ್ರೀಯ ಮಾಧ್ಯಮಗಳಲ್ಲಿ ಬಂದಿದ್ದರಿಂದ ಪೊಲೀಸರಿಗೆ ಹಾಗೂ ಅವರ ರಾಜಕೀಯ ಗುರುಗಳಿಗೆ ತಿಪ್ಪೆ ಸಾರಿಸುವುದು ಸಾಧ್ಯವಾಗಲಿಲ್ಲ. ಈಗಿನ ಘಟನೆಯಲ್ಲಿ ಬಂಧಿತರಾಗಿರುವ ಶ್ರೀರಾಮ ಸೇನೆಯ 27 ಕಾರ್ಯಕರ್ತರ ವಯಸ್ಸಾದರೂ ನೋಡಿ! ಎಲ್ಲರೂ 18 ರಿಂದ 22 ವಯಸ್ಸಿನವರು. ಈ ವಯಸ್ಸಿನ ಬಿಸಿರಕ್ತದ ತರುಣರಲ್ಲಿ ಸ್ವತಂತ್ರ ವಿವೇಚನಾಶಕ್ತಿ ಕಡಿಮೆ ಹಾಗೂ ಅವರನ್ನು ಧರ್ಮ, ಜಾತಿ, ಭಾಷೆ ಹೆಸರಲ್ಲಿ ಪ್ರಚೋದಿಸಿ ಉದ್ರೇಕಿಸಿ ದಾರಿ ತಪ್ಪಿಸುವುದು ಸುಲಭ.

ಗೂಂಡಾಗಿರಿಗಾಗಿ ಬಂಧಿತರಾಗಿದ್ದ ಈ 27 ಪಡ್ಡೆಗಳಿಗೆ ಜೈಲಿನಲ್ಲಿ ಕೋಳಿ, ಬಿರಿಯಾನಿ, ಬಿಯರ್ ಇವನ್ನು ಪೊಲೀಸರೇ ತರಿಸಿ ಕೊಡುತ್ತಿದ್ದರು ಎಂದು ಇವನ್ನು ಸರಬರಾಜು ಮಾಡುತ್ತಿದ್ದ ಹೋಟೆಲ್‌ನವರೇ ಹೇಳಿದ್ದಾರೆ (ಎಷ್ಟಾದರೂ ಶ್ರೀರಾಮ, ಶ್ರೀಕೃಷ್ಣ ಇವರೆಲ್ಲಾ ಮಾಂಸಾಹಾರಿಗಳಾಗಿದ್ದರು ತಾನೆ!). ಈ 27 ಗೂಂಡಾಗಳಿಗೆ ರಾಜಾತಿಥ್ಯ ಕೊಡಬೇಕೆಂದು ಪೊಲೀಸರಿಗೆ ಸ್ವತಃ ಜಿಲ್ಲಾ ಉಸ್ತುವಾರಿ ಸಚಿವರೇ ಆದೇಶಿಸಿದ್ದರಂತೆ. ಶ್ರೀರಾಮ ಸೇನೆಯ ಗಲಾಟೆಗೆ ಸಚಿವ ಪಾಲೇಮಾರ್ ಹಾಗೂ ಮಾಜಿ ಸಚಿವ ನಾಗರಾಜಶೆಟ್ಟಿ (ಮೋದಿ ಶಿಷ್ಯ) ಇವರೊಳಗಿನ ದ್ವೇಷ ಹಾಗೂ ಮುಸುಕಿನೊಳಗಿನ ಗುದ್ದಾಟವೂ ಒಂದು ಮುಖ್ಯ ಕಾರಣ. ರಾಮ ಸೇನೆ ಮತ್ತು ಹಿಂದೂ ಯುವ ಸೇನೆ ನಾಗರಾಜ ಶೆಟ್ಟಿಯ ಪರವಾಗಿದ್ದು, ಪಾಲೇಮಾರ್ ಜಿಲ್ಲೆಯ ಎಲ್ಲಾ ಪೊಲೀಸ್ ಸ್ಟೇಷನ್‌ಗಳಲ್ಲಿ ಕೇವಲ ತನ್ನ ಚೇಲಾಗಳನ್ನು, ಮುಖ್ಯತಃ ತನ್ನ 'ರಾಮಕ್ಷತ್ರೀಯ' ಜಾತಿಯವರನ್ನೇ ನೇಮಿಸಿದ್ದು ನಾಗರಾಜ ಶೆಟ್ಟಿ ಹಾಗೂ ಕೇಸರಿ ಪಡೆಗಳನ್ನು ಬಹಳಷ್ಟು ಕೆರಳಿಸಿದೆ.

ಈ ಪಾಲೇಮಾರ್ 1975 ರಲ್ಲಿ ಕೇವಲ ಒಬ್ಬ ಬಸ್ ಕಂಡಕ್ಟರ್ ಆಗಿದ್ದ, ನಂತರ ಕಾಂಗ್ರೆಸ್ ನೇತಾರರಿಗೆಲ್ಲಾ ಪೂಸಿ ಹೊಡೆದು ಭೂವ್ಯವಹಾರಕ್ಕಿಳಿದು ದುಡ್ಡು ಮಾಡಿಕೊಂಡ. 1990 ರ ಈಚೆಗೆ ಕಾಂಗ್ರೆಸ್ ಪಾರ್ಟಿ ವರ್ಚಸ್ಸು ಕರಾವಳಿಯಲ್ಲಿ ಮಂಕಾಗುತ್ತಿರುವುದನ್ನು ಕಂಡು ಕಾಂಗ್ರೆಸ್ ಕಾಲು ಬಿಟ್ಟು ಬಿಜೆಪಿ ಕೈಹಿಡಿದ ಸಮಯಸಾಧಕ ಈತ. ಈಗಲೂ ಈತನ ಒಂದು ಬೆರಳು ಕಾಂಗ್ರೆಸ್ ಬೆನ್ನಿಗೆ ತುಪ್ಪ ಸವರುತ್ತಿದೆ. ಇದು ಸಂಘ ಪರಿವಾರಕ್ಕೆ ಇಷ್ಟವಿಲ್ಲ. ಅದಕ್ಕಾಗಿ ಕೇಸರಿ ಪಡೆ ಪಾಲೇಮಾರ್ ಹಾಗೂ ಅವನ 'ಕೋಟ ಯಾರ್' ಪೊಲೀಸ್ ಅಧಿಕಾರಿಗಳನ್ನು ಇಕ್ಕಟ್ಟಿಗೆ ಸಿಲುಕಿಸಲು ಸಮಯ ಕಾಯುತ್ತಿತ್ತು.

ಕೇಸರಿ ಪಡೆಗಳ ಗೂಂಡಾಗಳು 'ಧರ್ಮ-ಸಂಸ್ಕೃತಿ ರಕ್ಷಣೆ' ಹೆಸರಲ್ಲಿ 'ಹಫ್ತಾ ಭಕ್ಷಣೆ' ನಡೆಸುವುದು ಎಲ್ಲರಿಗೂ ಗೊತ್ತು. ಮುಂಬೈಯಂತೆ ಮಂಗಳೂರಿನಲ್ಲೂ ಹಫ್ತಾ ವಸೂಲಿ ಸಾಂಸ್ಥೀಕರಣಗೊಂಡಿದೆ. ಇದರಿಂದಾಗಿ ಕಾನೂನುಬದ್ಧವಾಗಿ ಬಾರ್ & ರೆಸ್ಟೋರೆಂಟ್, ರಿಸಾರ್ಟ್, ಪಬ್ ನಡೆಸುವವರು ಬೇರೆಬೇರೆ ಗುಂಪಿಗೆ ಹಫ್ತಾ ಕೊಟ್ಟು ಸುಣ್ಣವಾಗುತ್ತಾರೆ. ಹಫ್ತಾ ವಸೂಲಿ ಮಾಡುವ ಮೊದಲಿನ ಗುಂಪು ಪೊಲೀಸರದ್ದು, ಎರಡನೆಯ ಗುಂಪು ರಾಜಕಾರಣಿಗಳದ್ದು, ಸ್ಥಳೀಯ ಕಾರ್ಪೊರೇಟರ್‌ನಿಂದ ಹಿಡಿದು ಜಿಲ್ಲಾ ಉಸ್ತುವಾರಿ ಸಚಿವರವರೆಗೆ ಹಫ್ತಾ ಮುಟ್ಟಬೇಕು. ಮೂರನೆಯ ಗುಂಪು ವಿದೇಶದಲ್ಲಿ ಅಡಗಿ ಕೂತಿರುವ ದಕ್ಷಿಣ ಕನ್ನಡ ಮೂಲದ ಭೂಗತ ದೊರೆಗಳ ಏಜಂಟರದ್ದು. ನಾಲ್ಕನೇ ಗುಂಪು ಬ್ಲ್ಯಾಕ್‌ಮೇಲ್ ಪತ್ರಕರ್ತರದ್ದು. ಮಂಗಳೂರಲ್ಲಿ ಪ್ರತಿ ಐದು ಪತ್ರಕರ್ತರಲ್ಲಿ ಒಬ್ಬ "ಬ್ಲ್ಯಾಕ್‌ಮೇಲ್ ಪತ್ರಕರ್ತ." ಐದನೇ ಗುಂಪು ಗಣೇಶ ಚತುರ್ಥಿ, ದಸರಾ ಅಥವಾ ಸ್ಥಳೀಯ ದೇವಾಲಯಗಳ ಹೆಸರಲ್ಲಿ ವಸೂಲಿಗಿಳಿಯುವ ವೈದಿಕರ ಗುಂಪು.

ಈಚೆಗೆ ಹೆಚ್ಚಿನವರ ಅಭಿಮತವೇನೆಂದರೆ ಕೇಸರಿ ಪಡೆಗಳು ತಮ್ಮ ಗೋರಿ ತಾವೇ ತೋಡಿಕೊಳ್ಳುತ್ತಿದ್ದಾರೆ. ಒಂದು ದಿನ ತಮ್ಮ ತಮ್ಮಲ್ಲೇ ಹೊಡೆದುಕೊಳ್ಳುತ್ತಾರೆ. ಇದಕ್ಕೆ ಕಾರಣ ವಿವಿಧ ಕೇಸರಿಪಡೆಗಳ ಜಾತಿವಾರು ಧ್ರುವೀಕರಣ. ಭಜರಂಗದಳ 'ಬಿಲ್ಲವ' ಪುಂಡರ ದಳವಾಗಿದ್ದರೆ, ಹಿಂದೂ ಯುವ ಸೇನೆ 'ಬಂಟ' ಪಡ್ಡೆಗಳ ಅಡ್ಡೆಯಾಗಿದೆ. ಇನ್ನು ವಿಹಿಂಪ ಹಾಗೂ ಆರ್‌ಎಸ್‌ಎಸ್ ಇವು ಮೊದಲಿನಿಂದಲೂ ವಿಪ್ರ ಕಾರಸ್ಥಾನಿಗಳ ಮಂತ್ರಾಲಯವಾಗಿದೆ. ಹಾಗಾಗಿ ಹಿಂದೂ ಧರ್ಮದ ಮೂಲ ಗುಣದಂತೆ ಮುಂದೊಂದು ದಿನ ಈ ಜಾತಿಗಳು ತಮ್ಮ ತಮ್ಮಲ್ಲೇ ಹೊಡೆದಾಡುವುದು ಖಂಡಿತ. ಜಾತಿಪ್ರೇಮದ ಮುಂದೆ ದೇಶಪ್ರೇಮ, ಹಿಂದೂ ಸಂಸ್ಕೃತಿ ರಕ್ಷಣೆ ಎಲ್ಲವೂ ಗೌಣ!

-ಪ್ರವೀಣ್ ಎಸ್. ಶೆಟ್ಟಿ, ಮಂಗಳೂರು

ALOKA.Com Mega Portal For Kannada Cinema

ರ್ಕಲ್ ಇನ್
cinecircle.in

itratara.com

ರ್ಮಾಪಕರ ಘದ ಹುಸಿ ಾಹಸಗಳು

ರ್ಮಾಪಕರ ಸಂಘದವರು ಇತ್ತೀಚೆಗೆ ತಾಳು ನಿಲುವುಗಳನ್ನು ನೋಡಿದರೆ ಇದು ಅವರ ಾದ ಆತ್ಮವಿಶ್ವಾಸವೋ ಅಥವಾ ಗತಿಯತ್ತ ಸಾಗುತ್ತಿರುವ ಸೂಚನೆಯೋ ುತ್ತಿಲ್ಲ.

ತ್ತೀಚೆಗಷ್ಟೇ ಸಂಜೆ ಪತ್ರಿಕಾಗೋಷ್ಠಿಗಳನ್ನು ಾರದು, ಪತ್ರಕರ್ತರಿಗೆ ಯಾವುದೇ ರೀತಿಯ ಹಾಕಬಾರದು ಎಂದು ಫತ್ವಾ ಹೊರಡಿಸಿದ್ದ ರ್ಮಾಪಕರ ಸಂಘ ಈಗ ಮತ್ತಷ್ಟು ುವರೆದು ಕೆಲಸಕ್ಕೆ ಬಾರದ ಷಡ್ಯಂತ್ರಗಳನ್ನು ುವಲ್ಲಿ ನಿರತವಾಗಿದೆ.

ನ್ನಡದ ದೊಡ್ಡದೊಡ್ಡ ದಿನಪತ್ರಿಕೆಗಳೂ ಇಂದು ರ್ಣವಾಗಿ ಅವಲಂಬಿಸಿರುವುದೇ ಸಿನಿಮಾ ಾತುಗಳನ್ನು. ಅದರಲ್ಲೂ ವಾರಕ್ಕೆರಡು ಬಾರಿ ಸಿನಿಮಾ ಜಾಹಿರಾತುಗಳೇ ಆ ಪತ್ರಿಕೆಗಳ ಾಧಾರ. ಹೀಗಿರುವಾಗ ಈ ನಿರ್ಮಾಪಕರ ಜಾಹಿರಾತುಗಳನ್ನು ನೀಡಿ ಬೇರೆ ಪತ್ರಿಕೆಗಳನ್ನು ರ ಮಾಡುವುದಕ್ಕಿಂತ ತಮ್ಮದೇ ಒಂದು ಾ ಪತ್ರಿಕೆಯನ್ನು ಆರಂಭಿಸಿ ಎಲ್ಲ ಸಿನಿಮಾ ಾ ತಮಗೇ ಜಾಹಿರಾತು ನೀಡುವಂತೆ ಮಾಡಿ ಹೇಗೆ ಎಂಬ ಆಲೋಚನೆಯಲ್ಲಿದ್ದಾರಂತೆ.

ಾದರ ಮೊದಲ ಹೆಜ್ಜೆಯಾಗಿ ಇನ್ನು ಮುಂದೆ ವ ಸಿನಿಮಾ ವೆಬ್‌ಸೈಟುಗಳಿಗೆ ನೀಡುತ್ತಿದ್ದ ಾತುಗಳಿಗೆ ಕತ್ತರಿ ಹಾಕುತ್ತಿದ್ದಾರೆ. ಸದ್ಯ ದಲ್ಲಿ ಚಿತ್ರರಂಗಕ್ಕೆ ಸಂಬಂಧಪಟ್ಟ ಐದಾರು ಸೈಟುಗಳು ಚಾಲನೆಯಲ್ಲಿವೆ. ಫೋಟೋ ಲಿಸ್ಟ್‌ಗಳಾದ ಕೆ.ಎಂ. ವೀರೇಶ್ ಅವರ ಲೋಕ ಡಾಟ್ ಕಾಮ್', ಕೆ.ಎಸ್. ನಾಗೇಶ್ ಾರ್ ಅವರ 'ಸಿನಿಸರ್ಕಲ್' ಮತ್ತು ಮನು 'ಚಿತ್ರತಾರಾ ಡಾಟ್ ಕಾಮ್' ಅವುಗಳಲ್ಲಿ ುಖವಾದವು. ಈ ಎಲ್ಲ ವೆಬ್‌ಸೈಟುಗಳಿಗೆ ಸಾಧಾರಣ ಮಟ್ಟದ ಜಾಹಿರಾತುಗಳೂ ದೊರೆ ತ್ತಿವೆ. ಬಹಳಷ್ಟು ದಿನಪತ್ರಿಕೆಗಳು ಮತ್ತು ರರಾಜ್ಯದ ಪತ್ರಿಕೆಗಳು ಈ ವೆಬ್‌ಸೈಟ್ ಮಾಂತರವೇ ಸುದ್ದಿ ಮತ್ತು ಫೋಟೋಗಳನ್ನು ಂದಿಸಿಕೊಳ್ಳುತ್ತಿರುವುದರಿಂದ ಚಿತ್ರದ ನಿರ್ಮಾ ನೀಡುವ ಜಾಹಿರಾತುಗಳು ಸಾರ್ಥಕವೇ . ಅಲ್ಲದೆ, ಬೇರೆ ವೆಬ್‌ಸೈಟುಗಳಿಗೆ ಹೋಲಿಸಿ ಇವರ ಜಾಹಿರಾತು ದರ ತುಟ್ಟಿಯೂ ಅಲ್ಲ. ುರುವಾಗ ನಿರ್ಮಾಪಕರ ಸಂಘ ಸ್ವತಃ ತನ್ನದೇ ು ವೆಬ್‌ಸೈಟೊಂದನ್ನು ಆರಂಭಿಸಿ ಎಲ್ಲ ರ್ಮಾಪಕರೂ ಕಡ್ಡಾಯವಾಗಿ ಅದಕ್ಕೇ ಜಾಹಿರಾತು ಬೇಕು; ಬೇರೆ ಯಾವ ಅಂತರ್ಜಾಲಕ್ಕೂ ಬಾರದು ಎಂದು ತೀರ್ಮಾನಿಸಿದ್ದಾರಂತೆ.

ಎಲ್ಲವನ್ನೂ ನಾವೇ ಮಾಡಿಬಿಡುತ್ತೇವೆ ಎಂಬ ಬ ಸಾಹಸಗಳಿಗೆ ಕೈಹಾಕುತ್ತಿರುವ ನಿರ್ಮಾಪಕರ ದ ಓವರ್ ಕಾನ್ಫಿಡೆನ್ಸ್ ಹೀಗೇ ಮುಂದು ದರೆ ಅವರು ನಿರ್ಮಿಸಿದ ಚಿತ್ರಗಳನ್ನು ಕೂಡ ದಕ್ಕೇ ನೋಡಬೇಕಾಗುವ ಪರಿಸ್ಥಿತಿ ಬಂದೊದ ರೂ ಅಚ್ಚರಿ ಇಲ್ಲ.

ಮಾಧ್ಯಮಗಳನ್ನು ಕಡೆಗಣಿಸಿದ ಯಾರೂ ಸ್ವಧಿಯಾಗಿಲ್ಲ ಎಂಬ ಅರಿವು ನಿರ್ಮಾಪಕರ ಕ್ಕೆ ಆದಷ್ಟು ಬೇಗನೆ ಆದರೆ ಅವರಿಗೇ ುದು. ■

ಆಂಗ್ಲೋ ಇಂಡಿಯನ್ ತಾಯಿ- 'ಯಾರದು ?'

ಹಿರಿಯ ನಟಿ ಲೀಲಾವತಿಯವರು ಮಂದಿ ತನಕ ಮಿಡಿ ತೊಟ್ಟಿದ್ದಾರೆ.

ಈ ವಯಸ್ಸಲ್ಲಿ ಇದೇನಿದು ಎಂದು ಗಾಬರಿಯಾಗಬೇಡಿ.

ತನ್ನ ಮಗ ವಿನೋದ್ ರಾಜ್‌ಗಾಗಿ ಸ್ವತಃ ಲೀಲಾವತಿಯವರೇ ಕಥೆ ಬರೆದು, ಅವರೇ ನಿರ್ಮಿಸಿರುವ 'ಯಾರದು?' ಚಿತ್ರದಲ್ಲಿ ಲೀಲಾವತಿ ಆಂಗ್ಲೋ ಇಂಡಿಯನ್ ಲೇಡಿ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ.

ಇದಕ್ಕಾಗಿ ಕುತ್ತಿಗೆ ತನಕ ಬೆಳೆದಿದ್ದ ಕೂದಲನ್ನು ಕತ್ತರಿಸಿ ಬಾಬ್ ಮಾಡಿಸಿದ್ದಾರೆ. ಜೊತೆಗೆ ಥೇಟು ಆಂಗ್ಲೋ ಇಂಡಿಯನ್ ಮಹಿಳೆಯನ್ನು ಹೋಲುವಂತೆ ಮಿಡಿ ತೊಟ್ಟು, ನಟಿಸಿ, ಕುಣಿದು, ದಣಿದಿದ್ದಾರೆ.

ಲೀಲಾವತಿಯಂಥ ಹಿರಿಯ ಜೀವ ಇಷ್ಟೆಲ್ಲಾ ರಿಸ್ಕು ತೆಗೆದುಕೊಂಡಿರುವುದು ತನ್ನ 'ಕನ್ನಡದ ಕಂದ' ವಿನೋದನಿಗಾಗಿ.



ಬಿಡುಗಡೆಯಾದ ನಾಲ್ಕರಲ್ಲಿ ಎರಡು ನಾಲಾಯಕ್


ಈ ವಾರ ನಾಲ್ಕು ಚಿತ್ರಗಳು ತೆರೆ ಕಂಡಿವೆ. ಎರಡು ಪಕ್ಕಾ ಕಮರ್ಷಿಯಲ್ ಡಬ್ಬಾ ಚಿತ್ರಗಳಾದರೆ, ಇನ್ನೆರಡು ಕಲಾತ್ಮಕ ಚಿತ್ರಗಳು. ನೇರವಾಗಿ ಹೇಳುವುದಾದರೆ 'ಆರತಿಗೆರಡು ಕೀರುತಿಗೆರಡು'

ಮತ್ತೆ ಅದೇ ರೌಡಿಸಂ ಕಥೆ

'ಸ್ವತಂತ್ರ ಪಾಳ್ಯ' ಎಂಬ ಚಿತ್ರದಲ್ಲಿ ಬಾಲನಟ ಅರ್ಜುನ್ ನಾಯಕನಾಗಿ ಕಾಣಿಸಿಕೊಂಡಿದ್ದಾನೆ. ಇದನ್ನು ವೆಂಕಟ್ ಎಂಬ ಹೊಸ ಹುಡುಗ ನಿರ್ದೇಶಿಸಿದ್ದಾನೆ. ಎಂದಿನಂತೆ ಇದೂ ಕೂಡಾ ಭೂಗತ ಜಗತ್ತಿನ ಕಥಾವಸ್ತು. ಆದರೆ ಚಿತ್ರ ನೋಡಲು ಬಹಳ ಕಷ್ಟವಾಗುತ್ತದೆ. ಇದಕ್ಕೆ ಕಾರಣ ನಿರೂಪಣೆಯಲ್ಲಿಲ್ಲದ ಬಿಗಿ. ಈ ಚಿತ್ರ ಸಂಪೂರ್ಣಗೊಳ್ಳಲು ಸುಮಾರು ಎರಡೂವರೆ ವರ್ಷ ತಗಲಿದೆ. ಚಿತ್ರರಂಗದ ಪಂಡಿತರ ಪ್ರಕಾರ ಇದು ಎರಡು ವಾರ ಓಡಿದರೆ ಅದೇ ಹೆಗ್ಗಳಿಕೆ.

ವಿಚಿತ್ರ ಹೆಸರಿನ ವಿಚಿತ್ರ ಚಿತ್ರ

'KA-99 B-333' ಎಂಬ ವಿಚಿತ್ರ ಹೆಸರಿನ ವಿಚಿತ್ರ ಚಿತ್ರ ಬಿಡುಗಡೆಗೊಂಡಿದೆ. ಜಿ.ಅರುಣ್‌ಕುಮಾರ್ ಎಂಬ ವ್ಯಕ್ತಿ ಇದನ್ನು ನಿರ್ದೇಶಿಸಿದ್ದಾರೆ. ಈ ಚಿತ್ರಕ್ಕೆ ಆರಂಭ, ಮಧ್ಯಭಾಗ, ಅಂತ್ಯ ಮೊದಲಾದವು ಇಲ್ಲವೇ ಇಲ್ಲ. ಕಥೆಯೂ ನಾಪತ್ತೆ. ಹಾಗೆ ನಿರೂಪಣೆಯೂ ಅಷ್ಟಕಷ್ಟೆ. ನಿರ್ದೇಶಕರಿಗೆ ಚಿತ್ರರಂಗದ ಗಂಧಗಾಳಿಯೇ ಇದ್ದಂತಿಲ್ಲ. ಇದೊಂದು ಕೆಟ್ಟಚಿತ್ರ. ಇಂತಹ ಚಿತ್ರ ನೋಡಲು ಅಪಾರ ತಾಳ್ಮೆ ಬೇಕು. ಇಂತಹ ಕೀಳು ಅಭಿರುಚಿಯ ಚಿತ್ರ ನೋಡುವುದೂ ಒಂದೆ, ಹಣವನ್ನು ದುಂದುವೆಚ್ಚ ಮಾಡುವುದೂ ಒಂದೇ.



ಸದಭಿರುಚಿಯ ಕುರುನಾಡು

ಕಳೆದ ವರ್ಷ ಚಿತ್ರೀಕರಣಗೊಂಡ 'ಕುರುನಾಡು' ಒಂದು ಕಲಾತ್ಮಕ ಚಿತ್ರ. ಜಿ. ಮೂರ್ತಿ ಎಂಬ ಕಲಾನಿರ್ದೇಶಕ ಈ ಚಿತ್ರದ ಮುಖಾಂತರ ನಿರ್ದೇಶಕರಾಗಿದ್ದಾರೆ. ಸುಮಾರು ಆರು ತಿಂಗಳ ಹಿಂದೆಯೇ ನಾವು ಈ ಚಿತ್ರದ ವಿಮರ್ಶೆ ಬರೆದಿದ್ದೆವು. ಆದರೆ ಚಿತ್ರ ಈಗ ತೆರೆ ಕಾಣುತ್ತಿದೆ. ಹಾಗಂತ ಪುನಃ ವಿಮರ್ಶೆ ಬರೆಯಲು ಆಗುವುದಿಲ್ಲ. ಆದರೆ ಈ ಚಿತ್ರ ಸದಭಿರುಚಿಯ ಚಿತ್ರ ಎನ್ನಬಹುದಾಗಿದೆ. ಕಲಾತ್ಮಕ ಚಿತ್ರಗಳ ಅಭಿಮಾನಿಗಳು ಇದನ್ನು ನೋಡಿ ಆನಂದಿಸಲು ಮೋಸವಿಲ್ಲ.

ರಿಯಲ್ ಕಥೆ


'ಸಂಸ್ಕಾರವಂತ' ಎಂಬ ಮತ್ತೊಂದು ಕಲಾತ್ಮಕ ಚಿತ್ರವೂ ಈ ವಾರ ತೆರೆಕಂಡಿದೆ. ಅದು ಅನಾಥ ಶವಗಳ ತ್ರಿವಿಕ್ರಮ ಮಹಾದೇವ ಅವರ



ಬದುಕನ್ನು ಆಧರಿಸಿ ನಿರ್ಮಿಸಿರುವ ಚಿತ್ರ. ಮಹಾದೇವನ ಪಾತ್ರದಲ್ಲಿ ಸಂಕೇತ್ ರಾಶಿ ನಟಿಸಿದ್ದಾರೆ. ಪಾರ್ಥಸಾರಥಿ ಈ ಚಿತ್ರದ ನಿರ್ದೇಶಕರು. ಹೊಸ ಕಥಾವಸ್ತು ಹೊಂದಿರುವ ಈ ಚಿತ್ರ ನೋಡುಗರ ಹೃದಯವನ್ನು ನಾಟುತ್ತದೆ ಎಂದಷ್ಟೆ ಹೇಳಬಹುದು.

ಈ ನಾಲ್ಕರಲ್ಲಿ ಯಾವುದು ಆಯ್ಕೆ ಮಾಡಬೇಕು? ಎಂಬುದನ್ನು ನಿಮಗೆ ಬಿಟ್ಟಿದ್ದೇವೆ. ಆದರೆ ನೀವು ಆಯ್ಕೆ ಮಾಡುವಷ್ಟರಲ್ಲಿ ಈ ಚಿತ್ರಗಳು ಥಿಯೇಟರ್‌ನಿಂದ ಎತ್ತಂಗಡಿಯಾದಲ್ಲಿ ಅದಕ್ಕೆ ನಾವು ಹೊಣೆಯಲ್ಲ.

ಶೆಣೈ



"ಕನ್ನಡ ಚಿತ್ರಗಳನ್ನು ನೋಡಬೇಡಿ"

■ ಕಲಾತಪಸ್ವಿಯ ಕರೆ!

"ಕನ್ನಡ ಚಿತ್ರಗಳನ್ನು ನೋಡಬೇಡಿ. ಕನ್ನಡ ಚಿತ್ರಗಳನ್ನು ಪ್ರದರ್ಶಿಸುವ ಥಿಯೇಟರ್‌ಗಳಿಗೆ ಕಲ್ಲು ಹೊಡೀರಿ" ಇಂತಹ ಚಿತ್ರಗಳನ್ನು ಬೆಂಬಲಿಸುವ ಫಿಲಂ ಚೇಂಬರ್ ಮುಂದೆ ಧರಣಿ ಕುಳಿತುಕೊಳ್ಳಿ...." ಎಂದು ಇತ್ತೀಚೆಗೆ ಒಬ್ಬರು ಕರೆ ನೀಡಿದ್ದಾರೆ.

ಪ್ರೇಮಿಗಳ ವಿರುದ್ಧ ಕದನ ಸಾರಿರುವ ಶ್ರೀರಾಮ ಸೇನೆಯ ಪ್ರಮೋದ್ ಮುತಾಲಿಕನ ತರಹ ಕನ್ನಡ ಚಿತ್ರರಂಗದಲ್ಲೂ ಒಬ್ಬ ಮುತಾಲಿಕ್ ಹುಟ್ಟಿಕೊಂಡಿದ್ದಾನೆಂದು ನೀವು ಭಾವಿಸಿದರೆ ನಿಮ್ಮ ಊಹೆ ತಪ್ಪಾಗುತ್ತದೆ. ಈ ರೀತಿ ಕನ್ನಡ ಸಿನಿಮಾದ ವಿರುದ್ಧ ಹೋರಾಟದ ಕಹಳೆ ಊದಿದವರು ಬೇರೆ ಯಾರೂ ಅಲ್ಲ, ಕನ್ನಡ ಚಿತ್ರರಂಗದ ಹಿರಿಯ ನಟ 'ಕಲಾತಪಸ್ವಿ' ರಾಜೇಶ್!

ಈ ಮಾತನ್ನು ರಾಜೇಶ್ ಯಾವುದಾದರೂ ಸಂತೋಷಗೋಷ್ಠಿ ಅಥವಾ ಪಾನಗೋಷ್ಠಿಯಲ್ಲಿ ಹೇಳಿದ್ದರೆ ಅದನ್ನು ಕೇಳಿ ಹಾಗೆ ಸುಮ್ಮನೆ ಮರೆಯಬಹುದಿತ್ತು. ಆದರೆ ರಾಜೇಶ್ ಈ ರೀತಿ ಗುಡುಗಿದ್ದು ಮೊನ್ನೆ ಗೌರಿಸುಂದರ ಪ್ರಕಾಶನ ಸಂಸ್ಥೆಯ ಪುಸ್ತಕ ಬಿಡುಗಡೆ ಸಮಾರಂಭದಲ್ಲಿ. ವಾಸ್ತವವಾಗಿ ಅಂದು ಅಲ್ಲಿ ಅವರಿಗೆ ಮಾತನಾಡುವ ಅವಕಾಶವೇ ಇರಲಿಲ್ಲ. ಆದರೆ ಪ್ರೇಕ್ಷಕರು ರಾಜೇಶ್ ಮಾತನಾಡಬೇಕು ಎಂದು ಒತ್ತಾಯಿಸಿದಾಗ, ರಾಜೇಶ್ ಮೈಕ್ ಹಿಡಿದು ಈ ರೀತಿ ಚಿತ್ರರಂಗವನ್ನು ಯದ್ವಾತದ್ವಾ 'ಕೊಂಡಾಡಿದರು'!

ಅಂದಹಾಗೆ ಅದೇ ಸಮಾರಂಭದಲ್ಲಿ ರಾಜೇಶ್ ಅವರ ಆತ್ಮಚರಿತ್ರೆ ಪುಸ್ತಕವೊಂದು ಬಿಡುಗಡೆಗೊಂಡಿತು. ಆ ಪುಸ್ತಕದ ಹೆಸರು 'ಕಲಾತಪಸ್ವಿ ರಾಜೇಶ್'. ವಿಶೇಷವೆಂದರೆ ಅದನ್ನು ಬರೆದಿರುವವರು ಸ್ವತಃ ರಾಜೇಶ್!

ಇರಲಿ, ಹಿರಿಯ ನಟರ ಸಾಲಿನಲ್ಲಿ ರಾರಾಜಿಸುವ ರಾಜೇಶ್ ಅವರಿಗೆ ಮೈಕ್ ಎಂದರೆ ಬಹಳ ಪ್ರೀತಿ. ಸ್ವಲ್ಪ ಹೆಚ್ಚೆ ಎನ್ನುವಷ್ಟು ಅವರು ಮಾತನಾಡುತ್ತಾರೆ. ಆದರೆ ಮೊನ್ನಿನ ಸಮಾರಂಭದಲ್ಲಿ ಅವರು ಹೆಚ್ಚು ಮಾತನಾಡಿದರಲ್ಲದೆ, ಹೃದಯಾಳದಿಂದ ಮಾತನಾಡಿದರು. ಇತ್ತೀಚೆಗೆ ಬಂದಿರುವ ಕನ್ನಡ ಚಿತ್ರಗಳ ಗುಣಮಟ್ಟ ಮತ್ತು ಅಭಿರುಚಿಯನ್ನು ಖೇದದಿಂದ ವಿಮರ್ಶಿಸಿದರು. ಅವರ ಮನಸ್ಸಿನಲ್ಲಿ ಎಷ್ಟು ಆಳವಾದ ನೋವಿತ್ತೆಂದರೆ ಕೊನೆಗೆ "ಕನ್ನಡ ಚಿತ್ರ ನೋಡಬೇಡಿ, ಕೆಟ್ಟ ಚಿತ್ರಮಾಡುವವರಿಗೆ ಕಲ್ಲು ಹೊಡೆಯಿರಿ" ಎಂದೂ ಕರೆ ನೀಡಿದರು.

1960ರ ದಶಕದಲ್ಲಿ 'ವೀರಸಂಕಲ್ಪ' ಎಂಬ ಚಿತ್ರದಿಂದ ಕನ್ನಡ ಚಿತ್ರರಂಗಕ್ಕೆ ಪಾದಾರ್ಪಣೆ ಮಾಡಿದ ರಾಜೇಶ್ ಆ ಕಾಲದಿಂದಲೂ ನೇರ ನಡೆ-ನುಡಿಗೆ ಹೆಸರಾದವರು. ಅವರ ಚಿತ್ರಗಳಲ್ಲಿ ನಿಜಕ್ಕೂ ಸಮಾಜಕ್ಕೆ ಬೇಕಾದ ಸಂದೇಶಗಳು ಇರುತ್ತಿದ್ದವು. ಮನೆಮಂದಿಯೆಲ್ಲಾ ಯಾವುದೇ ಮುಜುಗರವಿಲ್ಲದೆ ಒಟ್ಟಿಗೆ ಕುಳಿತುಕೊಂಡು ನೋಡುವಂತಹ ಚಿತ್ರಗಳಲ್ಲೇ ನಟಿಸಿದ ಹೆಗ್ಗಳಿಕೆಯೂ ಅವರದು. ಅವರು ನಟಿಸಿದ ಚಿತ್ರಗಳಲ್ಲಿ 'ನಮ್ಮ ಊರು', 'ಕಪ್ಪು-ಬಿಳುಪು', 'ದೇವರ ದುಡ್ಡು', 'ಪ್ರತಿಜ್ಞೆ', 'ಬಿಡುಗಡೆ', 'ಮನೆಯೇ ಮಂತ್ರಾಲಯ', 'ಬೆಳವಲದ ಮಡಿಲಲ್ಲಿ' ... ಮೊದಲಾದವು ಪ್ರಮುಖ.

ಇವತ್ತು 70ರ ಆಜುಬಾಜಿನಲ್ಲಿರುವ ರಾಜೇಶ್ ಅವರು ಸುಮಾರು 100ಕ್ಕೂ ಹೆಚ್ಚು ಚಿತ್ರಗಳಲ್ಲಿ ನಟಿಸಿ ಗೌರವಕ್ಕೆ ಪಾತ್ರರಾದರೆ ಅವರ ಮಗಳು ಆಶಾರಾಣಿ ಕೂಡಾ ನಾಯಕಿಯಾಗಿ ನಟಿಸಿದವರು. ಅಷ್ಟೇ ಅಲ್ಲ, ಅವರ ಅಳಿಯ ಅರ್ಜುನ್ ಸರ್ಜಾ ದಕ್ಷಿಣ ಭಾರತದ ಚಿತ್ರರಂಗದಲ್ಲಿ ಅತ್ಯಂತ ಬೇಡಿಕೆಯಲ್ಲಿರುವ ನಾಯಕ ನಟ. ಹಾಗೆಯೇ ಕಾರ್ಮಿಕ ಸಂಘದ ಅಧ್ಯಕ್ಷರಾಗಿರುವ ರವೀಂದ್ರನಾಥ್ ಮತ್ತು ನಟ ಅನುಪ್ರಭಾಕರ್.. ಇವರೆಲ್ಲರೂ ರಾಜೇಶ್‌ರವರ ಹತ್ತಿರದ ಸಂಬಂಧಿಗಳು. ಹೀಗೆ ಚಿತ್ರರಂಗದಲ್ಲಿ ಸಂಪೂರ್ಣವಾಗಿ ತೊಡಗಿಸಿಕೊಂಡಿರುವ ಮತ್ತು ಈ ವಯಸ್ಸಲ್ಲೂ ಚಿತ್ರರಂಗದ ಆಗುಹೋಗುಗಳ ಬಗ್ಗೆ ಕಾಳಜಿ ವಹಿಸಿರುವ ರಾಜೇಶ್ ಅದೇ ಚಿತ್ರರಂಗದ ಬಗ್ಗೆ 'ತಾಲಿಬಾನ್ ಸಂಸ್ಕೃತಿ' ಮಾದರಿಯಲ್ಲಿ ಮಾತನಾಡಿದ್ದಾರೆ.

"ಕನ್ನಡ ಚಿತ್ರರಂಗದಲ್ಲಿ ಇತ್ತೀಚೆಗೆ ನಮ್ಮ ಸಂಸ್ಕೃತಿಯನ್ನು ತೋರಿಸುತ್ತಿಲ್ಲ. ಅಂತಹ ಚಿತ್ರಗಳನ್ನು ನೋಡಬೇಡಿ" ಎಂದು ಅವರು ಹೇಳಿದರಲ್ಲದೆ, ಸಭಿಕರ ಕರತಾಡನದಿಂದ ಸ್ಫೂರ್ತಿಪಡೆದು ಇತ್ತೀಚೆಗೆ ಬಿಡುಗಡೆಯಾದ 'ಜಂಗ್ಲಿ' ಚಿತ್ರದ 'ಹಳೆ ಪಾತ್ರೆ, ಹಳೆ ಕಬ್ಬಿಣ, ಹಳೆ ಶೀಷೆ..' ಹಾಡನ್ನ ಪ್ರಸ್ತಾಪಿಸಿ "ಇದೇನು ಗೀತ ಸಾಹಿತ್ಯ? ಇಂತಹ ಸಾಹಿತ್ಯ ಹಾಡು ಕನ್ನಡಿಗರಿಗೆ ಶೋಭೆ ತರುತ್ತದೆಯೇ? ಅವರಿಗೆ ಕಲ್ಲು ಹೊಡೀರಿ ರಾಜ್‌ಕುಮಾರ್, ಉದಯಕುಮಾರ್, ಕಲ್ಯಾಣ ಕುಮಾರ್ ಮೊದಲಾದ ಪುಣ್ಯಾತ್ಮರು ತೀರಿಹೋಗಿದ್ದಾರೆ. ಅವರೆಲ್ಲ ಒಂದು ವೇಳೆ ಇವತ್ತು ಇದ್ದಿದ್ದರೆ ಅವರ ಕೈಯಲ್ಲೂ ಇದನ್ನೆಲ್ಲಾ ಸಹಿಸಲು ಆಗುತ್ತಿರಲಿಲ್ಲ" ಎಂದು ದುಃಖ ವ್ಯಕ್ತಪಡಿಸಿದರು.

ರಾಜೇಶ್‌ರಂತಹ ಹಿರಿಯ ನಟ ಆಡಿರುವ ಮಾತು ಪ್ರಸ್ತುತ ಕನ್ನಡ ಚಿತ್ರರಂಗದ ದುಸ್ಥಿತಿಗೆ ಹಿಡಿದ ಕೈಗನ್ನಡಿಯಾಗಿದೆ. ಈಗ ತನ್ನ ಅಮೃತಮಹೋತ್ಸವವನ್ನು ಆಚರಿಸಿಕೊಳ್ಳುತ್ತಿರುವ ಕನ್ನಡ ಚಿತ್ರರಂಗ ಅವರ ಮಾತನ್ನು ನಿರ್ಲಕ್ಷಿಸದೆ ಆತ್ಮಾವಲೋಕನ ಮಾಡಿಕೊಳ್ಳಬೇಕಿದೆ.

■ ಶೆಣೈ

R B P LANKESH, Kannada Weekly Price Rs. 12/- 25-02-2009 RNI No. KARKAN2005/14648 Regd.No.KA/RNP/BGS/

ಮಲ್ಟಿಪ್ಲೆಕ್ಸ್‌ಗಳಲ್ಲೂ ಕ್ರಿಕೆಟ್!

"ಇನ್ನು ಮುಂದೆ ಕ್ರಿಕೆಟ್ ಮ್ಯಾಚ್‌ಗಳನ್ನು ನೋಡಲು ಟೀವಿ ಶೋರೂಮ್‌ಗಳ ಮುಂದೆ, ಹೋಟೇಲು, ಪಾರ್ಲರ್‌ಗಳ ಮುಂದೆ ನಿಂತಿರುತ್ತಿದ್ದ ದೊಡ್ಡ ದೊಡ್ಡ ಗುಂಪುಗಳು ಕಾಣಸಿಗುವುದಿಲ್ಲವೇನೋ?

ಯಾಕೆಂದರೆ ಪಿವಿಆರ್, ಐನಾಕ್ಸ್‌ನಂಥ ಮಲ್ಟಿಪ್ಲೆಕ್ಸ್ ಥಿಯೇಟರುಗಳಲ್ಲಿ ಕ್ರಿಕೆಟ್ ಪಂದ್ಯದ ನೇರ ಪ್ರಸಾರವಾಗಲಿದೆ. ಸ್ಟೇಡಿಯಂನ ರಣ ಬಿಸಿಲಿನ ಮಧ್ಯೆ ಉಸಿರುಗಟ್ಟುವಂಥ ಜನಸಂದಣಿಯ ನಡುವೆ ಕ್ರಿಕೆಟ್ ನೋಡಲು ಹೋಗಿ ಮೈಕೈ ನೋವುಮಾಡಿಕೊಂಡು ಬರುತ್ತಿದ್ದ ಕ್ರೀಡಾಪ್ರೇಮಿಗಳೆಲ್ಲಾ ಇನ್ನುಮುಂದೆ ಹಾಯಾಗಿ ಎಸಿ ರೂಮು, ಕುಷನ್ ಸೋಫಾದಲ್ಲಿ ಮಜಬೂತಾಗಿ ಕುಳಿತು ದುಬಾರಿ ಪಾಪ್‌ಕಾರ್ನ್ ತಿನ್ನುತ್ತಾ ಮ್ಯಾಚ್ ನೋಡಿ ಎಂಜಾಯ್ ಮಾಡಬಹುದು.

ಇದು ಕ್ರಿಕೆಟ್ ಪ್ರಿಯರಿಗೆ ಖುಷಿಯ ವಿಚಾರವಾದರೆ ನಮ್ಮ ಕನ್ನಡದ ನಿರ್ಮಾಪಕರು ಮಾತ್ರ ಇದನ್ನು ಕೇಳಿ ಬೆಚ್ಚಿಬಿದ್ದಿದ್ದಾರೆ. ಬೆಂಗಳೂರಿನಂಥಾ ಮೆಗಾಸಿಟಿಯಲ್ಲಿ ಈಗಲೇ ಥಿಯೇಟರ್ ಕೊರತೆ. ಇಂತಹ ಪರಿಸ್ಥಿತಿಯಲ್ಲಿ ಥಿಯೇಟರ್‌ಗಳಿಂದಲೂ ಸಿನಿಮಾಗಳು ಎತ್ತಂಗಡಿಯಾಗಿ ಆ ಜಾಗಕ್ಕೆ ಕ್ರಿಕೆಟ್ ಆಟ ಬಂದರೆ ಅವರಿಗೆ ಇನ್ನೂ ಕಷ್ಟವಾಗುತ್ತದೆ.

ಈಗಾಗಲೇ ಸೋತು ಸುಣ್ಣವಾಗಿರುವ ಚಿತ್ರರಂಗ ಕ್ರಿಕೆಟ್ ದಾಳಿಯಿಂದ ಮತ್ತಷ್ಟು ಸೊರಗುವುದರಲ್ಲಿ ಸಂದೇಹವಿಲ್ಲ.

ಲೀಲಾ–ವಿನೋದ ಮತ್ತು ಗನ್!






"ಲೀಲಾವತಿ-ವಿನೋದ್ ರಾಜ್ ತಾಯಿ ಮಗ ನಿರ್ಮಿಸಿ, ನಟಿಸುವ ಬಹುತೇಕ ಚಿತ್ರಗಳ ಟೈಟಲ್‌ನಲ್ಲಿ ಏನೋ ನಿಗೂಢತೆ ಅಡಗಿರುವಂತೆ ಕಾಣುತ್ತದೆ. ಎಲ್ಲಿ ಇವರು ಏನು ಬಾಯಿ ಬಿಟ್ಟುಬಿಡುತ್ತಾರೋ ಅಂತ ಇವರ ಮೇಲೆ ಸದಾ ಹಲ್ಲೆ ಯತ್ನಗಳು, ಹುಸಿ ಬೆದರಿಕೆಗಳು ನಡೆಯುತ್ತಲೇ ಇರುತ್ತವೆ." ಈ ಮಾತನ್ನು ಹೇಳಿದ್ದು ಬೇರೆ ಯಾರೂ ಅಲ್ಲ, ಸ್ವತಃ ಅದೇ ತಾಯಿ-ಮಗ.

ಕಳೆದ ವಾರವಷ್ಟೇ ಇವರು ಪಯಣಿಸುತ್ತಿದ್ದ ಕಾರಿನ ಮೇಲೆ ಕಲ್ಲು ಬಿದ್ದು (ಲೀಲಾವತಿ ಮತ್ತು ವಿನೋದ್ ಪ್ರಕಾರ ಈ ಕ್ಷಣಕ್ಕೂ ಅದು ತುಪಾಕಿಯ ಗುಂಡು) ದೊಡ್ಡ ರಾದ್ಧಾಂತವಾದ ಮೇಲಂತೂ ಈ ಮಾತಾ-ಪುತ್ರ ಕುಂತು, ನಿಂತಲ್ಲೆಲ್ಲಾ ಜೀವಭಯದಿಂದ ನಡುಗುತ್ತಿದ್ದಾರೆ. ವಿನೋದ್ ರಾಜ್ ಅಂತೂ ಕಿಸೆಯಲ್ಲಿ ಪಿಸ್ತೂಲು ಹಿಡಿದೇ ಅಮ್ಮನ ಹಿಂದೆ ಓಡಾಡುತ್ತಿದ್ದಾರೆ. ಇದಕ್ಕೆ ಇಲ್ಲಿ ನೀಡಿರುವ ಫೋಟೋಗಳೇ ಸಾಕ್ಷಿ.

ಅದೇನೇ ಇರಲಿ, ಕಳೆದ ವಾರ 'ಲಂಕೇಶ್' ಈ ತಾಯಿ ಮಗನ ನಿಗೂಢ ಬದುಕಿನ ಬಗ್ಗೆ ವಿಸ್ತೃತವಾಗಿ ಬರೆದಿತ್ತು, ಇದಕ್ಕೆ ಪ್ರತಿಕ್ರಿಯಿಸಿದ ವಿನೋದ್ "ನಮ್ಮ ಬದುಕಿನ ಬಗ್ಗೆ ನಮ್ಮ ತೊಳಲಾಟದ ಬಗ್ಗೆ ನೇರವಾಗಿ ಬರೆದ 'ಲಂಕೇಶ್'ಗೆ ನಾವು ಎಷ್ಟು ಥ್ಯಾಂಕ್ಸ್ ಹೇಳಿದರೂ ಸಾಲದು. ಪತ್ರಿಕೆ ಪಾರದರ್ಶಕವಾಗಿ ಬರೆದು ನಮ್ಮ ವಾಸ್ತವ ಪರಿಸ್ಥಿತಿಯನ್ನು ಎತ್ತಿಹಿಡಿದಿದೆ. ಒಂದು ವೇಳೆ 'ಲಂಕೇಶ್'ನಲ್ಲಿ ಈ ವರದಿ ಬರದೇ ಹೋಗಿದ್ದರೆ ನಮ್ಮ ಮೂಕ ವೇದನೆ ಯಾರಿಗೂ ತಿಳಿಯುತ್ತಲೇ ಇರಲಿಲ್ಲ" ಎಂದು ಸಮಾಧಾನದ ನಿಟ್ಟುಸಿರು ಬಿಟ್ಟಿದ್ದಾರೆ.

ಬಿವೇರ್ ಅಫ್ 'ಚಿಂದಿ'!



'ಅ' ಅನ್ನೋ ವಿಚಿತ್ರ ಟೈಟಲ್ ಸಿನಿಮಾ ನಿರ್ದೇಶಿಸಿರುವ ನಿರ್ದೇಶಕ ಮಹೇಶ್, ಅದು ರಿಲೀಸ್ ಆಗುವ ಮುನ್ನವೇ 'ಚಿಂದಿ' ಉಡಾಯಿಸಲು ರೆಡಿಯಾಗಿದ್ದಾರೆ.

ಚಿತ್ರದ ಹೆಸರೇ 'ಚಿಂದಿ'ಯಾಗಿರುವಾಗ ಅದರ ಸಬ್ ಟೈಟಲ್ ಇನ್ನು ಹೇಗಿರಬಹುದು? 'ಬಿವೇರ್ ಆಫ್ ಹಾರ್ಟ್ಸ್'! ಇಷ್ಟು ದಿನ ಮನೆಮುಂದಿನ ಗೇಟುಗಳಲ್ಲಿ 'ಬಿವೇರ್ ಆಫ್ ಡಾಗ್' ಅನ್ನೋ ಬೋರ್ಡು ನೋಡಿದ್ದ ಜನರಿಗೆ ಮಹೇಶ್ ಹಾರ್ಟುಗಳ ಬಗ್ಗೆ ಎಚ್ಚರಿಸುತ್ತಿದ್ದಾರೆ.

ಚಿತ್ರದ ಹೆಸರನ್ನು ನೋಡಿಯೇ ಬೆಚ್ಚಿಬೀಳುತ್ತಿರುವ ಜನ ಈ ಸಿನಿಮಾವನ್ನು ನೋಡಿ 'ಚಿಂದಿ'ಯಾಗಿ 'ಬಿವೇರ್ ಆಫ್ ಕನ್ನಡ ಸಿನಿಮಾ' ಎನ್ನುವಂತಾಗದಿದ್ದರೆ ಸಾಕು!

'ಆಪರೇಷನ್ ಜಯಮಾಲಾ'?

ಜಯಮಾಲಾ ನೇತೃತ್ವದ ಚಲನಚಿತ್ರ ವಾಣಿಜ್ಯ ಮಂಡಳಿ ಮತ್ತೊಮ್ಮೆ ತನ್ನ ಪೆದ್ದುತನವನ್ನು ಪ್ರದರ್ಶಿಸಿದೆ. ಕೋಮಲ್ ನಾಯಕನಾಗಿ ನಟಿಸುತ್ತಿರುವ ಚಿತ್ರಕ್ಕೆ ಅದರ ನಿರ್ಮಾಪಕ (ಕೋಮಲ್ ಅವರ ಭಾವ) ಶ್ರೀನಿವಾಸ್ 'ಆಪರೇಷನ್ ಕಮಲ' ಎಂದು ಹೆಸರಿಡಲು ನಿರ್ಧರಿಸಿದ್ದರು.



ಆದರೆ ಈ ಹೆಸರನ್ನು ನೀಡಲು ಚೇಂಬರ್ ನಿರಾಕರಿಸಿದೆ. 'ಈ ಹೆಸರಿಟ್ಟರೆ ಏನು ತಪ್ಪು?' ಎಂದು ಕೇಳಿದರೆ ಚೇಂಬರ್ ಪದಾಧಿಕಾರಿಗಳಲ್ಲಿ ಯಾವುದೇ ಉತ್ತರವಿಲ್ಲ; ಆದರ ಬದಲಿಗೆ ಈ ಹೆಸರು ನೀಡಲು ಸಾಧ್ಯವಿಲ್ಲ ಎಂದು ಪಟ್ಟು ಹಿಡಿದು ಕುಳಿತುಕೊಂಡಿದ್ದಾರೆ. 'ಆಪರೇಷನ್ ಕಮಲ' ಹೆಸರಿನ ಬದಲಿಗೆ ನಾವು 'ಆಪರೇಷನ್ ಜಯಮಾಲಾ' ಎಂದು ಹೆಸರಿಡಬೇಕಾಗುತ್ತದೆ ಎಂದು ಚಿತ್ರತಂಡದವರು ಈಗ ತಮಾಷೆಯಾಡುತ್ತಿದ್ದಾರೆ. ಕೊನೆಗೆ ಈ ಚೇಂಬರ್ ಕಾಟವೇ ಬೇಡ ಎಂದು ನಿರ್ದೇಶಕ ಎ.ಆರ್. ಬಾಬು ಈ ಚಿತ್ರಕ್ಕೆ 'ಚಮಕ್ಕಾಯಿಸಿ, ಚಿಂದಿ ಉಡಾಯಿಸಿ' ಎಂದು ಹೆಸರಿಟ್ಟಿದ್ದಾರೆ. ಇತ್ತೀಚೆಗೆ ಎಫ್‌ಎಂ ರೇಡಿಯೋಗಳಲ್ಲಿ ಇಂತಹ ಹೊಸ ಕನ್ನಡ ಶಬ್ದಗಳು ಹೆಚ್ಚು ಜನಪ್ರಿಯವಾಗುತ್ತಿರುವುದು ನಿಮಗೆಲ್ಲಾ ಗೊತ್ತೇ ಇದೆ. ಈ ರೇಡಿಯೋ ಜಾಕಿಗಳ ಭಾಷೆ ಮತ್ತು ಶಬ್ದ ಪ್ರಯೋಗದ ಬಗ್ಗೆ ಅಲ್ಲಲ್ಲಿ ಅಪಸ್ವರ ಕೇಳಿಬರುತ್ತಿದೆ. ಆದರೆ ಚೇಂಬರ್ ಇಂತಹ ಕಲಸುಮೇಲೋಗರ ಕನ್ನಡಕ್ಕೆ ಸೈ ಅಂದಿದೆ.

ಉದಾಹರಣೆಗೆ 'ಮಸ್ತ್ ಮಜಾ ಮಾಡು' ಕೂಡಾ ಇದೇ ತರಹದ ಎಫ್‌ಎಂ ರೇಡಿಯೋ ಕನ್ನಡ ಸಾಹಿತ್ಯದ ಕೊಡುಗೆ. ಇದೀಗ ಅದೇ ಸಾಲಿಗೆ 'ಚಮಕ್ಕಾಯಿಸಿ, ಚಿಂದಿ ಉಡಾಯಿಸಿ' ಸೇರಿದೆ. ಹೇಗಿದೆ ನೋಡಿ ನಮ್ಮ ಚೇಂಬರ್‌ನವರ 'ಅಪ್ಪಟ' ಕನ್ನಡ ಪ್ರೇಮ!

ರಾಜನ್–ನಾಗೇಂದ್ರರ 60 ಹಾಡುಗಳು



ರಾಜನ್ ನಾಗೇಂದ್ರ ಅಭಿಮಾನಿಗಳ ಪಾಲಿಗೆ ಒಂದು ಸಿಹಿಸುದ್ದಿ. ರಾಜನ್ ನಾಗೇಂದ್ರ ಅವರ ಸಂಗೀತ ನಿರ್ದೇಶನದ ಅರವತ್ತು ಹಾಡುಗಳನ್ನು ಇಂಡಿಯಾ ಟೇಲ್ಸ್ ಎಂಬ ಕ್ಯಾಸೆಟ್ ಕಂಪೆನಿ ಯುಗಾದಿಯಂದು ಹೊರತರಲಿದೆ. ವಿಶೇಷವೆಂದರೆ ಆ ಹಾಡುಗಳನ್ನು ಮತ್ತೆ ರೆಕಾರ್ಡ್ ಮಾಡಿ ಹೊರತರಲಿದ್ದಾರೆ. ಅಂದರೆ ಹಳೆಯ ಹಾಡುಗಳು ಅದೇ ಮಾಧುರ್ಯದಿಂದ ಹೊಸರೂಪದಲ್ಲಿ ಮತ್ತೆ ಕೇಳುಗನನ್ನು ರಂಜಿಸಲಿವೆ.

ಈ ಜೋಡಿಯಲ್ಲಿ ನಾಗೇಂದ್ರ ನಿಧನ ಹೊಂದಿದ್ದಾರೆ. ಈಗ ರಾಜನ್ ಅವರಿಗೆ ಸಾಥಿಯಾಗಿ ಅವರ ಮಗ ಅನಂತು ಈ ಕೆಲಸದಲ್ಲಿ ಸಹಕರಿಸುತ್ತಿದ್ದಾರೆ. ಇಂದು ಸಂಗೀತದ ಹೆಸರಿನಲ್ಲಿ ನಡೆಯುತ್ತಿರುವ ಶಬ್ದ ಮಾಲಿನ್ಯ ಮತ್ತು ಗೀತರಚನೆಯ ನೆಪದಲ್ಲಿ ಆಗುತ್ತಿರುವ ಕನ್ನಡ ಭಾಷೆಯ ಕಗ್ಗೊಲೆಯ ಸಂದರ್ಭದಲ್ಲಿ ಹಳೆಯ ಚಿತ್ರಗೀತೆಗಳು ಮನಸ್ಸಿಗೆ ಮುದ ನೀಡುವುದು ಗ್ಯಾರಂಟಿ.

ಹದಿನೈದು ದಿನದ ರಜಾ ಪತ್ರಕರ್ತರಿಗೆ ಸಜಾ!

ಇದೇ 15ನೇ ತಾರೀಖಿನಿಂದ ಹದಿನೈದು ದಿನಗಳ ಕಾಲ ಚಿತ್ರರಂಗಕ್ಕೆ ರಜೆ ಘೋಷಿಸಲಾಗಿದೆ. ಒಂದೇ ಬಾರಿ ಹದಿನೈದು ದಿನಗಳ ಕಾಲ ಫಿಲಂ ಲ್ಯಾಂಡು ಪಾಚಿಕೊಳ್ಳುತ್ತಿರುವುದರಿಂದ ಒಂದೆಡೆ ಶೂಟಿಂಗ್ ಕೆಲಸಗಳಿಲ್ಲದೆ ತಂತ್ರಜ್ಞರು ಗೋಳೋ ಎನ್ನುತ್ತಿದ್ದರೆ, ಮತ್ತೊಂದೆಡೆ ಪತ್ರಕರ್ತರೂ ಪರದಾಡುವಂತಾಗಿದೆ!

ಈ ಅರ್ಧ ತಿಂಗಳಲ್ಲಿ ಯಾವುದೇ ಪತ್ರಿಕಾಗೋಷ್ಠಿ, ಸಭೆ, ಸಮಾರಂಭಗಳೂ ನಡೆಯದಿರುವುದೇ ಇದಕ್ಕೆ ಕಾರಣ. ಅದರಲ್ಲೂ ದಿನಪತ್ರಿಕೆಗಳ ವರದಿಗಾರರಿಗೆ ತಮ್ಮ ಸಿನಿಮಾ ಸಪ್ಲಿಮೆಂಟುಗಳನ್ನು ತುಂಬುವುದು ಹೇಗೆ ಎಂಬುದೇ ಈಗ ದೊಡ್ಡ ತಲೆನೋವಾಗಿದೆ. ಡಾ. ರಾಜ್ ಕಾಡಿಗೆ ಹೋದ ಸಂದರ್ಭವನ್ನು ಹೊರತುಪಡಿಸಿದರೆ ಸಿನಿಮಾ ಪತ್ರಕರ್ತರಿಗೆ ಇದು ಎರಡನೇ ಕ್ರೈಸಿಸ್ ಆಗಿದೆ.



ಸೀನಾ ಪ್ರಿಯಾಂಕ

ಜಗ್ಗೇಶ್ ಸ್ಥಾನಕ್ಕೆ ಕೋಮಲ್?



ಸ್ವಯಂಘೋಷಿತ ನವರಸ ನಾಯಕ ಜಗ್ಗೇಶ್ ರಾಜಕೀಯದಲ್ಲಿ ಸಿಕ್ಕಾಪಟ್ಟೆ ಬಿಜಿಯಾಗಿದ್ದಾರೆ. ಇದರ ಫಲವೋ ಏನೋ ಅವರ ಸಹೋದರ ಕೋಮಲ್‌ಗೆ ಕೈ ತುಂಬಾ ಅವಕಾಶಗಳು ಕೂಡಿ ಬರುತ್ತಿವೆ. ಈಗಾಗಲೇ 'ಮಿ.ಗರಗಸ' ಚಿತ್ರದಲ್ಲಿ ನಾಯಕ ನಟನಾಗಿ ನಟಿಸಿ ತನ್ನ ತಾರಾವರ್ಚಸ್ಸು ಮತ್ತು ಪ್ರತಿಭೆಯನ್ನು ತೋರಿದ ಕೋಮಲ್‌ಗೆ ಈಗ ಎಲ್ಲಿಲ್ಲದ ಬೇಡಿಕೆಯಿದೆ. ಆದರೆ ಬಂದ ಪಾತ್ರಗಳನ್ನೆಲ್ಲಾ ಸ್ವೀಕರಿಸುವ ಬದಲು ಕೋಮಲ್ ಚೂಸಿಯಾಗಿದ್ದಾರೆ. ಸದ್ಯಕ್ಕೆ ಅವರ ಭಾವ ಶ್ರೀನಿವಾಸ್ ನಿರ್ಮಿಸುತ್ತಿರುವ 'ಚಮಕ್ಕಾಯಿಸಿ, ಚಿಂದಿ ಉಡಾಯಿಸಿ' ಚಿತ್ರದಲ್ಲಿ ನಾಯಕ ನಟನಾಗಿ ನಟಿಸುತ್ತಿದ್ದಾರೆ. ಇದಾದ ನಂತರ ಅಶೋಕ್ ಕಶ್ಯಪ್ ನಿರ್ಮಿಸಿ, ನಿರ್ದೇಶಿಸಲಿರುವ ಚಿತ್ರಕ್ಕೆ ಕೋಮಲ್ ನಾಯಕನಾಗಿ ಆಯ್ಕೆಯಾಗಿದ್ದಾರೆ. ಅಂತೂ ವರ್ಷದ ಕೊನೆಯೊಳಗೆ ಕೋಮಲ್ ನಾಯಕನಾಗಿ ನಟಿಸಲಿರುವ ಕನಿಷ್ಠ ಐದು ಚಿತ್ರಗಳು ತೆರೆಕಾಣಲಿವೆ.



ನಟನೆ, ಪ್ರತಿಭೆ, ಸೌಂದರ್ಯ, ಮೈಕಟ್ಟು, ಇವೆಲ್ಲದರಲ್ಲೂ ಜಗ್ಗೇಶ್‌ಗಿಂತಲೂ ಒಂದು ಕೈ ಮಿಗಿಲೆನ್ನುವ ಕೋಮಲ್ ಈಗ ಅಣ್ಣನ ಸ್ಥಾನ ತುಂಬುತ್ತಿದ್ದಾರೆ.

ಚೆಲುವೆಯನ್ನು ನೋಡಲು ಬಂದ ಅತಿಥಿ



ಇಷ್ಟು ದಿನ ಸುದೀಪ್, ದರ್ಶನ್, ಉಪೇಂದ್ರ, ವಿಜಿ... ಇವರುಗಳು ಮಾತ್ರ ದೊಡ್ಡ ದೊಡ್ಡ ಚಿತ್ರಗಳಲ್ಲಿ ಗೆಸ್ಟ್ ಅಪಿಯರೆನ್ಸ್ ನೀಡುತ್ತಿದ್ದರು. ಈಗ ಆ ಲಿಸ್ಟಿಗೆ 'ನೆನಪಿರಲಿ' ಪ್ರೇಮ್ ಕೂಡಾ ಸೇರಿದ್ದಾರೆ.

ರಿಯೀ ಟೀವಿ ರಘು ನಿರ್ದೇಶಿಸುತ್ತಿರುವ ಎಸ್.ಎಂ. ಸುರೇಶ್ ಅವರ ಬಿಗ್ ಬಜೆಟ್ 'ಚೆಲುವೆಯೇ ನಿನ್ನ ನೋಡಲು' ಚಿತ್ರದಲ್ಲಿ ಹ್ಯಾಟ್ರಿಕ್ ಹೀರೋ ಶಿವರಾಜ್ ಕುಮಾರ್‌ರೊಂದಿಗೆ ಒಂದು ಹಾಡು ಮತ್ತು ನಾಲ್ಕು ಸನ್ನಿವೇಶದಲ್ಲಿ ಅಭಿನಯಿಸುವ ಮೂಲಕ ಪ್ರೇಮ್ 'ಅತಿಥಿ ನಟ' ಎನಿಸಿಕೊಂಡಿದ್ದಾರೆ.

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427,
Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, Rajajinagar